
ಕಸ್ತೂರಿ



ಮೇ, ೧೯೬೨

ಬೆಲೆ : ೭೫ ನ.ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ



ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿ ತಿಂಗಳ ೧ ನೆ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಏನಿರಬಹುದು ?
ಕೆ. ಸುಬ್ಬರಾವ್

ಚಂದಾ ದರ :

ವಾರ್ಷಿಕ(ಅಂಚೆಸೇರಿ).	ರೂ.೮-೦೦
ಅರ್ಧ ವರ್ಷ —	ರೂ. ೪-೫೦
ಬಿಡಿಸಂಚಿಕೆ —	ರೂ. ೦-೭೫

Kasturi, May 1962

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸ ಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳ ವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕ ಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭ ವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟು ಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತ ವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗು ವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗದೆ

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂ ದೊಳಗೆ ತಲುಪುವದು. ಹಾಗೆ ಬಾರದಿದ್ದರೆ ಚಂದಾ ದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡು ವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಕಸ್ತೂರಿ

ಸಂಚಿಕೆ ೯ ಮೇ, ೧೯೬೨ ವರ್ಷ ೬

ಏನು--- ಯಾರು?

ಜಿಂದೂ ಗಲಗಲಿ

ಋಷಿಯಾದ ರಿಭು ಬ್ರಹ್ಮನ ಮಗನು. ಋುಷಿಯ ತುಟಿ ತಟದಲ್ಲಿಯೆ ಜ್ಞಾನದೇವಿಯ ಪುಣ್ಯಶಾಲೆಯಿತ್ತು.

ನಿದಘನೆಂಬವನು ರಿಭು ಋುಷಿಯ ಶಿಷ್ಯನಾಗಿದ್ದನು.

" ಆಚಾರ್ಯವರ್ಯ, ನನಗೆ ಆತ್ಮಜ್ಞಾನವನ್ನು ಕರುಣಿಸಿರಿ " ಎಂದು ನಿದಘನು ರಿಭು ಋುಷಿಯನ್ನು ಪ್ರಾರ್ಥಿಸಿದನು.

ಆತ್ಮವು ಹೇಗೆ ಜಗತ್ತಿನ ವ್ಯಕ್ತಾವ್ಯಕ್ತ ಪ್ರತಿ ಘಟಕದಲ್ಲೂ ಕರಗಿ ಒಂದಾಗಿದೆ ಎಂಬುದನ್ನು ರಿಭು ಋುಷಿಯು ತನ್ನ ದಿವ್ಯ ಜ್ಞಾನದಿಂದ ವಿವರಿಸಿದನು. ಆನಂತರ ಪ್ರಾಜ್ಞ ಋುಷಿಯು ತದೇಕ ಶಕ್ತಿಯ ಮಹಾನ್ ತತ್ವವನ್ನು ಜಗತ್ತಿನಲ್ಲಿ ಪ್ರಚುರಪಡಿಸಲು ಹೊರಟನು.

ಎಷ್ಟೋ ವರುಷಗಳು ಸಂದವು.

ರಿಭು ಋುಷಿಯು ನಿದಘನಿದ್ದ ಪಟ್ಟಣಕ್ಕೆ ಬಂದನು. ಪಟ್ಟಣದ ದ್ವಾರದಲ್ಲಿಯೇ ನೆರೆದಿದ್ದ ವಿಶೇಷ ಜನಸಂದಣಿಯನ್ನು ಕುತೂಹಲದಿಂದ ನೋಡಿದನು. ವಾದ್ಯ ವೈಭವಗಳೊಂದಿಗೆ ಪುರ ಪ್ರವೇಶ ಮಾಡುವ ರಾಜನನ್ನು ಸ್ವಾಗತಿಸಲು ಅಷ್ಟು ಜನರು ಕೂಡಿದ್ದರು.

ಜನಸಂದಣಿಯ ಒಂದು ಬದಿಯಲ್ಲಿ ಒಬ್ಬೊಂಟಿಗನಾಗಿ ನಿಂತ ನಿದಘನನ್ನು ಋುಷಿ ಕಂಡನು. "ಮಿತ್ರನೆ, ನೀನೊಬ್ಬನೆ ಏಕಿಲ್ಲಿ ನಿಂತಿರುವಿ ?" ಎಂದು ಋುಷಿಯು ಅವನ ಹತ್ತಿರ ಹೋಗಿ ಸಹಜವಾಗಿ ಕೇಳಿದನು.

ನಿದಘನು ತನ್ನ ಪೂರ್ವಾಚಾರ್ಯರನ್ನು ಗುರುತಿಸಲಿಲ್ಲ—ಮತ್ತು ನೋಡುವ ಭರದಲ್ಲಿ ಅಷ್ಟೇ ಸಹಜವಾಗಿ ಉತ್ತರಿಸಿದನು. "ರಾಜನು ಊರನ್ನು ಪ್ರವೇಶಿಸುತ್ತಾನೆ. ಜನಸಮುದಾಯವೇ ನೋಡಲು ನಿಂತಿದೆ. ನಾನೂ ನಿಂತಿರುವೆ."

"ರಾಜ ಯಾರು ?" ಋುಷಿಯು ಹಾಲುಗಲ್ಲದ

" ವಿಷ್ಣುಪುರಾಣ " ದಿಂದ

ಹುಡುಗನಂತೆ ಕೇಳಿದನು.

"ಯಾವನು ದೊಡ್ಡ ಆನೆಯ ಮೇಲೆ ಕುಳಿತಿರುವನೊ ಅವನು" ಎಂದು ನಿದಘನು ಉತ್ತರಿಸಿದನು.

"ಆದರೆ ಆನೆ ಯಾರು, ರಾಜನಾರು?" ಎಂದು ಋಷಿಯು ಮತ್ತೆಕುತೂಹಲದಿಂದ ಕೇಳಿದನು. "ಮೂರ್ಖ, ಮೇಲಿದ್ದವನು ರಾಜ, ಕೆಳಗಿರುವದು ಆನೆ" ಎಂದು ನಿದಘನು ಮೂಗು ಕೆಂಪಗೆಮಾಡಿಕೊಂಡು ಸಿಟ್ಟಿನಿಂದ ಕೇಳಿದನು.

"ಆದರೆ ಮೇಲೇಂದರೇನು ಕೆಳಗೆಂದರೇನು?" ಎಂದು ಋಷಿಯು ಪುನಃ ಶಾಂತರೀತಿಯಿಂದ ಕೇಳಿದನು.

ಆಗ ನಿದಘನು ಸಹನೆಯನ್ನು ಕಳೆದುಕೊಂಡು ಟಣ್ಣನೆ ಜಿಗಿದು ಋಷಿಯ ಹೆಗಲಮೇಲೆ ಕುಳಿತು, ತುಟಿಗಳನ್ನು ನಡುಗಿಸುತ್ತ ಒತ್ತಿ ಹೇಳಿದನು, "ಈಗ ನಾನು ರಾಜನಂತೆ ಮೇಲಿರುವೆ. ನೀನು ಆನೆಯಂತೆ ಕೆಳಗಿರುವೆ ತಿಳಿಯಿತೇ ?"

"ನನ್ನ ಪ್ರಿಯ ಶಿಷ್ಯನೆ, ಅದನ್ನು ನಾನು ತಿಳಿದಿರುವೆ. ಆದರೀಗ ದಯವಿಟ್ಟು "ನಾನು" ಯಾರು "ನೀನು" ಯಾರು ಎಂಬುದನ್ನು ತಿಳಿಸುವೆಯಾ?" ಎಂದು ರಿಭು ಋಷಿಯು ಹಿಮಾಲಯದಂತಿರುವ ತನ್ನ ಪ್ರಸನ್ನ ಶಾಂತ ಮುಖದಿಂದ ಕೇಳಿದನು.

ನಿದಘನು ನಿಬ್ಬೆರಗಾದನು. ದಿಟ್ಟಿಸಿನೋಡಿ ಗುರುವನ್ನು ಗುರುತಿಸಿದನು. ತತ್‌ಕ್ಷಣ ಋಷಿಯ ಪದತಲದಲ್ಲಿ ಬಿದ್ದು ಪಾದಧೂಳಿಯನ್ನು ಶಿರದಲ್ಲಿ ಧರಿಸಿದನು. "ನಿಜವಾಗಿ ಮಹಾಜ್ಞಾನಿಗಳಾದ ನೀವು ನನ್ನ ಗುರುಗಳಾದ ರಿಭುಋಷಿಗಳು. ವಿಶ್ವದೊಂದಿಗಿದ್ದ ಇಂಥ ಮಹದೈಕ್ಯವನ್ನು ನಾನು ಇನ್ನಾರಲ್ಲಿಯೂ ನೋಡಿಲ್ಲ. ನನ್ನನ್ನು ಕ್ಷಮಿಸಿ. ಏಕತೆಯ ಬಗ್ಗೆ ಇದ್ದ ನಿಮ್ಮ ಜ್ಞಾನದೀಪ್ತಿಯಿಂದ ನನ್ನನ್ನು ಉದ್ಧರಿಸಿ" ಎಂದು ಪ್ರಾರ್ಥಿಸಿಕೊಂಡನು.

*



ಈ ಕ್ಷಣವೇ ಮುಖ್ಯ

ಯಾವನೇ ಆಗಲಿ, ತನ್ನ ವಿಚಾರಗಳನ್ನು ಒಂದಿಷ್ಟು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಆಗ ತನ್ನ ವಿಚಾರಗಳೆಲ್ಲ ಅತೀತವಾದ ವಿಷಯಗಳ ಬಗ್ಗೆ ಅಥವಾ ಭವಿಷ್ಯದ ಬಗ್ಗೆ ಇರುತ್ತವೆ ಎಂದು ಅವನಿಗೆ ತಿಳಿಯುವುದು. ವರ್ತಮಾನವನ್ನು ಕುರಿತು ನಾವು ವಿಚಾರ ಮಾಡುವುದು ಬಹು ಕಡಿಮೆ. ಮಾಡಿದರೂ ಅದರ ಸಹಾಯದಿಂದ ಭವಿಷ್ಯವನ್ನು ಕಲ್ಪಿಸಿಕೊಳ್ಳುವುದಕ್ಕಾಗಿಯೆ ಮಾಡುತ್ತೇವೆ. ವರ್ತಮಾನವೆಂದೂ ನಮ್ಮ ಗುರಿಯಾಗಿರುವುದಿಲ್ಲ. ಭೂತ ಮತ್ತು ವರ್ತಮಾನಗಳು ನಮ್ಮ ಸಾಧನಗಳಾಗಿದ್ದು ಭವಿಷ್ಯವು ಮಾತ್ರವೇ ಗುರಿಯಾಗಿರುತ್ತದೆ. ಈ ರೀತಿಯಲ್ಲಿ ನಾವು ಸದ್ಯದ ಕ್ಷಣಗಳನ್ನು ಬದುಕದೆ ಮುಂದಿನ ಬಾಳಿನ ಆಶೆಯನ್ನೆ ಮಾಡುತ್ತಿರುತ್ತೇವೆ. ಸದಾಕಾಲ ಮುಂಬರುವ ಸುಖಗಳ ಕಲ್ಪನೆ ಯೋಚನೆಗಳಲ್ಲೆ ಮುಳುಗುವದರಿಂದ ಸದ್ಯದ ಸುಖಗಳಿಗೆರವಾಗುತ್ತೇವೆ.

— ಬೇಜ್ ಪಾಸ್ಕಲ್

* * * *

ಅಲ್ಪ ಶಿಕ್ಷಣದಿಂದ ಮನುಷ್ಯ ಗರ್ವಿಷ್ಠನಾಗುತ್ತಾನೆ, ಸರ್ವಸಾಮಾನ್ಯ ಶಿಕ್ಷಣದಿಂದ ಆತನಿಗೆ ಕೇವಲ ಇತರರ ದೋಷಗಳು ಕಾಣಿಸುತ್ತವೆ; ಆದರೆ ನಿಜವಾದ ಶಿಕ್ಷಣದಿಂದ ಅವನಿಗೆ ತನ್ನ ಗುಣದೋಷಗಳು ಸರಿಯಾಗಿ ತಿಳಿಯುವವು.

ಶೌರ್ಯ, ತ್ಯಾಗ, ಬಲಿದಾನಗಳಲ್ಲಿ ಇವರ ಕೈಹಿಡಿದವರಿಲ್ಲ

ಇಂತಿದೆ ಈ ರಾಜಸ್ಥಾನ



ರಾಜಪೂತ ಯೋಧ

ಸೌ. ಸವಿತಾ ಜಾಜೋದಿಯಾ

ರಾಜಸ್ಥಾನ ಎಂದೊಡನೆ ಮನದಲ್ಲಿ ಸಮ್ಮಿಶ್ರ ಭಾವನೆಗಳೆಷ್ಟೋ ಮೂಡುವವು. ಅದರ ಭೌಗೋಲಿಕ ಮತ್ತು ರಾಜಕೀಯ ಚಿತ್ರದೊಡನೆ ಶೌರ್ಯ, ತ್ಯಾಗ, ಬಲಿದಾನ, ಸ್ವಾಭಿಮಾನ, ಸ್ವಾಮಿಭಕ್ತಿ ಮುಂತಾದ ಗುಣಗಳ ತೇಜಸ್ವಿಯಾದ ಅದೃಶ್ಯ ಪ್ರತೀಕವೊಂದು ಕಣ್ಣೆದುರು ಬಂದು ನಿಂತಂತಾಗುವುದು. ರಾಜಸ್ಥಾನವು ಕೈಯಲ್ಲಿ ಖಾಲಿ ಲೋಟಾ ಹಿಡಿದುಕೊಂಡು ಪರ ಪ್ರಾಂತಕ್ಕೆ ಹೋಗಿ ಅಲ್ಲಿ ವ್ಯಾಪಾರ-ವ್ಯವಹಾರಗಳಿಂದ ಶ್ರೀಮಂತರಾಗುವ ಮಾರವಾಡಿಗಳ ನಾಡು ಮಾತ್ರವಾಗಿರದೆ ರಜಪೂತ ವೀರರ ಶೌರ್ಯ, ರಜಪೂತ ರಮಣಿಯರ ಪಾತಿವ್ರತ್ಯದ ಹಿರಿಮೆಗಳನ್ನು ಸಾರಿ ಸಾರಿ ಹೇಳುತ್ತಿರುವ ನಾಡಾಗಿದೆ.

ಪೃಥ್ವೀರಾಜನನ್ನು ಉಳಿಸುವುದಕ್ಕಾಗಿ ತನ್ನ ಶರೀರದ ಮಾಂಸ-ಖಂಡಗಳನ್ನು ಕತ್ತರಿಸಿ ಹದ್ದುಗಳಿಗೆ ತಿನ್ನಲು ಎಸೆದ ಸಂಜಮರಾಯ, ಅಪೂರ್ವ ಸ್ವಾಮಿಭಕ್ತಿಯನ್ನು ಪ್ರದರ್ಶಿಸಿದ ಪನ್ನಾದಾಸಿ, ಪರಮಾತ್ಮನ ಭಕ್ತಿಯಿಂದ ಪಾವನೆಯೆನಿಸಿದ ಮೀರಾಬಾಯಿ, ದೇಶಾಭಿಮಾನದಿಂದ ಉಜ್ವಲವಾಗಿ ಬೆಳಗಿದ ಪ್ರತಾಪಸಿಂಹ, ಜಜಿಯಾ ಕರವನ್ನು ತೆಗೆದು ಹಾಕುವಂತೆ ಔರಂಗಜೇಬನ ಮೇಲೆ ಒತ್ತಡ ತಂದು ಯಶಸ್ಸು ಸಂಪಾದಿಸಿದ ರಾಜಸಿಂಹ, ದೇಶಕ್ಕಾಗಿ ತಂದೆಯ ಆಜ್ಞೆಯಂತೆ ವಿಷ ಪ್ರಾಶನ ಮಾಡಿದ ಕೃಷ್ಣಕುಮಾರಿ ಮುಂತಾದ ಲೋಕೋತ್ತರ ಸ್ತ್ರೀ-ಪುರುಷರ ರಾಜಸ್ಥಾನವು ಜಗತ್ತಿನಲ್ಲಿ ಅಜರಾಮರ ಕೀರ್ತಿಯನ್ನು ಹೊಂದಿ ನಿಂತಿದೆ.

ರಾಜಸ್ಥಾನ ಒಂದು ಮರುಭೂಮಿ. ಸದಾ ಅಲ್ಲಿ ಬರಗಾಲವಿದ್ದದ್ದೇ. ಆದರೆ ಈ ಮರುಭೂಮಿಯ ಅನ್ನಋಣ ನಮ್ಮೆಲ್ಲರ ಮೇಲಿದೆ. ಗಾಳಿಪಟದ ಆಕಾರವನ್ನುಳ್ಳ, ಅರಾವಲಿ ಪರ್ವತದಿಂದ ವಿಭಾಗಿಸಲ್ಪಟ್ಟ ಈ ಪ್ರದೇಶದ ವೀರರು ಮುಸಲ್ಮಾನರಿಗೆ ಬಲವಾದ ವಿರೋಧವನ್ನುಂಟು ಮಾಡಿ ಅವರು ಸುಲಭವಾಗಿ ದಕ್ಷಿಣಭಾರತದಲ್ಲಿ ಕಾಲಿಡದಂತೆ ಮಾಡಿದ ಉಪಕಾರವನ್ನು ಎಂದಿಗೂ ಮರೆಯುವಂತಿಲ್ಲ.

ಜನರಿಗೆ ಸಾಮಾನ್ಯವಾಗಿ ಗೊತ್ತಿರುವ ರಾಜಸ್ಥಾನದ ಇತಿಹಾಸವೆಂದರೆ ಭಾರತದಲ್ಲಿಯ ಮುಸಲ್ಮಾನರ ಆಳಿಕೆಯ ಕಾಲದ್ದು. ಆದರೆ ರಾಜಸ್ಥಾನದ ಇತಿಹಾಸ ಅದಕ್ಕಿಂತಲೂ ಪ್ರಾಚೀನವಾಗಿದೆ. ರಾಜಸ್ಥಾನದ ವಾಯುವ್ಯ ಭಾಗದಲ್ಲಿ ಮಕರಾಣಾದ ಅಕ್ಕಪಕ್ಕದಲ್ಲಿ ಇತ್ತೀಚಿಗೆ ಮಾಡಿದ ಉತ್ಪನನದಲ್ಲಿ ಮೊಹೊಂಜೆದಾರೊ ಮತ್ತು ಹರಪ್ಪಾಗಳಲ್ಲಿ ಸಿಕ್ಕಂಥ ವಸ್ತುಗಳು ದೊರೆತಿವೆ. ಮಹಾಭಾರತದ ವಿರಾಟದೇಶ ರಾಜಸ್ಥಾನದಲ್ಲಿಯ ಬೈರಾಟವೇ ಆಗಿದೆ. ಮೌರ್ಯ ಗುಪ್ತ ಸಮ್ರಾಟರು ಈ ಪ್ರದೇಶವನ್ನಾಳಿದ್ದಾರೆ ಆದರೆ ಆ ಕಾಲದಲ್ಲಿ ಈ ಪ್ರದೇಶಕ್ಕೆ ರಾಜಸ್ಥಾನವೆಂಬ ಹೆಸರಿರಲಿಲ್ಲ. ಈ ಹೆಸರು ಬಂದದ್ದು ಇಂಗ್ಲೀಷರ ಕಾಲದಲ್ಲಿ. ಅದಕ್ಕೂ ಮೊದಲ



ರಾಜಪೂತ ಬಾಲೆ

ರಾಜಸ್ಥಾನದಲ್ಲಿ ಅನೇಕ ವಿಭಾಗಗಳಿದ್ದವು. ಹುವೆನ್‌ತ್ಸಂಗ್ ಬಂದಾಗ ರಾಜಸ್ಥಾನದಲ್ಲಿ ಗುರ್ಜರ, ವಯಾರಿ, ಬೈರಾಟ ಮತ್ತು ಮಥುರಾ ಎಂಬ ನಾಲ್ಕು ಭಾಗಗಳಿದ್ದವು. ಪರಕೀಯ ಆಕ್ರಮಣ ಆರಂಭವಾದ ಸಮಯದಲ್ಲಿ ರಾಜಸ್ಥಾನದಲ್ಲಿ ಗಹಲೋತ, ಪಡಿಹಾರ, ನಾಗ, ಯೌಧೇಯ, ತಂವರ, ಸೋಲಂಕಿ, ಭಾಟಿ, ಚೌಹಾನ, ದಹಿಯಾ, ಡೋಡಿಯಾ, ಗೌಡ, ಯಾದವ, ಕಛವಾಹಾ ಮತ್ತು ರಾಠೋಡ ಎಂಬ ರಾಜಮನೆತನಗಳ ರಾಜ್ಯವಿದ್ದಿತು.

ಶಹಾಬುದ್ದೀನ ಘೋರಿ ಪೃಥ್ವೀರಾಜನನ್ನು ಸೋಲಿಸಿದ ನಂತರದಲ್ಲಿ ರಾಜಸ್ಥಾನದ ಇತಿಹಾಸವು ರಕ್ತದಿಂದಲೆ ಬರೆಯಲ್ಪಟ್ಟಿದೆ.

“ಘರ ಜಾತಾ, ಧ್ರಮ ಪಲಟತಾಂ
ತ್ರಿಯಾ ಪಡಂತಾ ತಾವ।
ಏ ತೀನುಹಿ ದಿನ ಮರಣತಾ
ಕಹಾ ರಂಕ ಕಹಾ ರಾವ॥

“ಮಾತೃಭೂಮಿ ಎರಡನೆಯವರ ಕೈವಶವಾಗುತ್ತಿರುವಾಗ, ಧರ್ಮ ಮುಳುಗುತ್ತಿರುವಾಗ, ಸ್ತ್ರೀ ಜಾತಿಯ ಮೇಲೆ ವಿಪತ್ತು ಬಂದಾಗ ರಾಜನಿರಲಿ, ಭಿಕ್ಷುಕನಿರಲಿ— ಎಲ್ಲರೂ ಬಲಿದಾನ ಮಾಡಬೇಕಾದ ಮೂರು ಸಂದರ್ಭಗಳಿವು” ಎಂಬುದು ರಜಪೂತರ ನೀತಿವಾಕ್ಯವಾಗಿತ್ತು.

ಮುಸಲ್ಮಾನರ ಆಕ್ರಮಣ ಕಾಲದಲ್ಲಿ ಸ್ವದೇಶ, ಸ್ವಧರ್ಮ ಮತ್ತು ಸ್ತ್ರೀಯರ ಮೇಲೆ ಸಂಕಟವೊದಗುತ್ತಿತ್ತು. ಆಗ ರಜಪೂತರು ಬಲಿದಾನಕ್ಕಾಗಿ ಮುಂದಾಗುತ್ತಿದ್ದರು. ಯಶದ ಆಶೆ ಇದ್ದರೆ ಮಾತ್ರವಲ್ಲ, ಇಲ್ಲದಿದ್ದರೂ ಹೋರಾಡುತ್ತಿದ್ದರು. ಭೇದವಿಷ್ಟೇ: ಯಶಸ್ಸಿನ ಆಶೆ ಇಲ್ಲದಾಗ ಅವರೆದುರು ಅವರ ತಾಯಂದಿರು, ಹೆಂಡಂದಿರು, ಅಕ್ಕತಂಗಿಯರು, ಪುತ್ರಿಯರು ಎಲ್ಲರೂ ಅಗ್ನಿ ಪ್ರವೇಶಮಾಡಿ ಭಸ್ಮೀಭೂತರಾಗುತ್ತಿದ್ದರು. ಪುರುಷರು ಕೈಯಾರೆ ತಮ್ಮ ಮಕ್ಕಳ ಶಿರಚ್ಛೇದವನ್ನು ಮಾಡಿ ಕೇಸರಿ ವಸ್ತ್ರವನ್ನು ಧರಿಸಿ ಶತ್ರುಗಳ ಮೇಲೆ ಬಿದ್ದು ಹೋರಾಡಿ ವೀರಸ್ವರ್ಗವನ್ನು ಸೇರುತ್ತಿದ್ದರು. ರಜಪೂತ ವೀರರ ಈ ಪರಾಕ್ರಮಕ್ಕೆ, ಬಲಿದಾನಕ್ಕೆ ಸರಿಸಾಟಿಯಾದುದು ಇತಿಹಾಸದಲ್ಲಿ ಇನ್ನೊಂದಿಲ್ಲ.

ಮೊಗಲ ಬಾದಶಾಹ ಅಕಬರನ ಕಾಲದಲ್ಲಿ ರಾಜಸ್ಥಾನದಲ್ಲಿ ಉದಯಪುರ, ಡುಂಗರಪುರ, ಬಾಂಸವಾಡಾ, ಪ್ರತಾಪಗಡ, ಜೋಧಪುರ, ಬಿಕಾನೇರ, ಆಂಬೇರ, ಬೂಂದಿ, ಸಿರೋಹಿ, ಕರೌಲಿ, ಮತ್ತು ಜೈಸಲ್ಮೇರ ಎಂಬ ಹನ್ನೊಂದು ರಾಜ್ಯಗಳಿದ್ದವು. ಈ ಎಲ್ಲ ರಾಜ್ಯಗಳ ಇತಿಹಾಸವೂ ರಕ್ತಲೇಪಿತವಾಗಿದೆ. ಆದರೆ ಬರಬರುತ್ತ— ಸಾವಕಾಶವಾಗಿ ಮೇವಾಡದ ರಾಣಾ ಪ್ರತಾಪಸಿಂಹನೊಬ್ಬನನ್ನು ಬಿಟ್ಟು ಉಳಿದೆಲ್ಲರು ಅಕಬರನ ಸಾಮ-ದಾನ-ದಂಡ-ಭೇದ ನೀತಿಗಳಿಗೆ ತಲೆಬಾಗಿಸಿದರು. ಔರಂಗಜೇಬನ ಕಾಲದಲ್ಲಿ ಉದಯಪುರದ ರಾಜಸಿಂಹ ಎಂದೂ ಮಣಿಯಲಿಲ್ಲ. ಔರಂಗಜೇಬನ ನಂತರ ರಾಜಸ್ಥಾನದಲ್ಲಿಯ ಬಹಳಷ್ಟು ರಾಜರು ಸ್ವತಂತ್ರರಾದರು.

ಇದೇ ಸಮಯದಲ್ಲಿ ದಕ್ಷಿಣದಲ್ಲಿ ಮರಾಠರ ರಾಜ್ಯ ಸ್ಥಾಪನೆಯಾಯಿತು. ಛತ್ರಪತಿ ಶಿವಾಜಿ ಶಿಸೋದಿಯಾ ವಂಶದವನಾಗಿದ್ದ. ಆದರೆ ರಾಜಸ್ಥಾನ ಮತ್ತು ಮರಾಠರಲ್ಲಿ ವಿಶೇಷ ಸಂಬಂಧ ಒದಗಿ ಬಂದದ್ದು ಬಾಜೀರಾಯನ ಕಾಲದಲ್ಲಿ. ರಾಜಸ್ಥಾನದ ರಾಜರಿಂದ ಚೌಥಾಯಿ ವಸೂಲು ಮಾಡಲು ಬಾಜೀರಾಯ ಮಲ್ಹಾರರಾವ್ ಹೋಳ್ಕರ ಮತ್ತು ರಾಣೋಜಿ ಸಿಂಧೆಯನ್ನು ನೇಮಿಸಿದ. ಔರಂಗ

ಜೀಬನ ನಂತರ ಸ್ವತಂತ್ರರಾಗಿದ್ದ ರಜಪೂತ ರಾಜರು ದಿನೇ ದಿನೇ ನಿರ್ಬಲರಾಗುತ್ತ ನಡೆದರು. ಚೌಥಾಯಿ ಕೊಡುವದು ಅಪಮಾನಾಸ್ಪದವೆನಿಸಿದರೂ ಮರಾಠರು ಬಿಡುತ್ತಿರಲಿಲ್ಲ. ಮರಾಠರನ್ನು ಓಡಿಸಲು ಜಯಪುರ, ಜೋಧಪುರ ಮತ್ತು ಉದಯಪುರದ ರಾಜರು ಒಂದಾದರು. ತುಂಗಾ ಎಂಬಲ್ಲಿ ಅವರು ಮತ್ತು ಸಿಂಧೆಯಲ್ಲಿ ಯುದ್ಧವಾಗಿ ಸಿಂಧೆ ಸೋತ. ಆದರೆ ರಜಪೂತರ ಈ ಐಕ್ಯ ಬಹುಕಾಲ ತಾಳಿ ಉಳಿಯಲಿಲ್ಲ.

ಮರಾಠರು ಮತ್ತು ರಾಜಪೂತರಲ್ಲಿ ಯುದ್ಧಗಳಾದದ್ದು ನಿಜವಾದರೂ ಪ್ರಸಂಗಾನುಸಾರ ಅವರು ಪರಸ್ಪರರ ಸಹಾಯ ಪಡೆಯುತ್ತಿದ್ದರು. ಕೃಷ್ಣಕುಮಾರಿಯ ವಿವಾಹ ಪ್ರಸಂಗದಿಂದ ಜಯಪುರ ಮತ್ತು ಜೋಧಪುರ ರಾಜರಲ್ಲಿ ಯುದ್ಧ ಪ್ರಸಂಗವುದ್ಭವಿಸಿದಾಗ ರಜಪೂತರು ಮರಾಠರ ಸಹಾಯವನ್ನು ಪಡೆದರು. ಅದರಂತೆ ಯಶವಂತರಾವ್ ಹೋಳ್ಕರನಿಗೆ ಜೋಧಪುರದ ರಾಜಾಮಾನಸಿಂಗ ಆಶ್ರಯವಿತ್ತಿದ್ದ.

ಮರಾಠರ ರಾಜ್ಯ ಅಸ್ತವಾಗಿ ೧೮೧೮ ರಲ್ಲಿ ಸಿಂಧೆ ಅಜಮೀರನ್ನು ಇಂಗ್ಲೀಷರಿಗೆ ಅರ್ಪಿಸಿದಾಗ ರಜಪೂತಸತ್ತೆಯೂ ನಾಮಶೇಷವಾಯಿತು. ಎಲ್ಲ ಸಂಸ್ಥಾನಿಕರೂ ಇಂಗ್ಲೀಷರೊಂದಿಗೆ ಒಪ್ಪಂದ ಮಾಡಿಕೊಂಡರು. ರಾಜಸ್ಥಾನದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಆದರೆ ಹಿಂದಿನವರ ಇತಿಹಾಸ ಸೋಜ್ವಲವಾಗಿದ್ದರೆ ಇವರದು ವಿಲಾಸಜೀವನವಾದ್ದಾಯಿತು. ಇಂಗ್ಲೀಷರು ಸಂಸ್ಥಾನದ ಕಾರಭಾರದಲ್ಲಿ ಕೈಹಾಕುತ್ತಿರಲಿಲ್ಲ. ರಾಜರು ನಿರ್ಬಲರಾಗಿದ್ದರು. ನಿಜವಾದ ಅಧಿಕಾರ ಜಹಗೀರದಾರರ ಕೈಸೇರಿ ಪ್ರಜೆಗಳ ಗೋಳು ಹೇಳತೀರದಾಯಿತು. ನಾಗರಿಕ ಸ್ವಾತಂತ್ರ್ಯವಿರದ್ದರಿಂದ ಅನ್ಯಾಯದ ವಿರುದ್ಧ ಚಕಾರ ಶಬ್ದವೆತ್ತುವಂತಿರಲಿಲ್ಲ. ಆದರೆ ವಂಗಭಂಗದ ನಂತರ ಕ್ರಾಂತಿಕಾರಿ ಚಳವಳಿಯ ಗಾಳಿ ರಾಜಸ್ಥಾನದಲ್ಲಿ ಹಬ್ಬಿತು. ಅರ್ಜುನಲಾಲ ಸೇಠಿ, ಶಾಹಪೂರದ ಠಾಕೂರ ಕೇಶರಿಸಿಂಹ ಬಾರಹಠ, ಖರವಾದ ರಾವ ಗೋಪಾಲಸಿಂಹ ಮೊದಲಾದ ಅನೇಕ ದೇಶಭಕ್ತರು ಉದಯಿಸಿದರು. ಒಂದೆಡೆ ಈ ರಾಜಕೀಯ ಜಾಗೃತಿಯಾಗುತ್ತಿದ್ದಂತೆಯೆ ೧೯೧೮ ರಲ್ಲಿ ಮೇವಾಡದ ಬಿಜೋಲಿಯಾ ಎಂಬಲ್ಲಿ ರೈತರು ವಿಜಯಸಿಂಹ ಪಥಿಕರ ನೇತೃತ್ವದಲ್ಲಿ ಮೊದಲಬಾರಿ ತಮ್ಮ ದೂರುಗಳನ್ನು ಒಡೆಯರ ಮುಂದಿಟ್ಟರು. ಇದರ ಪರಿಣಾಮ ಇಡೀ ರಾಜಸ್ಥಾನದ ಮೇಲಾಯಿತು. ಎಲ್ಲೆಡೆಯಲ್ಲಿ ಪರಂಪರಾಗತ ಅಧಿಕಾರ ಅನ್ಯಾಯಗಳ ಪ್ರತೀಕಾರವಾಗ ತೊಡಗಿ ಪ್ರಜೆಗಳು ತಮ್ಮ ಹಕ್ಕನ್ನು ಪಡೆಯತೊಡಗಿದರು.

ಆದರೆ ಇಷ್ಟೆಲ್ಲ ನಡೆದರೂ ರಾಜಸ್ಥಾನದ ಮಹಿಳೆಯರ ಉನ್ನತಿಯ ಬಗ್ಗೆ ಮಾತ್ರ ಯಾರೂ ಲಕ್ಷವೀಯಲಿಲ್ಲ. ದೇಶದ ಅಪನತಿಯೊಡನೆ ಸ್ತ್ರೀಯರ ಅವನತಿಯೂ ಆಗಿತ್ತು. ವೀರಮಾತೆ, ವೀರಪುತ್ರಿ, ವೀರಪತ್ನಿ ಎಂಬಿತ್ಯಾದಿ ಶಬ್ದಗಳಿಂದ ಸ್ತ್ರೀಯರನ್ನು ಗೌರವಿಸುತ್ತಿದ್ದ ರಜಪೂತರಲ್ಲೇ ಹೆಣ್ಣು ಹುಟ್ಟಿದೊಡನೆ ಕೂಸನ್ನು ಗಡಿಗೆಯಲ್ಲಿ ತುಂಬಿ ನೆಲದಲ್ಲಿ ಹೂಳುವ ಅಮಾನುಷ ಪದ್ಧತಿ ಪ್ರಚಲಿತವಾಯಿತು.

ಈ ಕ್ರೂರ ಪದ್ಧತಿ ಬರಲು ಹುಡುಗಿಯ ಲಗ್ನದ ಕಾಲಕ್ಕೆ ಕೊಡಬೇಕಾದ ಅಪಾರ ವರದಕ್ಷಿಣೆಯೂ ಒಂದು ಕಾರಣವಾಗಿತ್ತು. ಬಾಲವಿವಾಹ, ಘೋಷಾಪದ್ಧತಿಗಳೂ ಬಳಕೆಯಲ್ಲಿದ್ದವು. ಮೊದಲಿಂದಲೂ ಘೋಷಾಪದ್ಧತಿ ಭಾರತದಲ್ಲಿದ್ದರೂ ರಾಜಸ್ಥಾನದಲ್ಲಿ ಅದು ವಿಪರೀತವಾಗಲು ರಜಪೂತರಿಗೂ ಮುಸಲ್ಮಾನರಿಗೂ ಹೆಣ್ಣು ಗಂಡು ಸಂಬಂಧ ಬೆಳೆಯುವುದವೇ ಕಾರಣವಾಯಿತು. ಇಂದಿಗೂ ರಜಪೂತರ ಉಚ್ಚ ಸಮಾಜದಲ್ಲಿ ಬುರಖಾ ಪದ್ಧತಿ ಇದೆ. ಸೊಸೆ ಮಾವನ ಮನೆಯಲ್ಲಿ ಬುರಖಾ ಧರಿಸಬೇಕಾಗುವದು. ತವರ್ಮನೆಯಲ್ಲಿರುವಾಗ ಹುಡುಗಿಯರು ಬುರಖಾ ಹಾಕಿಕೊಳುವದಿಲ್ಲ. ಸಮಾಜದ ಕೆಳತರಗತಿಯ ಹೆಂಗಸರು ಮಾತ್ರ ಬುರಖಾ ಹಾಕಿಕೊಳ್ಳದೆ ಹೊಲಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ. ಪೇಟೆಯಲ್ಲಿ ಅಡ್ಡಾಡುತ್ತಾರೆ. ರಾಜಸ್ಥಾನದ ಹೊರಗೆ ಪರಪ್ರಾಂತಗಳಲ್ಲಿರುವ ರಾಜಸ್ಥಾನೀಯರಲ್ಲಿ ಹೆಚ್ಚಿನವರು ವ್ಯಾಪಾರಮಾಡುವ ವೈಶ್ಯರಾಗಿದ್ದಾರೆ. ಇವರಲ್ಲಿ ಘೋಷಾ ಪದ್ಧತಿ ಇರುವದರಿಂದ ರಾಜಸ್ಥಾನಿ ಸ್ತ್ರೀಯ ಬಗೆ

ಅನೇಕ ತಪ್ಪು ಕಲ್ಪನೆಗಳು ಹಬ್ಬಿಕೊಳ್ಳುತ್ತಿವೆ. ರಾಜಸ್ಥಾನಿ ಸ್ತ್ರೀಯ ಜೀವನ ಬಲು ದುಃಖಪೂರ್ಣವಾದದ್ದು ಎಂದು ಭಾಸವಾಗುತ್ತದೆ. ನಿಜ ಸ್ಥಿತಿ ಹಾಗಿಲ್ಲ. ರಾಜಸ್ಥಾನಿ ಸ್ತ್ರೀಯ ಸುಖ ಸರ್ವಸ್ವ ಅವಳ ಮನೆಯಲ್ಲಿ ಸಂಸಾರದಲ್ಲಿರುತ್ತದೆಯಲ್ಲದೆ ಮಹಿಳಾಮಂಡಳ, ನಾಟಕ ಸಿನೇಮಾಗಳಲ್ಲಲ್ಲ.

ಅಂದರೆ ಈ ಘೋಷಾ ಪದ್ಧತಿ ನೂರಕ್ಕೆನೂರು ಒಳ್ಳೆಯದು ಎಂದಲ್ಲ. ಪ್ರತಿಯೊಂದರಲ್ಲೂ ಒಳ್ಳೆಯದು ಕೆಟ್ಟದ್ದು ಇದ್ದೇ ಇರುತ್ತದೆ. ರಾಜಸ್ಥಾನದ ಸಮಾಜದಲ್ಲಿ ಸ್ತ್ರೀಗೆ ಇದ್ದ ಈ ಬಗೆಯ ಸ್ಥಾನದ ಮೂಲಕ ಅಲ್ಲಿ ಸ್ತ್ರೀ ಶಿಕ್ಷಣವೆಂದರೆ ಇಲ್ಲವೇ ಇಲ್ಲ ಎನ್ನುವ ಮಟ್ಟಿಗೆ ಬಂದಿತ್ತು. ೧೯೩೭ ರ ವರೆಗೆ ರಾಜಸ್ಥಾನದ ೪೮ ಲಕ್ಷ ಸ್ತ್ರೀಯರಲ್ಲಿ ಪಾರ್ವತಿದೇವಿ ಗಹಲೋತ ಮತ್ತು ರಾಮಕುಂವರ ಗಹಲೋತ ಎಂಬಿಬ್ಬರು ಮಹಿಳೆಯರು ಮಾತ್ರ ಮ್ಯಾಟ್ರಿಕ್ ಪಾಸಾದವರಿದ್ದರು.

ಆದರೆ ಈಗ ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಸಂಸ್ಥಾನಗಳ ವಿಲೀನೀಕರಣವಾದ ನಂತರ ಪರಿಸ್ಥಿತಿ ಬದಲಾಗಿದೆ. ಅಲ್ಲಲ್ಲಿ ಹುಡಿಗೆಯರಿಗಾಗಿ ಶಾಲೆಗಳು, ಕಾಲೇಜುಗಳು ಸ್ಥಾಪಿತವಾಗಿದ್ದು ಪ್ರತಿವರ್ಷವೂ ನೂರಾರು ಹುಡುಗಿಯರು ಪದವಿಗಳನ್ನು ಪಡೆಯುತ್ತಿದ್ದಾರೆ.

ಶಿಕ್ಷಣದ ಅಭಾವದಿಂದಾಗಿ ರಾಜಸ್ಥಾನದಲ್ಲಿನ್ನೂ ಅನೇಕ ಹಳೆಯ ರೂಢ ನೀತಿಗಳು ಲೋಕಾಚಾರಗಳು ಪ್ರಚಲಿತವಾಗಿವೆ. ಸ್ತ್ರೀಯರಿನ್ನೂ ಪರಂಪರಾಪ್ರಿಯರಾಗಿದ್ದಾರೆ. ಅವರ ಈ ಪರಂಪರಾಪ್ರಿಯತೆ ವಸ್ತ್ರಾಲಂಕಾರ, ಆಹಾರ ಹಬ್ಬ-ಹುಣ್ಣಿವೆಗಳಲ್ಲಿ ಕಂಡು ಬರುತ್ತದೆ. ರಾಜಸ್ಥಾನಿ ಸ್ತ್ರೀಯ ಸರ್ವಸಾಧಾರಣ ಉಡುಪೆಂದರೆ ಬಹಳಷ್ಟು ನಿರಿಗೆಗಳುಳ್ಳ ಪರಕಾರ (ಘಾಗರಾ) ಎದೆ ಮತ್ತು ಎರಡೂ ಕೈಗಳನ್ನೂ ಮುಂಗೈವರೆಗೆ ಮುಚ್ಚುವ ಆದರೆ ಬೆನ್ನು ಬದಿಯಲ್ಲಿ ತೆರೆದಿರುವ ಕುಪ್ಪಸ. ಭುಜದ ಮೇಲಿಂದ ತಲೆಯ ಮೇಲೆ ಎಳೆದುಕೊಂಡಿರುವ ಶಾಲು. ಈ ಮೂರೂ ಅರಿವೆಗಳ ಮೇಲೆ ಜರಿಯ ಕಸೂತಿ ಇದ್ದೇ ಇರುತ್ತದೆ. ಶೋಕ ಸೂಚಕ ಅರಿವೆಗೆ ಮಾತ್ರ ಜರಿಯ ಕಸೂತಿ ಇರುವದಿಲ್ಲ. ಉಳಿದೆಲ್ಲ ಬಟ್ಟೆಗೆ ಅದು ಇದ್ದೇ ಇರಬೇಕು.

ಇವರಿಗೆ ದಾಗಿನೆಗಳ ಹುಚ್ಚೂ ಬಹಳ. ಕಾಲಲ್ಲಿ ಬೆಳ್ಳಿಯ, ಕೈಯಲ್ಲಿ ಅರಗಿನ ಅಥವಾ ಹಸ್ತಿದಂತದ, ಕೊರಳಲ್ಲಿ ಬಂಗಾರದ ಒಡವೆಗಳು ಇದ್ದೇ ಇರುತ್ತವೆ. ತಲೆಯ ಮೇಲೆ ಹಣೆಗೆ ಸಮೀಪವಾಗಿ ಮಧ್ಯಭಾಗದಲ್ಲಿ ಕಟ್ಟುವ ಪದಕ ಎದ್ದು ಕಾಣಿಸುವಂಥವಾಗಿದೆ. ಟೊಂಕಕ್ಕೆ ನಕ್ಷೆಯಿರುವ ಸರಪಳಿ ಇರುತ್ತದೆ. ನತ್ತು ಸೌಭಾಗ್ಯ ಸೂಚಕವಾದ ಆಭರಣವಾಗಿದೆ. ರಾಜ ದರಬಾರಿನಲ್ಲಿ ಯಾವುದೊಂದು ಕಾರ್ಯವಿಶೇಷಕ್ಕಾಗಿ ಬಹುಮಾನ ಎಂದು ಅಪ್ಪಣೆ ಸಿಕ್ಕ ಮನೆತನದವರು ಮಾತ್ರ ಕಾಲಿನಲ್ಲಿ ಬಂಗಾರದ ಸರಪಳಿಗಳನ್ನು ಹಾಕಿಕೊಳ್ಳಬಲ್ಲರು. ಇಲ್ಲವಾದರೆ ಕೋಟ್ಯಧೀಶರ ಮನೆಯ ಹೆಂಗಸರೂ ಬೆಳ್ಳಿಯ ಸರಪಳಿಗಳನ್ನೇ ಹಾಕಿಕೊಳ್ಳಬೇಕಾಗುವದು.

ಪುರುಷರ ಪೋಷಾಕಿನಲ್ಲಿ ಪೇಟಾಕ್ಕೆ ಹೆಚ್ಚಿನ ಮಹತ್ವವಿದೆ. ಜಾತಿ ಮತ್ತು ಪ್ರದೇಶ ಇವುಗಳ ಮೇಲಿಂದ ಪೇಟಾಗಳಲ್ಲಿ ತುಸು ವ್ಯತ್ಯಾಸ ಕಾಣಿಸಿಕೊಳ್ಳುತ್ತದೆ. ರಜಪೂತರು ಪೇಟಾ ಕಟ್ಟಿದರೆ ಇತರರು ಪಗಡಿ ಕಟ್ಟುತ್ತಾರೆ. ಹಳ್ಳಿಗರು ಮೊಳಕಾಲವರೆಗೆ ಧೋತರ ಉಟ್ಟು, ಬಗಲಂಗಿ ಹಾಕೊಂಡು ಕೆಂಪು, ಹಳದಿ ಅಥವಾ ಬಿಳಿ ಪಗಡಿ ಧರಿಸುತ್ತಾರೆ. ನಗರದ ಜನರು ಶೇರವಾನಿ ಅಥವಾ ಅಚಕನ್ ಮತ್ತು ಧೋತರ ಇಲ್ಲವೆ ಚೂಡೀದಾರ ಪಾಯಜಾಮಾ ತೊಡುತ್ತಾರೆ.

ಮೆಕ್ಕೆ, ಸಜ್ಜೆ, ಮಡಕಿ ಇವು ರಾಜಸ್ಥಾನಿಗಳ ಮುಖ್ಯ ಆಹಾರ. ಹಬ್ಬ ಹುಣ್ಣಿವೆಗಳಲ್ಲಿ ಅಕ್ಕಿಯ ಪದಾರ್ಥಗಳನ್ನು ಮಾಡುತ್ತಾರೆ. ಶ್ರೀಮಂತರು ಗೋದಿಯನ್ನು ತಿನ್ನುತ್ತಾರೆ. ರಾಜಸ್ಥಾನದ ಪೂರ್ವಭಾಗ ಫಲವತ್ತಾಗಿರುವದರಿಂದ ಅಲ್ಲಿ ಕಾಯಿಪಲ್ಲೆ ದೊರೆಯುತ್ತದೆ. ಪಶ್ಚಿಮ ಭಾಗ ಮರುಭೂಮಿಯಾಗಿರುವುದರಿಂದ ಅಲ್ಲಿ ಒಣಗಿಸಿಟ್ಟ ಕಾಯಿಪಲ್ಲೆಗಳ ಮೇಲೆಯೆ ಕಾಲ ಹಾಕಬೇಕಾಗುತ್ತದೆ. ಗೋದಿಪಾಯಸ ಮತ್ತು ಶಿರಾ ಅವರ ಮುಖ್ಯ ಪಕ್ವಾನ್ನಗಳು.

ರಾಜಸ್ಥಾನದಲ್ಲಿ ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯ ವರ್ಗದಲ್ಲಿಯ ವಿವಾಹ ಮತ್ತು ಮೃತ್ಯು ಸಂಸ್ಕಾರಗಳು ಸಾಮಾನ್ಯವಾಗಿ ಒಂದೇ ಬಗೆಯಾಗಿವೆ. ಬ್ರಾಹ್ಮಣರಲ್ಲಿ ವಿಧವಾವಿವಾಹಗಳಾ

ಗುವುದಿಲ್ಲ. ನಾತರಾಯತ ರಜಪೂತ, ಕಾಥೇಲಾ ಚಾರಣ, ಜಾಟ, ಮಾಳಿ, ಗುಜರ, ಮೀಣಾ, ಭಿಲ್ಲ, ದರೋಗಾ, ಗರಾಸಿಯಾ ಇತ್ಯಾದಿ ಜಾತಿಗಳಲ್ಲಿ ಪುನರ್ವಿವಾಹ ನಡೆಯುತ್ತದೆ. ಕೆಲವು ಜಾತಿಗಳಲ್ಲಿ ಅಣ್ಣ ಸತ್ತಾಗ ಅವನ ಹೆಂಡತಿ ಮೈದುನನೊಂದಿಗೆ ಉಡಕಿ ಮಾಡಿಕೊಳ್ಳುವ ಪದ್ಧತಿ ಇದೆ. ಬಾಲವಿವಾಹ ಕಾಯದೆಯ ಮೂಲಕ ಕಡಿಮೆಯಾಗುತ್ತ ನಡೆದಿದೆ. ವರದಕ್ಷಿಣೆಯ ಅಟ್ಟಹಾಸ ಹೇಳತೀರದು. ಮದುವೆಗಳಿಗಾಗಿ ವಿಪರೀತ ಖರ್ಚು ಮಾಡುವಂತೆ ಯಾರಾದರೂ ಸತ್ತಾಗ ಹಾಕುವ ಬ್ರಾಹ್ಮಣ ಭೋಜನಕ್ಕಾಗಿಯೂ ವಿಪರೀತ ಖರ್ಚು ಮಾಡುತ್ತಾರೆ. ಇವುಗಳ ಪ್ರಾಬಲ್ಯ ಈಗ ಕಡಿಮೆಯಾಗುತ್ತ ನಡೆದಿದೆ ಎಂಬ ಮಾತು ಬೇರೆ.

ದಸರೆಯು ಉತ್ಸವ ಹಬ್ಬಗಳಲ್ಲಿ ಅತಿ ಮುಖ್ಯ. ರಾಜಧಾನಿ ನಗರಗಳಲ್ಲಿ ಅಂದು ಅಪೂರ್ವ ವೈಭವಯುತ ಮೆರವಣಿಗೆಗಳು ಹೊರಡುತ್ತವೆ. ಗಣಗೌರ, ಅಖಾತೀಜ, ರಾಖಿ ಈ ಹಬ್ಬಗಳೂ ಮುಖ್ಯವಾದವು. ಗಣಗೌರ ಉತ್ಸವ ಹೋಳಿ ಹಬ್ಬದ ದಿನದಿಂದ ಆರಂಭವಾಗಿ ೧೭-೧೮ ದಿವಸಗಳ ವರೆಗೆ ನಡೆಯುತ್ತದೆ. ಆಗ ಪ್ರತಿನಿತ್ಯ ಸಂಜೆ ಮುತ್ತೈದೆಯರು ಮತ್ತು ಕುಮಾರಿಕೆಯರು ವಸ್ತ್ರಾಭರಣ ಭೂಷಿತರಾಗಿ ಮಂಗಲ ಕಲಶಗಳನ್ನು ಹೊತ್ತುಕೊಂಡು ವಾದ್ಯಗಳೊಂದಿಗೆ ಮೆರವಣಿಗೆ ಹೊರಡುತ್ತಾರೆ. ಈ ಮೆರವಣಿಗೆಯಲ್ಲಿ ರಾಜಮಹಾರಾಜರೂ ಭಾಗ ವಹಿಸುತ್ತಾರೆ. ಈ ಸಮಯದಲ್ಲಿ ಮನೆಮನೆಯಲ್ಲೂ ಗೃಹಿಣಿಯರು ಹಾಡುತ್ತ ಗುಜರಾತದ ಗರಬಾ ನೃತ್ಯದಂತಿರುವ ಘೂಮರ ನೃತ್ಯವನ್ನು ಮಾಡುತ್ತಾರೆ. ಪುರುಷರು ಗೀಂದಡ ನೃತ್ಯ ಮಾಡುತ್ತಾರೆ. ಅಖಾತೀಜ ಹಬ್ಬದಲ್ಲಿ ಜನ ಪರಸ್ಪರ ಭೆಟ್ಟಿಯಾಗಿ ಅಫುಸೇವನ ಮಾಡುತ್ತಾರೆ. ಬರುವ ವರ್ಷದ ಶಕುನಗಳನ್ನು ನೋಡುತ್ತಾರೆ. ರಾಖಿ ಬಂಧನ ಹಬ್ಬ ರಾಜಸ್ಥಾನಿ ಸ್ತ್ರೀಯ ಅತಿ ಮಹತ್ವದ ಹಬ್ಬ.

ರಾಜಸ್ಥಾನದಲ್ಲಿ ಜಾತ್ರೆಗಳ ಗದ್ದಲ ಬಹಳ. ಭಾದ್ರಪದ ದಶಮಿಗೆ ತೇಜಾಜಿಯ ಮತ್ತು ಏಕಾದಶಿಗೆ ಜಲಝೂಲನಿಯ ಜಾತ್ರೆಗಳು ರಾಜಸ್ಥಾನದಲ್ಲಿ ಎಲ್ಲೆಲ್ಲಿ ದೇವಾಲಯಗಳಿವೆಯೋ ಅಲ್ಲೆಲ್ಲ ಸೇರುತ್ತವೆ. ಭಾದ್ರಪದ ಅಮಾವಾಸ್ಯೆಯಂದು ಝುನು ಝುನು ಎಂಬಲ್ಲಿ ಸತಿ ಮಾತೆಯ ಜಾತ್ರೆ ನಡೆಯುವುದು. ದೂರ ದೂರದಿಂದ ಜನ ಈ ಜಾತ್ರೆಗಾಗಿ ಬರುತ್ತಾರೆ. ಅಜಮೀರದಲ್ಲಿ ಖ್ವಾಜಾಸಾಹೇಬರ ಉರುಸಿಗೂ ಜನ ಹೆಚ್ಚಾಗಿ ಸೇರುತ್ತಾರೆ. ಜಾತ್ರೆಯ ಸ್ಥಳಗಳಲ್ಲೆಲ್ಲ ಒಂಟೆ, ಎತ್ತು ಕುದುರೆಗಳ ವ್ಯಾಪಾರ ನಡೆಯುತ್ತದೆ.

ಭಾರತದ ಇತರೆಡೆಗಳಂತೆ ರಾಜಸ್ಥಾನದಲ್ಲಿಯೂ ಸಕಲ ಜಾತಿಗಳ ಜನರಿದ್ದಾರೆ. ಆದರೆ ಕೇವಲ ರಾಜಸ್ಥಾನದಲ್ಲಿ ಮಾತ್ರವೇ ಇರುವ ಕೆಲವು ಜಾತಿಗಳೂ ಅಲ್ಲಿವೆ. ದರೋಗಾ ಜಾತಿಯವರು ಕೇವಲ ರಾಜಸ್ಥಾನದಲ್ಲಿ ಮಾತ್ರ ಇದ್ದಾರೆ. ರಜಪೂತ ರಾಜರು ಮತ್ತು ಅವರ ಜಹಗೀರುದಾರರಿಗೆ ಅವರ ಉಪಪತ್ನಿಯರಿಂದ ಹುಟ್ಟಿದ ಮಕ್ಕಳ ಜಾತಿ ಇದು. ಗೋಲಾ ಎಂದೂ ಇವರನ್ನು ಕರೆಯುತ್ತಾರೆ. ಇವರ ಹೆಣ್ಣು ಮಕ್ಕಳಿಗೆ ಗೋಲಿ ಅಥವಾ ಡಾವಡಿಯಾ ಎನ್ನುತ್ತಾರೆ. ರಾಜಕನ್ಯೆಯರ ಲಗ್ನ ಸಮಯದಲ್ಲಿ ಇವರು ವರದಕ್ಷಿಣೆಯ ಅಂಗವಾಗಿ ವರನಿಗೆ ಅರ್ಪಿಸಲ್ಪಟ್ಟು ಅವನ ಭೋಗ ವಸ್ತುಗಳಾಗುತ್ತಾರೆ. ಈ ಜನರ ಉನ್ನತಿಗಾಗಿ ಈಗ ಸರಕಾರೀ ಹಾಗೂ ಸಾಮಾಜಿಕ ಪ್ರಯತ್ನಗಳು ನಡೆದಿವೆ.

ಇದರಂತೆ ಮೊದಲು ಹಿಂದುಗಳಾಗಿದ್ದು ಬಲಾತ್ಕಾರವಾಗಿ ಮುಸಲ್ಮಾನರಾಗಿ ಮಾಡಲ್ಪಟ್ಟವರ ಸಂಖ್ಯೆಯೂ ದೊಡ್ಡದಿದೆ. ಇವರಿಗೆ ನಾಮುಸ್ಲಿಂ ಎಂಬ ಹೆಸರಿದ್ದು ಇವರ ಪ್ರತಿಯೊಂದು ಕಾರ್ಯದಲ್ಲೂ ಹಿಂದು ಧರ್ಮದ ಪ್ರಭಾವ ಒಡೆದು ಕಾಣಿಸುತ್ತದೆ. ಕೇವಲ ರಾಜಸ್ಥಾನದಲ್ಲಿ ಮಾತ್ರ ಇರುವ ಗಾಡುಲ್ಯಾ ಲೋಹಾರಾ ಎಂಬ ಜನರ ಸಂಸಾರವೆಲ್ಲ ಚಕ್ಕಡಿಗಳಲ್ಲೆ ಇರುತ್ತದೆ. ಇವರು ಊರಿಂದೂರಿಗೆ ಅಲೆಯುತ್ತ ಹಳ್ಳಿಗರಿಗೆ ಕಬ್ಬಿಣದ ಕೆಲಸಗಳನ್ನು ಮಾಡಿಕೊಡುತ್ತಾರೆ. ಒಂದೆಡೆ ಮನೆಕಟ್ಟಿಕೊಂಡು ಸ್ಥಾಯಿಯಾಗುವುದು ತಮಗೆ ಅಪಮಾನಕರವೆಂದು ಇವರು ತಿಳಿಯುತ್ತಾರೆ.

ರಾಜಸ್ಥಾನದ ಭಾಷೆ ಸಾಮಾನ್ಯವಾಗಿ ಜನ

ತಿಳಿದಿರುವಂತೆ ಮಾರವಾಡಿ ಭಾಷೆಯಲ್ಲ. ರಾಜಸ್ಥಾನದ ಪ್ರಾಚೀನ ಭಾಷೆ ಮರುಭಾಷೆ. ರಾಜಸ್ಥಾನದ ಚಾರಣೀ ಭಾಷೆ ಡಿಂಗಲ ಭಾಷೆಯೆನಿಸಿಕೊಳ್ಳುವದು. ಗುಜರಾತಿ ಭಾಷೆಗೂ ರಾಜಸ್ಥಾನಿ ಭಾಷೆಗೂ ಬಹಳ ಸಾಮೀಪ್ಯವಿದೆ. ೧೬ ನೆಯ ಶತಮಾನದ ವರೆಗೂ ಇವೆರಡೂ ಭಾಷೆಗಳು ಒಂದೇ ಆಗಿದ್ದವು.

ರಾಜಸ್ಥಾನದ ಸಾಹಿತ್ಯ ವಿಕಾಸವು ಹನ್ನೆರಡನೆಯ ಶತಮಾನದ ಸುಮಾರಿಗೆ ಅಪಭ್ರಂಶ ಸಾಹಿತ್ಯದಿಂದ ಆಯಿತು. ಈ ಕಾಲಖಂಡದ ಹೆಚ್ಚಿನ ಗ್ರಂಥಗಳನ್ನೆಲ್ಲ ಜೈನರು ಬರೆದಿದ್ದಾರೆ. ಅಲ್ಲಿಂದ ಮುಂದೆ ವಿಶಾಲವಾಗಿ ಬೆಳೆದ ರಾಜಸ್ಥಾನಿ ಸಾಹಿತ್ಯದ ಮುಖ್ಯ ವಿಭಾಗಗಳೆಂದರೆ— ಚಾರಣ ಭಾಟ ಕಾವ್ಯ, ಜೈನ ಸಾಹಿತ್ಯ, ಭಕ್ತಿ ಸಾಹಿತ್ಯ, ಅಭಿಜಾತ ವಾಙ್ಮಯ, ಇತಿಹಾಸ ವೃತ್ತ ಮತ್ತು ಜಾನಪದ ಸಾಹಿತ್ಯ. ಚಾರಣ ಭಾಟ ಶೈಲಿಯ ಕಾವ್ಯ ವೀರರಸಾತ್ಮಕವಾದುದು. ಈ ಚಾರಣರು ಲೇಖಣಿವೀರರಾಗಿದ್ದಂತೆ ಖಡ್ಗವೀರರೂ ಆಗಿದ್ದರು. ಅಂತೇ ಅವರ ಯುದ್ಧ ವರ್ಣನೆ ಯಥಾವತ್ತಾಗಿದೆ. ಅವರು ರಾಜರ ಗುಣಗಾನ ಮಾಡಿದಂತೆ ಅಯೋಗ್ಯ ರಾಜರ ನಿರ್ಭರ್ತ್ಸನೆಯನ್ನೂ ಮಾಡಿದ್ದಾರೆ. ರಾಜಸ್ಥಾನದ ಜೈನ ಸಾಹಿತ್ಯ ಕಾವ್ಯ, ಕಥೆ, ಇತಿಹಾಸ, ಚರಿತ್ರ, ಇತ್ಯಾದಿಗಳಿಂದ ಸಮೃದ್ಧವಾಗಿದೆ. ಜಾನಪದ ಸಾಹಿತ್ಯದಲ್ಲಿ ವ್ರತಗಳ ಕಥೆಗಳು, ಐತಿಹಾಸಿಕ ಕಥೆಗಳು ಇವೆ. ಜಾನಪದ ಗೀತೆಯ ಪ್ರಸ್ಥ ಇಲ್ಲಿ ಬಹಳ, ಯಾವ ಸಮಾರಂಭವೂ ಈ ಗೀತೆಗಳಿಲ್ಲದೆ ನಡೆಯುವುದಿಲ್ಲ. ಮೀರಾಬಾಯಿ ಮತ್ತು ಚಂದ್ರಸಖಿಯರು ರಚಿಸಿದ ಭಕ್ತಿ ಸಾಹಿತ್ಯವೂ ಶ್ರೇಷ್ಠದರ್ಜೆಯದಾಗಿದೆ.

ರಾಜಸ್ಥಾನದ ಕಲೆಗಳಲ್ಲಿ ಎರಡು ಪ್ರಕಾರಗಳನ್ನು ಮಾಡಬಹುದು. ಒಂದು ರಾಜಾಶ್ರಯದಲ್ಲಿ ಬೆಳೆದು ಬಂದದ್ದು, ಇನ್ನೊಂದು ಜನರಲ್ಲಿ ಸಹಜವಾಗಿ ಬೆಳೆದು ಬಂದದ್ದು. ರಜಪೂತ ರಾಜರ ಸಂಪರ್ಕ ಮೊಗಲರೊಂದಿಗೆ ಹೆಚ್ಚಾದ್ದರಿಂದ ಅವರ ಆಶ್ರಯದಲ್ಲಿ ಬೆಳೆದ ಕಲೆಯಮೇಲೆ ಮುಸ್ಲಿಂ ಸಂಸ್ಕೃತಿಯ ಪ್ರಭಾವ ಕಾಣಿಸುತ್ತದೆ ಅದರ ಫಲವಾಗಿ ಜನರ ಸಹಜ ಕಲೆಯಲ್ಲೂ ಮಾರ್ಪಾಟಾಯಿತು. ರಾಜಸ್ಥಾನದ ಮನೆಗಳು ಉಡುಪು ಮುಂತಾದವುಗಳಲ್ಲಿ ಈ ಪ್ರಭಾವ ಕಾಣುತ್ತದೆ.

ರಾಜಸ್ಥಾನದಲ್ಲಿ ಸಂಗಮರವರಿ ಕಲ್ಲು ಹೇರಳವಾಗಿ ಸಿಗುವದರಿಂದ ಅಲ್ಲಿ ಮೂರ್ತಿ ಕೆತ್ತುವ ಕಲೆ ಬಹಳಷ್ಟು ಬೆಳೆದಿದೆ. ರಾಜಸ್ಥಾನದಲ್ಲಿ ಪ್ರೇಕ್ಷಣೀಯ ಸ್ಥಳಗಳು ವಿಪುಲವಾಗಿವೆ. ರಾಜರಾಣಿಯರ ಮಹಲುಗಳು, ಕೋಟೆಗಳು, ದೇವಾಲಯಗಳು ನೋಡತಕ್ಕಂಥವುಗಳಾಗಿವೆ. ಉದಯಪುರದ ಕೋಟೆ ಮತ್ತು ಸರೋವರಗಳು ಪ್ರದ್ಧವಾಗಿದ್ದರೆ ಜಯಪುರದ ಮಹಲುಗಳು ಅಸಾಮಾನ್ಯವಾಗಿವೆ.

ರಾಜಸ್ಥಾನದ ಜನರು ಮರುಭೂಮಿಯಾದರೂ ತಮ್ಮ ಈ ನಾಡನ್ನು ಅತಿಶಯ ಪ್ರೀತಿಸುತ್ತಾರೆ. ನಿಸರ್ಗದ ವರದ ಹಸ್ತ ಲಭ್ಯವಿರದಿದ್ದರೂ ತಮ್ಮ ಕಾವ್ಯಮಯತೆಯಿಂದ ಜೀವನದ ರುಕ್ಷತೆಯನ್ನು ನಿವಾರಿಸಿಕೊಳ್ಳುವ ಈ ಜನ ಹೊಟ್ಟೆಗಾಗಿ ಪರಪ್ರಾಂತಗಳಿಗಾಗಿ ಹೋದರೂ "ಲಾಮೊ ಲಾಗೇ ಥೈ ಮ್ಹಾರೋ ದೇಸಡೊ" (ನನಗೆ ನನ್ನ ದೇಶ ಅತಿಶಯವಾಗಿ ಸೇರುತ್ತದೆ) ಎನ್ನುತ್ತಾರೆ. ಚಂಬಳ ಮತ್ತು ಭಾಕಡಾ ಆಣೆಕಟ್ಟುಗಳ ನೀರು ಮತ್ತು ವಿದ್ಯುಚ್ಛಕ್ತಿ ದೊರೆಯತೊಡಗಿದ ಮೇಲೆ ತಮ್ಮ ನಾಡು ನಂದನವಾದೀತು ಎಂಬ ಆಶೆ ಅವರಿಗಿದೆ. *

"ಸ್ತ್ರೀ" ಖಂಡ

ಮನುಷ್ಯನಿಗೆ ಇಪ್ಪತ್ತು ವರ್ಷವಾದಾಗ ಇರುವ ಮುಖ ಪ್ರಕೃತಿದತ್ತವಾದದ್ದು. ೩೦ ವರ್ಷದ ಮುಖ ಅವನ ಜೀವನದ ಏರು-ತಗ್ಗುಗಳ ದೇಣಿಗೆ. ಆದರೆ ಐವತ್ತು ವರ್ಷದ ಮುಖ ಮಾತ್ರ ಅವನ ದುಡಿಮೆಯ ಫಲವಾಗಿರುತ್ತದೆ.

—ಅಷ್ಟಾವಕ್ರ

ಡಾ. ಮೇಘನಾದ ಸಾಹಾ

ಅವರು ತಾರೆಗಳ ಉಷ್ಣತೆಯನ್ನು ಅಳೆದರು!

ವಿವಿಧಮೂಲಗಳಿಂದ

ಆಲ್ಬರ್ಟ್ ಐನ್‌ಸ್ಟೈನರು ತಮ್ಮ ಸಾಪೇಕ್ಷತಾ ಸಿದ್ಧಾಂತವನ್ನು ಪ್ರಕಟಿಸಿದಾಗ ಬಹು ಸಂಖ್ಯಾಕ ವಿಜ್ಞಾನಿಗಳಿಗೇ ಅದರ ತಲೆ ಬುಡ ಆಗಲಿಲ್ಲ. ಆದರೆ ಅದು ಪ್ರಕಟವಾಗಿ ಕೆಲವೇ ವರ್ಷಗಳಲ್ಲಿ ಕಲಕತ್ತೆಯ "ಸ್ಟೇಟ್ಸಮನ್" ಪತ್ರಿಕೆಯಲ್ಲಿ ಆ ಸಿದ್ಧಾಂತವನ್ನು ಕುರಿತು ಅಜ್ಞಾತ ವಿಜ್ಞಾನಾಧ್ಯಾಪಕನೊಬ್ಬನ ಲೇಖಗಳು ಪ್ರಕಟವಾಗ ತೊಡಗಿದಾಗ ವಿಜ್ಞಾನ ಪ್ರಪಂಚಕ್ಕೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಐನ್‌ಸ್ಟೈನರು ಜರ್ಮನ್ ಭಾಷೆಯಲ್ಲಿ ಬರೆದಿದ್ದ ಗ್ರಂಥವನ್ನೋದಿ ಬೇರೆ ಈ ಅಧ್ಯಾಪಕ ಲೇಖನಗಳನ್ನು ಬರೆದಿದ್ದ. ಅವನ ಹೆಸರು ಮೇಘನಾದ ಸಾಹಾ ಎಂದಿತ್ತು. "ಸಾಪೇಕ್ಷತಾಸಿದ್ಧಾಂತದಿಂದ ನಿಷ್ಪನ್ನವಾದ ವಿದ್ಯುತ್ಕ್ರಿಯೆಯ ಮೂಲ ನಿಯಮ" ಎಂಬ ಲೇಖನವು ವೈಜ್ಞಾನಿಕ ಪತ್ರಿಕೆಗಳಲ್ಲಿ ಬೇಗನೆ ಸಾಹಾ ಹೆಸರಿನಲ್ಲಿ ಪ್ರಕಟವಾಯಿತು.

ಕೇವಲ ೨೫ ವಯಸ್ಸಿನಲ್ಲಿ ಸಾಪೇಕ್ಷತಾ ಸಿದ್ಧಾಂತವನ್ನು ಅರಗಿಸಿಕೊಂಡು ಅದರಿಂದ ತಮ್ಮದೇ ನವೀನ ಸಿದ್ಧಾಂತವನ್ನು ನಿಷ್ಪನ್ನಗೊಳಿಸಿದ ಮೇಘನಾದ ಸಾಹಾ ಇಪ್ಪತ್ತನೇ ಶತಮಾನದಲ್ಲಿ ಭಾರತವು ವಿಜ್ಞಾನಕ್ಕೆ ನೀಡಿದ ಶ್ರೇಷ್ಠತಮ ಕಾಣಿಕೆಗಳಲ್ಲಿ ಹೆಸರಿಸತಕ್ಕವರು. ಅವರು ಎಳೆಯ ವಯಸ್ಸಿನಲ್ಲೇ ಕೋಟ್ಯಂತರ ಗಾವುದ ದೂರವಿರುವ ತಾರೆಗಳ ಚಟುವಟಿಕೆಗಳ ಬಗ್ಗೆ ಮಾನವನ ಜ್ಞಾನವನ್ನು ವಿಸ್ತರಿಸುವ ಮೂಲಭೂತ ಕಲ್ಪನೆಯನ್ನು ಮಂಡಿಸಿದರು. ಸಾಹಾ ಸಮೀಕರಣವೆಂದು ಹೆಸರಾಂತ ಅವರ ಸಮೀಕರಣವೇ ಇಂದು ಖಭೌತಿಕ ಶಾಸ್ತ್ರದ ತಳಪಾಯವಾಗಿದೆ. ನಕ್ಷತ್ರಗಳು ಚೆಲ್ಲುವ ಬೆಳಕನ್ನು ಲೋಲಕದಲ್ಲಿ ವರ್ಣಪಂಕ್ತಿಗಳಾಗಿ ವಿಂಗಡಿಸಿ ಆ ನಕ್ಷತ್ರಗಳ ಉಷ್ಣತಾಮಾನ ಇಷ್ಟೇ ಎಂದು ಲೆಕ್ಕಮಾಡಿ ತೋರಿಸಲು ಅವರ ಸಮೀಕರಣವು ದಾರಿಮಾಡಿಕೊಟ್ಟಿತಲ್ಲದೆ ನಕ್ಷತ್ರಗಳ ಬೆಳಕಿನ ವಿಚಿತ್ರ ವರ್ತನೆಯ ಬಗ್ಗೆ ವಿಜ್ಞಾನಿಗಳಿಗುಂಟಾದ ಬಲುಗಾಲದ ಸಮಸ್ಯೆಯನ್ನು, ಬೀಗವನ್ನು ಬೀಗದ ಕೈ ತೆರೆಯುವಂತೆ, ಬಿಡಿಸಿ ತೋರಿಸಿತು.

ಡಾ. ಮೇಘನಾದ ಸಾಹಾರದು ಯಾವ ದೇಶದ ವಿಜ್ಞಾನ ಪ್ರಪಂಚದಲ್ಲೂ ಎದ್ದು ಕಾಣಿಸಬಹುದಾದ ಬುದ್ಧಿವೈಭವ. ಭಾರತಕ್ಕೆ ಅವರ ಉಪಕಾರ ಕೇವಲ ವೈಜ್ಞಾನಿಕ ಸಂಶೋಧನೆಗಳಿಂದ ದೊರಕಿದ ಕೀರ್ತಿ ಮಾತ್ರವಲ್ಲ. ಭಾರತದಲ್ಲಿ ವೈಜ್ಞಾನಿಕ ಮನೋವೃತ್ತಿ ಹೆಚ್ಚಿಸಲು ಮತ್ತು ವಿಜ್ಞಾನವನ್ನು ಜನಜೀವನದ ಶ್ರೇಯಸ್ಸಿಗಾಗಿ ಉಪಯೋಗಿಸುವಂತೆ ಸರ

ಕಾರವನ್ನು ಪ್ರೇರಿಸಲು ಅವರು ಜೀವಮಾನ ವೆಲ್ಲ ದುಡಿದರು.

ಆದರೆ ದೈವದ ದಯೆಯೇ ಈ ಅಮೂಲ್ಯ ನಿಧಿ ಯನ್ನು ಬೆಳಕಿಗೆ ಬರುವಂತೆ ಮಾಡಿತು; ಅದಿಲ್ಲ ದಿದ್ದರೆ ಮೇಘನಾದ ಸಾಹಾ ಒಬ್ಬ ಅಯಶಸ್ವಿ ಅಂಗಡಿಕಾರನಾಗಿ ಬಾಳಿ ಹಾಗೇ ಬಾಡಿಹೋಗ ಬಹುದಾಗಿತ್ತು. ಮೇಘನಾದ ಸಾಹಾ ಪೂರ್ವ ಬಂಗಾಲದ ಒಂದು ಕುಗ್ರಾಮದಲ್ಲಿ ತಂದೆಯ ಹತ್ತು ಗಂಡು ಮಕ್ಕಳಲ್ಲಿ ಐದನೆಯವರಾಗಿ ೧೮೯೩ ರಲ್ಲಿ ಜನಿಸಿದರು. ತಂದೆ ಜಗನ್ನಾಥ ಸಾಹಾ ಕಡುಬಡವರು. ಜೀವನೋಪಾಯ ಕ್ಕಾಗಿ ಒಂದು ಚಿಕ್ಕ ಅಂಗಡಿ. ಮೇಘನಾದ ನನ್ನು ಉಚ್ಚಶಿಕ್ಷಣಕ್ಕೆ ಕಳಿಸುವುದಂತಿರಲಿ, ಬೇಗನೆ ಸಾಲೆ ಬಿಡಿಸಿ ಅಂಗಡಿಯಲ್ಲಿ ಕೂಡ್ರಿಸ ಬೇಕಾಯಿತು. ಹುಡುಗನ ಪ್ರತಿಭೆಯನ್ನು ಗುರು ತಿಸಿ ಅವನನ್ನು ಮುಂದೆ ಓದಿಸಲೇಬೇಕೆಂದು ಒತ್ತಾಯಸಿದ ಶಾಲಾ ಮಾಸ್ತರು, ಅದಕ್ಕೆ ಧನ ಸಹಾಯ ನೀಡುವಷ್ಟು ಔದಾರ್ಯವನ್ನು ಪ್ರದರ್ಶಿ ಸಿದ ಆ ಗ್ರಾಮದ ಡಾ. ಅನಂತ ಕುಮಾರ ದಾಸ, ಅವನಿಗೆ ಗಣಿತಪಾಠ ಹೇಳಿದ ಪ್ರಸನ್ನ ಕುಮಾರ ಚಕ್ರವರ್ತಿ ಇವರೆಲ್ಲರಿಗೂ ಭಾರತ ಋಣಿಯಾಗಿರಬೇಕು. .

ವಿದ್ಯಾರ್ಥಿವೇತನಗಳನ್ನವಲಂಬಿಸಿಯೆ ಮೇಘ ನಾದ ಸಾಹಾರ ಶಿಕ್ಷಣದ ಬಹುಭಾಗ ಪೂರೈ ಸಿತು. ಸಾಮಾನ್ಯವಾಗಿ ಶಿಷ್ಯವೃತ್ತಿಗಳ ಮೇಲೆ ಕೈಯೂರಿದ ಬಡ ವಿದ್ಯಾರ್ಥಿಗಳಲ್ಲಿ ಸ್ವಾಭಿ ಮಾನ ರಹಿತವಾದ ವಿಧೇಯತೆ ಇರುತ್ತದೆ. ಸಾಹಾ ಹಾಗಿರಲಿಲ್ಲ. ಹೈಸ್ಕೂಲಿನಲ್ಲಿದ್ದಾಗ ವಂಗ ಭಂಗ ಚಳವಳಿಯ ಉಬ್ಬರದ ಕಾಲದಲ್ಲಿ ಅವರ ಊರಿಗೆ ಭೆಟ್ಟಿಕೊಟ್ಟ ಗವರ್ನರರನ್ನು ಬಹಿಷ್ಕರಿ ಸುವ ವಿದಾರ್ಥಿ ಕಾರ್ಯಕ್ರಮದ ನೇತೃತ್ವವನ್ನು ವಹಿಸಿ ಅವರು ಪೋಲೀಸ್ ಲಾಕಪ್ ಸೇರಿ ದರು. ಅನಂತರ ಅವರನ್ನು ಶಾಲೆಯಿಂದ ಹೊರ ತಳ್ಳಲಾಯಿತು.

ಆ ಮೇಲೆ ಖಾಸಗಿ ಶಾಲೆಯೊಂದರಲ್ಲಿ ಹೆಸರು ಬರೆಸಿ ಅಭ್ಯಾಸಮಾಡಿ ಎಂಟ್ರೆನ್ಸ್ ಪರೀಕ್ಷೆಗೆ ಕುಳಿತು ಇಂಗ್ಲಿಷ್ ಸಂಸ್ಕೃತ, ಬಂಗಾಲಿ ಮತ್ತು ಗಣಿತಗಳಲ್ಲಿ ಉಚ್ಚಾಂಕಗಳನ್ನು ಪಡೆದರು. ೧೯೧೧ ರಲ್ಲಿ ಹೇಗೋ ಕಲಕತ್ತೆಗೆ ಬಂದು ಪ್ರೆಸಿ ಡೆನ್ಸಿ ಕಾಲೇಜ್ ಸೇರಿದರು. ಆಚಾರ್ಯ ಪ್ರಫುಲ್ಲ ಚಂದ್ರರಾಯ, ಜಗದೀಶ ಚಂದ್ರ ಬೋಸರಂಥ ಸ್ಫೂರ್ತಿನಿಧಿ ಅಧ್ಯಾಪಕರ ಕೈಯಲ್ಲಿ ಅವರು ಜ್ಞಾನ ಸಂಗ್ರಹದ ಪಾಠದ ಜತೆಗೆ ದೇಶಾ ಭಿಮಾನದ ಪಾಠವನ್ನೂ ಕಲಿತರು. ಬಡತನದ ಶನಿ ಬೆಂಬಿಡದಿದ್ದರೂ ಅಳುಕದೆ ಮೇಘನಾದರು ಖಾಸಗಿ ಟ್ಯೂಶನ್ ಹೇಳಿ ಹಣ ಗಳಿಸಿ ಕಾ-ಲೇಜು ವೆಚ್ಚ ಪೂರೈಸಿಕೊಳ್ಳುತ್ತಿದ್ದರು. ಕೆಲ ವೇಳೆ ಕಲಕತ್ತೆಯ ಬೇರೆ ಬೇರೆ ಮೂಲೆಗಳಲ್ಲಿದ್ದ ವಿದ್ಯಾರ್ಥಿಗಳ ಮನೆಗಳಿಗೆ ಟ್ಯೂಶನ್ನಿಗಾಗಿ ಸೈಕಲ್ಲಿನಲ್ಲಿ ಹೋಗಿ ಬರಬೇಕಾಗುತ್ತಿತ್ತು. ಕಾಲೇಜು ಮುಗಿಸುವಷ್ಟರಲ್ಲಿ ಅವರ ಆರೋಗ್ಯ ಜರ್ಜರಿತವಾಗಿ ಹೋಗಿತ್ತು. ಆದರೆ ಗಣಿತ ಶಾಸ್ತ್ರದಲ್ಲಿ ಬಿ. ಎ. ಮತ್ತು ಅನ್ವಿತ ಗಣಿತ ಶಾಸ್ತ್ರದಲ್ಲಿ ಬಿ. ಎಸ್‌ಸಿ. ಎರಡರಲ್ಲೂ ವಿಶ್ವ ವಿದ್ಯಾಲಯಕ್ಕೆ ಮೊದಲನೆಯವರಾಗಿ ತೇರ್ಗಡೆ ಹೊಂದಿದರು.

ಆಶುತೋಷ ಮುಕರ್ಜಿಯವರು ಒಡನೆ ಈ ತೇಜಸ್ವಿ ಯುವಕನನ್ನು ಕಲಕತ್ತಾ ವಿಶ್ವವಿದ್ಯಾಲ ಯದಲ್ಲಿಗಣಿತಾಧ್ಯಾಪಕನಾಗಿ ಸೇರಿಸಿಕೊಂಡರು. ಆದರೆ ಸ್ವತಂತ್ರ ವೃತ್ತಿಯ ಅವರಿಗೆ ಆ ಶಾಖೆ ಯಲ್ಲಿ ಉಳಿಯಲು ಸಾಧ್ಯವಾಗಲಿಲ್ಲ. ಆಶು ತೋಷರು ಅವರನ್ನು ಭೌತಶಾಸ್ತ್ರ ವಿಭಾಗಕ್ಕೆ ವರ್ಗಾಯಿಸಿದರು. ಗಣಿತ ತಜ್ಞರಾಗಿದ್ದ ಸಾಹಾಗೆ ಹೊಸ ಶಾಖೆಯಲ್ಲಿ ತಾವು ಕಲಿಸಬೇಕಾಗಿದ್ದ ಉಷ್ಣೋರ್ಜಾಶಾಸ್ತ್ರದ (ಥರ್ಮೋಡೈನಾ ಮಿಕ್ಸ್) ತಲೆಬಾಲ ಗೊತ್ತಿರಲಿಲ್ಲ. ಆದರೆ ಹಾಗೆನ್ನಲು ಅಭಿಮಾನ ಬಿಡದೆ ಅವರು ಆ ವಿಷ ಯವನ್ನು ಅಭ್ಯಸಿಸಿ ಪಾಠ ಹೇಳತೊಡಗಿದರು. ಇದೂ ವಿಧಿಯ ಆಟವೇನೋ. ಏಕೆಂದರೆ ಈ ವಿಷಯದ ಮೇಲೆ ಅನಂತರ ಸಾಹಾ ನಡೆಸಿದ

ಉಚ್ಚ ಸಂಶೋಧನೆಗಳ ಫಲಿತಾಂಶವೇ ಅವರ ಸಾಹಾ ಸಮೀಕರಣವಾಯಿತು! ಅವರ ಪ್ರತಿಭೆಯ ಸ್ವರೂಪವೇ ಹಾಗಿತ್ತು. ಅದು ಯಾವ ನೀರಲ್ಲೂ ಈಸಬಲ್ಲ ಮೀನಾಗಿತ್ತು.

ಉಷ್ಣೋರ್ಜಾಶಾಸ್ತ್ರದ ಕಡೆ ಸಾಹಾ ಲಕ್ಷ್ಯ ಹಾಕಿದ ಕಾಲ (೧೯೧೬) ಭೌತಶಾಸ್ತ್ರದಲ್ಲಿ ಕ್ರಾಂತಿ ಮಸಗಿದ್ದ ಕಾಲ. ಅಭೇದ್ಯವೆಂದು ಆ ವರೆಗೆ ನಂಬಲಾಗಿದ್ದ ಪರಮಾಣುವನ್ನು ರುದರ್‌ಫೋರ್ಡ್ ಭೇದಿಸಿದ್ದ, ರಾಂಟ್‌ಜೆನ್ ಕಿರಣ, ಆಲ್ಫಾಬೀಟಾ ಕಿರಣಗಳು, ಮೇಕ್ಸ್-ಪ್ಲಾಂಕ್ ಕ್ವಾಂಟಮ್ ಸಿದ್ಧಾಂತ ಇವು ವಿಶ್ವದ ಸ್ವರೂಪದ ಬಗ್ಗೆ ಇದ್ದ ಹಿಂದಿನವರ ಊಹೆಯನ್ನೆಲ್ಲ ತಲೆಕೆಳಗಾಗಿಸಿತ್ತು. ಐನ್‌ಸ್ಟೈನರು ಇವರ ಮೇಲೆ ಸಾಪೇಕ್ಷತಾ ಸಿದ್ಧಾಂತದ ಬಾಂಬು ಒಗೆದಿದ್ದರು. ಈ ವ್ಯತ್ಯಸ್ತ ದೃಶ್ಯದಲ್ಲಿ ಸಾಹಾ ಉತ್ಸಾಹದಿಂದ ಸೇರಿಕೊಂಡರು. ಅವರು ತೀವ್ರ ಉಷ್ಣತೆಯ ಬಗ್ಗೆ ಸ್ವತಂತ್ರ ಸಂಶೋಧನೆಗಳಲ್ಲಿ ತೊಡಗಿದರು. ಪ್ರಕಾಶದ ಒತ್ತಡವನ್ನು ಕೇಂದ್ರೀಕರಿಸುವ ಒಂದು ಉಪಕರಣವನ್ನು ಶೋಧಿಸಿ ಕಲಕತ್ತಾ ವಿಶ್ವವಿದ್ಯಾಲಯದ ಡಾಕ್ಟರೇಟ್ ಸಂಪಾದಿಸಿದರು.

ಬಾಲ್ಯದಲ್ಲಿ ಆಕಾಶವನ್ನು ತುಂಬಿದ ತಾರಾ ವಿತಾನವನ್ನು ನೋಡಿ ಭಾವನಾವಶರಾಗುತ್ತಿದ್ದರು ಸಾಹಾ. ಈಗ ಆಧುನಿಕ ವಿಜ್ಞಾನವು ಅದೇ ತಾರಾವಿತಾನದಲ್ಲಿ ಕಂಡ ಅದ್ಭುತಗಳು ಅವರನ್ನು ಉತ್ತೇಜಿಸಿದವು. ಅವರು ಅವುಗಳ ಇರವು ತೆರವಿನ ಬಗ್ಗೆ ಯೋಚಿಸಿದರು. ತಾರೆಗಳಿಂದಲೂ ಸೂರ್ಯನಿಂದಲೂ ಬರುವ ಪ್ರಕಾಶವನ್ನು ವಿಶ್ಲೇಷಿಸಿದ ವಿಜ್ಞಾನಿಗಳು ಒಂದು ಪೇಚಿನಲ್ಲಿ ಬಿದ್ದಿದ್ದರು. ಯಾವ ಪರಮಾಣುಗಳ ಉಷ್ಣೋತ್ಕರ್ಷದಿಂದ ಯಾವ ಬಣ್ಣದ ಪ್ರಕಾಶ ಬರುತ್ತದೆಂದು ಅವರಿಗೆ ಗೊತ್ತಿತ್ತು. ಆದರೆ ಅವರು ವಿಭಜಿಸಿದ ತಾರಾ ಪ್ರಕಾಶದಲ್ಲಿ ಕಪ್ಪು ಪಟ್ಟಿಗಳು ಏಕೆ ಕಾಣಿಸಿಕೊಳ್ಳಬೇಕು? ಈ ಬಗೆಯ ಪಟ್ಟಿ ಕ್ಯಾಲ್ಸಿಯಂನಿಂದ ಹುಟ್ಟತಕ್ಕದ್ದು. ಆದರೆ ತಾರೆಗಳ ಮೇಲ್ಭಾಗದಲ್ಲಿ ಕ್ಯಾಲ್ಸಿಯಂಗಿಂತಲೂ ಹಗುರವಾದ ಹೈಡ್ರೋಜನ್ ಹೀಲಿಯಂ ಆಕ್ಸಿಜನ್ ಪರಮಾಣುಗಳಿರುವಾಗ ಅವುಗಳ ಮೇಲೆ ಭಾರವಾದ ಕಾಲ್ಸಿಯಂ ಪರಮಾಣುಗಳು ಹೇಗೆ ಸವಾರಿ ಮಾಡುತ್ತವೆ?

ಈ ಸಮಸ್ಯೆಗೆ ಡಾ. ಸಾಹಾ ಉತ್ತರ ಕಂಡು ಹಿಡಿದರು. ಸೂರ್ಯ, ತಾರೆಗಳ ಮೇಲ್ಭಾಗದಲ್ಲಿರುವ ೬೦೦೦ ಡಿಗ್ರಿಗೂ ಮಿಕ್ಕಿದ ಉಷ್ಣತೆಯಲ್ಲಿ ಕ್ಯಾಲ್ಸಿಯಂ ಪರಮಾಣುಗಳು ಸಾಮಾನ್ಯ ಸ್ಥಿತಿಯಲ್ಲಿರದೆ ವಿದ್ಯುತ್ ಸ್ಥಿತಿಯಲ್ಲಿವೆ ಅಂದರೆ ಅವು ತಮ್ಮ ಹೊರಗಿನ ಎಲೆಕ್ಟ್ರಾನ್‌ಗಳಲ್ಲಿ ಒಂದೆರಡನ್ನು ಕಳೆದುಕೊಂಡಿರುತ್ತವೆ. ಸೂರ್ಯನ ಮೈಯಿಂದ ಹೊರಹೊಮ್ಮುವ ಕಿರಣಗಳ ಒಂದಂಶವನ್ನು ಹೀರಿ ಈ ಹೊರ ಇಲೆಕ್ಟ್ರಾನುಗಳು ತಮ್ಮ ಸಾಮಾನ್ಯ ಪಥವನ್ನು ಬಿಟ್ಟು ತುಸು ಹೊರಗಿನ ಪಥದಲ್ಲಿ ಕಿಂಚಿತ್ ಕಾಲ ಸುತ್ತುವರಿದು ಮತ್ತೆ ಮೂಲಪಥಕ್ಕೆ ಮರಳುತ್ತವೆ. ಕಿರಣಗಳನ್ನು ಹೀರಿ ಇಲೆಕ್ಟ್ರಾನುಗಳನ್ನು ಹೊರಗೆಸೆದು ಪುನಃ ಸಕಾಲದಲ್ಲಿ ಹಿಡಿಯುವ ಕ್ಯಾಲ್ಸಿಯಂ ಪರಮಾಣುವಿನ ಈ ಅಸಾಧಾರಣ ನಾಟ್ಯ ಕೌಶಲದಿಂದಲೇ ಅದು ಚಿಮ್ಮುವ ಕಾರಂಜಿಯ ನೆತ್ತಿಯಲ್ಲಿ ಕುಣಿಯುವ ಲಿಂಬೆ ಹಣ್ಣಿನ ಹಾಗೆ, ತನಗಿಂತ ಹಗುರವಾದ ಅನಿಲಗಳ ಪರಮಾಣುಗಳ ತಲೆಯ ಮೇಲೆ ಉಳಿಯಬಲ್ಲದಾಗಿದೆ. ಪರಮಾಣುಗಳ ಈ ಛಿದ್ರೀಕರಣಕ್ಕೆ ಥರ್ಮಲ್ ಅಯನೈಜೇಶನ್ ಅರ್ಥಾತ್ ಔಷ್ಣಿಕ ಅಯೋಣೀಕರಣ ಎಂದು ಹೆಸರು. ಸಾಹಾ ವೈಜ್ಞಾನಿಕರ ಒಗಟಿಗೆ ಉತ್ತರ ಕಂಡುಹಿಡಿದದ್ದಷ್ಟೇ ಅಲ್ಲದೆ ಯಾವ ಉಷ್ಣತೆಯಲ್ಲಿ ಈ ಅಯೋಣೀಕರಣ ಎಷ್ಟು ಆಗುತ್ತದೆಂದೂ ಸಮೀಕರಣದಿಂದ ತೋರಿಸಿದರು. ಇದೇ ನಕ್ಷತ್ರಗಳ ಉಷ್ಣತೆಯನ್ನಳೆಯಲು ಒಂದು ಸಾಧನವಾಯಿತು.

ಖಭೌತಿಕ ಶಾಸ್ತ್ರದಲ್ಲಿ ಸಾಹಾರ ಈ ಸಮೀಕರಣ ಎಷ್ಟು ಮಹತ್ವದ ಹೆಜ್ಜೆಯಾಗಿತ್ತೆಂದರೆ ಪರಮಾಣು ವಿಜ್ಞಾನಿ ಎ. ಎಚ್. ಕಂಪನ್ನರು

ಸಾಹ್ಯಾರ ಹೆಸರನ್ನು ನೋಬೆಲ್ ಪಾರಿತೋಷಕಕ್ಕಾಗಿ ಸೂಚಿಸಿದರು. ಆದರೆ ಹೇಗೋ ಆ ಪಾರಿತೋಷಕ ಅವರಿಂದ ತಪ್ಪಿಸಿಕೊಂಡು ಬಿಟ್ಟಿತು. ಆದರೆ ಅವರ ಕೀರ್ತಿ ಹಬ್ಬಿತು. ಅವರಿಗೆ ಜರ್ಮನಿಗೆ ಹೋಗಲು ಸೌಕರ್ಯ ದೊರೆಯಿತು. ಬ್ರಿಟಿಶ್ ಮತ್ತು ಅಮೇರಿಕನ್ನರನ್ನು ತಮ್ಮ ಪ್ರಯೋಗಶಾಲೆಯ ಹತ್ತಿರ ಸುಳಿಯಗೊಡದಿದ್ದ ಜರ್ಮನ್ ಭೌತಶಾಸ್ತ್ರಿ ನರ್ಟ್ ಸಾಹಾರನ್ನು ಸ್ವಾಗತಿಸಿದನು. ಒಂದು ವರ್ಷ ಅವರು ಅವನೊಡನೆ ದುಡಿದರು. ಸೋಮರ್‌ಫೀಲ್ಡ್ ಮ್ಯುನಿಕಿಗೆ ಅವರನ್ನು ಆಮಂತ್ರಿಸಿದನು. ಪ್ಲಾಂಕ್, ಐನ್‌ಸ್ಟೈನರು ಅವರ ಮಿತ್ರರಾದರು.

ಪ್ರಥಮ ವರ್ಗದ ವೈಜ್ಞಾನಿಕರೆನಿಸಿ ಭಾರತಕ್ಕೆ ಮರಳಿದ ಸಾಹಾರನ್ನು, ಸರಕಾರವು ಒಂದು ವೇಧಶಾಲೆಯಲ್ಲಿ ಕಾರ್ಯ ಮಾಡಲು ಆಮಂತ್ರಿಸಿತು. ಆದರೆ ಸಾಹಾ ಇತರ ವಿಜ್ಞಾನಿಗಳಂತಲ್ಲ. ಅವರ ದೇಶಾಭಿಮಾನ ವಿದೇಶಿ ಸರಕಾರದ ಆಶ್ರಯದಲ್ಲಿ ದುಡಿಯಲು ಒಪ್ಪಲಿಲ್ಲ. ಬದಲಿಗೆ ಅಲಹಾಬಾದ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಪ್ರೊಫೆಸರರಾದರು.

ಅಲ್ಲಿ ಅವರಿಗೆ ವಿಚಿತ್ರ ಅನುಭವಗಳು ಬಂದವು. ಆಧುನಿಕ ವಾತಾವರಣವೇ ಇರಲಿಲ್ಲ. ಪುಸ್ತಕಾಲಯದಲ್ಲಿ ಆಧುನಿಕ ಭೌತಶಾಸ್ತ್ರದ ಬಗ್ಗೆ ಪುಸ್ತಕವೇ ಇರಲಿಲ್ಲ. ತರಿಸಿರಿ ಎಂದು ಸಾಹಾ ಕೇಳಿಕೊಂಡಾಗ ಪುಸ್ತಕಾಲಯದ ಅಧಿಕಾರಿ ಈಗಿದ್ದವುಗಳನ್ನು ಮೊದಲು ಓದಿ ಮುಗಿಸಿರಿ ಎಂದನಂತೆ! ಭಾರತೀಯ ವಿಜ್ಞಾನವನ್ನು ಪ್ರಗತಿಪಥದಲ್ಲಿ ಸಾಗಿಸಬೇಕೆಂಬ ಹುಮ್ಮಸವಿಲ್ಲದಿದ್ದರೆ ಅವರು ಆ ಓಬೀರಾಯನ ಕಾಲದ ವಾತಾವರಣದಲ್ಲಿ ಉಳಿಯುತ್ತಿರಲಿಲ್ಲ. ಆ ವಿಶ್ವವಿದ್ಯಾಲಯದ ಪ್ರಯೋಗ ಶಾಲೆಯನ್ನು ಅವರೇ ಕಟ್ಟಿ ಬೆಳೆಸಿದರು. ೧೧೯ ಡಿಗ್ರಿ ಉಷ್ಣತೆಯ ಬೇಸಗೆಯುಳ್ಳ ಆ ನಗರದಲ್ಲಿ ಅವರು ಪಾಠ ಹೇಳುವ ಭಾರವಾದ ಕಾರ್ಯದೊಡನೆ ನಿರಂತರ ಸಂಶೋಧನೆಗಳಲ್ಲೂ ಮಗ್ನರಾಗಿದ್ದರು. ಅವರ ಖ್ಯಾತಿಯಿಂದ ಆಕರ್ಷಿತರಾಗಿ ದೇಶದ ಮೂಲೆ ಮೂಲೆಯಿಂದ ವಿದ್ಯಾರ್ಥಿಗಳು ಅಲಹಾಬಾದಿಗೆ ಬಂದರು.

ಅಲಹಾಬಾದಿನಲ್ಲಿ ಅವರು ನಡೆಸಿದ ಸಂಶೋಧನೆಗಳಿಂದಾಗಿ ಅವರಿಗೆ ಲಂಡನ್ನಿನ ರಾಯಲ್ ಸೊಸೈಟಿಯ ಸದಸ್ಯತ್ವ ದೊರೆಯಿತು. ಅವರ "ಸಮ್ಮಿಶ್ರ ವರ್ಣಪಂಕ್ತಿಯ ಮೂಲ" ಎಂಬ ವೈಜ್ಞಾನಿಕ ಲೇಖ ಖಭೌತಿಕಶಾಸ್ತ್ರಕ್ಕೆ ಅವರು ಹಾಕಿದ್ದ ತಳಹದಿಯನ್ನು ಪೂರ್ಣಗೊಳಿಸಿತು. ಅವರು ಆಗ ಪ್ರಕಟಿಸಿದ ಊಹೆಗಳು ೧೬ ವರ್ಷಗಳ ನಂತರ ಸೂರ್ಯಗ್ರಹಣಕಾಲದಲ್ಲಿ ಮಾಡಿದ ಅವೇಕ್ಷಣದಲ್ಲಿ ಸತ್ಯವೆಂದು ಸಿದ್ಧವಾದವು. ೧೯೩೧ ರಲ್ಲಿ ರಾಯಲ್ ಸೊಸೈಟಿ ಅವರಿಗೆ ಸಂಶೋಧನ ಕಾರ್ಯಕ್ಕಾಗಿ ೧೫೦೦ ಪೌಂಡು ಬೆಲೆಬಾಳುವ ಉಪಕರಣಗಳನ್ನಿತ್ತಿತು.

ಡಾ. ಸಾಹಾ ವೃದ್ಧಾಪ್ಯದ ವರೆಗೂ ಸಂಶೋಧನೆಗಳನ್ನು ಮಾಡುತ್ತಲೇ ಇದ್ದರು. ಆದರೆ ದೇಶದಲ್ಲಿ ವೈಜ್ಞಾನಿಕ ವಾತಾವರಣ ಹುಟ್ಟಿಸುವ ಹಂಬಲವೂ ಅವರಲ್ಲಿ ಅಷ್ಟೇ ಪ್ರಬಲವಾಗಿತ್ತು. ಅವರು ಉತ್ತರ ಪ್ರದೇಶ ವಿಜ್ಞಾನ ಅಕಾದಮಿಯನ್ನು ಸ್ಥಾಪಿಸಿದರು. ಇನ್ನೂ ನಮ್ಮ ದೇಶ ಹದಿನಾರನೆ ಶತಮಾನದ ಮನೋಭೂಮಿಕೆಯಲ್ಲಿದೆ. ಅದನ್ನು ವಿಜ್ಞಾನ ಪ್ರಸಾರದಿಂದ ಇಪ್ಪತ್ತನೇ ಶತಮಾನಕ್ಕೆ ಎಳೆತರಬೇಕು. ಬಡತನದಲ್ಲಿ ಬವಣೆಪಡುವ ಜನಕ್ಕೆ ವಿಜ್ಞಾನ ಮೂಲಕ ಸುಖಜೀವನವೊದಗಬೇಕು. ವಿಜ್ಞಾನ ಕೇವಲ ಪಂಡಿತರ ಮೋಜಿನ ಪದಾರ್ಥವಾಗಿ ಉಳಿಯದೆ ಅದು ಜನಹಿತಕ್ಕೆ ವಿನಿಯೋಗವಾಗಬೇಕು. ಯೋಜನೆಗಳಾಗಬೇಕು. ವ್ಯವಸ್ಥಿತ ಪ್ರಗತಿಯಾಗಬೇಕು ಮತ್ತು ಅದು ರಭಸದಿಂದಾಗಬೇಕು. ಇದು ಅವರ ಕನಸಾಗಿತ್ತು.

೧೯೩೮ ರಲ್ಲಿ ಪುನಃ ಕಲಕತ್ತಾ ವಿಶ್ವವಿದ್ಯಾಲಯಕ್ಕೆ ಅವರು ಮರಳಿದ ಮೇಲೆ ಪರಮಾಣು ವಿಜ್ಞಾನದಲ್ಲಿ ಅವರ ಆಸಕ್ತಿ ಹೆಚ್ಚಿತು. ೧೯೩೯

ರಲ್ಲಿ ಅಟೋ ಹಾನನು ಪರಮಾಣು ಬೀಜವನ್ನು ವಿಭಜಿಸಿ ಫಿಶನ್ ಪ್ರಕ್ರಿಯೆಯನ್ನು ಸಾಧಿಸಿದಾಗ ಪರಮಾಣು ವಿಭಜನೆಯಿಂದ ವಿದ್ಯುಚ್ಛಕ್ತಿ ತಯಾರಿಸಬಹುದೆಂದು ಮೊಟ್ಟಮೊದಲು ಸಾರಿದವರಲ್ಲಿ ಸಾಹಾ ಒಬ್ಬರು. ಪರಮಾಣು ಸಂಶೋಧನೆಯ ಸಲುವಾಗಿ ಒಂದು ಪ್ರಯೋಗಶಾಲೆಯ ಸ್ಥಾಪನೆಯ ಅವರ ಆತುರ ಕಂಡು ನೆಹರೂ ಅವರ ಸೂಚನೆಯಂತೆ ಟಾಟಾ ನಿಧಿಯವರು ಅವರಿಗೆ ೬೦ ಸಾವಿರದ ಧನ ಸಹಾಯ ನೀಡಿದರು. ಅಷ್ಟರಿಂದಲೇ ಅವರು ಪರಮಾಣು ಶಕ್ತಿಯ ಕನಸನ್ನು ಸಾಕಾರವಾಗಿ ಮಾಡಲು ಹೆಣಗಿದರು. ಇಂದು ಟ್ರಾಂಬೆಯಲ್ಲಿರುವ ಪರಮಾಣು ಸಂಸ್ಥೆ ಅವರ ಕನಸೇ ಅರಳಿದಂತಿದೆ.

ಭಾರತದ ಭೂಗರ್ಭದಲ್ಲಿ ಅಪಾರ ಸಂಪತ್ತಿದೆ ಎಂಬ ಅವರ ಗಾಢ ವಿಶ್ವಾಸ ಇಂದಿನ ಭೂಶೋಧಗಳಿಂದ ಸ್ಥಿರಪಟ್ಟಿದೆ. ಭಾರತದ ನದಿಗಳನ್ನು ನಿಯಂತ್ರಿಸಿದರೆ ನೆರೆಹಾವಳಿ ನಿವಾರಣೆಯೊಡನೆ ಜನರ ಬಡತನ ನಿವಾರಿಸಬಹುದೆಂದು ಅವರು ಸದಾ ವಾದಿಸುತ್ತಿದ್ದರು. ಅವರು ತಮ್ಮ ವಿಜ್ಞಾನಶಾಖೆಯೊಂದರಲ್ಲೇ ಮಗ್ನರಾಗಿರುವವರಲ್ಲ. ಅನೇಕ ಶಾಸ್ತ್ರಗಳ ಅದ್ಯಾವಧಿ ಜ್ಞಾನವನ್ನು ದೊರಕಿಸಿಕೊಂಡು ಎಲ್ಲವನ್ನೂ ಜನಹಿತಕ್ಕೆ ತಿರುಗಿಸಲು ಬಯಸುತ್ತಿದ್ದರು.

ಡಾ. ಸಾಹಾರ ವ್ಯಕ್ತಿತ್ವ ಪ್ರತಾಪಿಯಾಗಿತ್ತು. ವಿಜ್ಞಾನದಲ್ಲಿ ಅವರ ದೃಷ್ಟಿ ಸಂತುಲಿತವಾಗಿದ್ದರೂ ಜೀವನದಲ್ಲಿ ಅವರು ಎಂದೂ ತಂಪು ತಲೆಯವರಾಗಿರಲಿಲ್ಲ. ಅವರ ರಾಗದ್ವೇಷಗಳೆರಡೂ ತೀವ್ರವಾಗಿದ್ದವು. ಅವರಿಗೂ ಡಾ. ಸಿ. ವಿ. ರಾಮನ್ನರಿಗೂ ಇದ್ದ ವೈಯಕ್ತಿಕ ವಿರೋಧದಿಂದ ಭಾರತದ ವಿಜ್ಞಾನಿಗಳಲ್ಲಿ ಎರಡು ಪಂಗಡಗಳೇ ಆಗಿ ಹೋಗಿದ್ದವು. ಸಾಹಾ ತಮ್ಮ ದ್ವೇಷವನ್ನೆಂದೂ ಮುಚ್ಚಿಡುತ್ತಿರಲಿಲ್ಲ. ರಾಮನ್ನರ ಶಿಷ್ಯ–ಅನುಯಾಯಿಗಳ ಸಂಗಡ ಕುಳಿತು ಊಟ ಕೂಡ ಮಾಡೆನೆಂಬ ವರೆಗೂ ಇದು ಹೋಗಿತ್ತು. ಈ ದುರ್ದೈವಿ ಕಲಹ ಸಾಹಾ ಮತ್ತು ರಾಮನ್ನರ ಕಲಕತ್ತಾ ದಿನಗಳಲ್ಲಿ ಹುಟ್ಟಿದ್ದೆಂದೂ ದಕ್ಷಿಣದವರಿಗೂ ಉತ್ತರದವರಿಗೂ ಇರುವ ಈರ್ಷೆಯ ಫಲವಾಗಿತ್ತೆಂದೂ ತೋರುತ್ತದೆ.

ಬಂಡವಳಗಾರರ ಮೇಲಿನ ಸಾಹಾರ ಕೋಪವೂ ಮೇರೆ ಮೀರಿದ್ದೇ. "ಅಪರಿಮಿತ ಲಾಭ"ವನ್ನು ನುಂಗುತ್ತಿರುವ ಬಂಡವಳಗಾರರು ವಿಜ್ಞಾನದ ಪ್ರಗತಿಗಾಗಿ ಏನೂ ಹಣ ವೆಚ್ಚ ಮಾಡದಿರುವುದನ್ನು ಅವರು ತಾವು ಸಂಪಾದಿಸುತ್ತಿದ್ದ "ವಿಜ್ಞಾನ ಮತ್ತು ಸಂಸ್ಕೃತಿ" ಪತ್ರಿಕೆಯಲ್ಲಿ ನಿರ್ದಯವಾಗಿ—ಅತಿರೇಕವಾಗಿಯೇ ಎಂದರೂ ತಪ್ಪಲ್ಲ—ಖಂಡಿಸುತ್ತಿದ್ದರು.

ಭಾರತೀಯ ಬಂಡವಳಗಾರರ ಬಗ್ಗೆ ಅವರ ತಿರಸ್ಕಾರಕ್ಕೆ ಕಾರಣವಿಲ್ಲದಿರಲಿಲ್ಲ. ಭಾರತ ಇನ್ನೂ ಪರತಂತ್ರವಾಗಿದ್ದಾಗ, ವಿದೇಶಿ ಸರಕಾರ ಇಲ್ಲಿನ ವಿಜ್ಞಾನದ ಪ್ರಗತಿಯಲ್ಲಿ ಅನಾಸ್ಥೆ ತಳೆದಿದ್ದಾಗ, ಪರಮಾಣು ವಿಜ್ಞಾನದಲ್ಲಿ ಭಾರತವನ್ನು ಮುನ್ನಡೆಸುವ ಸಲುವಾಗಿ ಅತ್ಯವಶ್ಯವಾದ ಸೈಕ್ಲೊಟ್ರಾನ್ ಯಂತ್ರವನ್ನು ಸಂಪಾದಿಸಲು ಸಾಹಾ ಅಮೇರಿಕಕ್ಕೆ (ಅವರು ಮೂರು ಬಾರಿ ಅಮೇರಿಕ ಯಾತ್ರೆ ಮಾಡಿದ್ದರು) ಹೋಗಿದ್ದರು. ಯಂತ್ರಕ್ಕಾಗಿ ಬರಿ ೫,೦೦೦ ರೂಪಾಯಿ ಕೊರತೆಯಾಗಿತ್ತು. ಭಾರಿ ಧರ್ಮಿಷ್ಠರೆಂದು ಹೆಸರಾದ ಮುಂಬಯಿ ಬಂಡವಳಗಾರರೊಬ್ಬರು ಆಗ ಅಮೇರಿಕಕ್ಕೆ ಬಂದಿದ್ದರು. ಸೈಕ್ಲೊಟ್ರಾನ್ ಯಂತ್ರಕ್ಕಾಗಿ ಈ ೫,೦೦೦ ರೂಪಾಯಿಗಾಗಿ ಅವರನ್ನು ಯಾಚಿಸಿದಾಗ ಆತ, "ಛೆ ಛೆ! ನಾನು ಗೋಶಾಲೆಗಳಿಗೆ ಮಾತ್ರ ದಾನ ಕೊಡುವ ಪರಿಪಾಠವಿಟ್ಟುಕೊಂಡಿದ್ದೇನೆ!" ಎಂದುಬಿಟ್ಟದ್ದನ್ನು ಅಮೇರಿಕದಲ್ಲಿರುವ ವಿಜ್ಞಾನ ಲೇಖಕ ಗೋವಿಂದ ಬಿಹಾರಿಲಾಲರು ಉಲ್ಲೇಖಿಸಿದ್ದಾರೆ.

ಭಾರತ ಸ್ವತಂತ್ರವಾದ ಮೇಲೆ ವಿಜ್ಞಾನ ಪ್ರಗತಿ, ಜನಹಿತ ಕಾರ್ಯ ಭರದಿಂದಾಗಬಹುದೆಂದು ನಂಬಿದ್ದ ಸಾಹಾ ಪ್ರಜಾಸತ್ತಾತ್ಮಕ ನಡೆವಳಿಗಳ ಜಾಲದಲ್ಲಿ ಅದು ಮಂದವಾಗುತ್ತಿರುವುದನ್ನು ನೋಡಿ ರೊಚ್ಚಿಗೆದ್ದರು. ಶೀಘ್ರಪ್ರಗತಿ

ಯಿಂದ ಪ್ರಗತಿ ಸಾಧಿಸಿದ ರಶಿಯದ ಕಡೆ ಅವರು ಪ್ರಶಂಸಾದೃಷ್ಟಿಯಿಂದ ನೋಡಿ ಶ್ರೀಮಂತರ ಸಂಪತ್ತು, ರಾಜ ಮಹಾರಾಜರ ಬಂಗಾರ ಬೆಳ್ಳಿ ರತ್ನಾಭರಣಗಳನ್ನು ಕಸಿದುಕೊಂಡು ಲೋಕ ಹಿತಕ್ಕೆ ವಿನಿಯೋಗಿಸಲಾರದ ನಮ್ಮ ಸರಕಾರದ "ಹೇಡಿತನ"ವನ್ನು ತೀಕ್ಷ್ಣವಾಗಿ ಟೀಕಿಸತೊಡಗಿದರು. ಇದರಿಂದ ಅವರಿಗೆ ಪ್ರಚ್ಛನ್ನ ಕಮ್ಯುನಿಸ್ಟ್ ಎಂಬ ಅಪಕೀರ್ತಿ ಬಂತು.

ಆದರೆ ಸಾಹಾ ಎಂದೂ ಕಮ್ಯುನಿಸ್ಟರಾಗುವುದು ಸಾಧ್ಯವಿದ್ದಿಲ್ಲ. ದೇಶವನ್ನು ಭರದಿಂದ ಮುಂದೆ ತರುವ, ಬಡವರ ಹಿತ ಸಾಧಿಸುವ ಅವಸರದಲ್ಲಿ ಅವರು ರಶಿಯದ ಆಳರಸರ ಕುಕರ್ಮವನ್ನು ಗಮನಿಸಿರಲಿಲ್ಲ. ಕಮ್ಯುನಿಸ್ಟ್ ರಾಜ್ಯದಲ್ಲಿ ಆಗುವ ವೈಯಕ್ತಿಕ ಸ್ವಾತಂತ್ರ್ಯಹರಣವನ್ನು ಅವರು ಸಹಿಸುವುದು ಶಕ್ಯವೇ ಇರಲಿಲ್ಲ. ದಬ್ಬಾಳಿಕೆಯನ್ನು ಖಂಡಿಸಲು ಅವರು ಎಂದೂ ಹಿಂದೆ ಮುಂದೆ ನೋಡಿದವರಲ್ಲ. ಹಿಟ್ಲರನ ಆಳಿಕೆಗೆ ತಲೆಬಾಗಿಸಿದ ಜರ್ಮನ್ ವಿಜ್ಞಾನಿಗಳನ್ನು ಸಾಹಾರಷ್ಟು ಕಠೋರವಾಗಿ ಟೀಕಿಸಿದ ವಿಜ್ಞಾನಿಗಳು ಕಡಿಮೆ.

ನಿಜವೆಂದರೆ ಸಾಹಾ ಬಲು ಸರಳ ಸ್ವಭಾವದವರು. ಅದು ಕೆಲವೊಮ್ಮೆ ಬಾಲಸದೃಶವಾಗಿರುತ್ತಿತ್ತು. ರಾಮನ್ನರಿಗೂ ಅವರಿಗೂ ಇದ್ದ ವೈಮನಸ್ಯವನ್ನು ವಿದೇಶಗಳಲ್ಲಿ ಪ್ರಕಟಿಸುವುದು ಭಾರತದ ಗೌರವಕ್ಕೆ ಕುಂದೆಂದು ಗೋವಿಂದ ಬಿಹಾರಿ ಲಾಲರು ಹೇಳಿದೊಡನೆ ಅಮೇರಿಕದಲ್ಲಿ ಹೋದಲ್ಲೆಲ್ಲ ಸಾಹಾ ರಾಮನ್ ಮತ್ತು ಅವರ ಶಿಷ್ಯರನ್ನು ಬಾಯ್ತುಂಬ ಪ್ರಶಂಸಿಸಿದರಂತೆ ! ಅವರ ದೇಶಪ್ರೇಮ ಅಂಥದು. ಈ ದೇಶಪ್ರೇಮ ಮತ್ತು ಜನಹಿತಾಕಾಂಕ್ಷೆ ಸಾಹಾರನ್ನು ಅತ್ಯಂತ ಜನಪ್ರಿಯ ವಿಜ್ಞಾನಿಯಾಗಿ ಮಾಡಿತ್ತು. ೧೯೫೧ ರಲ್ಲಿ ಕಲಕತ್ತೆಯಿಂದ ಲೋಕಸಭೆಗೆ ಸ್ವತಂತ್ರವಾಗಿ ಸ್ಪರ್ಧಿಸಿ ಪ್ರಚಂಡ ಬಹುಮತದಿಂದ ಆರಿಸಿ ಬಂದದ್ದು, ಜನಸಾಮಾನ್ಯರಲ್ಲಿ ಅವರ ಬಗೆಗಿದ್ದ ಅಭಿಮಾನದ ದ್ಯೋತಕವಾಗಿತ್ತು. ಸಂಸತ್ತಿನಲ್ಲಿ ಅವರು ತಮ್ಮ ಪ್ರಿಯ ಧ್ಯೇಯಗಳಿಗಾಗಿ— ವಿಜ್ಞಾನ ಪ್ರಗತಿ ಮತ್ತು ಭಾರಿ ಉದ್ದಿಮೆಗಳ ಸ್ಥಾಪನೆಗೆ— ನಿರಂತರವಾಗಿ ಹೋರಾಡಿದರು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅವರ ಈ ಹಂಬಲ ಪೂರ್ತಿಯಾಗುವುದನ್ನು ಕಾಣುವ ಮೊದಲೇ ೧೯೫೬ ರಲ್ಲಿ ಅವರು ಕಾಲಾಧೀನರಾದುದು ದೇಶದ ದುರ್ದೈವ. *

ಸೆರೆಕುಡುಕನಿಗೆ ಮಹನೀಯರೊಬ್ಬರು "ಯೋಗಾಸನಗಳನ್ನು ಮಾಡು, ನಿನ್ನ ಕುಡಿಯುವ ಅಭ್ಯಾಸ ಬಿಟ್ಟುಹೋಗುತ್ತದೆ" ಎಂದು ಉಪದೇಶಿಸಿದರು. ಅವರ ಮಾತಿನಂತೆ ಆ ಕುಡುಕ ಎಂಟು ಹತ್ತು ತಿಂಗಳ ತನಕ ಯೋಗಾಭ್ಯಾಸ ಮಾಡಿ ಅದರಲ್ಲಿ ಪ್ರವೀಣನೆನಿಸಿದ. ಒಂದು ದಿನ ಅವನಿಗೆ ಬೋಧಿಸಿದ ಮಹನೀಯರು ಅವನ ಪತ್ನಿಯನ್ನು "ನಿಮ್ಮ ಪತಿ ಯೋಗಾಸನಗಳನ್ನು ಕಲಿತುದರಿಂದ ಏನಾದರೂ ಪ್ರಯೋಜನವಾಯಿತೆ?" ಎಂದು ಕೇಳಿದರು.

ಆಕೆ ಹೇಳಿದಳು: "ಒಂದು ರೀತಿಯಲ್ಲಿ ಅವರಿಗೆ ಪ್ರಯೋಜನವಾಗಿದೆ. ಮೊದಲು ಅವರು ನೆಟ್ಟಗೆ ನಿಂತು ಮಾತ್ರ ಕುಡಿಯುತ್ತಿದ್ದರೆ ಈಗ ತಲೆ ಕೆಳಗೆ ಮಾಡಿ ನಿಂತುಕೊಂಡು ಕೂಡಾ ಕುಡಿಯಬಲ್ಲರು!"

* * *

ರಟ್ಟೆ ಮುರಿದು ಸಂಪಾದಿಸಿದ ರೊಟ್ಟಿಯ ರುಚಿ ದೇವಲೋಕದ ಅಮೃತಕ್ಕೂ ಇಲ್ಲ.

—ಟಿ. ಪಿ. ಕೈಲಾಸಂ

ಕೆಳಗಿನ ವಿಷಯಗಳನ್ನರಿತರೆ ದಣಿವಿಲ್ಲದ ಜೀವನ ನಿಮಗೆ ಸಾಧ್ಯವಾದೀತು.

ದಣಿವು ಅನಿವಾರ್ಯವೆ?

ಸಂಗ್ರಾಹಕ: ಬಳ್ಕೂರು ಸುಬ್ರಾಯ ಅಡಿಗ

ಹಗಲಿನ ಅರ್ಧ ಗಂಟೆ ನಿದ್ರೆಯು ರಾತ್ರಿಯ ಮೂರು ಗಂಟೆ ನಿದ್ರೆಗೆ ಸರಿಸಾಟಿಯಾಗಿದೆ.

ಹೌದು; ಮಧ್ಯಾಹ್ನದ ಊಟದ ಬಳಿಕ ಅಥವಾ ರಾತ್ರಿಯೂಟಕ್ಕಿಂತ ಮೊದಲು ಅರ್ಧ ಗಂಟೆ ಆರಾಮವಾಗಿ ನಿದ್ದೆಹೋಗಿ, ರಾತ್ರಿ ಕಡಿಮೆ ನಿದ್ದೆಯಾದರೂ ಪೂರೈಸಬಹುದು. ಅರ್ಧ ಗಂಟೆಯ ಈ ನಿದ್ರೆ ರಾತ್ರಿಯ ಮೂರು ಗಂಟೆಗಳ ಗಾಢ ನಿದ್ರೆಗೆ ಸಮಾನವಾದುದೆಂದು ಕೆಲ ವಿಶೇಷಜ್ಞರ ಅಭಿಪ್ರಾಯ; ಬಹು ಕಡಿಮೆ ನಿದ್ರೆಯಿಂದಲೇ ತಾವು ಆರೋಗ್ಯವಂತರಾಗಿದ್ದೇವೆಂದು ಬಡಾಯಿ ಕೊಚ್ಚಿಕೊಳ್ಳುವ ಜನ ಈ ರೀತಿ ಹಗಲು ನಿದ್ದೆಹೋಗಿ ತಮ್ಮ ನಿದ್ರೆಯನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ನೀವು ಎಷ್ಟು ಸಮಯ ಮಲಗುತ್ತೀರೆಂಬುದಕ್ಕಿಂತಲೂ ನಿಮಗೆ ಎಂತಹ ನಿದ್ರೆ ಬರುತ್ತಿದೆಯೆಂಬುದೇ ಮಹತ್ವಪೂರ್ಣ ವಿಚಾರ.

ಹೌದು; ಪೂರ್ಣ ಶಿಥಿಲೀಕರಣದಿಂದ ದೇಹಕ್ಕೆ ದೊರೆಯುವ ವಿಶ್ರಾಂತಿಯು ದೇಹವು ಕಳೆದುಕೊಂಡ ಶಕ್ತಿಯನ್ನು ಪುನಃ ಪಡೆಯಲು ಅಗತ್ಯವುಳ್ಳ ಪೂರ್ಣ ನಿದ್ರೆಯ ೬೦% ರಷ್ಟು ಭಾಗವನ್ನು ಪೂರೈಸುತ್ತದೆ. ಅನಿದ್ರಾ ರೋಗಿಗಳು ರಾತ್ರಿಯಲ್ಲಿ ಬಹು ಕಡಿಮೆ ನಿದ್ರೆ ಮಾಡಿದರೂ ದೇಹದ ಶಿಥಿಲೀಕರಣ ಮಾಡಿಕೊಳ್ಳಲು ಸಮರ್ಥರಾಗಿದ್ದರೆ ಈ ಕೊರತೆಯನ್ನು ಸುಲಭವಾಗಿ ತುಂಬಿಕೊಳ್ಳಬಲ್ಲರು. ಆದರೆ ಅನಿದ್ರಾ ರೋಗಿಗಳೆದುರು 'ನಿದ್ರೆಯೇ ಬರುವುದಿಲ್ಲವಲ್ಲಾ!' ಎಂಬೊಂದು ಮಹಾಸಮಸ್ಯೆ ಬಂದು ನಿಲ್ಲುವುದು. ಆ ಯೋಚನೆಯಲ್ಲೇ ಅವರ ನಿದ್ರೆ ಹಾರಿ ಹೋಗುವುದಲ್ಲದೇ ಶಿಥಿಲೀಕರಣಕ್ಕೂ ಸಂದರ್ಭ ಸಿಗುವುದಿಲ್ಲ.

ಸಣ್ಣ ಸಣ್ಣ ಕಳವಳಗಳೇ ಮಹಾ ಮಹಾ ಸಮಸ್ಯೆಗಳಿಂತಲೂ ಹೆಚ್ಚಾಗಿ ನಮ್ಮ ಶಕ್ತಿಯನ್ನು ಕ್ಷೀಣಿಸುತ್ತವೆ.

ಹೌದು, ಏಕೆಂದರೆ ಈ ಸಣ್ಣ ಸಣ್ಣ ಕಳವಳಗಳು ನಮ್ಮ ಕಣ್ಣಿಗೆ ಬೀಳುವುದಿಲ್ಲ. ಹೀಗಾಗಿ ಅವುಗಳನ್ನು ನಾವು ಗುರುತಿಸಲಾರೆವು, ಅವನ್ನು ಪರಿಹರಿಸುವುದೂ ಕಷ್ಟವಾಗುವುದು. ನಿರಂತರ ಸಿಡುಕು, ಪ್ರತಿಯೊಂದು ವಸ್ತುವಿನ ಬಗೆಗೂ ತಿರಸ್ಕಾರ, ಎಲ್ಲವನ್ನೂ ದೂರುತ್ತಿರುವುದು ಇವೆಲ್ಲ ಅತಿ ಹೆಚ್ಚು ಶಕ್ತಿಯನ್ನು ಕ್ಷೀಣಿಸುತ್ತವೆ. ಇವುಗಳ ಬದಲು ದೊಡ್ಡ ದೊಡ್ಡ ತೊಂದರೆಗಳನ್ನೆದುರಿಸುವುದು ಸುಲಭ. ಏಕೆಂದರೆ ಅವುಗಳನ್ನು ನಾವು ಬಹು ಬೇಗನೆ ಗುರುತಿಸಬಲ್ಲೆವು, ತಕ್ಷಣ ಪರಿಹಾರ ಕ್ರಮಗಳನ್ನೂ ಕೈಗೊಳ್ಳಬಲ್ಲೆವು.

ತ್ವರಿತವಾಗಿ ಕಾರ್ಯ ನಡೆಸುವವರು ಹೆಚ್ಚು ಸಮರ್ಥರು.

"ಯುಗ ಪುರುಷ" ದಿಂದ

ಅಲ್ಲ, ತಮ್ಮ ಕೆಲಸವನ್ನು ಮೆಲ್ಲಮೆಲ್ಲನೆ ಮಾಡುವವರೇ ಹೆಚ್ಚು ಕಾರ್ಯಸಮರ್ಥರೆಂಬುದು ಅಧ್ಯಯನದ ಆಧಾರದಿಂದ ತಿಳಿದು ಬಂದಿದೆ. ಗಡಿಬಿಡಿ ಅಥವಾ ಶೀಘ್ರತೆಯಿಂದಾಗಿ ಅನಾವಶ್ಯಕ ಉತ್ತೇಜನೆಯುಂಟಾಗುತ್ತದೆ ಮತ್ತು ಶಕ್ತಿಯ ಅಪವ್ಯಯದಿಂದಾಗಿ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ಮೆಲ್ಲಮೆಲ್ಲನೆ ಕೆಲಸ ಮಾಡುವುದರಿಂದ ಶಕ್ತಿ ಕಡಿಮೆ ಖರ್ಚಾಗುವುದು, ಕೆಲಸವೂ ವ್ಯವಸ್ಥಿತ ರೀತಿಯಿಂದ ತೃಪ್ತಿಕರವಾಗಿ ಸಾಗುವುದು.

ದಣಿವು ನಿವಾರಿಸಲು ಶಾಂತ ಹಾಗೂ ನಿಷ್ಕ್ರಿಯ ಮನೋರಂಜನೆಯು ಹೆಚ್ಚು ಸಮರ್ಥವಾಗಿದೆ.

ನಿರ್ಧಾರವಾಗಿ ಹೇಳಬರುವಂತಿಲ್ಲ. ತನುಮನಗಳ ದಣಿವನ್ನು ನಿವಾರಿಸಲು ಅನೇಕರು ರೇಡಿಯೋ ಶ್ರವಣ ಹಾಗೂ ಕಾದಂಬರಿ ಪಠನದಂತಹ ಶಾಂತ, ನಿಷ್ಕ್ರಿಯ ಮನೋರಂಜನೆಗಿಂತ ಸಕ್ರಿಯ ಆಟ ವ್ಯಾಯಾಮಗಳಿಗೆ ಹೆಚ್ಚು ಪ್ರಾಧಾನ್ಯ ನೀಡುತ್ತಾರೆ. ಹಾಗೆಂದು ಇದು ಯಾವಾಗಲೂ ನಿಜವೆಂದು ಹೇಳಲಾಗದು. ದಣಿವು ಅಳಿಸಿ ಮನೋರಂಜನೆಯನ್ನುಂಟು ಮಾಡಲು ಕೆಲವು ವೇಳೆ ತೋಟಗಾರಿಕೆ, ಮನೆಯ ಅಲಂಕಾರ, ಚಿತ್ರಗಾರಿಕೆ ಹಾಗು ಚದುರಂಗದಾಟಗಳು ಇತರ ಆಟಗಳಷ್ಟೇ ಮಹತ್ವದಾಯಕವೂ ಉಪಯೋಗಿಯೂ ಆಗಿವೆ.

ದುಂದುಗಾರಿಕೆಯಿಂದ ದಣಿವು ಹೆಚ್ಚುತ್ತದೆ.

ಹೌದು, ನಿಮ್ಮ 'ಬಜಟ'ನಿಂದ ಹೊರಗಾದ ಯಾವುದಾದರೂ ವಸ್ತುವನ್ನು ಕೊಂಡಾಗ ಸಾಧಾರಣವಾಗಿ ದಣಿವು ಉಂಟಾಗುವುದು. ನಮ್ಮ ಸಾಮರ್ಥ್ಯಕ್ಕೆ ಮೀರಿದ ವಸ್ತುವನ್ನು ಕೊಂಡಾಗ ಯಾವುದಾದರೂ ಕಠಿನ ಶಾರೀರಿಕ ಶ್ರಮ ಮಾಡಿದಷ್ಟೇ ಹೆಚ್ಚು ಶಕ್ತಿ ಕ್ಷೀಣ ಹೊಂದುತ್ತದೆ.

ಸಾಯಂಕಾಲದ ನಿರ್ಣಯಗಳಲ್ಲಿ ನಂಬುಗೆಯಿಡಬೇಡಿ.

ಹೌದು, ನಿರ್ಣಯವನ್ನು ಬೆಳಗಿನವರೆಗೆ ಮುಂದೆ ಹಾಕಿರಿ. ಏಕೆಂದರೆ ಬೆಳಗಿನ ನಿರ್ಣಯ ಸಂಜೆಯ ನಿರ್ಣಯಕ್ಕಿಂತ ಸಂಪೂರ್ಣ ಭಿನ್ನವಾಗಬಹುದು. ದಣಿವಿನ ಪ್ರಭಾವಕ್ಕೊಳಗಾದುದರಿಂದ ಸಂಜೆಯ ನಿರ್ಣಯಗಳು ಸಾಧಾರಣವಾಗಿ ನಿಷ್ಪಕ್ಷವೆನಿಸಲಾರವು.

ಬೇಗ ನಿದ್ರಿಸುವುದು... ಬೇಗ ಏಳುವುದು...

ಅನಿವಾರ್ಯವಾದುದೇನೂ ಅಲ್ಲ. ಮನುಷ್ಯರು ಎರಡು ವಿಧ; ಒಂದು ವಿಧದ ಮನುಷ್ಯರ ಕಾರ್ಯಕ್ಷಮತೆಯು ಪೂರ್ವಾಹ್ನದಲ್ಲಿ ಚರಮಸೀಮೆಗೆ ತಲುಪುತ್ತದೆ. ಅಂತಹರಿಗೆ ರಾತ್ರಿಯ ಆರಂಭದ ಜಾವಗಳಲ್ಲಿ ಅತಿ ಚೆನ್ನಾಗಿ ನಿದ್ದೆ ಬರುತ್ತದೆ. ಇನ್ನೊಂದು ವರ್ಗಕ್ಕೆ ಸೇರಿದ ಮನುಷ್ಯರ ಕಾರ್ಯಕ್ಷಮತೆ ಅಪರಾಹ್ನದಲ್ಲಿ ತನ್ನ ಚರಮಸೀಮೆಗೆ ಮುಟ್ಟುತ್ತದೆ. ಅಂತಹರಿಗೆ ರಾತ್ರಿಯ ಕೊನೆಯ ಜಾವಗಳಲ್ಲಿ ಒಳ್ಳೇ ನಿದ್ದೆ ಹೋಗಿ ತಡವಾಗಿ ಏಳುವುದೇ ಲೇಸು.

ನಿಂತುಕೊಂಡಿರುವುದು ನಡೆಯುತ್ತಾ ಇರುವುದಕ್ಕಿಂತ ಹೆಚ್ಚು ದಣಿವನ್ನುಂಟು ಮಾಡುತ್ತದೆ.

ಹೌದು; ನಡೆಯುತ್ತಾ ಇರುವಾಗ ನಮ್ಮ ಪ್ರತಿಯೊಂದು ಕಾಲಿಗೂ ಅರ್ಧ ಹೊತ್ತು ವಿಶ್ರಾಂತಿ ದೊರೆಯುತ್ತದೆ. ನಿಂತೇ ಇದ್ದರೆ ನಮ್ಮ ಯಾವ ಕಾಲಿಗೂ ವಿಶ್ರಾಂತಿ ಸಿಗುವುದಿಲ್ಲ; ಯಾವುದನ್ನಾದರೂ ಕಾಯುತ್ತಾ 'ಕ್ಯೂ'ದಲ್ಲಿ ನಿಲ್ಲುವುದಂತೂ. ಸಾಮಾನ್ಯವಾಗಿ ನಿಂತುಕೊಳ್ಳುವುದಕ್ಕಿಂತ ಹೆಚ್ಚು ಆಯಾಸವನ್ನುಂಟುಮಾಡುತ್ತದೆ. *

ಅರಣ್ಯದ ಈ ಪ್ರಚಂಡರಲ್ಲಿದ್ದ
ಭೀಕರ ವೈರ ಕೊನೆಗೆ
ಅರಣ್ಯದ ನಿಯಮದಂತೆಯೆ
ನಿಷ್ಕರ್ಷೆಯಾಯಿತು

ಕಾಡಿನಲ್ಲಿ ಕದನ

ಪಾಲ್ ಅನಿಕ್‌ಸ್ಟರ್

ಮಟಮಟ ಮಧ್ಯಾಹ್ನ. ಮಧ್ಯರಾತ್ರಿಗಿಂತ ಭೀಕರ ಶಾಂತತೆ. ಉಷ್ಣವಲಯದ ಪ್ರದೇಶ. ಕಾಡನ್ನು ಹೊಕ್ಕು ನಿಂತ ಬಿಸಿಲಿನ ಕಾವು ನೆರಳಲ್ಲೂ ೧೩೨ ಡಿಗ್ರಿಯಷ್ಟಿತ್ತು.

ಇಂಥ ಹೊತ್ತಿನಲ್ಲಿ ಆಚ್ಛಾದನದಲ್ಲಿ ಸುರಕ್ಷಿತವಾಗಿರಲು ಮರೆಯರು ಬಿಳಿಯರು. ಕಾಡು ಪ್ರಾಣಿಗಳೂ ವಿರಳವಾಗಿಯೆ ಹೊರಬೀಳುತ್ತಿದ್ದುವಷ್ಟೇ. ಚಿನಾರ್ ಪೊದೆಯ ಮರೆಯಲ್ಲಿ ತೂಕಡಿಸುತ್ತಿದ್ದ ದೊಡ್ಡ ಬಂಗಾಲೀ ಹುಲಿಯೊಂದು ಕಣ್ದೆರೆಯಿತು. ಹೊಳೆವ ಕಂಗಳು, ಸಶಕ್ತ ಜೀವ; ತಾರುಣ್ಯದ ಭೀಮ ಕಾಯ. ಆದರೆ ಕೋವಿಯ ಗಾಯ ಅದರ ಓಟವನ್ನು ಕುಗ್ಗಿಸಿದೆ. ಕಾಲು ಕುಂಟಾಗಿದೆ. ಆದರೂ ಹರಿ ಭಯಾನಕ ಪ್ರಾಣಿ.

ಹರಿಯ ವಾಸನೆ ಬಂದು ಮುದಿ ಗಂಡಾನೆಯನ್ನು ಎಚ್ಚರಿಸಿತು. ಭೀಮಕಾಯ ಆನೆಯು ಮಧ್ಯಾಹ್ನ ನಿದ್ದೆ ಮಾಡುತ್ತಿತ್ತು. ನಿದ್ರಾಭಂಗವಾದದ್ದರಿಂದ ಅದು ಕೋಪಗೊಂಡಿತು. ಹುಲಿಗಳನ್ನು ಕಂಡರೆ ಅದಕ್ಕಾಗುತ್ತಿದ್ದಿಲ್ಲ. ಅದರಲ್ಲೂ ಹರಿ ಎಂದರೆ ಬದ್ಧದ್ವೇಷ. ಆನೆ ಎದ್ದು ಸದ್ದಾದ ಪೊದೆಯತ್ತ ರಭಸದಿಂದ ಹೊರಟಿತು.

*

ಹುಲಿ ಕಾಡಿನಲ್ಲಿ ನೆಗೆದು ಮರೆಯಾಯಿತು. ಸೊಂಡಿಲವೆತ್ತಿದ, ಕೆಂಗಣ್ಣಿನ, ಗೂನು ಬೆನ್ನಿನ ಆನೆ ದಟ್ಟ ಕಾಡನ್ನು ಸೀಳತೊಡಗಿತು. ಅದರ ದೃಷ್ಟಿ ಮಂದವಾಗಿದ್ದುದರಿಂದ ಮರೆಯಾಗುತ್ತಿದ್ದ ಹುಲಿಯ ವಾಸನೆಯನ್ನು ಅದು ತನ್ನ ಸೊಂಡಿಲ ಮೂಲಕ ಹಿಡಿದು ನಡೆದಿತ್ತು.

ಪೊದೆಗಳನ್ನು ತುಳಿಯುತ್ತ ಗಿಡಗಳನ್ನು ಮುರಿಯುತ್ತ ಆನೆ ಕಾಡಿನಲ್ಲಿ ಹುಲಿಯ ನೆರಳನ್ನು ಹುಡುಕುತ್ತ ಹೊರಳಿ ಮುಂದುವರಿದು ದಾರಿ ಮಾಡಿಕೊಳ್ಳುತ್ತ ಸಾಗಿತ್ತು. ಆದರೆ ಹರಿ ತನ್ನ ವಾಸನೆಯೂ ಹಿಂದಿನ ಆನೆಗೆ ಹತ್ತದಂತೆ ಆಗಲೇ ದೂರ ಹೋಗಿಬಿಟ್ಟಿತ್ತು.

ಚುಂದರ ಲೋಯಿ ಅಥವಾ ರಾಜಪರ್ವತ ಎಂದು ಆ ಪ್ರದೇಶದ ಜನರು ಈ ಆನೆಯನ್ನು ಕರೆಯುತ್ತಿದ್ದರು. ಆನೆಯ ಸಿಟ್ಟು ನೆತ್ತಿಗೇರಿತ್ತು. ಅದು ಅದರ ಸ್ವಭಾವ. ಎಲ್ಲ ಆನೆಗಳಿಗಿಂತ ಇದು ಬೇರೆಯೇ ಇತ್ತು. ಮೇಲಾಗಿ ಹಿಂದೊಮ್ಮೆ ಕಾದುವಾಗ ದಾಡೆ ಒಳಗೇ ಮುರಿದು ಗಾಯವಾಗಿ ನೋವು ದಿನದಿನಕ್ಕೆ ಹೆಚ್ಚುತ್ತಾ ಹೋಗಿ ಈಗ ಆನೆಯಷ್ಟೇ ದೊಡ್ಡದಾಗಿತ್ತು. ಆನೆಗೆ ತನ್ನ ಕೋರೆಯ ಅಸಹ್ಯ ವೇದನೆಯಿಂದ ನಿಮಿಷ ನಿಮಿಷಕ್ಕೂ ಬಾಧೆಯಾಗುತ್ತಿತ್ತು.

ಇಂದು ಅದು ಬಹಳ ರೊಚ್ಚಿಗೆದ್ದಿತ್ತು. ಇಂದು ಕಾಡಿನಲ್ಲೇ ಏನೋ ಕೆಟ್ಟಿದೆ ಎಂದು ಅದಕ್ಕೆ ಅನಿಸಿತ್ತು. ಅದರ ಹುಲ್ಲಿನ ಬಯಲಿನಲ್ಲಿ ಎರಡು ಸಲ ಅದು ಮನುಷ್ಯ ಪ್ರಾಣಿಯನ್ನು ನೋಡಿತ್ತು. ಅದರಿಂದ ಅದರ ಚಿತ್ತ ಅಸ್ಥಿರವಾ

"ಸಂಡೇ ಸ್ಟ್ಯಾಂಡರ್ಡ್" ನಿಂದ

ಗಿತ್ತು. ಕೆಲ ವಾರಗಳ ಹಿಂದೆ ತಾನೇ ರಾಜನಾಗಿದ್ದ ಈ ಸೀಮೆಗೆ ಈಗ ಹುಲಿ ಬಂದದ್ದು ಅದೂ ತನ್ನ ಬದ್ಧವೈರಿ ಹರಿ ಬಂದದ್ದು ಅದನ್ನು ಬಹಳೇ ಕೆರಳಿಸಿತ್ತು.

*

ಎಷ್ಟೋ ವರ್ಷಗಳ ಹಿಂದೆ ಅದು ತನ್ನ ಹಿಂಡನ್ನು ಬಿಟ್ಟುಕೊಟ್ಟಿತ್ತು. ಸ್ವಚ್ಛಂದವಾಗಿ ಅಲೆದಾಡುತ್ತ ಒಂಟಿಯಾಗಿರುತ್ತಿತ್ತು. ದಿನದಿನಕ್ಕೆ ಹರಿಯ ಧೈರ್ಯ ಹೆಚ್ಚುತ್ತಿರುವುದನ್ನು ಕಂಡು ಚುಂಡರ ಲೋಯಿಯ ವ್ಯಗ್ರತೆ ಮಿತಿ ಮೀರಿತ್ತು. ಇಂದು ಸಿಟ್ಟು ತೀರಿಸಿಕೊಳ್ಳಲು ಅವಕಾಶ ಹುಡುಕುತ್ತಿತ್ತು. ಆದರೆ ಎಂದಿನಂತೆ ಇಂದೂ ಆನೆಗೆ ಹುಲಿಯಾಗಲಿ ಬೇರೇನಾಗಲೀ ಕಾವಾಡಲು ಎದುರು ಬರಲೇ ಇಲ್ಲ.

ಬೇಸತ್ತು ಆನೆ ನೆರಳಲ್ಲಿ ಉರುಳಿ ಮಲಗಿಬಿಟ್ಟಿತು. ಪೊದೆಯು ಶಾಂತವಾದ ಮೇಲೆ ಕಾಡಿನಲ್ಲಿ ಸುಳಿದಾಟ ಪ್ರಾರಂಭವಾಯಿತು. ಆನೆಯಿಂದ ೨೦ ಗಜ ದೂರದಲ್ಲಿ ಗೋದೀ ಬಣ್ಣದ ಮನುಷ್ಯನೊಬ್ಬ ಹೊರಗೆ ಇಣಿಕಿದ. ಕಾಡು ಜನಾಂಗದ ಒಬ್ಬ ಬರ್ಮಿ ಆತ. ಕೋತಿಯಂತೆ ಸೀರಾದ ಕೈಕಾಲುಗಳು. ತಲೆಗೆ ಸುತ್ತಿದ ಪಟ್ಟಿಕಾ. ನಡುವಿಗೆ ಕಟ್ಟಿದ ಲಂಗೋಟಿ.



ಮುಂಬಂದಂತೆ ಅವನ ಎಲುಬೆದ್ದ ಮುಖದಲ್ಲಿ ಆನಂದಾಶ್ಚರ್ಯದ ಛಾಯೆ ತೋರುತ್ತಿತ್ತು. ಇಷ್ಟು ದೊಡ್ಡ ಆನೆ ಸಿಗುವುದು ಹತ್ತು ಹತ್ತು ವರ್ಷಗಳಲ್ಲೂ ಒದಗದ ಮಾತಾಗಿತ್ತು.

ಇಲ್ಲಿಂದ ಒಂದು ಮೈಲು ದೂರದಲ್ಲಿ ಗುಡ್ಡದ ಕೆಳಗೆ ಹಳ್ಳದ ಹತ್ತಿರ ಅಮೇರಿಕನ್ ಪ್ರಾಣಿಸಂಗ್ರಾಹಕ ಮೇಥಿಲ್ಡ್ ಕ್ಯಾಂಪ್ ಹಾಕಿದ್ದ. ಅವನಿಗಾಗಿಯೆ ಈತ ಈಗ ಪ್ರಾಣಿಗಳ ಶೋಧದಲ್ಲಿದ್ದದ್ದು. ಇಂಥ ಬೃಹದಾಕಾರದ ಪ್ರಾಣಿಯನ್ನು ಹಿಡಿದು ಕೊಟ್ಟರೆ ಸಂತುಷ್ಟನಾದ ಬಿಳಿಯ ಸಾಹೇಬ ತನಗೆ ತುಂಬ ದುಡ್ಡು ಕೊಡಬಹುದೆಂದು ಆತ ಕಲ್ಪಿಸಿದ.

ಆನೆಗೆ ವಯಸ್ಸಾಗಿದೆ. ಆದರೆ ಸಾಹೇಬನಿಗೇನು ತಿಳಿಯುತ್ತದೆ ? ವಯಸ್ಸಾಗಿರುವುದರಿಂದಲೆ ಈ ಆನೆಯನ್ನು ಸಾಕುವುದಾತನಿಗೆ ಸುಲಭವಾದೀತು. ಆನೆಯ ಹತ್ತಿರ ಹೋಗುತ್ತಿದ್ದಂತೆ ಆತನಿಗೆ ಇನ್ನೊಂದು ಮಾತು ನೆನಪಾಯಿತು. ಈ ಆನೆ ಹಿಂದೆ ಸಾದುಗೊಳಿಸಿದ್ದಾಗಿತ್ತು. ಇಂದಿಗೂ ಅದರ ಕೋರೆಗಳ ಮೇಲೆ ಅಂದಿನ ಗುರುತುಗಳು ಕಾಣಿಸುತ್ತಿದ್ದವು. ಅದರ ಮೊಂಡಾಗಿರುವ ಕೋರೆಗಳು

ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

ದಂತಕ್ಷಯವನ್ನು ಇದಿರಿಸಿರಿ !



ಏಕೆಂದರೆ : **ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ** ಒಮ್ಮೆ ಹಲ್ಲುಜ್ಜುವುದರಿಂದ **ಬಾಯಿಯಲ್ಲಿ ದುರ್ಗಂಧವನ್ನುಂಟುಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು** ನಾಶವಾಗುತ್ತವೆ

ಊಟವಾದೊಡನೆ ಕಾಲ್ಗೇಟ್‌ನಿಂದ ಹಲ್ಲುಜ್ಜುವುದರಿಂದ ದಂತಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ ಕಾಲ್ಗೇಟ್‌ನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ!

ಊಟವಾದ ಮೇಲೆ ಬರೀ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟಿನಿಂದ ಉಜ್ಜಿರಿ. ಇದರ ಪ್ರಬಲ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಆ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು ಮಕ್ಕಳಿಗೆ ಕಾಲ್ಗೇಟಿನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ, ದೀರ್ಘಕಾಲ ಉಳಿಯುವ ಅದರ ನೆಚ್ಚಿನ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.

ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ...ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು !



ಕಾಲ್ಗೇಟಿನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✔ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✔ ದಂತಕ್ಷಯವನ್ನು ವಿರೋಧಿಸಲಾಗುವುದು
- ✔ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು

ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು... ಹೆಚ್ಚಿಗೆ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

DC-G 32 Kn.

ಹಿಂದೆ ಕೊರೆದವುಗಳಾಗಿದ್ದವು.

*

ಕಾಡು ಜನರ ಆನೆಯ ಭಾಷೆಯ ಎಲ್ಲ ಆಜ್ಞೆಗಳಿಗದು ಉತ್ತರ ಕೊಡುತ್ತಿತ್ತು. ಏನನ್ನೂ ಮರೆತಿರಲಿಲ್ಲ. ಹತ್ತಿರಕ್ಕೆ ಹೋಗಿ ಆತ ಆನೆಗೆ ಆಜ್ಞಾಪಿಸತೊಡಗಿದ. ಆನೆ ಇವನೊಡನೆ ಹೊರಟಿತು. ಆನೆಯನ್ನು ಕಂಡು ಅಂದು ಸಂಜೆ ಮೇಫೀಲ್ಡ್ "ತುಂಬಾ ಉತ್ತಮ ಕೆಲಸ ಮಾಡಿದೆ ಮಿಗಿ" ಎಂದು ಹೇಳಿದನು.

ಆನೆಯ ಕಾಲಿಗೆ ಸರಪಳಿ ಕಟ್ಟಲಾಯಿತು. ಮೇಫೀಲ್ಡನ ಹತ್ತಿರವೇ ಅವನ ಹೆಂಡತಿ ಜೋ-ನಳೂ ನಿಂತಿದ್ದಳು. ಈ ಸಲ ಆಕೆಯನ್ನು ಜೊತೆಯಲ್ಲಿ ಕರೆತಂದಿದ್ದ. ಅವರೆದುರು ಮಿಗಿ, ಬರ್ಮಿ ಕೆಲಸಗಾರ, ಆನೆಯನ್ನು ತಂದಾತ ಕೂತ.

"ಹೇಳಿದಷ್ಟು ಹಣವನ್ನು ಈ ಒಂದು ಪ್ರಾಣಿಗೆ ಕೊಟ್ಟುಬಿಡುವಂಥ ಕಾಡಿನ ಯುವರಾಜನಾಗಿದೆ ಈ ಆನೆ" ಎಂದ ಮಿಗಿ.

"ಈ ಪ್ರಾಣಿ ಮುಪ್ಪಾಗಿದ್ದರೂ ಚಿಂತೆಯಿಲ್ಲ. ನಿನಗೆ ನಾನು ನಿನ್ನ ಅಪೇಕ್ಷೆಯಂತೆ ಹಣ ಕೊಡುವೆ" ಎಂದ ಮೇಫೀಲ್ಡ್.

"ತೀರಾ ವೃದ್ಧನೇನಲ್ಲ, ಇನ್ನೂ ಸಶಕ್ತವಾಗಿದೆ," ಉತ್ತರವಿತ್ತ ಮಿಗಿ.

*

ಮಿಗಿ ಹಾಗೂ ಮೇಫೀಲ್ಡ್ ಇಬ್ಬರಿಗೂ ಚುಂ-ದರ ಲೋಯಿ ನೂರು ವರ್ಷದ್ದಾದರೂ ಇರಬೇಕೆಂದು ಗೊತ್ತಿತ್ತು.

ಆದರೆ ಭಾರತದಲ್ಲಿ ಸಾಕಷ್ಟು ಕಾಲ ವಾಸಿಸಿದ ಅವನಿಗೆ ಇಲ್ಲಿನ ನಂಬಿಕೆಗಳು ಅಂಟದೆ ಇರಲಿಲ್ಲ. ಅಕಸ್ಮಾತ್ತಾಗಿ ಈ ಪ್ರಾಣಿ ಇಂದು ಸಿಕ್ಕಿದ್ದರಲ್ಲಿ ಏನೋ ನಿಯತಿಯ ಕೈ ಇರಬೇಕೆಂದು ಅವನಿಗೆ ಅನಿಸಿತು.

"ಹರಿಯ ಸುಳಿವೇನಾದರೂ ಹತ್ತಿತೆ?" ಕೇಳಿದ ಮೇಫೀಲ್ಡ್.

"ಅದಿನ್ನೂ ಇಲ್ಲೇ ಎಲ್ಲಿಯಾದರೂ ಅವಿತುಕೊಂಡಿದೆ. ಹೊಳೆಯ ದಂಡೆಗುಂಟ ಹೆಜ್ಜೆಗಳು ಬಿದ್ದಿವೆ. ಭಾರಿ ಜಂತು. ಹಿಡಿಯುವುದು ಸುಲಭವಲ್ಲ. ಇಲ್ಲೇ ಇದ್ದು ಅದು ಸಮಯ ಸಾಧಿಸಲು ಕಾಯುತ್ತಿರಬೇಕೆನಿಸುತ್ತಿದೆ. ಕಾಡಿನ ಮೃಗಗಳು ಅದರಿಂದ ಹೇಳಲಾರದ ಕಾತರವನ್ನು ಅನುಭವಿಸುತ್ತಿರುವಂತೆ ತೋರುತ್ತದೆ."

ಇವರು ಮಾತಾಡುತ್ತಿರುವಾಗ ಬಿದಿರಿನ ಪಂಜರದಲ್ಲಿಟ್ಟ ಎರಡು ಮೌಸ್-ಡಿಯರ್‌ಗಳು (ಆಡಿನ ಗಾತ್ರದ ಜಿಗರೆಗಳು) ತಮ್ಮ ಪುಟ್ಟ ಖುರಗಳನ್ನಪ್ಪಳಿಸಿ ತಮ್ಮ ಗಾಬರಿಯನ್ನು ವ್ಯಕ್ತಪಡಿಸಿದವು. ಇವುಗಳ ಅಬ್ಬರಕ್ಕೆ ಕಾಡಿನಿಂದ ಉತ್ತರ ರೂಪದಲ್ಲಿ ಅದೇ ಬಗೆಯ ಧ್ವನಿಯಾಯಿತು.

"ಇದು ಬಹುಶಃ ಈ ಪುಟ್ಟ ಮೌಸ್‌ಡಿಯರಿನ ಪ್ರಿಯನ ಸದ್ದಿರಬಹುದು" ಎಂದಳು ಜೋನ್. "ನೀನು ಹೊರಗೆ ಹೋದಾಗ ಅದು ಕಾಡಿನಿಂದ ಹೊರಗೆ ಬಂದು ತನ್ನ ಪ್ರಿಯಳನ್ನು ಕರೆಯುವುದನ್ನು ನಾನು ನೋಡಿದ್ದೇನೆ."

ಆ ಶಾಂತ ಕಾಡಿನಲ್ಲಿ ಈ ಪ್ರಾಣಿಗಳ ಅಲ್ಪ ಸದ್ದೂ ಪರಿಣಾಮಕಾರಿ ಎನಿಸುತ್ತಿತ್ತು. ಚುಂದರ ಲೋಯಿಯ ಕಣ್ಣುಗಳು ಕಾಡಿನ ಕಡೆಗೇ ಸ್ಥಿರವಾಗಿದ್ದವು. ಅದು ಆಗಾಗ ತನ್ನ ಸೊಂಡಿಲ ಅಲ್ಲಾಡಿಸಿ ಅಸ್ಫುಟ ಅಸಮಾಧಾನ ತೋರಿಸುತ್ತಿತ್ತು. ಮಿಗಿಯ ಕರಿ ಕಣ್ಣುಗಳಿಗೆ ಇದೆಲ್ಲ ಅರ್ಥವಾಗುತ್ತಿತ್ತು.

"ಇನ್ನೊಮ್ಮೆ ಹೇಳುವೆ. ಈ ಚಿಕ್ಕ ಪ್ರಾಣಿಗಳನ್ನು ಬಿಟ್ಟುಬಿಡಿರಿ. ಅವುಗಳನ್ನು ಹಿಡಿದಿರುವುದರಿಂದ ಅಶುಭ ಜರಗುತ್ತದೆ," ಎಂದು ಮಿಗಿ ಹೇಳಿದ.

*

ಈ ಚಿಕ್ಕ ಪ್ರಾಣಿಗೆ ಈ ಪ್ರದೇಶದ ಭಾರತೀಯ ಜನ ಯಾವಾಗಲೂ ಪೀಡೆ ಕೊಡುವುದಿಲ್ಲೆಂದು ಮೇಫೀಲ್ಡ್ ಅರಿತಿದ್ದ. ಆತನು ಇತರ ಬಿಳಿಯರಂತೆ ಕಾಡು ಜನರ ಈ ಕಲ್ಪನೆಯನ್ನು ಕಂಡು ನಗುತ್ತಿದ್ದಿಲ್ಲ. ಇವನೂ ಅವರೊಂದಿಗೆ ಅವರ ಶ್ರದ್ಧೆಯಲ್ಲಿ ಪಾಲುಗಾರನಾಗುತ್ತಿದ್ದ.

ಆದರೆ ನ್ಯೂಯಾರ್ಕಿನ ಅವನ ಜನರು ಈ

ಮಾದರಿಯ ಕೆಲವಾದರೂ ಪ್ರಾಣಿಗಳನ್ನು ಹಿಡಿದು ತರಬೇಕೆಂದು ಹೇಳಿದ್ದರು. ಕೆಲ ಬಿಳಿಯರಂತೂ ಇವನ್ನಿನ್ನೂ ಕಣ್ಣಿನಿಂದ ನೋಡಿಯೂ ಇರಲಿಲ್ಲ. ಆದರೂ ಎರಡು ಮೌಸ್‌ಡಿಯರ್‌ಗಳನ್ನು ಹಿಡಿದಾಗಿನಿಂದ ಒಂದೊಂದೇ ದುರ್ಘಟನೆಗಳು ಸಂಭವಿಸತೊಡಗಿದ್ದವು. ಆದ್ದರಿಂದ ಇದು ಶಕುನದ ಪ್ರಾಣಿ ಎಂಬ ಭಾವನೆಗೆ ಪುಷ್ಟಿ ದೊರೆಯುತ್ತಿತ್ತು.

"ನಾಳೆ ಹುಲಿಗಾಗಿ ತೋಡಿರುವ ತಗ್ಗು ತಯಾರಾಗುವುದು. ಆ ಮೇಲೆ ಏನಾಗುವುದೋ ನೋಡಬೇಕು," ಮೇಫೀಲ್ಡ್ ಅಂದ.

ಹಿಂಗಾಲು ಕುಂಟಾದ ಮೇಲೆ ಹುಲಿಯ ಚಪಲತನ ಕುಗ್ಗಿ ತನ್ನ ಸಾಮಾನ್ಯ ಬೇಟೆಗಳನ್ನು ಹಿಡಿಯಲು ಅಸಮರ್ಥವಾಗುತ್ತದೆ. ಅದು ಸುಲಭವಾಗಿ ಕೈಗೆ ಸಿಗುವ ಹಾವು, ಉಡ ಮುಂತಾದ ಪ್ರಾಣಿಗಳನ್ನೂ ಹೆಣಗಳನ್ನೂ ತಿನ್ನುತ್ತಾ ಕೊನೆಗೆ ಮನುಷ್ಯನನ್ನು ಹಿಡಿಯಲಾರಂಭಿಸುತ್ತದೆ.

ಮನುಷ್ಯರನ್ನು ಮುರಿದು ತಿನ್ನುವ ಹುಲಿಯೆಂದರೆ ವೃದ್ಧಾವಸ್ಥೆ ಮುಟ್ಟಿದ ಇಲ್ಲವೆ ಅಂಗಹೀನ ಹುಲಿಯೇ !

ಇಂಥಾ ಅವಸ್ಥೆಗೆ ಮುಟ್ಟಿದ ಅಂಗಹೀನ ಹುಲಿ ಹರಿ ಪ್ರಚಂಡಕಾಯವಾಗಿತ್ತು. ಅದಕ್ಕೆ ಒಂದು ವರ್ಷದ ಹಿಂದೆ ಗಾಯವಾಗಿತ್ತು. ಕೆಲವೇ ದಿನಗಳಲ್ಲಿ ಅದಕ್ಕೆ ಕಾಡುಪ್ರಾಣಿಗಳಿಗೆಲ್ಲ ಭಯಂಕರನೆನಿಸುವ ಮನುಷ್ಯನು ಒಂಟಿಯಾಗಿದ್ದಾಗ ಅಥವಾ ನಿರಾಯುಧನಾಗಿದ್ದಾಗ ಎಂಥ ಅಸಹಾಯ ಪ್ರಾಣಿಯೆಂದು ತಿಳಿಯಲಾರಂಭಿಸಿತ್ತು.

ಈ ತಿಳಿವು ಅದಕ್ಕೆ ಹೊಸ ಶಕ್ತಿ ತಂದು ಕೊಟ್ಟಿತ್ತು. ಊರ ಹತ್ತಿರವೇ ಹರಿ ತನ್ನೆರಡು ಭಕ್ಷ್ಯಗಳನ್ನು ಹಿಡಿದಿತ್ತು. ಮಾನವ ರಕ್ತದ ರುಚಿಯಿಂದ ಅದು ತನ್ನ ಗುಂಪಿನಿಂದ ಬಹಿಷ್ಕೃತವಾಗಿ ಬಾಳುತ್ತಿತ್ತು.

*

ಹರಿ ದಿನವಿಡೀ ಕಾಡಿನಲ್ಲಿ ಅವಿತುಕೊಂಡು ಕತ್ತಲಾಗುತ್ತಲೇ ಮನುಷ್ಯರನ್ನು ಹುಡುಕುತ್ತ ಹಳ್ಳಿಗಳ ಹತ್ತಿರ ಸುಳಿಯತೊಡಗುತ್ತಿತ್ತು. ಪ್ರತಿತಿಂಗಳೂ ಅದರ ಧೈರ್ಯ ಹೆಚ್ಚುತ್ತ ನಡೆದಿತ್ತು.

ಇದೆಲ್ಲ ಮೇಫಿಲ್ಡನಿಗೆ ಗೊತ್ತಿದ್ದಿಲ್ಲ. ಆದರೂ ಇತರ ಹುಲಿಗಳಿಗಿಂತ ಹರಿಯನ್ನು ಹಿಡಿಯುವುದು ಕಷ್ಟವೆಂದಾತ ಅರಿತಿದ್ದ. ಕಳೆದ ಐದು ವಾರಗಳಿಂದ ಅದು ಪ್ರತಿ ರಾತ್ರಿ ಅವನ ಕ್ಯಾಂಪಿನ ಬಳಿ ಬಂದು ಹೋದ ಸುದ್ದಿ ಆತ ಕೇಳಿದ್ದ. ಅದನ್ನು ಹಿಡಿಯುವಲ್ಲಿ ಆತನ ಯುಕ್ತಿಗಳೆಲ್ಲ ವಿಫಲವಾಗಿದ್ದವು. ಆದರೂ ಚಿಕ್ಕ ಆಡಿನ ಮರಿಯನ್ನು ಆಮಿಷವಾಗಿಟ್ಟು ತೋಡಿದ ತಗ್ಗಿನಲ್ಲಿ ಅದನ್ನು ಕೆಡಹಿ ಹಿಡಿಯಬೇಕೆಂದಾತ ಹಂಚಿಕೆ ಹಾಕಿದ್ದ.

ಮರುದಿನ ಎದ್ದು ಮೌಸ್‌ಡಿಯರ್‌ಗಳನ್ನು ನೋಡಲಿಕ್ಕೆ ಆತ ಹೋದ. ಅಲ್ಲಿ ಪ್ರಿಯತಮೆಯ ಮಿಲನಕ್ಕಾಗಿ ಪ್ರಿಯಕರನು ತನ್ನ ಜೀವ ಸ್ವಾತಂತ್ರ್ಯಗಳನ್ನು ಪಣಕ್ಕಿಟ್ಟು ಹತ್ತಿರ ಬಂದುದನ್ನಾತ ಕಂಡ. ಪುಟ್ಟ ಪ್ರಾಣಿಗಳೆರಡೂ ಮೈಗೆ ಮೈ ಒತ್ತಿ ಕಣ್ಣುಗಳಿಂದ ಕರುಣ ರಸವನ್ನೇ ಸುರಿಸುತ್ತ ನಿಂತಿದ್ದವು. ಈ ಪುಟ್ಟ ಗಂಡು ಪ್ರಾಣಿಯ ದಿಟ್ಟತನ ನೋಡಿ ಬೆರಗಾಗಿ ಮೇಫೀಲ್ಡ್, "ನಿನ್ನ ಧೈರ್ಯಕ್ಕೆ ನಮೋ ಎಂಬೆ" ಎಂದ ನಗುತ್ತ.

ಮಧ್ಯಾಹ್ನ ಹೋಗಿ ಹುಲಿಗಾಗಿ ನಿರ್ಮಿಸಿದ ತಗ್ಗಿನ ಬಲೆ ನೋಡಿದ. ಎಲ್ಲ ಸಿದ್ಧವಾಗಿತ್ತು. ಈಗಲೂ ಹಿಡಿಯಲಿಕ್ಕಾಗದಿದ್ದರೆ ಹರಿ ಇನ್ನು ಇವರ ಕೈಗೆ ಹತ್ತುವುದೇ ಸಾಧ್ಯವಿರಲಿಲ್ಲ. ಸಮಯದ ಒತ್ತಡ ಬಲವಾಗಿತ್ತು. ಇನ್ನು ಎರಡು ಮೂರು ದಿನದ ಅವಧಿ ಉಳಿದಿತ್ತಷ್ಟೆ. ಅಂದು ಆತ ನಾಲ್ಕು ಗುರ್ಖಾ ಮತ್ತು ಸಿಂಹಲೀ ಜನರೊಂದಿಗೆ ಕೆಂಪು ಮಂಗಗಳನ್ನು ಹಿಡಿಯಲು ದಟ್ಟಡವಿಗೆ ಹೋದ. ಕ್ಯಾಂಪಿನಲ್ಲಿ ಜೋನ್ ಒಬ್ಬಳೇ ಉಳಿದಳು. ಅವಳ ರಕ್ಷಣೆಗೆ ಮಿಗಿ.

ಮಧ್ಯಾಹ್ನ ಜೋನ್ ನಿತ್ಯದಂತೆ ಪರದೆಯ

ಮರೆಯಲ್ಲಿ ಮಲಗಿದಳು. ಬಿಸಿಲಾರುವವರೆಗೆ ಇದೊಂದೇ ಕೆಲಸ. ನಿದ್ದೆ ಹತ್ತುವ ಮೊದಲು ಮಿಗಿ ಆನೆಯನ್ನು ಬಿಡಿಸಿಕೊಂಡು ಮೈತೊಳೆಯ ಲೆಂದು ಹೊಳೆಗೆ ಕರೆದೊಯ್ದುದ್ದನ್ನಾಕೆ ಕಂಡಿದ್ದಳು. ಬಳಿಕ ಅವಳಿಗೆ ನಿದ್ದೆ ಬಂದಿರಬೇಕು. ಆದರೆ ಕೆಲ ಹೊತ್ತಿನ ಮೇಲೆ ಆಕೆ ಒಮ್ಮೆಲೆ ನಿದ್ದೆಯಿಂದ ಎಚ್ಚತ್ತಳು.

ಯಾವುದೋ ಕುಶಂಕೆ ಅರ್ಧ ಪ್ರಜ್ಞೆಯಲ್ಲಿಯೂ ಅವಳಿಗೆ ಮಿಸುಕದೆ ಮಲಗಲು ಹೇಳುತ್ತಿತ್ತು. ಆ ಮೇಲೆ ಅರೆತೆರೆದ ಕಂಗಳಿಂದಾಕೆ ಸುತ್ತಲೂ ನೋಡಿದಳು. ಕೆಲ ವಾರಗಳ ಅರಣ್ಯ ವಾಸದಿಂದ ಅವಳು ಅರಣ್ಯದ ಆತ್ಮದೊಡನೆ ಸಮರಸಳಾಗುತ್ತ ಬಂದಿದ್ದಳು. ಬಿದ್ದಲ್ಲೇ ಕಣ್ಣುಗಳನ್ನು ಇನ್ನೂ ಬಿಡಿಸಿದಳು. ನೇರವಾಗಿ ಎದುರಿಗೇ ದೈತ್ಯ ಹುಲಿಯ ಸೈತಾನಿ ಮುಖ ಗೋಚರವಾಯಿತು. ಅದು ಹರಿಯೇ ಆಗಿತ್ತು. ಅದರ ಮುಖ ಅವಳ ಕಡೆಗೇ ಇತ್ತು. ತಾನು ಎಚ್ಚತ್ತಾಗ ಅದು ತನ್ನ ಕಡೆಗೇ ಮೆಲ್ಲಮೆಲ್ಲ ಸರಿಯುತ್ತಿತ್ತೆಂದವಳಿಗೆ ತಿಳಿದುಹೋಯಿತು. ಅವಳು ಅಲುಗಿದರೂ ಸಾಕು, ಅದೇ ಅವಳ ಕೊನೆಯಾಗುತ್ತಿತ್ತು. ಬರಿ ೨೦ ಅಡಿ ದೂರದಲ್ಲಿ ಹರಿ ಇತ್ತು. ಅವಳ ಎದೆ ಅದರಿತು. ಕೂಗಬೇಕೆಂದಳು. ಆದರೆ ಅದು ಹುಲಿಗೆ ತನ್ನ ಮೇಲೆ ಜಿಗಿಯಲು ಆಮಂತ್ರಣ ಕೊಟ್ಟಂತಾದೀತೆಂದು ಪುನಃ ಹಾಗೇ ಬಿದ್ದಳು. ನಿಶ್ಚಲಳಾಗಿ ಬಿದ್ದಳು. ೧೫ ಅಡಿ ದೂರದಲ್ಲಿ ತಂಬುವಿನಲ್ಲಿ ತೂಗು ಹಾಕಿದ ರಿವಾಲ್ವರಿನ ನೆನಪಾಯಿತು. ಆದರೆ ಈಗ ಅದರಿಂದೇನು?

ಸತ್ತವಳಂತೆ ಬಿದ್ದುಕೊಂಡ ಅವಳಿಗೆ ಮುಂದೆ ಚಾಚಿದ ಬಿಸಿಲಿನ ಪಟ್ಟಿಯನ್ನು ದಾಟಲೋ ಬೇಡವೋ ಎಂದು ಸಂದೇಹದಲ್ಲಿದ್ದ ಹರಿಯನ್ನು ನೋಡುವುದನ್ನುಳಿದು ಮತ್ತೇನೂ ಮಾಡಲು ಸಾಧ್ಯವಿರಲಿಲ್ಲ.

ಒಂದೇ ನಿಮಿಷ—ಅದು ಅವಳಿಗೆ ಒಂದು ಯುಗವೆನಿಸುತ್ತಿತ್ತು. ಬರೆ ಕೊಟ್ಟಾಗ ಉಮ್ಮಳಿಸುವಂತೆ ಉದ್ವೇಗದ ವೇದನೆಗಳಿಂದ ಅವಳ ದೇಹ ತತ್ತರಿಸಿತು. ಹರಿ ಈಗ ಪುನಃ ಹೊಟ್ಟೆಯನ್ನು ನೆಲಕ್ಕೆ ಹಚ್ಚಿ ಕುಳಿತಿತ್ತು. ಅದರ ಕಣ್ಣುಗಳಿಂದ ಅಗಾಧ ಶೂನ್ಯತೆಯೊಂದು ತೆರೆಯಾಚೆಗೆ ಮಲಗಿದ್ದವಳನ್ನು ಲಕ್ಷಿಸುತ್ತಿತ್ತು. ಮತ್ತೆ ನರಮಾಂಸದ ರುಚಿ ಕಂಡ ಹುಲಿಯಲ್ಲಿ ಮಾತ್ರ ಮಾನವ ದರ್ಶನದಿಂದ ಉಕ್ಕುವ ಉತ್ಸಾಹ ಜ್ವರದಂತೆ ಹರಿಯಲ್ಲಿ ಉಕ್ಕಿತು.

ಅದು ಮತ್ತೆ ಮುಂದೆ ಸರಿಯತೊಡಗಿತ್ತು. ಅದರ ಮೈ ಹುರಿಯಾಗಿತ್ತು. ಒಂದೆರಡು ನಿಮಿಷದಲ್ಲೇ ಇನ್ನು ಹರಿ ತನ್ನ ಕತೆ ಮುಗಿಸುತ್ತದೆಂದುಕೊಂಡಳು ಜೋನ್. ಅವಳು ಚೀರಲು ಬಾಯ್ದೆರೆಯಲಿದ್ದಳು ಅಷ್ಟರಲ್ಲಿ ಬೇರೆ ಶಬ್ದವಾಗಿ ಅವಳನ್ನು ಬೆಚ್ಚಿಸಿತು. ಹುಲಿಯ ಚಿತ್ತವೂ ವಿಚಲಿತವಾಯಿತು.

ಒಂದು ಸಾದಾ ಶಬ್ದ, ಖುರದ ಸದ್ದು, ಅಡವಿಯ ಮೌಸ್ಡಿಯರ್ ತನ್ನ ಆವೇಗವನ್ನು ವ್ಯಕ್ತಪಡಿಸುತ್ತಿರಬೇಕು. ಏಕೆಂದರೆ ಗೂಡಿನಿಂದ ಅದಕ್ಕೆ ಅದೇ ತರದ ಪ್ರತ್ಯುತ್ತರ ಬಂತು. ಹುಲಿ ತಿರುಗಿ ಬಾಯ್ತೆರೆದು ನಿಶ್ಶಬ್ದವಾಗಿ ಕೋಪ ವ್ಯಕ್ತಪಡಿಸಿದ್ದು ಕಾಣಿಸಿತು. ಆಗಲೆ ತನಗೆ ಏಕಮಾತ್ರ ಯತ್ನಕ್ಕೆ ಅಲ್ಪ ಸಮಯ ದೊರೆತಿದೆಯೆಂದು ಜೋನ್ ಅರಿತಳು.

ಹುಲಿಯ ಲಕ್ಷ್ಯ ಭಂಗವಾಗಿ ಅದು ದವಡೆಯನ್ನು ಸಡಿಲು ಬಿಟ್ಟು ಸುತ್ತಲೂ ನೋಡುತ್ತಿರುವುದನ್ನು ಕಂಡೊಡನೆ ಅದು ಇನ್ನೊಮ್ಮೆ ಹೊಂಚು ಹಾಕಲು ಕುಳಿತಲ್ಲದೆ ತನ್ನ ಮೇಲೇರಿ ಬಾರದೆಂದು ಜೋನಳಿಗೆ ಖಂಡಿತವಾಯಿತು. ಒಡನೆ ಅವಳು ಪರದೆಯನ್ನು ತೂಗ ಹಾಕಿದ್ದ ಮರದ ದೊಡ್ಡಕೊಂಬೆಯನ್ನು ಹಿಡಿದು ಮೇಲೇರಿದಳು. ಸಂಗಡಲೇ ಬಲವಾಗಿ ಚೀರಿ ಮಿಗಿಯನ್ನು ಸಹಾಯಕ್ಕೆ ಕರೆದಳು. ಹುಲಿ ಎರಗಿತು. ಕೆಲ ಕ್ಷಣಗಳಲ್ಲಿ ಅದು ಪಂಜದಿಂದ ಆ ಬಿದಿರಿನ ಪರದೆಯನ್ನು ಹರಿದುಹಾಕಿತ್ತು. ಅಷ್ಟರಲ್ಲಿ ಜೋನ್ ಇನ್ನೂ ಮೇಲಿನ ಕೊಂಬೆಗೇರಿದ್ದಳಾದ್ದರಿಂದ

ಹುಲಿ ಅತ್ತ ಜಿಗಿದಾಗ ಅವಳಿಗೇನೂ ಆಗಲಿಲ್ಲ.

ಅಷ್ಟರಲ್ಲಿ ಹೊಳೆಯ ಕಡೆಯಿಂದ ಪ್ರಚಂಡ ದೇಹ ಬರುವ ಸದ್ದು ಕೇಳಿಸಿತು. ಮಿಗಿಯ ದನಿ ಹುಲಿಯ ಗರ್ಜನೆಯನ್ನು ಮೀರಿ ಕೇಳಿಸಿತು. ಚುಂದರ ಲೋಯಿ ರಭಸದಿಂದ ಬರುತ್ತಿತ್ತು.

ಆವರೆ ಇಷ್ಟು ಸಮೀಪವಿದ್ದ ಕೊಳ್ಳೆಯನ್ನು ಬಿಟ್ಟು ಕೊಡಲಾರದಷ್ಟು ಉಗ್ರವಾಗಿತ್ತು ಹರಿಯ ರಕ್ತ.

ತನ್ನಿಂದ ನಾಲ್ಕೇ ಅಡಿ ಕೆಳಗೆ ನಿಂತು ಪಂಜ ದಿಂದ ಕೆದರುವ ಹುಲಿಯನ್ನು ಜೋನ್ ನೋಡು ತ್ತಿರುವಾಗಲೇ ಹೆಬ್ಬಾವಿನಂತೆ ಆನೆಯ ಸೊಂಡಿ ಲು ಬಂದು ಹುಲಿಯ ಉಗುರುಗಳನ್ನು ಲೆಕ್ಕಿಸದೆ ಅದರ ಹಿಂಗಾಲನ್ನು ಸುತ್ತಿ ಹಿಂದಕ್ಕೆ ಎಳೆದು ಎಲುಬು ನಟನಟಿಸುವಂತೆ ನೆಲಕ್ಕಪ್ಪಳಿಸಿತು.

ಚುಂದರಲೋಯಿ ತನ್ನ ಶತ್ರುವನ್ನು ವಾಸನೆ ಯಿಂದಲೂ ದೃಷ್ಟಿಯಿಂದಲೂ ಕಂಡಿದ್ದ. ಬಹು ದಿನದ ಸಿಟ್ಟು ಇಂದು ಮಾರಕ ಶಕ್ತಿಯಾಗಿ ಮಾರ್ಪಟ್ಟಿತ್ತು. ಹರಿಯೂ ತನ್ನ ಶತ್ರುವಿನ ಮೇಲೆ ಅಬ್ಬರದಿಂದ ಏರಿಬಂತು. ಆನೆ ನೋವಿ ನಿಂದ ಕೂಗಿತು. ನೋಯುವ ಹಲ್ಲಿನ ಮೇಲೆ ಹುಲಿಯ ಭಾರ ಬಿದ್ದು ಅದರ ಜೀವ ಕಳವಳ ಗೊಂಡಿತು. ಅದು ಕಾಲೆತ್ತಿತು

ಆ ಸಂಧಿಯಲ್ಲಿ ಹುಲಿ ಆನೆಯ ಭೀಕರ ಭಾರ ದಿಂದ ತಪ್ಪಿಸಿಕೊಂಡಿತು. ಇಲ್ಲವಿದ್ದರೆ ಅದರ ಒಂದು ಮುಂಗಾಲಿನ ತುಳಿತಕ್ಕೆ ಅದು ನಜ್ಜು ಗುಜ್ಜಾಗಬಹುದಿತ್ತು.

ಬೆನ್ನ ಮೇಲಿದ್ದ ಮಿಗಿ ಚುಂದರಲೋಯಿ ಯನ್ನು ಹುರಿದುಂಬಿಸಲು ಕೂಗತೊಡಗಿದ. "ಇನ್ನೊಮ್ಮೆ ಯತ್ನಿಸು. ನೀನು ಜಯಶಾಲಿಯಾ ಗುವಿ" ಎಂದ ಮಿಗಿ ಆನೆಯ ಭಾಷೆಯಲ್ಲಿ.

ಎರಡೂ ಪ್ರಾಣಿಗಳು ನಿಂತಲ್ಲಿ ನಿಲ್ಲಲಿಲ್ಲ. ಹುಲಿಯ ಭೀಕರ ರೂಪ ಎತ್ತ ತಿರುಗುತ್ತಿತ್ತೊ ಅತ್ತ ಆನೆ ಹೊರಳುತ್ತಿತ್ತು. ಎರಡು ಕಾಡು ಪ್ರಾಣಿಗಳು ತಮ್ಮ ಹಳೇ ಹಗೆಯನ್ನು ಕೊನೆ ಗೊಮ್ಮೆ ತೀರಿಸಿಕೊಳ್ಳಲು ಅಣಿಯಾಗಿದ್ದವು.

ಹರಿ ತನ್ನ ಸ್ನಾಯುಗಳನ್ನು ಉಕ್ಕಾಗಿ ಮಾಡಿ ಕೊಂಡು ಅಂತಿಮ ಆಘಾತಕ್ಕಾಗಿ ಚುಂದರ ಲೋಯಿಯ ಮೇಲೆ ಹಾರಿ ಅದರ ಒಂದು ಭುಜ-ಕ್ಕೆ ತಗಲಿಕೊಂಡಿತು. ರೌದ್ರಾವೇಶದಿಂದ ಆನೆ ಆ ಭುಜವನ್ನು ಅದೇ ಹಣ್ಣು ಹಿಂಡಿದಂತೆ ಹುಲಿಯನ್ನು ಮರಕ್ಕೊತ್ತಿ ಹಿಚುಕಿತು. ಹುಲಿ ಮುದ್ದೆಯಾಗಿ ನೆಲಕ್ಕೆ ಬಿತ್ತು. ಆ ಮೇಲೆ ಆನೆಯ ಕಾಲಿನ ಒತ್ತಡದಿಂದ ಅದರ ಕಾಲ ಕೆಳಗೆ ಹುಲಿಯ ರಕ್ತ ಹರಿಯಿತು. ಹರಿ ಸತ್ತು ಹೋದರೂ ಚುಂದರ ಲೋಯಿಯ ಸಿಟ್ಟು ಇಳಿ ದಿರಲಿಲ್ಲ. ಎಷ್ಟೋ ಕಾಲ ಅದನ್ನು ಒತ್ತುತ್ತಲೇ ಇತ್ತು.

ಹೊತ್ತು ಮುಳುಗುವ ಹೊತ್ತಿಗೆ ಮೇಫೀಲ್ಡ್ ಜೊತೆಯ ಹುಡುಗರೊಂದಿಗೆ ಮರಳಿದನು. ಜೋನಳ ನಿಸ್ತೇಜವಾದ ಮುಖದಿಂದಲೆ ನಡೆದ ದುರ್ಘಟನೆಯ ಇತಿವೃತ್ತವನ್ನು ತಿಳಿದುಕೊಂ ಡನು.

ಚುಂದರಲೋಯಿಯ ಗಾಯಗಳಿಗೆ ಔಷ-ಧೋಪಚಾರ ಮಾಡಿ ಅವರೆಲ್ಲರೂ ಡೇರೆಯ ಮುಂದೆ ಕೂತರು.

ಕತೆಯನ್ನು ಸಂಪೂರ್ಣ ತಿಳಿದುಕೊಂಡ ಮೇಫೀಲ್ಡ್ ಒಂದು ನಿರ್ಣಯಕ್ಕೆ ಬಂದಿದ್ದ. ಕಾಡು ಪ್ರಾಣಿಗಳ ಸ್ವಾತಂತ್ರ್ಯವನ್ನು ಅಪಹರಿಸಿ ತಾನು ಧನ ಸಂಪಾದಿಸುವ ಬಗ್ಗೆ ಒಂದು ಶಂಕೆ ಯಾವಾಗಲೂ ಅವನನ್ನು ಕೊರೆಯುತ್ತಿತ್ತು. ಪ್ರಾಣಿಸಂಗ್ರಹದ ತನ್ನ ಕೊನೆಯ ಬೇಟೆಯಿದು ಎಂದಾತ ನಿರ್ಧರಿಸಿದ.

ಈ ವರೆಗೆ ಪ್ರಾಣಿ ಸಂಗ್ರಹದಲ್ಲವನಿಗೆ ಅತ್ಯಂತ ಯಶಸ್ಸು ದೊರಕಿತ್ತು. ಆದರೀಗ ಅರಣ್ಯ ತನ್ನ ಪ್ರತೀಕಾರವನ್ನು ಪ್ರಾರಂಭಿಸಿತ್ತು. ಇಂದು ಒಂದು ದೈವೀ ವರದಿಂದ ಆನೆ ಅವನಲ್ಲಿಗೆ ಬಂದಿರ ದಿದ್ದರೆ ಮತ್ತು ಆ ಮೌಸ್‌ಡಿಯರ್‌ಗಳ ಜೊತೆ ಅವನ ಶಿಬಿರದಲ್ಲಿರದಿದ್ದರೆ ಅವನಿಗೆ ಅತ್ಯಂತ ಪ್ರಿಯವಾದ ಜೀವ ಇಲ್ಲದಂತಾಗಿ ಹೋಗಬಹು ದಿತ್ತು.

ಸಂಜೆ ಮಿಗಿ ಬಂದಾಗ ಮೇಫೀಲ್ಡ್ ಗಾಳಿಗೆ ಹೇಳುವವನಂತೆ ಹೇಳಿದ: "ನೀನಿತ್ತ ಎಚ್ಚರಿಕೆಯ ಬಗ್ಗೆ ಬಹಳ ಯೋಚಿಸಿದ್ದೇನೆ. ನೀನಂದಂತೆ ಈ ಪ್ರಾಣಿಗಳನ್ನು (ಮೌಸ್ ಡಿಯರ್) ಬಿಡುಗಡೆ ಮಾಡಲು ನಿಶ್ಚಯಿಸಿದ್ದೇನೆ."

ಮಿಗಿ "ನಾನು ಹೇಳಿರಲಿಲ್ಲವೇ ಈ ಪ್ರಾಣಿಗಳಿಗೆ ಅನ್ಯಾಯ ಮಾಡಿದರೆ ದೈವ ನಿಮ್ಮ ಮೇಲೆ ಮುನಿಯುವುದೆಂದು?" ಎಂದ.

"ಅವುಗಳನ್ನು ಮುಕ್ತಗೊಳಿಸು. ಆನೆಯ ಕಾಲಿನ ಸರಪಳಿಯನ್ನೂ ಬಿಚ್ಚಿಬಿಡು. ಅದರ ಚಿತ್ತಬಂದಂತೆ ಅದು ವರ್ತಿಸಲಿ."

"ಆದರೆ ನನಗೆ ಕೊಡಲೊಪ್ಪಿದ ಬಹುಮಾನ ದೊರೆ?"

"ಒಪ್ಪಿಕೊಂಡಿದ್ದಕ್ಕಿಂತ ಹೆಚ್ಚು."

ಮೂರೂ ಮೌಸ್‌ಡಿಯರ್‌ಗಳು ಸ್ವಚ್ಛಂದದಿಂದ ಕಾಡಿನಲ್ಲಿ ಮರೆಯಾಗುವಾಗಿನ ಅವುಗಳ ಸ್ವಾತಂತ್ರ್ಯದ ಕಾವ್ಯವನ್ನಾತ ಆಸ್ವಾದಿಸುತ್ತಿದ್ದ. ಜೋನಳ ಕೈ ಅವನ ಕೈಯಲ್ಲಿ ಸೇರಿತು. ಇಂದಾತನ ಬೇಟೆಗಾರ ಮನಸ್ಸಿಗೆ ಮೊದಲ ಬಾರಿ ಶಾಂತಿ ಲಭಿಸಿತ್ತು. *

ಗಂಡುಗಲಿ

ಮಹಾರಾಷ್ಟ್ರದ ದಂಡನಾಯಕ ಸದಾಶಿವರಾವ್ ಭಾವು ಪಟವರ್ಧನರವರು ಒಂದು ದಿವಸ ತಮ್ಮ ನಿವಾಸದಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಕತ್ತಿ ತುಂಬಾ ಮೊಂಡಾಗಿದ್ದುದರಿಂದ ಕ್ಷೌರ ಮಾಡುವಾಗ್ಗೆ ನೋವಾಗುತ್ತಿತ್ತು. "ಅಯ್ಯಾ! ಕತ್ತಿಯನ್ನು ಚೆನ್ನಾಗಿ ಮಸೆ," ಎಂದರು. ನಾಪಿತನು ಹಾಸ್ಯವಾಗಿ, "ಸ್ವಾಮಿ, ತಾವು ದೊಡ್ಡ ದೊಡ್ಡ ಯುದ್ಧ ಮಾಡುವವರು! ಇಷ್ಟು ಸಣ್ಣ ಕತ್ತಿಗೆ ಹೆದರುವಿರಾ?" ಎಂದನು. ಕ್ಷೌರದ ಕೆಲಸ ಪೂರ್ತಿಯಾಯಿತು. ನಾಪಿತನು ಹೊರಡುವುದರಲ್ಲಿದ್ದನು. "ಸ್ವಲ ನಿಂತುಕೊಳ್ಳಯ್ಯಾ," ಎಂದು ಪಟವರ್ಧನರು ಒಂದು ಈಟಿಯನ್ನು ತರಿಸಿದರು. ನಾಪಿತನ ಪಾದದ ಮೇಲೆ ತಮ್ಮ ಪಾದವನ್ನಿಟ್ಟು ಅದರ ಮೇಲೆ ಈಟಿಯನ್ನು ಪ್ರಯೋಗಿಸಿದರು.

ಈಟಿ ಅವರ ಕಾಲನ್ನು ತೂರಿ ನಾಪಿತನ ಪಾದದೊಳಕ್ಕೆ ಇಳಿಯಿತು. ಅವನು ಕುಯ್ಯೋ! ಮರ್‍ರೋ! ಎಂದು ಅಳತೊಡಗಿದನು.

ಪಟವರ್ಧನರು ಕೇಳಿದರು: "ಯಾಕೆ ಅಳುತ್ತೀಯೆ, ನನ್ನ ಕಾಲಿಗೂ ಈಟಿ ನಾಟಿಲ್ಲವೇ?" ಕ್ಷೌರಿಕ ಕ್ಷಮಾಪಣೆ ಕೇಳಿದ ಮೇಲೆ ಈಟಿಯನ್ನು ಹೊರತೆಗೆದು ಅವರು ಅವನಿಗೆ ಹೇಳಿದರು: "ಯುದ್ಧದ ಮಾತು ಯುದ್ಧಕ್ಕೆ ಕ್ಷೌರದ್ದು ಕ್ಷೌರಕ್ಕೆ ಎಂದು ಈಗಾದರೂ ತಿಳಿಯಿತೆ?"

—ಜಿ. ಬಿ. ಕ್ಯಾಂಬೆಕರ

ಪ್ರಪಂಚದ ಚರಿತ್ರೆಯ ಸರ್ವಾಪರಾಧಗಳನ್ನು ಎರಡು ಪದಗಳಲ್ಲಿ ಸಂಗ್ರಹಿಸಬಹುದು— "ಅಧಿಕಾರದ ದುರುಪಯೋಗ." —ಆರ್. ಜಿ. ಇಂಗರ್‌ಸಾಲ್

* * *

'ತಾಯಿ' ಎನ್ನುವುದು ಚಿಕ್ಕ ಮಕ್ಕಳ ಹೃದಯದಿಂದ ಹೊರಬೀಳುವ ದೇವರ ಹೆಸರು. —ಥಾ ಕರೆ

ಸಂಗ್ರಹ: ಜಿ. ಎಸ್. ಉಬರಡ್ಕ



ವಾನರರ ಮೇಲೆ ನಡೆಸಿದ
ವಿಚಿತ್ರ ಪ್ರಯೋಗಗಳಿಂದ
ದೊರೆತ ಪಾಠಗಳು

ಮಾತೆಯರಿಗೆ ಮಂಗಗಳಿಂದ ಕಿವಿಮಾತು

ಪಾವೆಂ.

ಮಗುವಿಗೆ ತಾಯಿಯ ಅವಶ್ಯಕತೆ ಕೇವಲ ಮೊಲೆ ಹಾಲು ಕೊಟ್ಟು ಹಸಿವು ಹಿಂಗಿಸುವುದಕ್ಕಲ್ಲ; ಅದಕ್ಕೆ ಅಪಾಯದಿಂದ ರಕ್ಷಣೆ ಕೊಡುವುದಕ್ಕೂ ಅಲ್ಲ. ತಾಯಿಯ ಸಂಪರ್ಕವು ಮಗುವಿನ ಇಡೀ ಭಾವಿ ಜೀವನಕ್ಕೆ ಆಧಾರಸ್ತಂಭವಾಗಿದೆ. ತಾಯಿಯ ಪ್ರೀತಿ ಸಂಸರ್ಗಗಳು ಅದರ ಮನಸ್ಸಿಗೆ ಒಂದು ಸ್ಥಿರವಾದ ರೂಪ ಕೊಡುತ್ತವೆ. ಅವುಗಳಿಂದ ವಂಚಿತವಾದ ಮಕ್ಕಳನ್ನು ಧಷ್ಟಪುಷ್ಟವಾಗಿ ಬೆಳೆಸಬಹುದು; ಆದರೆ ಅಂಥ ಮಗು ಬೆಳೆದು ಸಮಬುದ್ಧಿಯ ವ್ಯಕ್ತಿಯಾಗಲಾರದು. ಅಷ್ಟೇ ಏಕೆ? ಅದರ ಇಂದ್ರಿಯಗಳೆಲ್ಲ ಸರಿಯಾಗಿದ್ದರೂ ಅದು ಸಂತಾನವೃದ್ಧಿಯನ್ನು ಕೂಡ ಯಶಸ್ವಿಯಾಗಿ ಮಾಡಿಕೊಳ್ಳಲಾರದು. ಇವು ಮಾತೃ-ಶಿಶು ಸಂಬಂಧದಲ್ಲಿ ಸುದೀರ್ಘವಾಗಿ ನಡೆದ ವೈಜ್ಞಾನಿಕ ಸಂಶೋಧನೆಯಿಂದ ವ್ಯಕ್ತವಾದ ಕೆಲ ಅಂಶಗಳು.

ಅಮೇರಿಕದ ವಿಸ್ಕೋನ್ಸಿನ್ ವಿಶ್ವವಿದ್ಯಾಲಯದ ವಾನರಶಾಖೆಯವರು ಎಂಟು ವರ್ಷಗಳ ಹಿಂದೆ ಕೆಲ ರ್ಹಿಸಸ್ ಜಾತಿಯ ಮರಿ ಮಂಗಗಳನ್ನು ಪ್ರತ್ಯೇಕವಾಗಿ ಸಾಕಿದರು. ಹುಟ್ಟಿದ ಆರೆಂಟು ತಾಸುಗಳಲ್ಲೆ ಅವುಗಳನ್ನು ತಾಯಂದಿರಿಂದ ಬಿಡಿಸಿ ಪ್ರತಿಯೊಂದನ್ನೂ ಒಂದೊಂದು ತಂತಿ ಪಂಜರದಲ್ಲಿರಿಸಲಾಯಿತು. ಮಾನವ ಮಕ್ಕಳಂತೆ ಅವುಗಳಿಗೆ ಬಾಟಲಿಯಲ್ಲಿ ಹಾಲು ಕುಡಿಸಲಾಗುತ್ತಿತ್ತು. ಅವು ಚೆನ್ನಾಗಿಯೆ ಬೆಳೆದವು. ವಿಜ್ಞಾನಿಗಳಿಗೆ ತಾಯಿಯ ಸಂಪರ್ಕವಿಲ್ಲದೆ ನಿಯಂತ್ರಿತ ಪರಿಸರದಲ್ಲಿ ಬೆಳೆದ ಮಂಗಗಳು ಬೇರೆ ಸಂಶೋಧನೆಗಳಿಗಾಗಿ ಬೇಕಾಗಿದ್ದವು. ಪ್ರಾರಂಭದಲ್ಲೇ ತಾಯಿಯಿಂದ ಬಿಡಿಸಿ ಬೆಳೆಸಿದ ಮಂಗಗಳಲ್ಲಿ ಹುಟ್ಟಿದ ಮರಿಗಳನ್ನು ಆ ಸಂಶೋಧನೆಗಳಿಗಾಗಿ ಉಪಯೋಗಿಸುವುದು ಅವರ ಉದ್ದೇಶವಾಗಿತ್ತು.

ಆದರೆ ಈ ಪ್ರಯೋಗವು ನಡುವೆಯೆ ಬೇರೊಂದು ಕೂತೂಹಲಕರ ಅಡ್ಡದಾರಿ ಹಿಡಿದು ತಾಯಿ-ಮಗುವಿನ ಪ್ರೇಮದ ಅನಿರೀಕ್ಷಿತ ಸ್ವರೂಪವನ್ನು ತೆರೆದು ತೋರಿಸಿದ ಕಥೆಯನ್ನು ಮನೋವಿಜ್ಞಾನಿಗಳಾದ ಡಾ. ಹ್ಯಾರಿ ಹಾರ್ಲೋ ದಂಪತಿಗಳು "ನ್ಯಾಚರಲ್ ಹಿಸ್ಟರಿ" ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ.

ಮರಿಗಳನ್ನಿಟ್ಟ ಪಂಜರಗಳಲ್ಲಿ ಅವುಗಳ ಮೂತ್ರವಿಸರ್ಜನೆಗಾಗಿ ಚಿಂದಿಬಟ್ಟೆಯ ಮೆತ್ತೆಗಳನ್ನಿರಿಸಿದ್ದರು. ಮರಿಗಳು ಹಾಲಿನ ಬಾಟಲಿ ತಂದೊಡನೆ ಮಾನವ ಶಿಶುಗಳಂತೆ ಉತ್ಸಾಹದಿಂದ ಕುಡಿಯುತ್ತಿದ್ದವು. ಹಾಗೆ ಕುಡಿಯುವಾಗ ಆ ಚಿಂದಿಯ ಮೆತ್ತೆಗೆ ಆನಂದದಿಂದ ತಗಲಿಕೊಳ್ಳುತ್ತಿದ್ದವು. ಬರಬರುತ್ತ ಆ ಮೆತ್ತೆಗಳ ಮೇಲೆ ಅವುಗಳಿಗೆಷ್ಟು ಪ್ರೀತಿ ಮೂಡಿಬಿಟ್ಟಿತೆಂದರೆ ಸ್ವಚ್ಛತೆಗಾಗಿ ಮೆತ್ತೆಗಳನ್ನು ಪಂಜರದಿಂದ ತೆಗೆದರೆ ಮರಿಗಳು ಅತ್ಯಂತ ದುಃಖದಿಂದ ಚೀರಿಕೊಳ್ಳತೊಡಗಿದವು.

ವಿಜ್ಞಾನಿಗಳಿಗೆ ಇದು ಚೋದ್ಯವಾಗಿ ಕಂಡಿತು. ಹಾಗಾದರೆ ಮಕ್ಕಳು ತಾಯಿಯ ಪ್ರೀತಿಪಾಶಕ್ಕೊಳಪಡುವುದು ಹಾಲಿನಿಂದ ಮಾತ್ರವಲ್ಲ, ಅವಳ ಮೈಯ ಮೆತ್ತನ್ನ ಸ್ಪರ್ಶಕ್ಕೂ ಮಹತ್ವವಿದೆಯೆ? ಇದಕ್ಕೆ ಉತ್ತರ ಪಡೆಯಲು ತಂತಿ ಜಾಳಿಗೆಯಿಂದ ಎರಡು ತರಹದ ಕೃತಕ ತಾಯಂದಿರನ್ನು ನಿರ್ಮಿಸಿದರು. ಎರಡಕ್ಕೂ ತಾಯಿ ಮಂಗದಂತೆ ಮರದಿಂದ ಮುಖ ತಯಾರಿಸಿ ಹಚ್ಚಿದರು. ಎರಡಕ್ಕೂ ಹಾಲು ಇಳಿಸುವ ಕೃತಕ ಮೊಲೆಗಳನ್ನು ಜೋಡಿಸಿದರು. ಎರಡನ್ನೂ ವಿದ್ಯುತ್ತಿನಿಂದ ಬೆಚ್ಚಗಿಟ್ಟರು. ಆದರೆ ಒಂದು ಬಗೆಯ ತಾಯಿಯ ಮೈ ಬರಿ ತಂತಿಯದಾಗಿತ್ತು; ಇನ್ನೊಂದಕ್ಕೆ ಮೆತ್ತೆಗಳನ್ನು ಹೊದಿಸಲಾಗಿತ್ತು. ಪ್ರತಿ ಮರಿಯ ಗೂಡಿನಲ್ಲೂ ಈ ಎರಡೂ ಬಗೆಯ ಕೃತಕ ತಾಯಂದಿರನ್ನಿರಿಸಲಾಯಿತು.

ಸಂಶೋಧಕರ ಊಹೆ ಎಣಿಸಿದ್ದಕ್ಕಿಂತಲೂ ನಿಜವಾಗಿ ಪರಿಣಮಿಸಿತು. ಮರಿಗಳು ಹಸಿದಾಗ ಎರಡು ಬಗೆಯ ತಾಯಂದಿರಿಂದಲೂ ಭೇದ ಮಾಡದೆ ಹಾಲು ಹೀರುತ್ತಿದ್ದವು. ಆದರೆ ಉಳಿದ ಹೆಚ್ಚಿನ ಸಮಯವನ್ನು ಮೆತ್ತೆ ಹಚ್ಚಿದ ತಾಯಿಯನ್ನಪ್ಪಿಕೊಂಡು ಕಳೆಯುತ್ತಿದ್ದವು. ಹಾಲು ಕುಡಿದ ಮೇಲೆ ಮೆತ್ತೆಯಿಲ್ಲದ ತಾಯಿಯ ಹತ್ತಿರ ಯಾವ ಮರಿಯೂ ಹೊತ್ತು ಕಳೆಯುತ್ತಿದ್ದಿಲ್ಲ.

ಈ ಮೆತ್ತೆ-ತಾಯಂದಿರಿಂದ ಮರಿಗಳಿಗೆ ಸಿಗುವ ಸೌಖ್ಯ ಯಾವ ಬಗೆಯದು? ಅದಿಲ್ಲದಿದ್ದರೆ ಮರಿಗಳು ಏನು ಮಾಡುವವು? ಸಂಶೋಧಕರು ದೊಡ್ಡ ಪಂಜರ ರಚಿಸಿ ಅವುಗಳಲ್ಲಿ ಎರಡೂ ಬಗೆಯ ತಾಯಂದಿರನ್ನಿರಿಸಿದರು. ಮತ್ತು ಪಂಜರದೊಳಗೆ ಮರಿಗಳಿಗೆ ಅಪರಿಚಿತವಾದ ಪದಾರ್ಥಗಳನ್ನು ಚೆಲ್ಲಾಪಿಲ್ಲಿಯಾಗಿರಿಸಿದರು. ಯಾವುದೇ ಮಾನವ ಶಿಶು ಅಪರಿಚಿತ ಪದಾರ್ಥಗಳನ್ನು ನೋಡಿದರೆ ಗಾಬರಿಯಾಗುವಂತೆ ಮರಿಗಳೂ ಧೈರ್ಯಗೆಟ್ಟವು. ಅವು ಒಡನೆ ಓಡಿ ಹೋಗಿ ಮೆತ್ತೆ ತಾಯಂದಿರನ್ನು ಅಪ್ಪಿಕೊಂಡವು. ಒಂದೇ ಒಂದು ಮರಿ ಕೂಡ ಈ ಸಂಕಟ ಕಾಲದಲ್ಲಿ ಮೆತ್ತೆಯಿಲ್ಲದ ತಾಯಿಯ ಬಳಿಗೋಡಲಿಲ್ಲ. ಒಮ್ಮೆ ಮೆತ್ತೆ ತಾಯಿಯನ್ನು ಅಪ್ಪಿಕೊಂಡ ಮೇಲೆ ಅವುಗಳಿಗೆ ಧೈರ್ಯ ಬಂತು. ಆಮೇಲೆ ಆ ವಿಚಿತ್ರ ಪದಾರ್ಥಗಳನ್ನು ತಿರುಗಿ ನೋಡಲು ಕೂಡ ಅವು ಹಿಂಜರಿಯಲಿಲ್ಲ. ಮತ್ತು ಸ್ವಲ್ಪ ಹೊತ್ತಿನಲ್ಲಿ ಮೆತ್ತೆತಾಯಿಯನ್ನು ಬಿಟ್ಟು ಹೋಗಿ ಆ ವಿಚಿತ್ರ ಪದಾರ್ಥಗಳೇನೆಂದು ಪರೀಕ್ಷಿಸುವಷ್ಟು ದಿಟ್ಟತನ ಅವುಗಳಿಗೆ ಬಂತು.

ಸಂಶೋಧಕರು ಪ್ರಯೋಗವನ್ನು ಒಂದು ಹೆಜ್ಜೆ ಮುಂದುವರಿಸಿ ಕೇವಲ ತಂತಿ ತಾಯಿ ಮಾತ್ರ ಇದ್ದ ಪಂಜರದಲ್ಲಿ ಅಪರಿಚಿತ ವಸ್ತುಗಳನ್ನಿಟ್ಟು ಮರಿಮಂಗನನ್ನು ಅದರಲ್ಲಿಕ್ಕಿದಾಗ ಅದು ತಂತಿ ತಾಯಿಯನ್ನು ಕಣ್ಣೆತ್ತಿ ಕೂಡ ನೋಡದೆ ಉದ್ಭ್ರಾಂತನಂತೆ ನೆಲಕ್ಕೆ ಮೂತಿಯೂರಿ ಕಣ್ಣು ಮುಚ್ಚಿ ಕೈಗಳನ್ನು ಮುದುಡಿಸಿ

ಕೊಂಡು ನೆಲಹಿಡಿದು ಆಕ್ರಂದನ ಮಾಡತೊಡಗಿತು.

ಇದರ ಅರ್ಥ ಸ್ಪಷ್ಟವೇ ಇತ್ತು. ಮೊಲೆಹಾಲಿಗೂ ಪ್ರೀತಿಗೂ ಸಂಬಂಧವಿಲ್ಲ. ಮೆತ್ತನ್ನ ಬೆಚ್ಚನ್ನ ಮೈಯ ಸಂಪರ್ಕವೇ ಮರಿಗಳಿಗೆ ಸೌಖ್ಯವನ್ನು ಮಾತ್ರವಲ್ಲ ಧೈರ್ಯವನ್ನು ಕೂಡ ಕೊಡುತ್ತದೆ. ಅದೇ ಪ್ರೀತಿ—ಅವಲಂಬನೆಗಳ ಆಧಾರ. ಇದರಿಂದ ವಂಚಿತವಾದ ಮರಿ ಮುಂಗಾಣದಂತಾಗಿ ತ್ರಾಸವನ್ನನುಭವಿಸುತ್ತದೆ.

ಈಗ ಸಂಶೋಧಕರ ಹತ್ತಿರ ಎರಡು ತರಹದ ಮರಿಮಂಗಗಳು ಅಣಿಯಾಗಿದ್ದವು. ಒಂದು, ಕೇವಲ ಬಾಟಲಿ ಹಾಲಿನಿಂದ ಸಾಕಿದ, ತಂತಿ ಪಂಜರದಲ್ಲಿ ಬೆಳೆದ ಮರಿಗಳು; ಇನ್ನೊಂದು, ಕೃತಕ ತಾಯಂದಿರ ಸಂಸರ್ಗದಲ್ಲಿ ಬೆಳೆದವು. ಈ ಮರಿಗಳ ಮುಂದಿನ ಬೆಳವಣಿಗೆಯ ರೂಪ ಇನ್ನಷ್ಟು ಚಿತ್ತಪೇಧಕವಾಗಿತ್ತು.

ತಾಯಿಯೇ ಇಲ್ಲದೆ ಬೆಳೆದ ಮಂಗಗಳು ಹೆಚ್ಚಾಗಿ ಸಾಮಾನ್ಯ ನೈಸರ್ಗಿಕ ವಾತಾವರಣದಲ್ಲಿ ಬೆಳೆದ ಮಂಗಗಳಲ್ಲಿ ಕಾಣಿಸದ ಮಾನಸಿಕ ವಿಕೃತಿಗಳನ್ನು ತೋರಿಸಿದವು. ಅವು ಸುಮ್ಮನೆ ತಮ್ಮ ಗೂಡುಗಳಲ್ಲಿ ಶೂನ್ಯ ದೃಷ್ಟಿಯಿಂದ ನೋಡುತ್ತ ಕುಳಿತಿರುತ್ತಿದ್ದವು. ಮಂಗ ಜಾತಿಗೇ ಕುತೂಹಲ ಜಾಸ್ತಿ. ಆದರೆ ಈ ಮಂಗಗಳು ಸುತ್ತಮುತ್ತ ಕಾಣುವ ಬೇರೆ ಮಂಗಗಳಲ್ಲಿಯಾಗಲಿ ಮನುಷ್ಯರಲ್ಲಿಯಾಗಲಿ ತಿಲಮಾತ್ರವೂ ಔತ್ಸುಕ್ಯವನ್ನು ಪ್ರಕಟಿಸುತ್ತಿರಲಿಲ್ಲ. ಕೆಲ ವೇಳೆ ಮೈಗೆ ಕೈಗಳನ್ನು ಅಪ್ಪಿಕೊಂಡು ಉತ್ತೇಜತವಾಗಿ ಕುಳಿತಿರಬೇಕು. ಕೆಲವೊಮ್ಮೆಯಂತೂ ತಮ್ಮ ಮೈಯನ್ನು ತಾವೇ ಪರಚಿಕೊಂಡು ಅಥವಾ ಕಡಿದುಕೊಂಡು ರಕ್ತ ಬರುವವರೆಗೂ ಆತ್ಮದಂಡನೆ ಮಾಡಿಕೊಳ್ಳಬೇಕು. ಹುಚ್ಚರಾಸ್ಪತ್ರೆಯಲ್ಲಿ ಬಲು ಕೈಮೀರಿದ ಪ್ರಕರಣಗಳಲ್ಲಿ ಕಾಣಿಸುವ ಲಕ್ಷಣಗಳನ್ನೇ ಈ ಮಂಗಗಳ ಲಕ್ಷಣಗಳು ಬಲುವಾಗಿ ಹೋಲುತ್ತವೆ. ಇತರ ಮಂಗಗಳನ್ನು ಗೂಡಿನಲ್ಲಿ ತಂದುಬಿಟ್ಟರೆ ಅವುಗಳ ಬಗ್ಗೆ ಇವು ಏನೂ ಆಸ್ಥೆ ತಾಳುವುದಿಲ್ಲ. ಬದಲಿಗೆ ಜಗಳಕ್ಕೆ ನಿಲ್ಲುತ್ತವೆ. ಜಗಳದಲ್ಲಿ ಅವು ಯಾವಾಗಲೂ ಮುಂದೆ!

ಅನಂತರ ಈ ಗುಂಪಿನ ಒಟ್ಟು ೫೫ ಹೆಣ್ಣು ಗಂಡು ಮಂಗಗಳನ್ನು ಸಂತಾನಾಭಿವೃದ್ಧಿಗಾಗಿ ಬಿಡಲಾಯಿತು. ತಂತಮ್ಮೊಳಗೇ ಅಲ್ಲ, ನೈಸರ್ಗಿಕವಾಗಿ ಬೆಳೆದ ಸುದೃಢ ಹೆಣ್ಣು-ಗಂಡು ಮಂಗಗಳೊಡನೆ. ಮಾತೃಹೀನ ಗಂಡುಮಂಗಗಳಿಗೆಲ್ಲ ಅನುಭವಸ್ಥ ಹೆಣ್ಣುಗಳನ್ನು ಒದಗಿಸಲಾಗಿತ್ತಾದರೂ ಅವುಗಳಲ್ಲಿ ಒಂದೇ ಒಂದು ಗಂಡು ಕೂಡ ಒಂದೇ ಒಂದು ಸಲ ಕೂಡ ಸಂಭೋಗವನ್ನಾಚರಿಸಲಿಲ್ಲ. ಬದಲಿಗೆ ಹೆಣ್ಣನ್ನು ಬಡಿಯುವುದೇ ಮೊದಲಾದ ಉದ್ದಾಮ ವರ್ತನೆಗಳಲ್ಲಿ ಅವು ಮಗ್ನವಾಗಿರುತ್ತಿದ್ದವು. ಈ ಗುಂಪಿನ ಹೆಣ್ಣುಗಳ ಪೈಕಿ ಒಂದು ಮಾತ್ರ, ಅದೂ ಅದಕ್ಕೆ ಜೊತೆಗೂಡಿದ ಗಂಡಿನ ಯತ್ನದ ಫಲವಾಗಿ ಒಂದು ಮರಿಯನ್ನು ಹಡೆಯಲು ಸಮರ್ಥವಾಯಿತು. ಈ ಗುಂಪಿನ ಮಂಗಗಳಲ್ಲಿ ಕಾಮೋದ್ರೇಕ ಆಗಲಿಲ್ಲೆಂದಲ್ಲ; ಆದರೆ ಸಂಗಡಿಗ ಮಂಗನೊಡನೆ ಸ್ನೇಹದಿಂದಿರುವುದಕ್ಕೇ ಅವುಗಳಿಗೆ ಗೊತ್ತಿರಲಿಲ್ಲವಾದ್ದರಿಂದ ಅವುಗಳಿಗೆ ಸ್ವಾಭಾವಿಕ ಸಂಯೋಗ ಶಕ್ತಿಯೇ ಇರಲಿಲ್ಲ.

ಇನ್ನು ಯಾಂತ್ರಿಕ ತಾಯಂದಿರನ್ನು ಹೊಂದಿದ ಮಂಗಗಳ ಅವಸ್ಥೆ ಹೇಗಾಯಿತು? ಅವುಗಳ ಪ್ರಾರಂಭದ ಚರ್ಯೆಯಿಂದ ಅವು ಸ್ವಾಭಾವಿಕ ಜೀವಿಗಳಾಗಿಯೆ ಬೆಳೆದಾವೆಂಬ ಊಹೆಗೆ ಎಡೆಯಿತ್ತು. ಆದರೆ ಅವುಗಳ ಸ್ಥಿತಿ ಮಾತೃಹೀನ ಮಂಗಗಳಿಗಿಂತ ನಸುವೆ ಚೆನ್ನಾಗಿತ್ತಷ್ಟೇ. ಅವೂ ಬೆಳೆದಾಗ ಅದೇ ಶೂನ್ಯ ದೃಷ್ಟಿಯಿಂದ ದಿಟ್ಟಿಸುತ್ತ ಕೂಡ್ರುವ ಮತ್ತು ಆತ್ಮದಂಡನೆ ಮಾಡಿಕೊಳ್ಳುವ ಪ್ರವೃತ್ತಿ ಅವುಗಳಲ್ಲಿ ಕಾಣಬಂತು. ಆದರೆ ಅವುಗಳ ಪ್ರವೃತ್ತಿ ಮಾತೃಹೀನ ಮಂಗಗಳಷ್ಟು ಉಗ್ರವಾಗಿರಲಿಲ್ಲ. ಪ್ರಾಯಕ್ಕೆ ಬಂದ ಮೇಲೆ ಅವುಗಳಲ್ಲಿಯೂ ಲೈಂಗಿಕ ಅಸಾಮರ್ಥ್ಯ ಪ್ರಕಟಕ್ಕೆ ಬಂತು. ಲೈಂಗಿಕ ಉತ್ತೇಜನೆಯ

ಲಕ್ಷಣಗಳು ಕಾಣಿಸಿದವಾದರೂ ಯಾವ ಗಂಡು ಮಂಗವೂ ಸ್ವಾಭಾವಿಕ ಲೈಂಗಿಕ ಚಟುವಟಿಕೆ ತೋರಲಿಲ್ಲ. ಕುಶಲ ಗಂಡುಗಳ ಸಂಗಡ ಬಹು ಕಾಲ ಬಿಟ್ಟ ಮೇಲೆ (ಯಾಂತ್ರಿಕ ತಾಯನ್ನು ಪಡೆದಂಥ) ಹೆಣ್ಣು ಮಂಗಗಳಲ್ಲಿ ಮೂರಕ್ಕೆ ಮಾತ್ರ ಮರಿಗಳು ಹುಟ್ಟಿದವು.

ತಾಯ್ತನವನ್ನು ಹೊಂದಿದ ಈ ನಾಲ್ಕು ಹೆಣ್ಣು ಮಂಗಗಳ (ಮಾತೃಹೀನ ೧, ಕೃತಕ ಮಾತೃಯುಕ್ತ ೩) ಮುಂದಿನ ಕಥೆಯೂ ಹೃದಯವಿದ್ರಾವಕವಾಗಿದೆ. ಮರಿಗಳನ್ನು ಪಡೆದರೂ ಅವುಗಳಿಗೆ ತಮ್ಮ ಮರಿಗಳ ಮೇಲೆ ಏನೂ ಆಸಕ್ತಿಯಿರಲಿಲ್ಲ. ಸ್ವಾಭಾವಿಕ ಅವಸ್ಥೆಯಲ್ಲಿ ಬೆಳೆದು ತಾಯ್ತನವನ್ನು ಪಡೆದ ಹೆಣ್ಣು ಮಂಗಗಳು ತಮ್ಮ ಮರಿಗಳನ್ನು ಯಾರಾದರೂ ಮುಟ್ಟ ಬಂದರೆ ಉಗ್ರರೂಪ ಧರಿಸಿ ಕಡಿಯಲು ಬರುತ್ತವೆ. ಆದರೆ ಈ ಹೆಣ್ಣು ಮಂಗಗಳು ತಮ್ಮ ಮರಿಗಳನ್ನು ಯಾರು ಒಯ್ದರೂ ಎಷ್ಟು ಹೊತ್ತು ಇಟ್ಟುಕೊಂಡರೂ ಏನೇನೂ ಪ್ರತಿಕ್ರಿಯೆ ತೋರಿಸಲಿಲ್ಲ. ತಮ್ಮ ಮರಿಗಳನ್ನು ಕ್ರೂರವಾಗಿ ಹೊಡೆಯುವುದು, ಬೆನ್ನ ಮೇಲೇರಬಂದಾಗ ಕೆಡವಿ ನೆಲಕ್ಕೆ ಒತ್ತಿ ಮೆಟ್ಟಿ ನೋಯಿಸುವುದೇ ಮೊದಲಾದ ಅಸ್ವಾಭಾವಿಕ ಚರ್ಯೆಗಳನ್ನು ಅವು ತೋರಿಸಿದವು.

ಮೊದಲಿನ ಮಾತೃಹೀನ ಮರಿಗಳನ್ನು ಒಂಟಿಯಾಗಿ ಬೆಳೆಸಲಾಗಿತ್ತು. ಮರಿಗಳಿಗೆ ಸಮವಯಸ್ಸಿನ ಇತರ ಮರಿಗಳನ್ನು ಜತೆಗೆ ಕೊಟ್ಟರೆ ಹೇಗಾದೀತು ಎಂದೂ ನೋಡಿದರು. ಆದರೆ ಮಾತೃಹೀನ ಮರಿ ಮಂಗಗಳಿಗೆ ಇತರ ಮರಿಗಳ ಸಂಪರ್ಕವೊದಗಿಸಿದರೂ ದೊಡ್ಡದಾದಾಗ ಅವುಗಳ ಪ್ರವೃತ್ತಿಯಲ್ಲಿ ವಿಶೇಷ ಅಂತರವಾಗುವುದಿಲ್ಲ. ಮರಿಗಳು ಒಂದನ್ನೊಂದು ಬಿಗಿಯಾಗಿ ಅಪ್ಪಿಕೊಂಡು ಕಾಲ ಕಳೆಯುತ್ತವೆ. ಅರ್ಥಾತ್ "ಪರಸ್ಪರ ಮಾತೃತ್ವ"ವನ್ನು ಮಾಡಿಕೊಳ್ಳುತ್ತವೆ. ಆದರೆ ಅವು ಕೂಡ ಬೆಳೆದಾಗ ಅದೇ ಶೂನ್ಯ ದೃಷ್ಟಿ, ಅವೇ ವಿಕೃತ ಮನೋಭಾವಗಳು ಕಾಣಿಸಿಕೊಳ್ಳುತ್ತವೆ. ಬಹುಶಃ ಅವುಗಳ ಲೈಂಗಿಕ ಪ್ರವೃತ್ತಿಗಳೂ ವಿಕೃತಗೊಳ್ಳಬಹುದೆಂದು ನಂಬಲಾಗಿದೆ.

ಈ ಪ್ರಯೋಗಗಳ ಫಲಿತಾಂಶದ ಅರ್ಥ ಸ್ಪಷ್ಟವೇ ಇದೆ. ಬಾಲ್ಯದಲ್ಲಿ ಸ್ವಾಭಾವಿಕ ಮಾತೃಪ್ರೇಮ ಮತ್ತು ಮಾತೃಸಂಪರ್ಕದಿಂದ ವಂಚಿತವಾದ ಮಂಗಗಳು ಸ್ವಾಭಾವಿಕ ವ್ಯಕ್ತಿಗಳಾಗಿ ಬೆಳೆಯುವುದಿಲ್ಲ. ಅವುಗಳ ಬುದ್ಧಿ ವಿಕೃತವಾಗುತ್ತದೆ. ಜೀವನದಲ್ಲಿ ರಸವಿರುವುದಿಲ್ಲ. ಕೂಡಿ ನಡೆಯುವುದರಲ್ಲಿ ಅವು ಅಯಶಸ್ವಿಯಾಗುತ್ತವೆ. ಅವುಗಳಲ್ಲಿ ನೈಸರ್ಗಿಕ ಸಂತಾನಾಭಿವೃದ್ಧಿ ಪ್ರವೃತ್ತಿಗಳು ಕೂಡ ಮಸುಳಿಸಿ ಹೋಗುತ್ತವೆ.

ಮಂಗಗಳಿಗೆ ಅನ್ವಯಿಸಿದ್ದು ಮನುಷ್ಯರಿಗೂ ಅನ್ವಯಿಸಲಿಕ್ಕಿಲ್ಲೆಂದು ನಂಬಲು ಆಧಾರವಿಲ್ಲ. ತಾಯಂದಿರಿಗೆ ಮತ್ತು ಸಾಮಾಜಿಕ ಚಿಂತಕರಿಗೆ ಇದರಲ್ಲೊಂದು ಪಾಠವಿಲ್ಲವೇ ? *



ಸೊಗಡು–ಸೊಬಗು

ದರುಶನದ ಚಿರದಾಹ; ಕಂಡೊಡೆ ಮನಃಕ್ಷೋಭೆ
ಪರಿತಾಪವೀವ ಚೆಲುವಿಕೆಯು ಸೊಗಡು
ಇತ್ತು ಚಿತ್ತಕೆ ಶಾಂತಿಯಿತ್ತು ತಿಳಿವಿಗೆ ಕಾಂತಿ
ನಿಜ ಸೌಖ್ಯವೀವ ಚಲುವಿಕೆಯೆ ಸೊಬಗು !

—ದಲಕ.

ಆತನಿಗೆ ಬಂಧಮುಕ್ತ ಶಿಲ್ಪದ
ಹಂಬಲವಾಗಿತ್ತು

ದಿಗಂಬರ

ಮೂಲಮರಾಠಿ: ನಾರಾಯಣರಾವ್ ಗೋರೆ
ಕನ್ನಡಕ್ಕೆ: ರಾಮಚಂದ್ರ ಕೊಟ್ಟಲಗಿ



**ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದ-
ಶಾಂಗುಲಮ್ ।
ಪುರುಷ ಏವೇದಂ ಸರ್ವಂ ಯದ್‌ಭೂತಂ
ಯಚ್ಚ ಭವ್ಯಮ್ ॥
ಉತಾಮೃತತ್ವಸ್ಯೇಶಾನೋ ಯದನ್ನೇನಾತಿ
ರೋಹತಿ ॥**

ಅರಿಶಿನೇಮಿ ಜಾತಿಯಿಂದ ಕಲ್ಕುಟಿಗ. ಅರಸಿಕೆರೆ ಗ್ರಾಮದ ದಕ್ಷಿಣ ದಿಶೆಯಲ್ಲಿ ಬೀಡು ಬಿಟ್ಟುಕೊಂಡು ಒಂದು ಕನಿಷ್ಠವರ್ಗದ ಜನ ವಾಸಿಸುತ್ತಿದ್ದರು. ಅವನೂ ಅದೇ ಬೀದಿಯಲ್ಲಿ ಇರುತ್ತಿದ್ದ. ಮಣ್ಣುಗೋಡೆಯ ಆಸರೆಯಲ್ಲಿ ನಾಲ್ಕಾರು ಗಡಿಗೆ-ಮಡಿಕೆಗಳನ್ನು ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ. ಮನೆಯ ಮುಂದೆ ಅಂಗಳದ ಒಂದು ಚೂರು ಪಟ್ಟಿ. ತಾಳಿಯೆಲೆಯಿಂದ ಹೆಣೆದ ಒಂದು ಚಾಪೆಯನ್ನು ಹಾಸಿ ಅದರ ಮೇಲೆ ಅರಿಶಿನೇಮಿ ಕುಳಿತಿದ್ದ. ಕಳೆದ ಎಂಟು ದಿನಗಳಿಂದಂತೂ ಅವನು ಯಾಕೋ ವಿಮನಸ್ಕನಾಗಿದ್ದಾನೆ. ತೃತೀಯೆಯ ಬೆಳಗುಜಾವದಲ್ಲಿ ಅವನನ್ನು ಹುಡುಕಿಕೊಂಡು ಅಮಾತ್ಯ ಪ್ರಮುಖ ಚಾವುಂಡರಾಯನ ಕಡೆಯ ಸ್ವಾರರು ಬಂದಾಗಿನಿಂದ—ಅರಿಶಿನೇಮಿಯ—ಆ ಊರಿನ ಜನತೆಯ ಶಾಂತತೆ ಕದಡಿಹೋಗಿದೆ.

ರಾಯಮಲ್ಲನ ಆಸ್ಥಾನದಿಂದ ಬೇರೆ ಶ್ರೀಮಂತರಿಂದ ಅವನಿಗೆ ಕರೆ ಬರುವ ವಿಷಯವೇನೂ ದೊಡ್ಡದಲ್ಲ. ಯಾರೋ ಧನಿಕರ ಹರ್ಮ್ಯಗಳನ್ನು ಕಟ್ಟಿಸುವುದಾಗಲಿ—ರಾಜ-ಅಮಾತ್ಯರ ಪ್ರಸಾದ ನಿರ್ಮಾಣ ಕಾರ್ಯವಿರಲಿ— ಅರಿಶಿನೇಮಿಗೆ ಆಮಂತ್ರಣ ಬಂದಂತೆಯೇ ಸರಿ. ಕಲ್ಲು ಅವನ ಕೈಯಲ್ಲಿ ಮೇಣದಂತೆ ಮೃದುವಾಗುತ್ತಿತ್ತು. ಅವನ ಕೊಡತಿ-ಉಳಿಯ ಪ್ರಭಾವದಿಂದ ನಿರ್ಮಾಣವಾಗುವ ಅಮರ ಶಿಲ್ಪಕಾವ್ಯವನ್ನು ಕಂಡು ಚಂದನದಲ್ಲಿ-ಹಸ್ತಿದಂತದಲ್ಲಿ ಚಿತ್ರರೇಖೆ ಬಿಡಿಸುವ ಮೈಸೂರಿನ ಕಲಾವಿದರೂ ಕೂಡ ಬೆರಗಾಗುತ್ತಿದ್ದರು. ಆದರೆ ಆ ಮಾತಿಗೆ ಹತ್ತು-ಹನ್ನೆರಡು ವರುಷಗಳಾದವು. ಶ್ರುತಕೇವಲಿ ಭದ್ರಬಾಹುವಿನ ಬಸದಿಯನ್ನು ಪೂರೈಸಿ, ಅರಿಶಿನೇಮಿ ತನ್ನ ಕೊಡತಿ-ಉಳಿಯನ್ನು ಮುಟ್ಟದೆ ಹಾಗೇ ಇಟ್ಟಿದ್ದಾನೆ. ಐದು ವರುಷಗಳ ಕೆಳಗೆ ದ್ವಾರಸಮುದ್ರದ ಪ್ರಖ್ಯಾತ ಶ್ರೇಷ್ಠಿ ವಿರೂಪಾಕ್ಷ ಅರಿಶಿನೇಮಿಯ ಮನೆ ಬಾಗಿಲಿಗೆ ತಾನಾಗಿಯೇ ಬಂದು "ಸಪ್ತ ಅಂಕಣದ ಪ್ರಾಸಾದ ನಿರ್ಮಾಣ ಕಾರ್ಯವಿದೆ—ಬಾ" ಎಂದು ಬೇಡಿಕೊಂಡರೂ ಈ ಶಿಲ್ಪರ್ಷಿ ಮಿಸುಕಲಿಲ್ಲ. "ನಿಮ್ಮಂಥ ಧನಿಕರ ಮಂದಿರ ರಾಜ-ಮಹಾರಾಜರ ಮಹಲು-ಹರ್ಮ್ಯ ನಿರ್ಮಿಸಿ-ನಿರ್ಮಿಸಿ ನನಗೆ ಮೈಲಿಗೆಯಾಗಿದೆ. ಇನ್ನು ಮುಂದೆ ನಾನು ಕೊಡತಿ-ಉಳಿ ಸ್ಪರ್ಶಿಸಲಾರೆ" ಎಂದು ಸ್ಪಷ್ಟವಾಗಿ ಹೇಳಿಕಳಿಸಿದ.

ನಿಜವಾಗಿಯೇ ಅವನ ಅಖಂಡ ಜೀವನ ಶಿಲಾ ಸಹವಾಸದಲ್ಲಿ ಕಳೆದಿತ್ತು. ೧೦-೧೩ ವರುಷದವನಿದ್ದಾಗಿನಿಂದಲೇ ಅವನು ಈ ವೃತ್ತಿಗಿಳಿದಿದ್ದ. ಒಂದೇ ಬಗೆಯ ಮನೆ—ಒಂದೇ ರೀತಿಯ ಗೋಪುರ—ಬಸದಿ; ಮಂದಿರಗಳ ರೀತಿಯೂ ಅದೇ. ಭೇದವಿಷ್ಟೆ--ಅಳತೆ, ಆಕಾರದಲ್ಲಿ ಮಾತ್ರ, ಕೇವಲ ಮಂಟಪಗಳ ಸಂಖ್ಯೆಯಲ್ಲಿ ಮಾತ್ರ. ಬಸದಿ ಮಂದಿರಗಳನ್ನು ಕಟ್ಟುತ್ತ-ಕಟ್ಟುತ್ತ ಗರ್ಭಾಂಕದ ವರೆಗೆ ಹೋಗಿ ತಲುಪಿದಾಗ ಅವನಿಗೇ ತನ್ನ ಕೃತಿಯ ಬಗ್ಗೆ ನಗೆ ಬರುತ್ತಿತ್ತು. "ಪ್ರಭು, ನಿನಗೆ ಈ ನಿಬಿಡ ತಮದಲ್ಲಿ ಇಂಥ ಕತ್ತಲೆಯ ಆಸ್ಥಾನದಲ್ಲಿ-ಉಸಿರುಗಟ್ಟಿದಂತೆ ಆಗುವುದಿಲ್ಲವೇ? ದಿನ ಬೆಳಗೂ ತಾವು ಮಾಡುವ ಪಾಪಕೃತಿ ನಿನಗೆ ಕಾಣಬಾರದೆಂಬ ಭಾವನೆಯಿಂದ, ನಿನ್ನ ಭಕ್ತವೃಂದ ನಿನಗೆ ಈ ಜೀವಂತ ಸೆರೆಯನ್ನು ನಿರ್ಮಿಸಲಿರುವುದೋ ಯಾರು ಬಲ್ಲರು?" ಅರಿಶಿನೇಮಿ ಅಸ್ವಸ್ಥನಾಗುತ್ತಾ ನಡೆದ.

ಹೊಟ್ಟೆಯ ಪಾಡಿಗಾಗಿ ಕರಣಿಕ ಲೆಕ್ಕಣಿ ನಡೆಸುತ್ತಾನೆ. ಕುಂಬಾರ ಚಕ್ರ ತಿರುಗಿಸುತ್ತಾನೆ. ವೇಶ್ಯೆ ತನ್ನ ಸೌಂದರ್ಯ ತೇಯುತ್ತಾಳೆ. ತಾನಾದರೂ ಇವರಿಗಿಂತ ಯಾವುದರಲ್ಲಿ ಕಡಿಮೆ? ಇರುವೆಗಳ ರಾಣಿ ಸತತ ಸಂತಾನ ದಾನ ಮಾಡುವಂತೆ ನನ್ನದೂ ಗತಿಯಾಗಿದೆ. ನನ್ನ ರೀತಿಯೆಂಥ ಕ್ಷುದ್ರವಾಗಿದೆ! ಜೀವಮಾನದಲ್ಲಿ ನಾನು ಅನೇಕ ಮಂದಿರ ಗೋಪುರ ಬಸದಿಗಳನ್ನು ಕಟ್ಟಿದೆ. ಬಿಲ್ವಪತ್ರ ಬಿಡಿಸುವ ನನ್ನ ಕೌಶಲ್ಯಕ್ಕೆ ಜನ ಬೆರಗಾಗಿದ್ದಾರೆ. ಒಂದು ಕಬ್ಬಿನ ಗೊನೆ ಹೊರಬಂದಾಗ ಅದರಿಂದ ಚಿಮ್ಮುವ ಜೀವರಸ ಲಾವಣ್ಯ ನನ್ನ ಶಿಲ್ಪದಲ್ಲಿ ಎಂದಾದರೂ ಪ್ರಕಟವಾಗಿದೆಯೇ? ನನ್ನ ಕಲ್ಲು ಜೋಡಿಸುವ ಕೈಚಳಕದಲ್ಲಿ ಪ್ರಸ್ತಾರಗಳನ್ನು ವ್ಯವಸ್ಥಿತವಾಗಿ ಹೊಂದಿಸುವಲ್ಲಿ ಎಲೆಗೆ ಹಚ್ಚುವಷ್ಟು ಸುಣ್ಣದ ಅವಶ್ಯಕತೆಯೂ ಎನ್ನಿಸುವುದಿಲ್ಲ. ಆದರೆ ಮಧುಮಕ್ಷಿಕೆಗಳು ರಚಿಸಿದ ಜೇನುಹುಟ್ಟಿನಲ್ಲಿಯ ಮೇಣದ ಲೀಲಾಜಾಲಂದ್ರ ಮನೆಮನೆಗಳ ಕುಶಲ ಶಿಲ್ಪಚಾತುರಿ ನನಗೆ ಸಾಧಿಸಿದೆಯೆ? ಮಂದಿರ-ಗೋಪುರಗಳ ಮೇಲೆ ನೃತ್ಯವಾದನ ತಲ್ಲೀನ ನರ-ನಾರಿಯರನ್ನು ರಣ ಕೇಳಿಯಲ್ಲಿ ಮೈಮರೆತ ವೀರರನ್ನು ರತಿಕ್ರೀಡಾತುರರಾದ ಪ್ರೇಮಿಯುಗಲಗಳನ್ನು ವಾಯುವೇಗದಿಂದ ಧಾವಿಸುವ ಅಶ್ವಗಳನ್ನು ತೊತ್ತುಳಿಗೊಂಡ ಗಜಶ್ರೇಷ್ಠಗಳನ್ನು ಆಮ್ರ ಆಲ ನಾರೀಕೇಳ ವೃಕ್ಷಗಳನ್ನು ಬಿಡಿಸಿದ್ದೇನೆ. ಆದರೆ ಚರಾಚರ ಸೃಷ್ಟಿಯಲ್ಲಿಯ ವಸ್ತುಗಳ ಮುಂದೆ ನನ್ನ ಕೃತಿ ಎಂಥ ಹೊಸ ತರಗತಿಯದೆಂದೆನಿಸುತ್ತದೆ! ನಾನು ಗಗನಚುಂಬಿಯಾದ ಗೋಪುರ

ನಿರ್ಮಿಸಿದರೇನಾಯಿತು? ಆದರೆ ಆಕಾಶ ಅದೆಷ್ಟು ಎತ್ತರವಾಗಿದೆ, ವಿಶಾಲವಾಗಿದೆ. ಅಪರಂಪಾರವಾದ ಸೃಷ್ಟಿ, ಪೃಥ್ವಿಯ ಆಕರ್ಷಣ, ಉಷಾ-ಸಂಧ್ಯೆಗಳ ಸೌಂದರ್ಯದಿಂದ ನನ್ನ ಮನಸ್ಸು ಬೀಸುತ್ತದೆ. ಆದರದನ್ನು ವ್ಯಕ್ತಪಡಿಸಲಾರೆ. ಈ ಚರಾಚರವನ್ನು ನೋಡಿ ಅಪತ್ಯಾಕಾಂಕ್ಷಿಯಾದ ಸ್ತ್ರೀ ಪುರುಷನೊಡನೆ ಸಂಲಗ್ನಳಾಗುವಂತೆ ನಾನು ಈ ದೃಶ್ಯದೊಡನೆ ಒಂದುಗೂಡುತ್ತೇನೆ. ಸೂರ್ಯಬಿಂಬ ದರ್ಶನ ಮಾತ್ರದಿಂದ ಕುಂತಿ ಗರ್ಭಧಾರಣೆ ಮಾಡಿದಳು. ಯಾವುದೋ ಅದ್ಭುತ ಕಲ್ಪನೆಯಿಂದ ನನ್ನ ಮನಃಕೋಶದಲ್ಲಿಯೂ ಗರ್ಭಸ್ಥಾಪನೆಯಾಗುವಂತೆ ಭಾಸವಾಗುತ್ತದೆ. ನನ್ನ ಅಂಗಾಂಗ ಚಲಿಸುತ್ತದೆ. ನನ್ನ ಕಲ್ಪನಾಗರ್ಭ ಪಾತ್ರ ನಿಲ್ಲದೆ ನೀರಾಗುತ್ತದೆ. ಅದು ಆಕಾರ ಪಡೆಯುತ್ತಿಲ್ಲ. ಬರಿದಾದ ಮನಃಕೋಶ ಮಾತ್ರ ಭಣಭಣಗುಟ್ಟುತ್ತದೆ. ದುಃಖ ಪೂರ್ಣವಾಗುತ್ತದೆ. ತಾವೇ ನಿರ್ಮಿಸಿದ ಹಸಿ ಮಣ್ಣಿನ ಆನೆ-ಕುದುರೆಯ ಮೂರ್ತಿಗಳನ್ನು ಚಿಕ್ಕ ಮಕ್ಕಳು ಮುರಿದು ಪುಡಿಪುಡಿ ಮಾಡಿ ಒಗೆಯುವಂತೆ ನಾನು ನನ್ನ ಕೃತಿಗಳನ್ನು ಧೂಳಿ ಧೂಸರವಾಗಿ ಮಾಡಬೇಕೆಂದೆನಿಸುತ್ತದೆ"......

ಶ್ರುತಿಕೇವಲಿ ಭದ್ರಬಾಹುವಿನ ಬಸದಿಯನ್ನು ಪೂರೈಸಿದ ನಂತರ ಅರಿಶಿನೇಮಿ ನಿಜವಾಗಿಯೂ ತನ್ನ ಕೊಡತಿ ಉಳಿಯನ್ನು ಕಟ್ಟಿ ಮೂಲೆಗೆಸೆದ. ಆ ಬಸದಿಯನ್ನು ಕೊರೆಯುವಾಗ ತನಗರಿಯದಂತೆಯೇ ಯಾವುದೋ ಪಾಪಘಟನೆ ನಡೆದಿರಬೇಕು. ಅದಕ್ಕಾಗಿ ಅರಿಶಿನೇಮಿಗೆ ತನ್ನ ಕಲಾಕುಶಲತೆಯ ವಿಸ್ಮೃತಿಯಾಗಿದೆಯೆಂದು ಜನರಾಡಿಕೊಳ್ಳತೊಡಗಿದರು. ಇಂಥ ಪ್ರಚಂಡ ಕೃತಿ ನಿರ್ಮಾಣದ ನಂತರ ಅದು ಶಿಲ್ಪಿಕನನ್ನು ಬಾಧಿಸದೆ ಬಿಡದು ಎಂದು ಕೆಲವರೆಂದರು. ಆಗ ತಮಗೆ ತಿಳಿದಂತೆ ಜನರು ಆಡಿಕೊಂಡಿದ್ದರು. ಆ ಮಾತಿಗೆ ಇಂದು ಹತ್ತು ವರುಷವಾಗುತ್ತಾ ಬಂದಿದೆ. ಸಂಪಾದಿಸಿದ ಸರ್ವವಿತ್ತವನ್ನೂ ಅರಿಶಿನೇಮಿ ಜೂಜಾಟದಲ್ಲಿ ಕುಡಿಯುವುದರಲ್ಲಿ ಹೋಮಿಸಿಬಿಟ್ಟಿದ್ದ. ಈಗವನ ತಲೆ ನರೆತಿತ್ತು. ಮುಖದ ಮೇಲಿನ ಗಡ್ಡ ಬಿಳಿ ಬಣ್ಣಕ್ಕೆ ತಿರುಗುತ್ತಲಿತ್ತು. ಭುಜಬಲದ ಶಕ್ತಿಗುಂದಿ ಸ್ನಾಯುಗಳು ಜೋಲುಬಿದ್ದಿದ್ದವು. ಉಳಿ-ಕೊಡತಿಗಳ ಅನೇಕ ದಿನಗಳ ಸ್ಪರ್ಶವಿಲ್ಲದೆ ಕೈಪಂಜು ನೇಕಾರ ಹೆಣ್ಣುಮಕ್ಕಳ ಕೈಗಳಂತೆ-ನಿರ್ಜೀವ-ನಿಃಸತ್ವವಾಗಿ ತೋರತೊಡಗಿದ್ದವು. ಸಿಂದಿಯ ಮಡಿಕೆಯನ್ನು ಮುಂದಿರಿಸಿಕೊಂಡು ಅವನು ಬೇರೆ ಯಾವ ಕೆಲಸಕಾರ್ಯವಿಲ್ಲದೆ ಅಂಗಣದಲ್ಲಿ ಕುಳಿತು ದಿನಗಳೆಯುತ್ತಿದ್ದ. ತಾನಾಗಿಯೇ ಅವನು ಯಾರ ಕೂಡ ಮಾತನಾಡುತ್ತಿರಲಿಲ್ಲ. ತುಂಬಿದ ಮನೆಯನ್ನು ತೊರೆದು ಲಕ್ಷ್ಮಿ ಹೊರಟು ಹೋದಂತೆ ಅರಿಶಿನೇಮಿಯ ಕಲಾಲಕ್ಷ್ಮಿ ಅವನನ್ನು ಬಿಟ್ಟು ಹೋಗಿದ್ದಾಳೆ. ಇನ್ನು ಮೇಲೆ ಅವನಿಂದ ಯಾವ ಕೃತಿಯೂ ಮೈದಾಳಲಾರದು. ಎಂದು ಜನರಾಡಿಕೊಳ್ಳುತ್ತಿರುವಾಗಲೇ ತಲಕಾಡಿನಿಂದ ಅಮಾತ್ಯ ಚಾವುಂಡರಾಯ ಪ್ರೇಷಿತ ದೂತರು ಬಂದು ಅರಿಶಿನೇಮಿಯನ್ನು ವಿಚಾರಿಸಹತ್ತಿದರು. ಅದರಿಂದ ಜನತೆಗೆ ವಿಸ್ಮಯ. ದೂತನೊಡನೆ ಅವನು ತಲಕಾಡಿಗೆ ಹೋಗಿ ೧೫ ದಿನಗಳ ನಂತರ ಮರಳಿಬಂದಾಗ ಅವನು ಇನ್ನೂ ಗಾಬರಿಗೊಂಡಂತೆ ಕಂಡ. ಗೊಮ್ಮಟ ಮೂರ್ತಿಯ ನಿರ್ಮಾಣಕಾರ್ಯವನ್ನು ಅವನಿಗೆ ಒಪ್ಪಿಸಲಾದ ವಾರ್ತೆ ಸರ್ವತ್ರ ಹರಡಿತ್ತು. ಆ ಸುದ್ದಿಯನ್ನು ಕೇಳಿ ಅವನ ಕೈಕೆಳಗೆ ದುಡಿದ ಶಿಲ್ಪಿಗಳು ಅರಸಿಕೇರಿಯಲ್ಲಿ ಬಂದು ಸೇರಿದ್ದರು. ಅವರೆಲ್ಲರೂ ಅವನನ್ನು ಸುತ್ತುಗಟ್ಟಿ ಕುಳಿತು ಆದೇಶದ ದಾರಿಕಾಯುತ್ತಿದ್ದರೂ ಅವನು ಒಂದು ತುಟಿ ಎರಡು ಮಾಡಲಿಲ್ಲ. ಆದರೆ ಅವನ ಕಣ್ಣಿನಲ್ಲಿಯ ಅಸ್ಥಿರತೆ ಮಾಯವಾಗಿ ವಿದ್ಯು ಮಿಂಚು ಚಮಕಿಸುತ್ತಿತ್ತು. ಮುಖವಲ್ಲಿಯ ನಿರ್ಜೀವತೆಯುಳಿದು ತುಟಿಯ ಮೇಲೆ ಮೃದುಹಾಸ್ಯ ಮಿನುಗುತ್ತಿತ್ತು.

"ಅಮಾತ್ಯಸ್ವಾಮಿಗಳು ಏನಪ್ಪಣೆ ಕೊಡಿಸಿ

ದಪ?" ಅಂಜುತ್ತಂಜುತ್ತ ಹಾಸನದ ತಿಮ್ಮಣ್ಣ ಕೇಳಿದ.

ಎದುರಿಗಿದ್ದ ಮದಿರಾಪಾತ್ರೆಯ ಮುಖದ ಮೇಲೆ ಕೈಯಿರಿಸುತ್ತ ಅರಿಶಿನೇಮಿ ಹೇಳಿದ. "ಮಂದಿರ ನಿರ್ಮಿಸಲು ಅಪ್ಪಣೆಯಾಗಿದೆ."

ತಮಗೆ ಬಂದ ವಾರ್ತೆಯಲ್ಲಿ ತಥ್ಯಾಂಶ ಇತ್ತೆಂಬ ಭಾವನೆಯಿಂದ ಸುತ್ತು ನೆರೆದ ಜನರ ಕಡೆಗೆ ದೃಷ್ಟಿಕ್ಷೇಪ ಮಾಡಿ ತಿಮ್ಮಣ್ಣ ಮತ್ತೆ ಕೇಳಿದ. "ಎಷ್ಟು ಕಂಭಗಳ ಮಂದಿರ? ದ್ವಾರಗಳೆಷ್ಟು? ಮಂಟಪವೆಷ್ಟು?."

ಅರಿಶಿನೇಮಿ ತೀವ್ರ ಉತ್ತರಿಸಲಿಲ್ಲ. ಮದಿರಾಪಾತ್ರೆಯ ಮುಖದ ಮೇಲೆ ಇರಿಸಿದ ಕೈಬೆರಳಿನ ನಖಾಗ್ರದ ಕಡೆಗೆ ನೋಟ ಸ್ಥಿರೀಕರಿಸಿ ಹೇಳಿದ. "ಈ ಮಂದಿರಕ್ಕೆ ಕಂಭ-ದ್ವಾರ-ಮಂಟಪ-ಯಾವುದೂ ಇಲ್ಲ."

ಅರಿಶಿನೇಮಿ ಕಳೆದ ಅನೇಕ ದಿನಗಳಿಂದ ವಿಚಿತ್ರ ಮನುಷ್ಯನಾಗಿದ್ದನೆಂಬ ಕಲ್ಪನೆ ತಿಮ್ಮಣ್ಣನಿಗಿದ್ದರೂ ಈ ಉತ್ತರ ಮಾತ್ರ ಅವನ ಕಲ್ಪನಾಶಕ್ತಿಯನ್ನು ಮೀರಿದ್ದೆಂದೆನಿಸಿತು. ಅರಿಶಿನೇಮಿ ನಗೆಯಾಡುತ್ತಿರಲಿಕ್ಕಿಲ್ಲವಲ್ಲ. ವೃದ್ಧ ತಿಮ್ಮಣ್ಣ ಈ ಉತ್ತರ ತನಗೆ ಅಪಮಾನಕರವೆಂದೇ ಭಾವಿಸಿದ. ಅರಿಶಿನೇಮಿ ಶಿಲಾಕಲ್ಪದಲ್ಲಿ ಅದ್ವಿತೀಯ ಕೀರ್ತಿ ಸಂಪಾದಿಸಿದರೇನಾಯಿತು, ತನ್ನ ವಯೋಮಾನವನ್ನು ಕುರಿತಾದರೂ ಮಾತನಾಡುವಾಗ ಗೌರವ ಬೇಡವೇ? ಈ ವಿಚಾರದ ಸುಳಿಯಲ್ಲಿ ಸಿಲುಕಿ ಅವನು ಸುಮ್ಮನೇ ಕುಳಿತ: ಹಳೇಬೀಡಿನ ಮಲ್ಲಿಕಾರ್ಜುನ ವಿಚಾರಿಸಿದ: "ಅಂದರೇನು?"

"ಅಂದರೆ? ನಾನು ಆಗಲೇ ಹೇಳಿದ್ದೇ! ವಿನಾಸ್ತೂಪ– ವಿನಾದ್ವಾರ– ವಿನಾಮಂಟಪದ ಮಂದಿರ ನಿರ್ಮಿಸುವುದು" ಏಳುತ್ತೇಳುತ್ತಾ ಅರಿಶಿನೇಮಿ ನುಡಿದ. ಅಧಿಕ ಮಾತಿನ ಅವಶ್ಯಕತೆ ಇಲ್ಲವೆಂದು ಅವನ ಮಾತಿನ ಧೋರಣೆ ಸ್ಪಷ್ಟಪಡಿಸುತ್ತಿತ್ತು.

ಈ ಉತ್ತರ ಮೊದಲಿನದಕ್ಕಿಂತ ವಿಚಿತ್ರವಾಗಿತ್ತು. ಅವಹೇಳನಕಾರಿಯಾಗಿತ್ತು. ಶಿಲ್ಪಿಗಳ ಕೂಟವೂ ಹೊರಡಲು ಎದ್ದು ನಿಂತಿತು. ಮುದುಕ ತಿಮ್ಮಣ್ಣನಿಗೆ ಈ ಅವಹೇಳನ ಅಸಹನೀಯವೆನಿಸಿ ಅವನು ಕೊಂಚ ಉದ್ರೇಕಪೂರ್ವಕವಾಗಿಯೇ ನುಡಿದ. "ಆ ಮಂದಿರದಲ್ಲಿ ಮತ್ತೆ ಯಾರ ಮೂರ್ತಿಯನ್ನು ಸ್ಥಾಪಿಸುವುದು? ನಿಮ್ಮದೇ?."

ಆ ಪ್ರಶ್ನೆಗೆ ಅರಿಶಿನೇಮಿಯು ಉತ್ತರ ಕೊಡಲಿಲ್ಲ. ಅಂಗಣದಿಂದ ಮುಂದೆ ಚಾಚಿ ಚಾಚಿ ಮಲೆನಾಡಿನೆಡೆಗೆ ಪಸರಿಸುತ್ತಾ ನಡೆದ ಭೂಭಾಗದ ಕಡೆಗೆ ನೋಡಿದ ಮೇಲೆ ಹರಹಿದ ವಿಶಾಲ ಆಕಾಶದ ಕಡೆಗೆ ನೋಡಿದ. ಯಾವುದೋ ಆಕೃತಿಯನ್ನು ರೇಖಿಸುವ ಆವಿರ್ಭಾವದಿಂದ ತನ್ನೆರಡೂ ಕೈಗಳನ್ನು ಮೇಲೆತ್ತಿದ. ಮೆಲ್ಲನೆ ಕೆಳಗೆ ಇಳಿಸಿದ. ಚಕಾರ ಶಬ್ದವನ್ನಾಡದೆ ಮನೆಯೊಳಗೆ ಹೋಗಲು ಹೊರಳಿದ. ಹೊಸ್ತಿಲ ಮೇಲೊಂದು ಕಾಲಿರಿಸಿ ಹಿಂದಿರುಗಿ ಹೇಳಿದ. "ತಿಮ್ಮಣ್ಣಾ, ನಿನ್ನ ಪ್ರಶ್ನೆಗೆ ಉತ್ತರ ಒಂದು ವರುಷದ ನಂತರ ದೊರಕೀತು."

ಬೆಳಗು ಹರಿಯುವುದರೊಳಗಾಗಿ ಅರಿಶಿನೇಮಿ ಊರು ಬಿಟ್ಟು ಏಕಾಕಿಯಾಗಿ ಹೊರಟುಹೋದ ವಾರ್ತೆ ಮರುದಿನ ಅರಸಿಕೇರೆಯಲ್ಲಿ ಹರಡಿತು.

ಗ್ರಾಮತ್ಯಾಗ ಮಾಡಿದ ಒಂದು ವರುಷದ ನಂತರ ಅರಿಶಿನೇಮಿ-ಇಂದು ಸೂರ್ಯ ಮುಣುಗುವ ವೇಳೆಗೆ—ಚಂದ್ರಗಿರಿಯ ಭದ್ರಬಾಹುವಿನ ಬಸದಿಯಲ್ಲಿ ಬಂದಿಳಿದಿದ್ದಾನೆ. ದೈಹಿಕವಾಗಿ ಬಳಲಿದಂತೆ ತೋರುತ್ತಿದ್ದರೂ—ಅವನ ಕಣ್ಣಿಲ್ಲಿಯ ಅಸ್ಥಿರತೆ ಮಾಯವಾಗಿದೆ. ಹತ್ತು ತಿಂಗಳ ಈ ದೀರ್ಘ ಅವಧಿಯಲ್ಲಿ ಅವನು ಎಲ್ಲೆಲ್ಲಿ ಸುತ್ತಿದ್ದನೊ ಏನನ್ನು ಕಂಡನೊ ಏನನ್ನ ಗ್ರಹಿಸಿದನೋ ಯಾರು ಬಲ್ಲರು? ಅವನ ಕಾಲಿನ ನಾಡಿ ಉಬ್ಬಿದಂತಿವೆ. ಅಂಗಾಲ ಮೇಲೆಲ್ಲ ಮಣ್ಣು ಧೂಳಿಯ ಕಿಟ್ಟ ಕೂತಿದೆ. ಅವನು ತುಂಬ ಪ್ರಯಾಣ ಮಾಡಿದಂತೆ ತೋರುತ್ತದೆ. ಈ ಮಹಾಯಾತ್ರೆಯಲ್ಲಿ ಅವನು, ಕಾರ್ಲೆಯ

ಪ್ರಸನ್ನ ಬುದ್ಧವಿಹಾರ, ಎಲ್ಲೂರಿನ ಭವ್ಯೋದಾತ್ತ ತ್ರಿಮೂರ್ತಿಯ ದರ್ಶನ ಪಡೆದಿರಬಹುದು; ಅಜಂತೆಯ ಚಿರತರುಣ ಚಿತ್ರಕುಸುರಿಯನ್ನು ನೋಡಿರಬಹುದು, ವೇರೂಳಿನ ಕೈಲಾಸವಲ್ಲಿಯ ಕಲ್ಕುಸುರಿಯ ಮೋಹನಿಗೆ ಮಾರುಹೋಗಿ ತನ್ನ ಜ್ಯೇಷ್ಠ ಸಹಕರ್ಮಿ ಬಂಧುವೊಬ್ಬನ ದರ್ಶನವಾದಷ್ಟು ಸುಖ ಹಚ್ಚಿಕೊಂಡಿರಬಹುದು. ಭುವನೇಶ್ವರಿಯ ದೇವಾಲಯವನ್ನು ಕಂಡು—ಶಿಲೆಗೆ ವಾಚ್ಯತೆಯನ್ನು ಕೊಡಬಲ್ಲ ಶಿಲ್ಪಚತುರರು ಕರ್ನಾಟಕದಂತೆ ಉತ್ತರಭಾರತದಲ್ಲಿಯೂ ಇರುವರೆಂಬ ಅನುಭವ ಪಡೆದಿರಬೇಕು. ಆದರೆ ಇದೆಲ್ಲ 'ರೆ'ರಾಜ್ಯದ– ತರ್ಕದ ಅನುಮಾನ. ಯಾಕೆಂದರೆ ಬಸದಿಯ ಪೂಜಾರಿ ಕೇಳಿದ ಯಾವ ಪ್ರಶ್ನೆಗೂ ಅರಿಶಿನೇಮಿ ಉತ್ತರಿಸಲಿಲ್ಲ.

ಇನ್ನೂ ಬೆಳಗಾಗಲು ಅವಕಾಶವಿದೆ. ಆದರೂ ಎಲ್ಲ ಕಡೆಯಿಂದಲೂ ಮೋಡ ಮುಸುಕಿಬಂದಿದೆ. ಬಯಲುಸೀಮೆಯ ಮೇಲಿಂದ ಬೀಸಿ ಬರುವ ತೀವ್ರಗಾಳಿ ನೇರವಾಗಿ ಚಂದ್ರಗಿರಿಯನ್ನು ಏರಿ ಬಸದಿಯ ಕಂಬಗಳನ್ನು ಹಾಯ್ದು ಮುಂಬರದ ಗವಾಕ್ಷಗಳ ಕಿಂಡಿಯಿಂದ ಫೂತ್ಕರಿಸಿ ಹೊರ ಬೀಳುತ್ತಿದೆ. ಗಾಳಿ ಎಬ್ಬಿಸಿದ ಈ ಧೂಳಿ ಧೂಸರಿತ ವಾತಾವರಣದಲ್ಲಿ ಕೆಳಗಿನ ಶ್ರವಣಬೆಳಗೊಳ ಗ್ರಾಮದಲ್ಲಿಯ ಮನೆ-ಮಠ ಮುಚ್ಚಿಹೋಗಿ ಕಾಣದಂತಾಗಿವೆ. ಮೇಲೆ ಆಕಾಶದಲ್ಲಿ ಭಯಂಕರವಾದ ಕಡಕಡಾಟ ನಡೆದಿದೆ. ಹದ್ದು ವ್ಯೂಹ ಕಟ್ಟಿ ಮಂಡಲಾಕಾರವಾಗಿ ತಿರುಗುತ್ತಿವೆ. ಹೆದೆಯೇರಿಸಿದ ಸಹಸ್ರಾವಧಿ ಬಿಲ್ಲುಗಳಿಂದ ಬಾಣದ ಆಕಸ್ಮಿಕ ಮಳೆಗರೆಯುವಂತೆ ಮುಸಲಧಾರೆಯಾಗಿ ಮಳೆ ಬೀಳತೊಡಗಿತು. ಬಸದಿಯ ಪಾಷಾಣಮಯ ದೇಹವನ್ನು ಆಣೆಯಕಲ್ಲು ಭೇದಿಸತೊಡಗಿದವು. ಮಂಟಪದೆದುರಿನ ಪ್ರಾಂಗಣದಲ್ಲಿ ಸಿಡಿದು ಬೀಳುವ ಗಾರುಗಲ್ಲುಗಳನ್ನು, ನೀರಿನ ದೊಡ್ಡ ದೊಡ್ಡ ಹನಿಗಳನ್ನು ಕಂಡು ಅರಿಶಿನೇಮಿಗೆ ನಗು ಬಂದಿತು. ಚಿಕ್ಕಂದಿನಲ್ಲಿ—ಅವನ ಅಜ್ಜಿ ನೀಲವ್ವ ಅರಳು ಹುರಿಯುವಾಗ ಸಿಡಿಯುವ ಅರಳಿನ ನೆನಪು ಅವನಿಗಾಯಿತು. ಜಲಧಾರೆಯ ಆ ಅಕಾಂಡ-ತಾಂಡವ ನೃತವನ್ನು ನೋಡುತ್ತಾ ಅವನು ಮೈಮರೆತು ನಿಂತ. ಆ ಮಹಾ ಜಲಧಾರೆ ಲೋಕಪಾವನೆಯಂತೆ—ಜಗತ್ತಿನ ಮಲವನ್ನು ತೊಳೆದು ತೇಲಿಸಿಕೊಂಡು ಹೋಗುತ್ತಿರುವಂತೆ ಅವನ ಮಾನಸಿಕ ಮಾಲಿನ್ಯವೂ ಅದರೊಡನೆ ತೊಳೆದುಹೋದಂತೆ ಭಾಸವಾಗುತ್ತಿತ್ತು. ಈ ಜೀವದಾಯಿಯಾದ ಅಮೃತರಸ, ಧರಿತ್ರಿಯ ಗರ್ಭದಲ್ಲಿ ಒಂದಾಗಿ ಹೊಂದುಗೂಡುವಂತೆ ಅರಿಶಿನೇಮಿಯ ಮಾನಸಗರ್ಭದಲ್ಲಿಯೂ ಇಳಿದು ಕಳೆದ ೧೨ ವರುಷಗಳಿಂದಲೂ ಅದುಮಿದ ಯಾವುದೋ ಕಲ್ಪನಾಬೀಜಕ್ಕೆ ತಂಪಿತ್ತು ಅದಕ್ಕೆ ಜೀವಕಳೆಯನ್ನು ಕೊಡುತ್ತಿತ್ತು.

ಅರ್ಧ ಪ್ರಹರದ ವರೆಗೆ ಅರಿಶಿನೇಮಿ ಆ ತಾಂಡವ ಪ್ರಕಾರವನ್ನು ನೋಡುತ್ತಾ ನಿಂತಿದ್ದ. ಅನಿತರಲ್ಲಿ ವಜ್ರಾಘಾತವಾಗುವಂತೆ ಮಿಂಚು ಸಿಡಿಲೆರಗಿತು. ವಿಶಾಲ ಆಕಾಶಕ್ಕೇ ಅಖಂಡ ಕಿಂಡಿ ಬಿದ್ದಿರಬೇಕೆಂದೆನಿಸಿತು. ಅರಿಶಿನೇಮಿಗೆ ಬೆದರಿದ ನೋಟದಿಂದ ನೋಡುನೋಡುವಷ್ಟರಲ್ಲಿ ಎದುರಿನ ಇಂದ್ರಗಿರಿಯ ಮೇಲೆ ನಿಂತ ಹತ್ತಾಳು ಎತ್ತರದ ಶಿಲಾಖಂಡದ ಮೇಲೆ ಆ ಸಿಡಿಲು ಎರಗಿ ಶಿಲಾಖಂಡಕ್ಕೆ ಅಗ್ನಿವಸ್ತ್ರ ಪರಿಧಾನಮಾಡಿಸಿದಂತೆ ಮಾಡಿ ಕತ್ತಲೆಯಲ್ಲಿ ಅಂತರ್ಧಾನವಾಯಿತು. ತನ್ನ ಮನಸ್ಸಿನಲ್ಲಿ ಬಿರಿಯುತ್ತ ನಡೆದ ವಿಚಾರ ಬೀಜದ ದಾಳಿಂಬ ಈ ಈ ದೃಶ್ಯಾವಲೋಕನದಿಂದ ಇದೀಗ ಪೂರ್ಣ ಒಡೆದಿದೆ, ಯಾವುದೋ ಒಂದು ಅದಮನೀಯವಾದ ಮಹಾಸಮರ್ಥವಾದ ಮೊಳಕೆ ಹೊರ ಬರತೊಡಗಿದೆ. ಅದನ್ನು ಧಾರಣ ಮಾಡುವ ತ್ರಾಣ-ಶಕ್ತಿ-ಮಾತ್ರ ತನಗಿಲ್ಲವೆಂದು ಅರಿಶಿನೇಮಿಗೆ ಅನ್ನಿಸತೊಡಗಿತು. ಆಗಲೇ ಸಿಡಿಲೆರಗಿ ಶಿಲಾಖಂಡ ಭೇದವಾದ, ಮತ್ತೆ ಅಂಧಕಾರ ಮುಸುಕಿದ ಆ ದೃಶ್ಯದ ಕಡೆಗೆ ನೋಟ ನೆಟ್ಟಿರುವಾಗಲೇ ಅರಿಶಿನೇಮಿ ಎಚ್ಚರದಪ್ಪಿ ಬಸದಿಯ

ಕಲ್ಲುನೆಲದ ಮೇಲೊರಗಿದ.

ಅವನು ಕಣ್ತೆರೆದಾಗ ಬೆಳ್ಳಗೆ ಬೆಳಗಾಗಿತ್ತು. ಇದೇ ತಿಕ್ಕಿ ತೊಳೆದ ಹಿತ್ತಾಳಿಯ ಪಾತ್ರೆಯಂತೆ ಆಕಾಶ ಶುಭ್ರ-ನಿರ್ಮಲವಾಗಿತ್ತು. ಬಿಳಿಗೆಂಪು ಮಿಶ್ರಿತ ಬಣ್ಣದ ಎಳೆ ಬಿಸಿಲು ಸುತ್ತುಕಡೆಯೂ ಹರಹಿತ್ತು. ಪ್ರಾಂಗಣದಲ್ಲಿ ನಿಂತ ನೀರಿನಲ್ಲಿ ಚುಂಚದ್ದಿ ಆ ನೀರನ್ನು ಮೈಮೇಲೆ ತೂರಿಕೊಂಡು ಪಾರಿವಾಳ ಆಟವಾಡುತ್ತಿದ್ದವು. ಅರಿಶಿನೇಮಿಯ ಮುಖದ ಮೇಲೆ ವಿಲಕ್ಷಣ ಸೌಮ್ಯ ಪಸರಿಸಿತ್ತು. ಇಂದ್ರಗಿರಿಯೆಡೆಗೆ ನೋಡುವುದನ್ನು ಅವನು ಯಾಕೋ ತಪ್ಪಿಸುತ್ತಿದ್ದ. ಕೊನೆಗೆ ಅವನು ಪ್ರಾಂಗಣದಲ್ಲಿ ಬಂದು ಮಾನಸ್ತಂಭಕ್ಕೆ ಕೈಹಚ್ಚಿ ಇಂದ್ರಗಿರಿಯ ಕಡೆಗೆ ನೋಡಿದ.

ಕಳೆದ ಇರುಳಿನಲ್ಲಿ ತನ್ನನ್ನು ವೇಷ್ಟಿಸಿದ ಅಗ್ನಿವಸ್ತ್ರವನ್ನು ತ್ಯಜಿಸಿ-ಆ ಶಿಲಾಖಂಡ ಇದೀಗ ಬೆಚ್ಚಬೆತ್ತಲೆಯಾಗಿ "ನಗ್ನರೂಪ"ದಲ್ಲಿ ನಿಂತಿತ್ತು. ಕಾಮ-ಕ್ರೋಧಗಳನ್ನು ಜಯಿಸಿ-ಸೌಮ್ಯ ಶಾಂತ ಸಸ್ಮಿತ ಅವಿಚಲನಾದ ತೀರ್ಥಂಕರನಂತೆ ಕಂಡಿತು ಆ ಶಿಲಾಖಂಡ ಅರಿಶಿನೇಮಿಗೆ. ಅವನು ನೆಟ್ಟನೋಟದಿಂದ ಆ ಶಿಲಾಸ್ತೂಪದ ಕಡೆಗೆ ನೋಡುತ್ತ ನಿಂತ. ಬೇರೆ ಕಡೆಗೆ ನೋಟವನ್ನು ಹೊರಳಿಸುವುದೇ ಆಗಲಿಲ್ಲ ಅವನಿಂದ. ಅವನು ಅರಸುತ್ತಿದ್ದ, ಅವನಿಗೆ ಬೇಕಾದ ಮಂದಿರ ಸ್ಥಾನವು ಇದೀಗ ಸಿಕ್ಕಂತಾಗಿತ್ತು. ವಿನಾದ್ವಾರ, ವಿನಾಸ್ತಂಭ, ವಿನಾಮಂಟಪದ ಮಂದಿರ. ಇದು ವರೆಗೂ ರಚಿಸಿದ ಸರ್ವಮಂದಿರಕ್ಕಿಂತಲೂ ಬೇರೆ ಮಾದರಿಯದು. ಮುಂಡನ ಮಾಡಿದ ಶ್ರಮಣನ ಶಿರಸ್ಸಿನಂತೆ ತೋರುವ ಇಂದ್ರಗಿರಿಯೆ ಆ ಮಂದಿರದ ಪೀಠ, ಮೇಲೆ ಅಗಾಧವಾಗಿ ಹರಡಿದ ನೀಲಿಮಾಮಯವಾದ ಆಕಾಶವೇ ಅದರ ಮಂಟಪ. ಇಂಥ ಮಂದಿರಕ್ಕೆ ಸ್ತಂಭಗಳ ಅವಶ್ಯಕತೆಯೇನು ? ಸರ್ವ ಚರಾಚರ ವಸ್ತುಜಾತಿಯೇ ಅದರಲ್ಲಿ ಬಿಡಿಸಿದ ಚಿತ್ರ. ಈ ಶಿಲಾಖಂಡದಲ್ಲಿ ನನ್ನ ಕನಸಿನ ಮೂರ್ತಿಯನ್ನು ಕೊರೆಯುವೆ. ಭೀಕರ ಗಾಳಿಯಲ್ಲಿಯೂ ಅದು ಅಚಲವಾಗಿ ನಿಂತೀತು, ಜಗದ್ವ್ಯವಹಾರದ ಕಡೆಗೆ ಸಸ್ಮಿತವಾಗಿ ನೋಡುತ್ತಾನಿಂತೀತು. ಮಾನವ ವ್ಯವಹಾರದ ಮಂಜುಮನೆ ಅದರ ಪಾದದಡಿ ಬೆಳೆದರೂ-ಮೇಘದ ಉಷ್ಣಧಾರೆಯನ್ನು ಶಿರೋಭಾಗದಲ್ಲಿ ನನ್ನ ಮೂರ್ತಿ ಧರಿಸೀತು. ಪಂಚಮಹಾಭೂತಗಳ ಅಂಕದ ಮೇಲೆ ಅದು ನಿಃಸ್ಸಂಕೋಚವಾಗಿ ನಗ್ನವಾಗಿ ನಿಂತೀತು.

ಅರಿಶಿನೇಮಿ ತನ್ನ ಕೈಕಡೆಗೆ ನೋಡಿದ. ಕೈ-ಕಮಲದ ಕಡೆಗೆ ನೋಡಿದ. ತನ್ನ ಕೈ-ಭುಜ ಕರಪತ್ರದಲ್ಲಿ ಪುನರಪಿ ಚೈತನ್ಯ ಒಸರಿಸತೊಡಗಿದೆಯೆಂದೆನ್ನಿಸತೊಡಗಿತು ಅವನಿಗೆ. ನಾಡಿನಾಡಿಯಲ್ಲಿ ರಕ್ತ ಸಂಚಾರವಾಗತೊಡಗಿದೆ ಎಂದೆನಿಸಿತು. ಮುಷ್ಟಿ ಎತ್ತಿ ಮತ್ತೊಮ್ಮೆ ಅವನು ಆ ಶಿಲಾಖಂಡದ ಕಡೆಗೆ ದೃಷ್ಟಿ ಬೀರಿದ. ಪ್ರಭಾರುಣಕಿರಣ-ಸ್ವರ್ಣವರ್ಣಕ್ಕೆ ತಿರುಗುತ್ತಿದ್ದ ಕಾರಣ ಆ ಶಿಲಾಖಂಡ ಉನ್ಮೀಲನಾವಸ್ಥೆಯಲ್ಲಿದ್ದ ಕಮಲ-ಕಲಿಕೆಯಂತೆ ತೋರತೊಡಗಿತು. ಅಖಂಡ ತುಂಬಿ ಹರಿಯುವ ನದಿಯಂತೆ ಹೃದಯ ತುಂಬಿ ಬಂದ ಅರಿಶಿನೇಮಿ ಅರಸಿಕೇರೆಯತ್ತ ಸಾಗಿದ್ದ.

*

ಶ್ರವಣಬೆಳಗೊಳ ಜೈನರ ಸಿದ್ಧ ತೀರ್ಥಸ್ಥಾನ. ಅಲ್ಲಿಯ ಇಂದ್ರಗಿರಿ ಮೇಲಿನ ಗೊಮ್ಮಟಮೂರ್ತಿ ಜಗತ್ತಿನ ಶಿಲ್ಪಕಲಾಚಾತುರ್ಯಕ್ಕೆ ಒಂದು ಅನರ್ಘ್ಯ ಅಲಂಕಾರ. ಅದರ ಆಕಾರ ೫೭ ಅಡಿ ಉದ್ದ. ಮೂರ್ತಿ ಅಖಂಡ ನಗ್ನ ಶಿಲಾಮಯವಾಗಿದೆ. ಗಂಗರಾಜನ ಅಮಾತ್ಯಶ್ರೇಷ್ಠನಾದ ಚಾವುಂಡರಾಯನ ಅನುಜ್ಞೆಯಂತೆ ಅರಿಶಿನೇಮಿಯೆಂಬ ಶಿಲ್ಪಿ ಅದನ್ನು ರಚಿಸಿದನೆಂದು ಆಖ್ಯಾಯಿಕೆ. "ಗಂಗರಾಜಸುತೆ ಕರವಿಯಲಿ ಚಾಮುಂಡರಾಯೆ ಕರವಿಯಲಿ" ಎಂಬರ್ಥದ ಶಿಲಾಲೇಖವನ್ನು ಮೂರ್ತಿಯ ಕೆಳಭಾಗದಲ್ಲಿ ಲೇಖಿಸಲಾಗಿದೆ.

*

ಒಂದು ಮೀಸೆಯ ಚರಿತ್ರೆ

ಸಾವಿತ್ರಿದೇವಿ ನಿಗಮ

೧೯೩೦ ರಲ್ಲಿ ಅಲಹಾಬಾದಿನಲ್ಲಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸಭೆ ಹ್ಯಾವೆಟ್ ರಸ್ತೆಯ ಒಂದು ಮನೆಯ ಉಪ್ಪರಿಗೆಯ ಮೇಲೆ ನಡೆದಿತ್ತು. ಹಾಲ್ ಕಿಕ್ಕಿರಿದಿತ್ತು. ಕರತಾಡನ ಸಭೆಯಲ್ಲಿ ನಡೆದಿದ್ದಾಗಲೇ ಕೆಳಗೆ ಪೋಲೀಸರು ಬಂದಿರುವರೆಂದು ತಿಳಿಯಿತು. ಒಬ್ಬೊಬ್ಬರಾಗಿ ಎಲ್ಲರೂ ಒಂದೊಂದು ನೆವ ಹೇಳಿ ಹೊರಬೀಳತೊಡಗಿದರು. ೨೦೦ ಜನರಲ್ಲಿ ಬರಿ ೬೦ ಜನರು ಉಳಿದರು. ಇನ್ನೂ ಬಿಟ್ಟರೆ ಉಳಿದವರೂ ಕೈಗೆ ಸಿಗಲಿಕ್ಕಿಲ್ಲವೆಂದು ಪೋಲೀಸರು ಅಟ್ಟಹತ್ತಿ ಉಳಿದವರನ್ನು ಬಂಧಿಸಿದರು. ಮರುದಿನ ೪೪ ಜನರ ಬಂಧನದ ಸುದ್ದಿ ಪ್ರಕಟವಾಯಿತು. ಅಂದೇ ಕೈದಿಗಳನ್ನು ಹತ್ತುಹತ್ತರಂತೆ ಗುಂಪು ಮಾಡಿ ಫೈಜಾಬಾದ, ಸೈನಿ, ಬನಾರಸ ಮುಂತಾದ ಕಡೆಗಳಿಗೆ ಕಳಿಸಿದರು. ೧೦ ತಿಂಗಳ ಮೇಲೆ ಅಲಹಾಬಾದ್ ಜೇಲಿನಲ್ಲಿ ಪುನಃ ಅವರೆಲ್ಲ ಒಟ್ಟಿಗೆ ಸೇರುವ ಯೋಗ ಬಂದಾಗ ಅವರೆಲ್ಲರೂ ತಮ್ಮತಮ್ಮ ಅನುಭವಗಳನ್ನು ಕೇಳ-ಹೇಳತೊಡಗಿದರು.

ಲಲ್ಲನಜಿ ಹೇಳಿದರು: "ಶತ್ರುವಿಗೂ ಬರಬಾರದಂಥ ಕಷ್ಟಗಳನ್ನು ಅನುಭವಿಸಿದೆವು. ಕೇಳಿದರೆ ನಿಮಗೂ ದುಃಖವೇ ಆಗಬಹುದು. ಒರಳಿನಲ್ಲಿ ತಲೆ ಇಟ್ಟ ಮೇಲೆ ಒನಕೆಯ ಪೆಟ್ಟಿಗೆ ಹೆದರಿದರೆ ಹೇಗೆ? ಹೋದ ಪ್ರಾರಂಭದಲ್ಲೇ ಒಂದು ಘಟನೆ ನಡೆಯಿತು. ಅದರಿಂದಲೇ ನಮ್ಮ ಪಾಡು ನಿಮಗೆ ಅರ್ಥವಾಗಬಹುದು.

"ರಾತ್ರಿ ೧೧ಕ್ಕೆ ನಾವು ಸೈನೀ ಜೇಲಿನಲ್ಲಿ ಹೊಕ್ಕೆವು. ಹಳೇ ಕೈದಿಗಳು ವಾರ್ಡರ್‌ರಾಗಿರುತ್ತಾರೆ. ಅಂಥ ಒಬ್ಬ ಧಷ್ಟಪುಷ್ಟ 'ಪಕ್ಕಾ' ನಮ್ಮನ್ನು ಕುರಿತು, 'ಸಾಲಾಗಿ ನಿಲ್ಲಿರಿ' ಎಂದು ಆಜ್ಞಾಪಿಸಿದ. ನಿಂತೆವು. ಮತ್ತಿಬ್ಬರು, 'ಪಕ್ಕಾ'ಗಳು ಬಂದರು. ಅವರು ಇನ್ನಷ್ಟು ಸಶಕ್ತರಾಗಿದ್ದರು. ಒಬ್ಬನ ಕೈಯಲ್ಲಿ ಫೂಟ್‌ಪಟ್ಟಿ ಮತ್ತೊಬ್ಬನ ಕೈಯಲ್ಲಿ ಕತ್ತರಿ. ಕತ್ತರಿ ಮಾಲಿಗಳ ಹತ್ತಿರ ಇರುವಂತಹವಾಗಿತ್ತು. ಇದೇನು ಬಂತೆಂದು ಯೋಚಿಸುತ್ತಿರುವಾಗಲೇ ಅವರಿಬ್ಬರೂ ನನ್ನ ಹತ್ತಿರ ಬಂದರು. ಒಬ್ಬ ನನ್ನ ಮೂಗಿನ ಕೆಳಗೆ ಫೂಟ್‌ಪಟ್ಟಿ ಹಿಡಿದ. ಮತ್ತೊಬ್ಬ ಕರಕರನೆ ಎರಡೂ ಕಡೆಯ ಮೀಸೆಗಳನ್ನು ಕತ್ತರಿಸಿ ಚೆಲ್ಲಿದ. ನನಗೆ ಮೈಮುರಿ ಹೊಡೆದಿದ್ದರೂ ದುಃಖವಾಗುತ್ತಿದ್ದಿಲ್ಲ. ಆದರೆ ನನ್ನ ಪ್ರಿಯಮೀಸೆಗಳು ಆ ರೀತಿ ನೆಲಕ್ಕೆ ಬಿದ್ದುದನ್ನು ಕಂಡು ಬಹಳ ವ್ಯಥೆಯಾಯಿತು.

"ನನ್ನ ಶರೀರದಲ್ಲಿ ನನಗೆ ಪ್ರಿಯವಾಗಿದ್ದದ್ದು ನನ್ನ ಮೀಸೆ. ನಮ್ಮ ಠಾಕೂರ ಸಮಾಜದಲ್ಲಿ



ಮೀಸೆ ಹೋಗುವುದೆಂದರೆ ಬಹಳ ದೊಡ್ಡ ಅಪಮಾನವೆಂಬ ಭಾವನೆ ಇದೆ. ಪ್ರಾಣ ಹೋದುದಕ್ಕಿಂತ ಹೆಚ್ಚಾಗಿತ್ತಿದು. ಒಂದು ವೇಳೆ ನನಗೆ ಪೂರ್ವಸೂಚನೆ ಕೊಟ್ಟು ಮೀಸೆ ಕತ್ತರಿಸಿದ್ದರೆ ನಾನು ಸಾಯುವ ವರೆಗೂ ಹೋರಾಡಿ ಅದನ್ನು ತಡೆಯುತ್ತಿದ್ದೆ."

ಮೀಸೆ ಹೋಗಿ ಲಲ್ಲನಜಿಯವರ ಮುಖದ ಕಳೆಯೆ ಹಾರಿದಂತಾಗಿತ್ತೆಂದು ಎಲ್ಲರಿಗೂ ಕೆಡುಕೆನಿಸುತ್ತಿತ್ತಾದರೂ ನಗೆಯೂ ಬರುತ್ತಿತ್ತು. ಆ ಘಟನೆಯೆ ಹಾಗಿತ್ತು.

ಆದರೂ ಸೆರೆಮನೆಯಲ್ಲಿ ಮೀಸೆಗಳು ಇಂತಿಷ್ಟೇ ಉದ್ದ ಇರಬೇಕೆಂಬ ನಿಯಮವಿರುವುದನ್ನು ಆ ವರೆಗೂ ನಾವು ಕೇಳಿರಲಿಲ್ಲ ಆದ್ದರಿಂದ ನಮ್ಮ ಮುನ್ನಿಜಿಯವರನ್ನು ಕೇಳಿದೆ. ಮುನ್ನಿಯವರು, "ಈಗ ಊಟಕ್ಕೆ ಹೋಗುವಾ. ನಾಳೆ ಎಲ್ಲವನ್ನೂ ಹೇಳುವೆ" ಎಂದರು.

ಮರುದಿನ ಮತ್ತೆ ಜನರು ಕೇಳಿದಾಗ ಮುನ್ನಿ ಅಂದರು: "ಜೇಲ್ ಮ್ಯಾನ್ಯುವಲ್ಲಿನ ನಿಯಮಗಳ ಮೇರೆಗೆ ನಾವು ಕೈದಿಗಳಾಗಿರುವ ವರೆಗ ಮಾತಾಡದಿರುವುದೇ ವಿಹಿತವೆಂಬ ನಿಯಮವಿದೆ. ಇಲ್ಲವಾದರೆ ದರಿಯಾಲ ಸಿಂಹ ಮತ್ತು ಸಕುಮ ಸಿಂಹರ ಮೀಸೆಗಳೂ ಕತ್ತರಿಸಿಹೋದಾವು. ಈ ಚರ್ಚೆ ಜೇಲರನಿಗೆ ತಿಳಿಯಕೂಡದು. ಇನ್ನು ಮಾತಾಡಲೇಬೇಡಿರಿ."

"ಮುನ್ನಿಗಳಿಗೆ ಮರುಳು. ಕಾಯಿದೆಯಿಂದಲೇ ಎಲ್ಲ ಕೆಲಸಗಳು ನಡೆಯುವವೆಂದು ತಿಳಿದಿದ್ದಾರೆ" ಎಂದು ಜನರು ಗೂಣಗಿದರು. ಅತ್ತ ಮುನ್ನೀಜಿ ಲಕ್ಷ್ಯ ಕೊಡಲಿಲ್ಲ.

ಕಾಲ ಮುಂದೆ ಸಾಗಿತು. ರಾಜನೈತಿಕ ಕ್ಷೇತ್ರದಲ್ಲಂತೂ ಪರಿವರ್ತನೆಗಳು ವೇಗ ಆಗುತ್ತವೆ. ಸ್ವರಾಜ್ಯಪಾರ್ಟಿ ಹುಟ್ಟಿಕೊಂಡಿತು. ಮುನ್ನೀಜಿ ಕೌನ್ಸಿಲಿಗೆ ಆರಿಸಿಹೋದರು.

೧೯೩೭-೩೮ ರಲ್ಲಿ ಸೆರೆಮನೆ ಸುಧಾರಣಾ ಸಮಿತಿ (ಶ್ರೀ ಜಗತ ನಾರಾಯಣ ಮುಲ್ಲಾ ಮತ್ತು ಸರ್ ಸ್ಟುವರ್ಟರು ಇದರ ಸದಸ್ಯರಾಗಿದ್ದರು) ಸಂಯುಕ್ತ ಪ್ರಾಂತ ವಿಧಾನಸಭೆಯಲ್ಲಿ ಒಂದು ವರದಿ ಮಂಡಿಸಿತು. ಮುನ್ನಿಯವರು ವರದಿಯನ್ನು ಕೊನೆಯವರೆಗೆ ಓದಿ ನೋಡಿದರು. ಲಲ್ಲನಜಿಯ ಕತ್ತರಿಸಿದ ಮೀಸೆ ಅವರಿಗೆ ನೆನಪಾಯಿತು. ಮೀಸೆಗಳ ನಿರ್ದಿಷ್ಟ ಉದ್ದಳತೆಯ ನಿಯಮದ ಚರ್ಚೆ ವರದಿಯಲ್ಲಿ ಸಮಾವಿಷ್ಟವಾಗಿರಲಿಲ್ಲ.

ಮರುದಿನ ಈ ವರದಿಯ ಮೇಲೆ ಮುನ್ನಿಯವರು ಭಾಷಣ ಪ್ರಾರಂಭಿಸಿದರು. ಗೃಹಮಂತ್ರಿಗಳ ಸುಂದರ ಮೀಸೆಗಳನ್ನು ವರ್ಣಿಸಿದರು. ಸೆರೆಮನೆ ಸುಧಾರಣೆಗೂ ಗೃಹಮಂತ್ರಿಗಳ ಮೀಸೆಗೂ ಸಂಬಂಧವೇನೆಂಬುದೇ ಜನರಿಗೆ ತಿಳಿಯದಂತಾಯಿತು. ಮುನ್ನಿಯವರ ಭಾಷಣ ಹಾಗೇ ಮುಂದೆ ಸಾಗಿತು. "ಶ್ರೀ ಜಗತನಾರಾಯಣ ಮುಲ್ಲಾರ ಧೂರ್ತದೃಷ್ಟಿಯಿಂದಲೂ ಸೆರೆಮನೆಯಲ್ಲಿ ಮೀಸೆ ಕತ್ತರಿಸುವ ಅಧಿನಿಯಮವು ತಪ್ಪಿ ಹೋಗಿದೆಯೆಂಬುದನ್ನು ವರದಿಯಿಂದ ಅರಿತು ನನಗೆ ಬಹಳ ಖೇದವೆನಿಸಿದೆ. ಈ ನಿಯಮವನ್ನು ನೀವು ಉಳಿಸಿಕೊಂಡರೆ ಮತ್ತು ನಾಳೆ ಒಂದು ವೇಳೆ ನಮ್ಮ ಸ್ಥಳವಲ್ಲಿ ನೀವು, ನಿಮ್ಮ ಸ್ಥಳವಲ್ಲಿ ನಾವು ಬಂದರೆ, ಆಗ ಗೃಹಮಂತ್ರಿ ಸಾಹೇಬರೆ, ನಿಮ್ಮ ಸುಂದರ ಮೀಸೆಗಳೂ ಲಲ್ಲನಜಿಯವರ ಮೀಸೆಗಳಂತೆ ಕತ್ತರಿಸಿ ಹಾಳಾಗಿ ಹೋಗಲಿಕ್ಕಿಲ್ಲವೆ?"

ನವಾಬ ಛತಾರಿಯವರು ಮುನ್ನಿಯವರ ಭಾಷಣ ಕೇಳಿ ಚಕಿತರಾದರು. ಮತ್ತು ನಡುವೇ ಎದ್ದು ನಿಂತು ಮಂತ್ರಿಗಳ ಪರವಾಗಿ ಆಶ್ವಾಸನ ಇತ್ತರು: "ಈ ಸೂಚನೆ ಮಂಡಿತವಾಗಬೇಕಿತ್ತು. ಆಗಿಲ್ಲವೆಂದು ನಮಗೂ ಕೆಡಕೆನಿಸುತ್ತದೆ. ನಾನು ಇದನ್ನು ಖಂಡಿತ ವಿಚಾರಿಸುವೆ." ಮುನ್ನಿಯವರು ಮುಂದುವರಿದರು: "ಗೃಹಮಂತ್ರಿಗಳ ಸುಂದರ ಮೀಸೆಗಳಿಂದಲೆ ಅವರ ಮುಖಕ್ಕೆ ಕಳೆ ಬಂದಿದೆ. ಆದ್ದರಿಂದ ಮೀಸೆಗಳನ್ನು ಕತ್ತರಿಸುವ ನಿಯಮದ ಬಗ್ಗೆ ಪರಿಶೀಲನೆ ನಡೆಯಬೇಕೆಂದು ನಾನು ಅಪೇಕ್ಷೆ ಮಾಡಿಕೊಳ್ಳುತ್ತೇನೆ. ಈ ನಿಯ

ಮವು ಭಾರತೀಯ ಜನತೆಯ ಅಪಮಾನವಷ್ಟೇ ಅಲ್ಲ, ಇಡೀ ಮಾನವ ಜಾತಿ ಹಾಗೂ ಮಾನವ್ಯಕ್ಕೇ ಅವಮಾನವಾಗಿದೆ. ಇಂದಿನ ಕೈದಿಗಳೇ ನಾಳೆ ಈ ರಾಜ್ಯ ನಡೆಸಲಿದ್ದಾರೆಂದು ತಮಗೆ ಗೊತ್ತಿದೆ. ಭಾರತೀಯರು ತಮ್ಮ ಮುಂದಾಳುಗಳ ಈ ಬಗೆಯ ಅವಮಾನವನ್ನು ಎಂದೂ ಸಹಿಸರು. ಆದ್ದರಿಂದ ಸಾಮಾನ್ಯ ಕೈದಿಗಳ ಮೀಸೆಗಳಿಗೂ ಕೈಹಚ್ಚಿ ಅವರ ರೂಪ, ಕುಲಗಳ ಅವಮಾನ ಮಾಡಬಾರದೆಂದು ನನಗನಿಸುತ್ತದೆ."

ಮೀಸೆಗಳ ಭಾಷಣ ಕೇಳಿ ಗೃಹಮಂತ್ರಿಗಳು "ನಿಮ್ಮ ಮಾತು ನಡೆಸಿಕೊಡುವೆವು. ದಯವಿಟ್ಟು ಇನ್ನು ಈ ಮೀಸೆಯ ಪ್ರಸ್ತಾಪ ಸಾಕೆಂ"ದು ಚೀಟಿಯಲ್ಲಿ ಬರೆದು ಕಳಿಸಿದರು.

ಭಾರತವು ಪರಕೀಯರ ಕೈಯಲ್ಲಿದ್ದಾಗ ಮುನ್ನಿಯವರ ಇಂಥ ಅನೇಕ ಕಾಯದೇಶೀರ್ ವಿಚಾರಗಳಿಂದ ಕಾರ್ಯಗಳಿಂದ ಅನೇಕ ಚಮತ್ಕಾರಗಳು ನಡೆಯುತ್ತಿದ್ದವು. *

ಆಯ್ದ ತುಣುಕುಗಳು

ಓರ್ವ ಬ್ರಾಹ್ಮಣ ಶೀತಕಾಲದ ಒಂದು ಬೆಳಿಗ್ಗೆ ತಣ್ಣೀರಿನಲ್ಲಿಳಿಯುವುದನ್ನು ನೋಡಿ ಅನಾಥ ಪಿಂಡಕನ ದಾಸೀಪುತ್ರಿ ಪೂರ್ಣಿಕಾ ಕೇಳಿದಳು : "ವಿಪ್ರೋತ್ತಮಾ, ನಾನೋ ಓರ್ವ ಬಡದಾಸಿ. ಯಜಮಾನತಿಯ ಬೈಗಳ ಭಯದಿಂದ ಈ ಚಳಿಯಲ್ಲಿ ಕೂಡಾ ನೀರಿನಲ್ಲಿ ಇಳಿಯಲು ಬದ್ಧಳಾಗಿದ್ದೇನೆ. ಆದರೆ ನೀವು ಯಾವ ಭಯದಿಂದ ಈ ಭಯಂಕರ ಚಳಿಯಲ್ಲಿ ನೀರಿಗಿಳಿಯುತ್ತಿದ್ದೀರಿ ? "

"ಪೂರ್ಣಿಕೆ! ಪಾಪಕರ್ಮಗಳಿಂದ ಮುಕ್ತನಾಗಲು ದಿನವೂ ನಾನು ಈ ಪುಣ್ಯಕರ್ಮ ಮಾಡುತ್ತಿರುವೆನೆಂದು ತಿಳಿಯದೇನು ನಿನಗೆ? "

"ಸ್ನಾನ—ಶುದ್ಧಿಯಿಂದ ಪಾಪ ಮುಕ್ತಿಯಾಗುವುದೆಂದು ನಿಮಗಾರು ಹೇಳಿದರು? ನದಿಯ ಸ್ನಾನದಿಂದ ಪಾಪಕರ್ಮ ತೊಳೆದುಹೋಗುವುದಾದರೆ ಅದೇ ರೀತಿಯಲ್ಲಿ ಪುಣ್ಯ ಕರ್ಮವೂ ಏಕೆ ತೊಳೆದುಹೋಗಬಾರದು? ಈ ಸುಳ್ಳು ವಿಶ್ವಾಸವನ್ನು ತೊರೆಯಿರಿ. ಇನ್ನು ಮುಂದೆ ಯಾವುದೇ ಪಾಪಕಾರ್ಯ ಮಾಡುವುದಿಲ್ಲೆಂದು ವ್ರತ ಕೈಗೊಳ್ಳಿರಿ."

* * * *

ಸಮುದ್ರ ಬರೇ ಪಕ್ಷಪಾತಿ. ನದಿ, ತೊರೆಗಳನ್ನೆಲ್ಲ ತನ್ನೊಳಗೆ ಸೇರಿಸಿಕೊಳ್ಳುತ್ತದೆ— ಆದರೆ ತನಗಿನ್ನೂ ಆ ಅವಕಾಶ ಕೊಟ್ಟಿಲ್ಲ ಎಂದು ದೂರಿಕೊಂಡಿತು ಬಾವಿಯಲ್ಲಿಯ ನೀರು. ಸಮುದ್ರ ಸಂತೈಸುತ್ತಾ ಹೇಳಿತು—"ನಾನಾದರೂ ಏನು ಮಾಡಬಲ್ಲೆ? ನೀನೇ ನಿನ್ನ ಸುತ್ತಲೂ ಗೋಡೆ ಕಟ್ಟಿಕೊಂಡಿದ್ದೀ. ನಿನ್ನ ದೆಸೆಯಿಂದಲೇ ನೀನು ದೂರವಾಗಿದ್ದೀಯ. ನೋಡೊಮ್ಮೆ, ನಿನ್ನಗೋಡೆಗಳನ್ನೆಲ್ಲಾ ಕಿತ್ತು ಬಿಸುಟು ಹರಿದು ಬಾ. ನನ್ನೊಡನೆ ಬಂದು ಸೇರಲಾಗುವುದೋ ಇಲ್ಲವೊ ಎಂದು ಆಗ ನೋಡುವಿಯಂತೆ."

— "ಕೀರ್ತಿ" ಕುಂದಾಪುರ

ಗಣಿತದ ತಲೆನೋವಿಗೆ
ಒಂದು ಆಸ್ಪಿರಿನ್ ಗುಳಿಗೆ!

ಶೀಘ್ರ ಗಣಿತಕ್ಕೆ ಸುಲಭೋಪಾಯ

ನ. ರಾ. ಶಾಸ್ತ್ರಿ

ಗಣಿತವು ಅದರ ಭಕ್ತರನ್ನು ಬಿಟ್ಟರೆ ಮತ್ತೆಲ್ಲರಿಗೂ ಒಂದು ತಲೆನೋವು. ವಿದ್ಯಾರ್ಥಿಗಳಿಗೆ ಅದು ಭಯಪ್ರದವಾಗಿದೆ. ಆದರೆ ಜೀವನದಲ್ಲಿ ಯಾವ ರಂಗದಲ್ಲಿಯೂ ಅದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ವ್ಯಾಪಾರಿಗಳಿಂದ ಹಿಡಿದು ಕಾರಕೂನರ ವರೆಗೆ ಎಂಜಿನಿಯರರಿಂದಾರಂಭಿಸಿ ಗೃಹಿಣಿಯರ ತನಕ ಗಣಿತ ಯಾರನ್ನೂ ಬಿಟ್ಟಿಲ್ಲ. ಆದ್ದರಿಂದ ನಿಮಗೆ ಮೆಚ್ಚಲಿ ಮೆಚ್ಚದಿರಲಿ, ಅದರೊಡನೆ ಕೂಡಿ ಬಾಳಲು ಕಲಿಯುವುದೇ ಜಾಣತನ.

ಗಣಿತವು ತಲೆನೋವಾಗುವುದಕ್ಕೆ ಒಂದು ಕಾರಣವೆಂದರೆ, ನಿಮಗೆ ಒಂದು ಲೆಕ್ಕವನ್ನು ಹೇಗೆ ಬಿಡಿಸಬೇಕೆಂದು ಗೊತ್ತಿದ್ದರೂ ಲೆಕ್ಕ ಮಾಡುವಾಗ ಕೈತಪ್ಪು, ಮನತಪ್ಪುಗಳಿಂದ ಎಲ್ಲಾದರೂ ಜಾರಬಹುದು. ಇಂಥ ಒಂದು ಚಿಕ್ಕ ತಪ್ಪು ನಡುವೆ ಆದರೂ ಅದು ಕೊನೆಗೆ ನಿಮ್ಮ ಉತ್ತರದಲ್ಲಿ ಮಹಾ ತಪ್ಪಿನಲ್ಲಿ ಪರ್ಯವಸಾನ ಹೊಂದಬಹುದು.

ಆದ್ದರಿಂದ ಬುದ್ಧಿವಂತರು ಲೆಕ್ಕಗಳನ್ನು ಮಾಡುವಾಗ ಪ್ರತಿ ಹೆಜ್ಜೆಗೂ ತಾವು ಪಡೆದ ಉತ್ತರ ಸರಿಯೇ ಎಂದು ಖಚಿತಪಡಿಸಿಕೊಂಡು ಹೆಜ್ಜೆ ಮುಂದಿರಿಸುತ್ತಾರೆ. ಆದರೆ ಖಚಿತಪಡಿಸಿಕೊಳ್ಳುವುದು ಹೇಗೆ? ಪ್ರತಿಯೊಂದು ಲೆಕ್ಕದ ಪ್ರತಿಯೊಂದು ನಡೆಯನ್ನೂ ಎರಡೆರಡು ಸಾರಿ ಮಾಡಿ ನೋಡಿಕೊಳ್ಳುವುದೆಂದರೆ ಭಾರಿ ಶ್ರಮ ಹಾನಿ ಮತ್ತು ಕಾಲಹಾನಿಯಲ್ಲವೆ? ಇದಕ್ಕೇನಾದರೂ ಸುಲಭೋಪಾಯವಿಲ್ಲವೆ?

ಇದೆ. ಬಹಳ ಕಡಿಮೆ ಶ್ರಮದಿಂದ ನೀವು ನಿಮ್ಮ ಲೆಕ್ಕದ ಉತ್ತರ ಸರಿಯೋ ತಪ್ಪೋ ಎಂದು ಖಚಿತಪಡಿಸಿಕೊಳ್ಳಬಹುದು.

ಪ್ರಪಂಚದ ಎಲ್ಲ ಸರಳ ಗಣಿತಗಳನ್ನೂ ನಾಲ್ಕು ವಿಧವಾಗಿ ವಿಂಗಡಿಸಬಹುದು: (೧) ಸಂಕಲನ—ಕೂಡಿಸುವಿಕೆ; (೨) ವ್ಯವಕಲನ—ಕಳೆಯುವಿಕೆ; (೩) ಗುಣಾಕಾರ ಮತ್ತು (೪) ಭಾಗಾಹಾರ. ಈ ನಾಲ್ಕು ಕ್ರಮಗಳ ಹೊರತು ಮತ್ತಾವ ಲೆಕ್ಕವೂ ಸಾಮಾನ್ಯರ ಜೀವನದಲ್ಲಿ ಪ್ರವೇಶಿಸುವ ಸಂಭವ ಕಡಿಮೆ. ಇಂಥ ಲೆಕ್ಕಗಳನ್ನು ಮಾಡಿದಾಗ ಉತ್ತರ ಸರಿಯೆಂದು ಸುಲಭವಾಗಿ ಖಚಿತಪಡಿಸಿಕೊಳ್ಳಲು ಸಾಧ್ಯವಿದ್ದರೆ ಕಷ್ಟದ ಬಹುಭಾಗದಿಂದ ಪಾರಾದಂತೆ. ಅದರಲ್ಲಿಯೂ ಗುಣಾಕಾರ, ಭಾಗಾಹಾರಗಳೇ ವಿಶೇಷ ತಪ್ಪುಗಳಿಗೆ ಕಾರಣವಾಗುವುದರಿಂದ ಅವುಗಳನ್ನೇ ಮೊದಲು ವಿವೇಚಿಸುವಾ.

೧. **ಗುಣಾಕಾರ:** ಹೀಗೊಂದು ಗುಣಾಕಾರ

ಲೆಕ್ಕವಿದೆಯೆಂದುಕೊಳ್ಳಿರಿ :

೯೭೨ × ೮೯೭

ಇದನ್ನು ನೀವು ಹೀಗೆ ಬಿಡಿಸುತ್ತೀರಿ :

೯೭೨ × ೮೯೭
(ಗುಣ್ಯ) (ಗುಣಕ)

೬೮೦೪
೮೭೪೮
೭೭೭೬

೮,೭೧,೮೮೪ ಗುಣಲಬ್ಧ

ಈಗ ನಿಮಗೆ ಸಂಶಯ ಬರುತ್ತದೆ, ಈ ಉತ್ತರ ಸರಿಯೋ ಅಥವಾ ಎಲ್ಲಾದರೂ ತಪ್ಪಿ ಹೋಗಿದೆಯೋ ಅಂತ. ಇಲ್ಲಿದೆ, ಪುನಃ ಗುಣಿಸಿ ನೋಡದೆಯೆ ಅದನ್ನು ಖಚಿತ ಪಡಿಸಿಕೊಳ್ಳುವ ಉಪಾಯ:

ನಿಮ್ಮ ಮುಂದಿರುವುದು ೯೭೨(B) × ೮೯೭ (A) = ೮,೭೧,೮೮೪(D) ಇದು ಸರಿಯೆ ಎಂದರಿಯಲು ಹೀಗೆ ಸಾಗಿರಿ :

(i) ಗುಣಕದ (A) ಅಂಕೆಗಳನ್ನೆಲ್ಲ ಕೂಡಿಸಿರಿ, ಅಂದರೆ

೮ + ೯ + ೭ = ೨೪

ಉತ್ತರದ ಅಂಕೆಗಳನ್ನು ಪುನಃ ಕೂಡಿಸಿರಿ, ಅಂದರೆ

೨ + ೪ = ೬ -- (A)

(ii) ಗುಣ್ಯದ (B) ಅಂಕೆಗಳನ್ನೆಲ್ಲ ಮೇಲಿನಂತೆಯೆ ಕೂಡಿಸಿರಿ.

೯ + ೭ + ೨ = ೧೮;


೧ + ೮ = ೯ – (B)

(iii) ಗುಣಲಬ್ಧದ ಅಂಕೆಗಳನ್ನೆಲ್ಲ ಹಾಗೆಯೆ ಕೂಡಿಸಿರಿ.

೮ + ೭ + ೧ + ೮ + ೮ + ೪ = ೩೬;

೩ + ೬ = ೯ – (D)

ಈಗ ಒಂದು × ಚಿಹ್ನೆಯನ್ನು ಹಾಕಿ A ಮತ್ತು B ಗಳನ್ನು ಕೆಳಗಿನಂತೆ ಭರ್ತಿಮಾಡಿ.

(i) 

(ii) 

ಈಗ, A × B = ೬ × ೯ = ೫೪; ಅದರ ಏಕಾಂಕ ಸಂಗ್ರಹರೂಪ ೫ + ೪ = ೯ – (C)

ಇನ್ನು ಈ ಕೆಳಗಿನಂತೆ C ಮತ್ತು Dಗಳನ್ನು ಭರ್ತಿಮಾಡಿ :

(iii) 

(iv) 

ಈಗಾಗಲೇ C ಮತ್ತು D ಒಂದೇ ಸಂಖ್ಯೆಯಾಗಿರುವುದು ನಿಮ್ಮ ಗಮನಕ್ಕೆ ಬಂದಿರಬಹುದು. ಎಷ್ಟೇ ಸ್ಥಾನಗಳುಳ್ಳ ಯಾವುದೇ ಗುಣಾಕಾರ ಲೆಕ್ಕವಿರಲಿ C ಯಾವಾಗಲೂ D ಗೆ ಸಮವಾಗಿರಬೇಕು. ಇಲ್ಲದಿದ್ದರೆ ನೀವು ಲೆಕ್ಕಮಾಡುವಾಗ ಎಲ್ಲೋ ತಪ್ಪಿದ್ದೀರೆಂದು ಅರ್ಥ.

ಸೂತ್ರ ೧

ಯಾವುದೇ ಗುಣಾಕಾರದಲ್ಲಿ ಗುಣಕ (A) ಮತ್ತು ಗುಣ್ಯ (B) ಗಳನ್ನು ಏಕಾಂಕ ಸಂಗ್ರಹ ರೂಪಕ್ಕಿಳಿಸಿ ಅವೆರಡನ್ನೂ ಗುಣಿಸಿ ಪುನಃ ಏಕಾಂಕ ಸಂಗ್ರಹ ರೂಪಕ್ಕೆ ಇಳಿಸಿದರೆ ಬರುವ ಅಂಕೆಯು (C) ಯಾವಾಗಲೂ ಗುಣಲಬ್ಧದ (D) ಏಕಾಂಕ ಸಂಗ್ರಹರೂಪ ಅಂಕೆಗೆ

ಸರಿಯಾಗಿರುತ್ತದೆ. ಹೀಗಿಲ್ಲದಿದ್ದರೆ ನಿಮ್ಮ ಗುಣಾಕಾರ ತಪ್ಪಾಗಿದೆ.

ಇದನ್ನು ದಶಮಾಂಶ ಲೆಕ್ಕಗಳಿಗೂ ಅನ್ವಯಿಸಬಹುದು.

ಉದಾಹರಣೆಗೆ—


೮೭·೫೩ × ೩೭·೬೪

= ೩೨೯೪·೬೨೯೨

ಇದು ಸರಿಯೋ ತಪ್ಪೋ ಎಂದು ನೋಡಬೇಕಾದರೆ ಹೀಗೆ ಸಾಗಿ: ಗುಣ್ಯದ ಅಂಕೆಗಳ ಸಂಗ್ರಹಾಂಕ ೮+೭+೫+೩=೨೩; ೨+೩=೫ (B)

ಗುಣಕದ ಸಂಗ್ರಹಾಂಕ ೩+೭+೬+೪=೨೦; ೨+೦=೨ (A)

ಲಬ್ಧದ ಸಂಗ್ರಹಾಂಕ ೩+೨+೯+೪+೬+೨+೯+೨=೩೭; ೩+೭=೧೦; ೧+೦=೧ (D)



೨ × ೫ = ೧೦; ೧+೦ = ೧ (C) ಈಗ



ಉತ್ತರ ಸರಿಯಾಗಿದೆ.

ಮೇಲಿನ ಕ್ರಮವನ್ನು ಓದಿ ತಿಳಿದುಕೊಂಡ ಮೇಲೆ ಕಣ್ಮುಚ್ಚಿ ತೆರೆಯುವುದರೊಳಗಾಗಿ ನೀವು ಎಷ್ಟೇ ದೊಡ್ಡ ಸಂಖ್ಯೆಗಳ ಗುಣಾಕಾರದ ಉತ್ತರವನ್ನೂ ಖಚಿತಪಡಿಸಿಕೊಳ್ಳಬಲ್ಲಿರಿ.

೨. ಭಾಗಾಹಾರ: ಹೀಗೊಂದು ಲೆಕ್ಕವಿದೆಯೆಂದುಕೊಳ್ಳಿ.

(A) (C)
೫೬೩೮೭ ÷ ೩೭

ನೀವು ಸಾಮಾನ್ಯಕ್ರಮದಂತೆ ದೊಡ್ಡ ಭಾಗಾಹಾರ ಮಾಡಿ ಈ ಲೆಕ್ಕದ ಉತ್ತರ,

(B) (E)
೧೫೨೩ ಶೇಷ ೩೬

ಎಂದು ಕಂಡುಹಿಡಿಯುತ್ತೀರಿ.

ಇದು ಸರಿಯೋ ನೋಡಬೇಕಾದರೆ C, B, A ಮತ್ತು E ಯ ಸಂಗ್ರಹಾಂಕ ತೆಗೆಯಿರಿ.

C = ೩+೭ = ೧೦; ೧+೦ = ೧

B = ೧+೫+೨+೩ = ೧೧; ೧+೧ = ೨

A = ೫+೬+೩+೮+೭ = ೨೯;


(ಇಲ್ಲಿಗೇ ನಿಲ್ಲಿಸಿರಿ)

E = ೩+೬ = ೯

ಈಗ A ಯಿಂದ E ಕಳೆಯಿರಿ : ೨೯-೯=೨೦

ಸಂಗ್ರಹಾಂಕ ಮಾಡಿರಿ: ೨+೦ = ೨

ಇದನ್ನು A_1 ಎಂದು ಕರೆಯಿರಿ. ಈಗ,



$D=A_1$ ಆಗಿರುವುದರಿಂದ ಉತ್ತರ ಸರಿಯಾಗಿದೆ.

ಸೂತ್ರ ೨

ಯಾವುದೇ ಭಾಗಾಹಾರ ಲೆಕ್ಕದಲ್ಲಿ ಭಾಜಕ (C) ಮತ್ತು ಭಾಗಲಬ್ಧಗಳ (B) ಗಳ ಸಂಗ್ರಹಾಂಕಗಳನ್ನು ಗುಣಿಸಿ ಬರುವ ಸಂಖ್ಯೆಯ ಸಂಗ್ರಹಾಂಕವು(D), ಭಾಜ್ಯದಿಂದ ಶೇಷಸಂಖ್ಯೆಯನ್ನು ಕಳೆದು ಬಂದ ಸಂಗ್ರಹಾಂಕಕ್ಕೆ (A_1) ಸರಿಯಾಗಿರುತ್ತದೆ.

ಸಂಕಲನ ವ್ಯವಕಲನಗಳಲ್ಲಿ ಈ ಸೂತ್ರಗಳು ಅಷ್ಟು ಉಪಯೋಗವಾಗದಿದ್ದರೂ ಸಂಶಯ ನಿವಾರಣೆ ಮಾಡಿಕೊಳ್ಳಬೇಕೆನಿಸಿದಾಗ ಖಂಡಿತ ನೆರವಾಗುವವು.




ದಿನೇ ದಿನೇ

ಅಧಿಕ ಸುಂದರ ಚರ್ಮ—

ಹೊಸ ರೆಕ್ಸೋನ


ಅದರ ಮರ್ಮ



ನೀವು ರೆಕ್ಸೋನವನ್ನು ಬಳಸುವಾಗ ಅದರ ಅದ್ಭುತ ಗುಣ ನಿಮಗೆ ಕಂಡುಬರುವುದು. ಅದರ ಮೃದುವಾದ ನೊರೆಯಲ್ಲಿ ಕ್ಯಾಡಿಲ್—ಚರ್ಮವನ್ನು ಸುಂದರಗೊಳಿಸುವ ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣ—ಇದೆ. ಅದರ ಪ್ರಭಾವ ಚರ್ಮದ ಅಂತರ್ಭಾಗಕ್ಕೂ ಬೀಳುತ್ತದೆ ಮತ್ತು ಅದರಿಂದ ಚರ್ಮವು ಹೆಚ್ಚು ನುಣುಪಾಗಿ, ಹೆಚ್ಚು ಕೋಮಲವಾಗಿ ಸುಂದರವಾಗುವುದು!

ಬಹಳ ಹೊತ್ತಿನವರೆಗೆ ನಿಮಗೆ ಉಲ್ಲಾಸ ಹನ್ನೀಯುವ ವಿಶಿಷ್ಟ ಪರಿಮಳವಿರುವ ರೆಕ್ಸೋನ ನಿಮ್ಮ ಸ್ನಾನಕ್ಕೆ ಆದರ್ಶಪ್ರಾಯವಾದುದು.





ಹೊಸ ರ್ಯಾಪರ್ ಇರುವ, ಹೊಸ
ಆಕಾರವಿರುವ, ಹೊಸ ಹಸುರು
ಬಣ್ಣವಿರುವ ಹೊಸ ರೆಕ್ಸೋನ
ನಿಮ್ಮ ಪ್ರೀತಿಗೆ
ಪಾತ್ರವಾಗುವುದು.

ಹೊಸ ರೆಕ್ಸೋನ—ನಿಮ್ಮ ಚರ್ಮಕ್ಕೆ ಹಿತಕರ

RP. 169-50 KN

ಉದಾಹರಣೆಗೆ,

೯೩೭೮೫
೬೪೩೭೮
೭೫೩೨೧
೫೧೭೮೯
———
೨೮೫೨೭೩

ಇದು ಸರಿಯೇ ಎಂದು ನೋಡಲು ಹೀಗೆ ಸಾಗಿರಿ—

೯೩೭೮೫	ಸಂಗ್ರಹಾಂಕ	೫
೬೪೩೭೮	,,	೧
೭೫೩೨೧	,,	೯
೫೧೭೮೯	,,	೩
೨೮೫೨೭೩	,,	೯

ಈಗ ಕೂಡಿಸಬೇಕಾದ ಸಂಖ್ಯೆಗಳ ಸಂಗ್ರಹಾಂಕಗಳ ಮೊತ್ತ ೫+೧+೯+೩=೧೮. ಅದರ ಸಂಗ್ರಹಾಂಕ ೧+೮=೯ ಇದು ಉತ್ತರದ ಸಂಗ್ರಹಾಂಕಕ್ಕೆ (೯) ಸರಿಯಾಗಿದೆ. ಆದ್ದರಿಂದ ಉತ್ತರ ಸರಿ.

ವ್ಯವಕಲನ ಲೆಕ್ಕದಲ್ಲಿ ಹೀಗೆ—

೫೬೭೯೮೫೩೨	ಸಂ. ೪೫=೪೫	(A)
−೪೭೯೮೦೬೯೩	ಸಂ. ೪೬=೧೦	(B)
೮೮೧೭೮೩೯	ಸಂ. ೪೪= ೮	(C)

ಈಗ A ಯಿಂದ B ಕಳೆಯಿರಿ. ೪೫−೧೦=೩೫. ಅದನ್ನು ಸಂಗ್ರಹಿಸಿರಿ. ೩+೫=೮. ಇದು ಉತ್ತರದ ಸಂಗ್ರಹಾಂಕಕ್ಕೆ ಸರಿಯಾಗಿದೆ. ಆದ್ದರಿಂದ ಉತ್ತರ ಸರಿ.

(ವ್ಯವಕಲನದಲ್ಲಿ ಸಂಗ್ರಹಾಂಕವನ್ನೆಣಿಸುವಾಗ A ಯಿಂದ B ಕಡಿಮೆಯಾಗುವಂತೆ ಸಂಗ್ರಹಿಸಬೇಕೆಂಬ ಸೂಕ್ಷ್ಮ ಬದಲಾವಣೆಯನ್ನು ಗಮನಿಸಿರಿ.)

ಈ ಸುಲಭೋಪಾಯಗಳು ಶೀಘ್ರವಾಗಿ ತಪ್ಪುಗಳನ್ನು ಕಂಡುಹಿಡಿಯುವಲ್ಲಿ ಅತ್ಯಂತ ಉಪಕಾರಿಗಳಾದರೂ ಕೆಲ ಎಚ್ಚರಿಕೆ ಮಾತುಗಳನ್ನೂ ಹೇಳಬೇಕಾಗಿದೆ.

ಗುಣಿಸುವಾಗ ಬರುವ ಸಂಖ್ಯೆಗಳನ್ನು ಸರಿಯಾಗಿ ಕೂಡಿಸಬೇಕು. ಮತ್ತು ಅಂಕೆಗಳನ್ನು ಸರಿಯಾದ ಸ್ಥಾನದಲ್ಲಿ ಹಾಕಬೇಕು. ಅಂಕೆಗಳ ಸ್ಥಾನಪಲ್ಲಟವಾದರೆ ಮೇಲಿನ ಉಪಾಯದಿಂದ ತಪ್ಪು ತಿಳಿಯಲಾರದು. ಉದಾಹರಣೆಗಾಗಿ ೯೩೭೫ ನ್ನು ೯೭೩೫ ಎಂದು ಬರೆದರೆ ತಪ್ಪು ಸಿಗುವುದಿಲ್ಲ.

ನಿತ್ಯ ಜೀವನದಲ್ಲೂ ಈ ಸೂತ್ರಗಳನ್ನು ಚಲಾಯಿಸಬಹುದೆಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನೀವು ಅಂಗಡಿಯಲ್ಲಿ ೧೬೭ ಸೇರು ಅಕ್ಕಿಯನ್ನು ಸೇರಿಗೆ ರೂ. ೦.೭೩ ರಂತೆ ಕೊಳ್ಳುತ್ತೀರಿ. ವರ್ತಕನು ರೂ. ೧೨೧·೯೫ ಕೊಡಿ ಎನ್ನುತ್ತಾನೆ. ನೀವು ತತ್‌ಕ್ಷಣ ೧+೬+೭=೧೪ = ೧+೪=೫; ಮತ್ತು ೭+೩=೧೦=೧; ೫×೧=೫ ಮತ್ತು ೧+೨+೧+೯+೫=೧೮=೯ ಎಂದೆಣಿಸಿಕೊಂಡು ಅವನ ಲೆಕ್ಕ ತಪ್ಪೆಂದು ಹೇಳಬಹುದು. ಅವನು ಇನ್ನೊಮ್ಮೆ ಎಣಿಸಿ ೧೨೧·೯೧ ಎಂದು ಸರಿಯಾಗಿ ನಿಮ್ಮಿಂದ ಇಸಿದುಕೊಳ್ಳಬಹುದು. ನಿಮಗೆ ತಪ್ಪೆಂದು ತಿಳಿದರೆ ತಾನೆ ಅವನನ್ನು ಕೇಳುವುದು? ✱

ಸಂನ್ಯಾಸಿಗಳು ತೆಳ್ಳಗಿದ್ದರೆ ಚಂದ; ಪಶುಗಳು ಕೊಬ್ಬಿದ್ದರೆ ಚಂದ; ಗಂಡಸರು ಪಂಡಿತರಾಗಿದ್ದರೆ ಚಂದ; ಹೆಂಗಸರು ಗೃಹಿಣಿಯರಾಗಿದ್ದರೆ ಚಂದ.

—ಬೃಹ್ಯೇ ನೀತಿಸಾರ

ಲೆಡ್ರು ಅದ್ವಿತೀಯ ಪತ್ತೇದಾರನಾಗಿದ್ದ ಆದರೆ—

ಆತ ಕನಸಿನಲ್ಲಿ ಕೊಲೆ ಮಾಡಿದ

ರಾ. ಕ.


"ಲೆಡ್ರೂ, ನಿನಗೆ ವಿಶ್ರಾಂತಿ ಅತಿ ಅಗತ್ಯವೆಂದು ನಮಗೆ ಚೆನ್ನಾಗಿ ಗೊತ್ತಿದೆ. ಆದರೆ ದುರ್ದೈವದಿಂದ ನಿನ್ನನ್ನು ಮತ್ತೆ ಕೆಲಸಕ್ಕೆ ತೊಡಸಗಿಬೇಕಾಗಿದೆ. ನೋಡೀ ಕಾಗದಗಳನ್ನು. ಲೆ ಹಾವ್ರೆ ಪೋಲೀಸರು ಪೂರಾ ಅಪ್ರತಿಭರಾಗಿದ್ದಾರೆ. ಇಡೀ ಫ್ರಾನ್ಸಿನಲ್ಲಿ ಈ ರಹಸ್ಯವನ್ನೊಡೆಯುವ ಶಕ್ತಿ ನಿನಗೊಬ್ಬನಿಗೆ ಮಾತ್ರ ಇದೆಯೆನಿಸುತ್ತದೆ."

ಪ್ಯಾರಿಸಿನ ಗುಪ್ತಪೋಲೀಸ್ ಪಡೆಯ (ಶುರಿಟಿ) ವರಿಷ್ಠಾಧಿಕಾರಿ ಕೆಲ ಕಾಗದಗಳನ್ನು ರಾಬರ್ಟ್ ಲೆಡ್ರು ಕಡೆ ತಳ್ಳಿದ. ಲೆಡ್ರು ಅವುಗಳ ಮೇಲೊಮ್ಮೆ ಕಣ್ಣು ಹಾಯಿಸಿದ.

ನೌಕಾನಗರವಾದ ಲೆ ಹಾವ್ರೆಯಲ್ಲಿ ಆರು ಜನರು ಸದ್ದಿಲ್ಲದೆ ಕಾಣೆಯಾಗಿ ಹೋಗಿದ್ದರು. ಅವರ ಪತ್ತೆಯಾಗಬೇಕಾಗಿತ್ತು. ಈ ಪ್ರಕರಣದಲ್ಲಿ ಪ್ರಬಲವಾದ ಯಾವುದೋ ಧೂರ್ತ ತಂಡದ ಕೈವಾಡವಿದ್ದಂತಿತ್ತು. ಅದರ ರಹಸ್ಯಸ್ಫೋಟಕ್ಕೆ ಕೈಹಾಕಿದವರಿಗೆಲ್ಲ ಅಜ್ಞಾತ ಶಕ್ತಿಯೊಂದು ಅಡ್ಡಗಾಲು ಹಾಕುತ್ತಿರುವಂತೆ ಭಾಸವಾಗುತ್ತಿತ್ತು.

ಇದು ಲೆಡ್ರೂ ಹೊರತು ಮತ್ತಾರಿಗೂ ನೀಗುವ ಕಾರ್ಯವಲ್ಲೆಂದು ಪೋಲೀಸ್ ಖಾತೆಗೆ ಖಚಿತವಾಯಿತು.

ಕಳೆದ ಶತಮಾನದ ಉತ್ತರಾರ್ಧದ ಉತ್ತರ ಭಾಗದಲ್ಲಿ ಫ್ರಾನ್ಸಿನಲ್ಲಿ ಅತಿ ಪ್ರಖ್ಯಾತನಾಗಿದ್ದ ಒಬ್ಬ ಪತ್ತೇದಾರ ಅಂದರೆ ಲೆಡ್ರು. ಇವನ ತೀಕ್ಷ್ಣ ಬುದ್ಧಿ, ಮತ್ತು ಅಗಾಧ ಸ್ಮರಣಶಕ್ತಿಗಳಿಂದೀತ



ಅಸಾಧ್ಯ ಕೊಲೆ ದರೋಡೆಗಳ ಮೂಲಗಳನ್ನು ಪತ್ತೆ ಹಚ್ಚುತ್ತಿದ್ದನು. ಇವನ ಶತ್ರುಗಳು ಭೂಮಿಗತರು. ಮಿತ್ರರೂ ಭೂಮಿಯ ಮೇಲೆ ವ್ಯವಹಾರ ನಡೆಸುವ ಎಲ್ಲ ಬಗೆಯ ಜನರು. ಬೆಳಗಿನಿಂದ ಸಂಜೆಯ ವರೆಗೆ ಈತನ ಶೋಧ ಕಾರ್ಯ ನಡೆದಿರುತ್ತಿತ್ತು. ರಾತ್ರಿಯಿಂದ ಬೆಳಗಿನ ವರೆಗೆ ಹೋಟಲು, ನೃತ್ಯ, ಸೆರೆ, ಇವುಗಳಲ್ಲಿ ಹೊತ್ತು ಹೋಗುತ್ತಿತ್ತು.

೧೮೮೭ ರಲ್ಲಿ ಲೆ ಹಾವ್ರೆಯ ನಾಪತ್ತೆ ಪ್ರಕರಣ ಲೆಡ್ರು ಕೈಗೆ ಒಪ್ಪಿಸಲ್ಪಡುವುದಕ್ಕೆ ಮೊದಲು ಆತ ಪ್ಯಾರೀಸಿನ ಅತಿ ನಿಗೂಢ ಕೊಲೆಯೊಂದನ್ನು ಕೇವಲ ತನ್ನ ಮೂಗಿನ ಬಲದಿಂದೆಂಬಂತೆ ಪತ್ತೆ ಮಾಡಿದ್ದ. ಒಬ್ಬ ಚಿತ್ರಕಾರನೊಬ್ಬನ ರುಂಡರಹಿತ ಶರೀರ ಅವನ ಸ್ಟೂಡಿಯೋದಲ್ಲಿ ಬಿದ್ದಿತ್ತು. ಪೋಲೀಸರಿಗೆ ಅದರ ತಲೆ ಬಾಲವಾಗಲಿಲ್ಲ. ಲೆಡ್ರೂ ಅಲ್ಲಿಗೆ ಬಂದಾಗ ಆತನಿಗೆ ಯಾವುದೋ ಪರಿಚಿತ ಸುಗಂಧದ ಭಾಸವಾಯಿತು. ಹೌದು, ಅದು ಲಾ ಪ್ಲುಮೆಟಾಳು ಉಪಯೋಗಿಸುವಂಥದು. ಲಾ ಪ್ಲುಮೆಟಾ ಒಬ್ಬ ಪ್ರಸಿದ್ಧ ವಾರಾಂಗನೆ. ಆದರೆ ಎಷ್ಟು ಶೋಧಿಸಿದರೂ ಅವಳ ಪತ್ತೆ ಹತ್ತಲಿಲ್ಲ. ತಿಂಗಳ ಹಿಂದೆ ತಿಂಗಳು ಕಳೆದವು. ವರ್ಷವೂ ದಾಟಿತು. ಲೆಡ್ರೂಗೆ ಕಾಲ ಕಳೆದಂತೆ ಈ ಖೂನಿಯ ಪತ್ತೆಯ ಹಂಬಲ ಹೆಚ್ಚುತ್ತಲೇ ಇತ್ತು. ಅವನ ಪ್ರಕೃತಿ ಕೆಡುತ್ತಿತ್ತು. ವರಿಷ್ಠರೂ ಈ ಪ್ರಕರಣದ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳಬೇಡೆಂದು ಹೇಳಿದರು. ಲೆಡ್ರೂ ಕೇಳಲಿಲ್ಲ.

ಕೊನೆಗೂ ಲೆಡ್ರೂ ಕೊಲೆಯ ಪತ್ತೆ ಹಚ್ಚಿದ. ಆದರೆ ಕೊಲೆಯಾದವ ಕಲಾವಿದನಾಗಿರಲಿಲ್ಲ. ಲಾ ಪ್ಲುಮೆಟ್ಟಳೂ ಕಲಾವಿದನೂ ಸೇರಿ ಈ ಕೊಲೆಯ ನಾಟಕ ಹೂಡಿ ಈಗ ಬೇರೆಡೆ ಸುಳ್ಳು ಹೆಸರಿಂದ ವಾಸಿಸುತ್ತಿದ್ದರು. ಕೊಲೆಯಾದ ಚಿತ್ರಕಾರನ ಚಿತ್ರಗಳೆಂದು ,ಅವಳು ಅವನ ಚಿತ್ರಗಳನ್ನು ಮಾರಿ ಧಾರಾಳ ಹಣ ಗಳಿಸುತ್ತಿದ್ದಳು!

ಸಮಸ್ಯೆ ಬಿಡಿಸಲ್ಪಟ್ಟಿತು. ಆದರೆ ಅದಕ್ಕಾಗಿ ಪಟ್ಟ ಶ್ರಮದಿಂದ ಲೆಡ್ರೂನ ಸ್ವಾಸ್ಥ್ಯ ಕೆಟ್ಟಿತು.

ಶುರಿಟೆ ಹೆಡ್‌ಕ್ವಾರ್ಟರಿನ ಅಧಿಕಾರಿಗಳು ಇವನನ್ನು ಕರೆದು, "ನೀನು ಹೀಗೆ ತಲೆ ಕೆಡಿಸಿಕೊಂಡು ಪ್ರಕೃತಿಯನ್ನು ಅಲಕ್ಷ ಮಾಡಿದರೆ ಒಂದು ವರ್ಷದಲ್ಲೇ ಸತ್ತು ಹೋಗುವಿ ನೋಡು" ಎಂದರು. ಆಗಿನ್ನೂ ಇವನಿಗೆ ೩೫ ವರ್ಷ. ಲೆಡ್ರೂ ಅವರ ಒತ್ತಾಯಕ್ಕೆ ಹೂಂ ಎಂದ. ಆದರೆ ಲೆ ಹಾವ್ರೆ ಪ್ರಕರಣ ಮತ್ತೆ ಶುರಿಟೆಯ ಅಧಿಕಾರಿಗಳು ಲೆಡ್ರುವಿಗೇ ಶರಣುಹೋಗುವಂತೆ ಮಾಡಿತು. ಅದು ಅವನ ಕೊನೆಯ ಪ್ರಕರಣವಾದೀತೆಂದು ಆಗ ಯಾರೂ ಊಹಿಸಿರಲಿಲ್ಲ.

ಲೆ ಹಾವ್ರೆಗೆ ಇವನ ರವಾನೆಯಾಯಿತು. ಲೆಡ್ರೂ ಕೂಡ ಪ್ಯಾರೀಸಿಗೆ ಬೇಸತ್ತಿದ್ದ. ಲೆ ಹಾವ್ರೆಗೆ ಬಂದಾಗ ಇವನಿಗೂ ಹೊಸತನ ಕೊಂಚಮಟ್ಟಿಗೆ ಹಿತವೆನಿಸಿತು. ಅಲ್ಲಿಯ ಪೋಲೀಸರಿಗೆ ತಾನು ಬಂದುದಾಗಿ ಫೋನ್‌ಮಾಡಿದ. ಅವರು ಇವನಿಗಾಗಿ ಮೊದಲೇ ಕಾದಿದ್ದರು. ಇವನು ಇಳಕೊಳ್ಳಲು ಸಾಗರತೀರಕ್ಕೆ ಹತ್ತಿಯೆ ಇದ್ದ ಒಂದು ಒಳ್ಳೇ ಹೋಟಲಿನಲ್ಲಿ ವ್ಯವಸ್ಥೆ ಮಾಡಿದ್ದರು. ಕಿಟಿಕಿಯಿಂದ ಕಾಣುವ ಸಾಗರತೀರ ನಯನಾಭಿರಾಮವಾಗಿತ್ತು. ಕೋಣೆಯೂ ಸುಸಜ್ಜಿತವಾಗಿತ್ತು.

ಆಯಾಸವಾಗಿದ್ದರಿಂದ ಮಧ್ಯಾಹ್ನ ಆತ ಮಲಗಿಕೊಂಡ. ಆಗ ಮಲಗಿದವನು ಮುಂಜಾನೆಯೆ ಎದ್ದ. ಮಲಗುವಾಗ ರಿವಾಲ್ವರನ್ನು ತಲೆದಿಂಬಿನ ಕೆಳಗಿಟ್ಟಿದ್ದ.

ಮರುದಿನ ಬೆಳಗಾಗುವುದರಲ್ಲಿ ಇನ್ನೊಂದು ಹೊಸ ಕೊಲೆಯ ಶೋಧನೆಗೆ ಈತ ಸಹಾಯ ಮಾಡಬೇಕಾಯಿತು. "ಆಗಲಿ ನನ್ನ ಸಾಮಾನುಗಳನ್ನು ತರುವೆ" ಎಂದು ಹೇಳಿ ಲೆಡ್ರು ಲೆಹಾವ್ರೆ ಪೋಲೀಸ್ ಹೆಡ್‌ಕ್ವಾರ್ಟರ್ಸ್‌ನಿಂದ ಮರಳಿ ಕೋಣೆಗೆ ಬಂದಾಗ ಕೋಣೆಯಲ್ಲಿ ಇವನ ರಿವಾಲ್ವರೇ ಇಲ್ಲ. ಯಾರು ಕದ್ದಿರಬೇಕು? ಆದರೆ ಅದರ ಹತ್ತಿರವೇ ಇಟ್ಟಿದ್ದ ಗಡಿಯಾರ ಹಾಗು ವ್ಯಾಲೆಟ್

(ಬ್ಯಾಗು) ಹಾಗೇ ಇವೆ. ಕಳ್ಳ ಇವನ್ನು ಬಿಟ್ಟು ಹೋದುದರ ಅರ್ಥವೇನು? ಪತ್ತೆ ಹಚ್ಚುವುದು ಸುಲಭವಾಗಬಾರದೆಂದೆ? ಕಳವು ಮಾಡಿದ್ದು ಯಾವಾಗ? ನಿದ್ರಿಸಿದ್ದಾಗಲೋ? ಮುಂಜಾನೆ ಹೊರಗೆ ಹೋಗಿರುವಾಗಲೊ?— ಅಥವಾ ಇದು ಈತ ಊರು ಬಿಟ್ಟು ಹೋಗಬೇಕೆಂದು ಧೂರ್ತರ ತಂಡವಿತ್ತ ಸೂಚನೆಯೊ ?

ಲೆಡ್ರೂ ಚಿಂತಿತನಾಗಿ ಹೊಸ ಕೊಲೆಯ ವಿಚಾರಣೆ ಪ್ರಾರಂಭಿಸಿದ. ಅವನ ಹೋಟೆಲಿನಿಂದ ತೀರ ಹತ್ತಿರವೆನಿಸುವಂತಿದ್ದ ಸೆಂಟ್ ಅಂಡ್ರೆಸ್ಸಿ ಎಂಬಲ್ಲಿ ಕೊಲೆಯಾಗಿತ್ತು.

೪೫ ವರ್ಷದ ವಿವಾಹಿತ ಆಂಡ್ರೆ ಮೊನೆಟ್ ಎಂಬ ಗೃಹಸ್ಥ ರಾತ್ರಿ ಸಮುದ್ರದಂಡೆಯ ಮೇಲೆ ತಿರುಗಾಡಲಿಕ್ಕೆ ಬಂದಾಗ ಗುಂಡು ಹಾಕಿಕೊಲ್ಲಲ್ಪಟ್ಟಿದ್ದ. ಕೊಂದವನ ಬಗ್ಗೆ ಉಳಿದ ಒಂದೇ ಅವಶೇಷವೆಂದರೆ ನೀರೊಳಗಿಂದ ಹೊರಬಂದ ಮತ್ತು ನೀರಿಗೆ ಮರಳಿ ಹೋದ ಪದಚಿನ್ಹದ ಎರಡು ಸಾಲುಗಳು. ಅಲ್ಲಿ ಲೆಡ್ರು ಹೋದ ಮೇಲೆ, ಕೊಲೆಯಾದವನ ಎದೆಯನ್ನು ಸೀಳಿ ಪಾರಾಗಿ ಉಸುಕಿನಲ್ಲಿ ಸಿಕ್ಕಿದ್ದ ಗುಂಡೂ ಒಬ್ಬ ಸಿಪಾಯಿಗೆ ಸಿಕ್ಕಿತು.

ಗುಂಡಿನ ಮತ್ತು ಹೆಜ್ಜೆಯ ಪ್ಲಾಸ್ಟರ್ ಪಡಿಯಚ್ಚುಗಳನ್ನು ತಯಾರಿಸಲು ಲೆಡ್ರು ಹೇಳಿದ. ಬೇರಾರಿಗಾದರೂ ಭೆಟ್ಟಿಯಾಗಬೇಕೆ ಎಂದು ಕೇಳಿದಾಗ ಬೇಡ, ಪಡಿಯಚ್ಚುಗಳನ್ನಷ್ಟು ಬೇಗ ನನ್ನ ವಾಸಸ್ಥಳಕ್ಕೆ ಕಳಿಸಿಕೊಡಿರೆಂದ. ಮರುದಿನವೇ ಅವು ಅವನ ಕೋಣೆಗೆ ಬಂದು ಮುಟ್ಟಿದವು. "ಒಂದು ವಿಚಿತ್ರ ಬಗೆಯ ಜರ್ಮನ್ ರಿವಾಲ್ವರಿನ ಗುಂಡು ಎಂದು ತೋರುತ್ತದೆ. ಆದರೆ ಈ ಬಗೆಯ ರಿವಾಲ್ವರು ಫ್ರಾನ್ಸಿನಲ್ಲಿ ಯಾರ ಕಡೆಗೂ ಇದ್ದ ದಾಖಲೆ ಇಲ್ಲ" ಎಂದು ಅಧಿಕಾರಿಗಳು ಹೇಳಿದರು.

ಲೆಡ್ರೂ ಅವುಗಳನ್ನೊಮ್ಮೆ ಕಣ್ಣಿಟ್ಟು ನೋಡಿದ. "ಆಗಲಿ, ಇವನ್ನು ನಾನು ಪ್ಯಾರಿಸಿಗೆ ಒಯ್ಯುವೆನು. ಮತ್ತು ಈ ನಡುವೆ ನಿಮಗೆ ಎಲ್ಲವೂ ಗೊತ್ತಾಗುವುದು" ಎಂದು ಹೇಳಿದ. ಮತ್ತು ಹೆಚ್ಚು ಮಾತು ಬೆಳೆಸದೇ ಮುಂದಿನ ಗಾಡಿಯಿಂದಲೇ ಪ್ಯಾರೀಸಿಗೆ ಪ್ರಯಾಣ ಮಾಡಿದ. ನೆಟ್ಟಗೆ ಶುರಿಟೆ ಹೆಡ್‌ಕ್ವಾರ್ಟರ್ಸಿನಲ್ಲಿ ಹಾಜರಾದ.

ಆಶ್ಚರ್ಯಚಕಿತನಾದ, ಅಧಿಕಾರಿ "ಲೆಡ್ರು, ಲೆ ಹಾವ್ರೆಯಲ್ಲಿ ಏಳು ಕೇಸುಗಳು ಇನ್ನೂ ಬಗೆಹರಿಯದೇ ಬಿದ್ದಿರುವಾಗ ನೀನು ತಿರುಗಿ ಬಂದುದೇಕೆ?" ಎಂದು ಕೇಳಿದನು.

"ನಾನು ತಿರುಗಿ ಬರದಿದ್ದರೆ ಈ ಕೇಸುಗಳ ಸಂಖ್ಯೆ ಇನ್ನೂ ಹೆಚ್ಚುತ್ತಿತ್ತು. ಆರು ನಾವಿಕರ ಮಾತು ಹಾಗಿರಲಿ, ಏಳನೇ ಕೊಲೆಗಾಗಿ ನೀವು ನನ್ನನ್ನೇ ಬಂಧಿಸಬೇಕೆಂದು ಕೇಳಿಕೊಳ್ಳುತ್ತೇನೆ."

"ನಿನ್ನ ತಲೆ ಕೆಟ್ಟಿದೆಯೆ?"

"ಈಗ ಕೆಟ್ಟಿಲ್ಲ. ಆದರೆ ಇಲ್ಲಿ ನೋಡಿ. ಪುರಾವೆ ಇದೆ. ಇವು ಹಂತಕನ ಪಾದಮುದ್ರೆ, ಮತ್ತು ಗುಂಡಿನ ಮುದ್ರೆಗಳು ಇಲ್ಲಿವೆ...... ಈ ಗುಂಡು ನನ್ನ ಜರ್ಮನ್ ರಿವಾಲ್ವರಿನಿಂದೇ ಬಂದುದೆಂದು ನಿಮಗೆ ತಿಳಿಯಲು ತಡವಾಗದು. ತಾಳಿ, ಈ ಬಲಗಾಲ ಮುದ್ರೆ ನೋಡಿ. ಇಲ್ಲಿ ಹೆಬ್ಬೆರಳೇ ಇಲ್ಲ." ಇಷ್ಟು ನುಡಿದು ಲೆಡ್ರು ತನ್ನ ಕಾಲನ್ನು ಬೂಟಿನ ಹೊರತೆಗೆದು ತೋರಿಸಿದ. "ವಾಂಟ್ ಮರ್ಟರಿನ ಒಂದು ಕೇಸಿನ ಶೋಧನೆಯ ಕಾಲಕ್ಕೆ ಇದನ್ನು ನಾನು ಕಳೆದುಕೊಂಡದ್ದು ನಿಮ್ಮ ಜ್ಞಾಪಕದಲ್ಲಿರಬಹುದು." ಆ ಮೇಲೆ ದೀರ್ಘ ಶ್ವಾಸವನ್ನೆಳೆದುಕೊಂಡು ಹಿಂದೊರಗಿ ಮುಂದುವರಿದ. "ಇಷ್ಟೇ ಅಲ್ಲದೆ ಬೆಳಿಗ್ಗೆ ನಾನೆದ್ದಾಗ ನನ್ನ ಕಾಲುಚೀಲಗಳು ಒದ್ದೆಯಾಗಿದ್ದವು. ಅದು ವಾತಾವರಣದ ಆರ್ದ್ರತೆ ಇರಬಹುದೆಂದು ನಾನು ಮೊದಲು ತಿಳಿದಿದ್ದೆ. ಈಗ ನನಗನಿಸುತ್ತದೆ. ರಾತ್ರಿ ನಾನೇ ಎದ್ದು ಕಾಲಚೀಲ ತೊಟ್ಟು, ಅಂಡರ್‌ವೇರ್ ಹಾಕಿಕೊಂಡು ಕಿಡಿಕಿಯಿಂದ ಜಿಗಿದು ಹೊರಗೆ ಹೋಗಿ ತೀರದಿಂದ ಸಮುದ್ರದಲ್ಲಿ ಧುಮುಕಿ ಈಸುತ್ತ ಸೇಂಟ್-

ಅಂಡ್ರೆಸ್ಸಿನ ವರೆಗೆ ಹೋಗಿರಬೇಕು. ಅಲ್ಲಿ ಹೋಗಿ ಆಂಡ್ರೆ ಮೊನೆಟ್‌ನನ್ನು ಕೊಂದು ಮರಳಿ ಹಾಗೇ ಈಸಿ ತಿರುಗಿ ಬಂದಿರಬೇಕು. ಇದರ ಪೈಕಿ ಒಂದೂ ನನಗೆ ನೆನಪಿಲ್ಲ. ಆದರೂ ಈಗಿರುವ ಪುರಾವೆಗಳು ಇದನ್ನೇ ಹೇಳುತ್ತವೆ. ಆದ್ದರಿಂದ ನನ್ನನ್ನು ಬಂಧಿಸಿರಿ."

ಫ್ರಾನ್ಸಿನ ಅತಿ ಪ್ರಖ್ಯಾತ ಡಿಟೆಕ್ಟಿವನನ್ನೇ ವಿಧಿಯಿಲ್ಲದೆ ಜೈಲಿನಲ್ಲಿಡಲಾಯಿತು. ರಾತ್ರಿಯಾಯಿತು. ಪಹರೆಯವರಿಗೆ ಎಚ್ಚರಿದ್ದು ಅವನ ಚಲನವಲನಗಳನ್ನು ಗಮನಿಸಲು ತಿಳಿಸಲಾಗಿತ್ತು. ಆ ರಾತ್ರಿ ಈ ಗೂಢದ ಒಂದು ಎಳೆ ಸಿಕ್ಕಿತು.

ಮಧ್ಯರಾತ್ರಿ ಲೆಡ್ರು ಎದ್ದಿದ್ದ. ಕಬ್ಬಿಣದ ಸಲಾಕೆಗಳ ವರೆಗೆ ಬಂದಿದ್ದ. ಬಂದು ಚೀರಿದ್ದ: "ಅಸಾಧ್ಯ......ಒಮ್ಮೆಲೆ ಆರು; ಅಸಾಧ್ಯ!......ಹೀಗೇ ಮುಂದುವರಿಯುವುದೆಂದರೆ ಯಾವ ಮಾನವನಿಗಾದರೂ ಅಸಾಧ್ಯ...... ಒಂದಲ್ಲ, ಎರಡಲ್ಲ;– ಆರು! ಆರು!" ಎಂದವನೇ ಆತ ಸಲಾಕೆಗಳ ಮೇಲೆ ಗುದ್ದಿದ. ಅವನ್ನು ಮುರಿಯಲು ಯತ್ನಿಸಿದ. ಅವನ ಆ ಒದ್ದಾಟ ನೋಡಿದರೆ ಲೆಡ್ರು ತನ್ನ ಮೈ ಮೂಳೆ ಮುರಿಯುವವರೆಗೂ ಈ ಕಂಬಿಗಳೊಂದಿಗೆ ಗುದ್ದಾಡುವನೆಂದು ತೋರಿತು. ಆದರೂ ಆತನಿಗೆ ಎಚ್ಚರವಾಗಲಿಲ್ಲ. ಬಂದಹಾಗೇ ಹಿಂದೆ ಹೋಗಿ ಮತ್ತೆ ಮಲಗಿದ.

ಮರುದಿನ ಲೆಡ್ರುವಿನ ಅಂತಿಮ ಪರೀಕ್ಷೆಯಾಗಲೆಂದು ಇನ್ಸ್ಪೆಕ್ಟರರು ಯೋಚಿಸಿದರು. ಲೆಡ್ರುವಿಗೆ ತಿಳಿಯದಂತೆ ಅವನ ಕೋಣೆಯಲ್ಲಿ ಒಂದು ಪಿಸ್ತೂಲನ್ನು ಇರಿಸಿದರು. ನಡು ರಾತ್ರಿಗೆ ಲೆಡ್ರು ಮತ್ತೆ ಎದ್ದ. ಕಂಬಿಗಳ ವರೆಗೆ ನಡೆತಂದ. ಪಿಸ್ತೂಲಿನಿಂದ ಕಂಬಿಗಳಿಗೆ ಹೊಡೆದ. ಕಡೆಗೆ ಗುಂಡು ಹಾರಿಸಿದ. ಸಪ್ಪಳಕ್ಕೆ ಜೈಲಿಗೆ ಜೈಲೇ ಎಚ್ಚತ್ತಿತು. ನಿಂತು ನೋಡುತ್ತಿದ್ದ ಇನ್ಸ್ಪೆಕ್ಟರರನ್ನು ಗುರಿಯಿಟ್ಟು ಗುಂಡು ಹಾರಿಸಿದ. ಇನ್ಸ್ಪೆಕ್ಟರ್ ಹೊಟ್ಟೆಹಿಡಿದು ಹೊರಳಾಡಿದರು. ಲೆಡ್ರು ಚೀರಿದ. "ಫ್ರಾನ್ಸಿನ ಸುಖಜೀವಿಗಳನ್ನು ಪೀಡಿಸುವವರಿಗೆ ಮೃತ್ಯುವಿನ ಆಹ್ವಾನ!" ಹೀಗೆ ಹೇಳಿ ಲೆಡ್ರು ಮರಳಿ ಹೋಗಿ ಮಲಗಿಕೊಂಡ.

ಪಿಸ್ತೂಲು ಹುಸಿಗುಂಡುಗಳಿಂದ ತುಂಬಿದ್ದಾಗಿತ್ತು. ಇನ್ಸ್ಪೆಕ್ಟರ್‌ರಿಗೆ ಲೆಡ್ರುವಿನ ಗೂಢ ಗೋಚರವಾಯಿತು.

ಮರುದಿನ ಲೆಡ್ರುವಿಗೆ ಏನೂ ನೆನಪಿರಲಿಲ್ಲ. ವಿಚಾರಗಳ ಒತ್ತಡದಿಂದ ಅವನ ಅವಚೇತನದ ಮೇಲೆ ಬಹಳ ಭಾರ ಬಿದ್ದು ಆತ ರಾತ್ರಿ ನಡೆದು ಎದುರು ಸಿಕ್ಕವರನ್ನೆಲ್ಲ ಹಂತಕರೆಂದು ಹೇಳಿಕೊಳ್ಳುತ್ತಿದ್ದ. ಇದಕ್ಕಾಹುತಿಯಾಗಿದ್ದ ಆಂಡ್ರೆ ಮೊನೆಟ್. ಡಾಕ್ಟರರಿಂದ ಪರೀಕ್ಷೆ ಮಾಡಿಸಲಾಗಿ ಇದು ನರಘಾತಕ ನಿದ್ರಾಸಂಚಾರ ರೋಗ ಎಂದು ಅವರು ಹೇಳಿದರು.

ಕೊನೆಗೆ ಕೊನೆಯ ಪುರಾವೆಯಾಗಿ ಅವನ ಬಂದೂಕು ಸಿಕ್ಕಿತು. ಸಮುದ್ರ ತಳದಿಂದ ಪೋಲೀಸರು ಅದನ್ನು ಹೊರತೆಗೆದರು.

ಲೆಡ್ರುವೇ ಕೊಲೆಗಾರನೆಂದು ಜಾಹೀರುಪಡಿಸುವುದು ಒಳಿತಲ್ಲವೆಂದು ಬಗೆದ ಅಧಿಕಾರಿವರ್ಗ ಅವನನ್ನು ಕೆಲಸದಿಂದ ಮುಕ್ತಗೊಳಿಸಿ ಜಡ್ಡಿನ ರಜೆಯೆಂದು ಹೇಳಿ ಪ್ಯಾರಿಸಿನ ಹೊರಗಡೆ ಒಂದು ಚಿಕ್ಕ ತೋಟದಲ್ಲಿ ಇರಿಸಿತು. ಸಂತತ ರಕ್ಷಣೆಗೊಳಪಟ್ಟು ಈತ ಅಲ್ಲಿ ೩೦ ವರ್ಷಗಳ ವರೆಗೆ ಏಕಾಕಿಯಾಗಿ ಜೀವಿಸಿದ. ಆತ ಆಗಾಗ ರಾತ್ರಿ ಏಳುತ್ತಿದ್ದ. ಗೋಡೆಗಳಿಗೆ ಹಾಯುತ್ತಿದ್ದ. ಒದೆಯುತ್ತಿದ್ದ. ಅಬ್ಬರಿಸುತ್ತಿದ್ದ. ಆದರೆ ರಕ್ಷಕರು ಯಾವಾಗಲೂ ಅವನು ಈ ಕ್ರಿಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳದಿರುವಂತೆ ನೋಡಿಕೊಳ್ಳುತ್ತಿದ್ದರು.

೧೯೩೭ ರಲ್ಲಿ ಆತ ಕಾಲವಾದನು.

ಆ ಮೇಲೆ ಲೆಡ್ರುವಿನ ಕೊನೆಯ ಘೋರ ಇತಿಹಾಸವನ್ನು ಶುರಿಟೆ ಜಾಹೀರುಪಡಿಸಿತು. *

ಸಾವಿನಲ್ಲಿ ಭಾಗ್ಯ ಮತ್ತು
ಕಲೆ ಎರಡೂ ಇವೆ

ನೀವೆಂಥ ಸಾವು ಬಯಸುತ್ತೀರಿ?

ಕನ್ಹೈಯಾಲಾಲ ಮಿಶ್ರ ಪ್ರಭಾಕರ

ಪ್ರತಿಯೊಬ್ಬನೂ ತನ್ನ ಗೆಳೆಯರೊಡನೆ ಜೀವನಕ್ಕೆ ಸಂಬಂಧಪಟ್ಟ ಹಲವಾರು ಪ್ರಶ್ನೆಗಳನ್ನು ಕೇಳುತ್ತಾನೆ.

ನಾನೂ ನಿಮ್ಮ ಮಿತ್ರ...ಆದ್ದರಿಂದ ನಿಮಗೆ ಒಂದು ಪ್ರಶ್ನೆ ಕೇಳುತ್ತಿದ್ದೇನೆ...'ನೀವೆಂತಹ ಸಾವು ಬಯಸುತ್ತೀರಿ?' ಎಂಬುದೇ ಆ ಪ್ರಶ್ನೆ.

ಆಂ! ನೀವು ಪ್ರಶ್ನೆ ಕೇಳಿ ಬೆಚ್ಚುತ್ತೀರೇಕೆ? ಈ ಅಶುಭ ಹಾಗೂ ಅಸಂಬದ್ಧ ಪ್ರಶ್ನೆ ಕೇಳಿ ನಾನು ಅಸಭ್ಯತೆ ತೋರುತ್ತಿದ್ದೇನೆಂದೆ?

ಈ ಅತ್ಯಾವಶ್ಯಕ, ಶುಭ ಹಾಗೂ ಮಹತ್ವಪೂರ್ಣ ಪ್ರಶ್ನೆಯನ್ನು ನೀವು ಅಸಂಬದ್ಧವೆಂದು ಹೇಳುವುದೇ ಆಶ್ಚರ್ಯ. ಕಾರ್‍ಯತತ್ಪರ ಜೀವನದಲ್ಲಿ ನೀವೆಂದೂ ಇತ್ತ ದೃಷ್ಟಿ ಹರಿಸಲೇ ಇಲ್ಲ.

ಈಗ ಜನೇ ತರಗತಿಯಲ್ಲಿ ಓದುತ್ತಿರುವ ನಿಮ್ಮ ಹುಡುಗ ಮುಂದೆ I. A. S. ಪಾಸಾಗಿ ಕಲೆಕ್ಟರ್ ಆಗುತ್ತಾನೆಂದು ನೀವು ಯೋಚಿಸುತ್ತಿದ್ದೀರಿ...

ಈ ಬಾರಿ ತಪ್ಪಿದರೂ ಮುಂದಿನ ಚುನಾವಣೆಯಲ್ಲಿ ನೀವು ಖಂಡಿತವಾಗಿ ವಿಧಾನ ಸಭೆಗೆ ಆರಿಸಲ್ಪಡುವಿರೆಂದು ಈಗಲೇ ಕನಸು ಕಾಣತೊಡಗುವಿರಿ.

ಹೀಗೆಯೇ ಹಲವಾರು ಭವಿಷ್ಯದ್ವಿಚಾರಗಳತ್ತ ನೀವು ದೃಷ್ಟಿ ಹರಿಸುತ್ತಿದ್ದೀರಿ; ತಲೆ ಬಿಸಿ ಮಾಡಿಕೊಳ್ಳುತ್ತಿದ್ದೀರಿ...ಕಲ್ಪನೆ ಹೂಡುತ್ತಿದ್ದೀರಿ...ಯಾವುದೋ ಒಂದು ನಿರ್ಧಾರಕ್ಕೆ ತಲುಪಿದ್ದೀರಿ. ಆದರೆ ಇವೆಲ್ಲವೂ ಜೀವನದಲ್ಲಿ ಸರ್ವಥಾ ಅನಿಶ್ಚಿತ. ಮೃತ್ಯುವೊಂದೇ ನಿಶ್ಚಿತ ಆದರೆ ಆ ಬಗೆ ನೀವು ಒಮ್ಮೆಯೂ ಯೋಚಿಸಿಲ್ಲ.

ನೀವಿಚ್ಛಿಸಿದ ಸಾವೇ ನಿಮಗೆ ದೊರೆತೀತೆಂದು ಹೇಳುವುದು ಕಷ್ಟ...ಆದರೂ ಆ ಬಗ್ಗೆ ಯೋಚಿಸುವುದು ಆವಶ್ಯಕವೂ ಯೋಗ್ಯವೂ ಆಗಿದೆ. ಗಾಳಿಗೋಪುರ ಕಟ್ಟುವುದಕ್ಕಿಂತ ನೆಲದ ಮೇಲೆ ಮನೆ ಕಟ್ಟುವುದೇ ಹೆಚ್ಚು ಬುದ್ಧಿವಂತಿಕೆಯೆಂದು ನಿಮಗನಿಸುವುದಿಲ್ಲವೆ?

ಸಾವು ಮನುಷ್ಯನ ಅಸಹಾಯತೆಯಷ್ಟೇ ಅಲ್ಲ ಒಂದು ಕಲೆ—ಒಂದು 'ಸುಯೋಗ'—ಎಂಬುದಕ್ಕೆ ಇಡೀ ವಿಶ್ವವೇ ಸಾಕ್ಷಿಯಾಗಿದೆ.

*

ದಾರಾ ಒಬ್ಬ ಸುಕುಮಾರ ಸಾಹಿತಿ; ಹಾಗೂ ಔರಂಗಜೇಬ ಕ್ರೂರ ಶಾಸಕ. ಇಬ್ಬರೂ ಅಣ್ಣ-ತಮ್ಮಂದಿರು. ಆದರೆ ದಾರಾ ಜೈಲಿನಲ್ಲಿ ಬಂದಿ ಹಾಗೂ ಔರಂಗಜೇಬ ದಿಲ್ಲಿಯ ಸಿಂಹಾಸನಾರೂಢ. ಆದರೂ ದಾರಾ ಅಪಾಯಕಾರಿ; ತಮ್ಮನ ದಾರಿಯ ಮುಳ್ಳು. ಔರಂಗಜೇಬ ಆ ಮುಳ್ಳನ್ನು ಕಿತ್ತೊಗೆಯಲು ಆತುರನಾಗಿದ್ದಾನೆ. ಪರಿಣಾಮವಾಗಿ ಒಂದು ದಿನ ದಾರಾನನ್ನು ವಧಿಸಲು ಕೆಲ ಕಟುಕರು ಅವನ ಸೆರೆಮನೆಗೆ ಕಾಲಿಟ್ಟರು.

ಒಬ್ಬ ಮಹಾಪುರುಷನೆದುರಿಗೆ ಹೀನ ಮೃತ್ಯು ಕಾದಿದೆ! ಅದನ್ನು ತಪ್ಪಿಸಿಕೊಳ್ಳಲು ಯಾವ ಉಪಾಯವೂ ಇಲ್ಲ. ದಾರಾನಂಥ ಮಹಾತ್ಮನೆಲ್ಲಿ? ಈ ಅಸಹಾಯ ಮೃತ್ಯುವೆಲ್ಲಿ?

ಅವನೊಮ್ಮೆ ಆಯುಧಸುಸಜ್ಜಿತ ಕಟುಕರತ್ತ ದೃಷ್ಟಿ ಬೀರಿದ; ಮತ್ತು ತನ್ನನ್ನು ನೋಡಿಕೊಂಡ. ಅವನ ಕೈಯಲ್ಲೊಂದು ಚೂರಿಯಿತ್ತು. ಅದರಿಂದ ಅವನಾಗ ಸೇಬು ಕತ್ತರಿಸುತ್ತಿದ್ದ.

ದಾರಾ ಸೆಟೆದುನಿಂತ... 'ದುಷ್ಟರೆ, ತೈಮೂರ ವಂಶಜನಾದ ದಾರಾ ಹೇಡಿಯಂತೆ ಸಾಯಲಾರ ......ವೀರನಂತೆಯೇ ಕಾದಾಡಿ ಮಡಿಯುವ...

ಎಂದು ಅವನು ಚೂರಿ ಹಿಡಿದು ಕೊಲೆಗಡಕರ ಮೇಲೆರಗಿದ.

ಕ್ರೂರ ಕಟುಕರ ತೀಕ್ಷ್ಣ ಆಯುಧಗಳು ಕ್ಷಣಮಾತ್ರದಲ್ಲಿ ದಾರಾನ ಶಿರಸ್ಸನ್ನು ಚಂಡಾಡಿದವು. ಆಗಲೇ ಸ್ವರ್ಗದ ಹುತಾತ್ಮರು...'ದಾರಾ ಇಂದು ನೀನೆಮ್ಮ ಅತಿಥಿ' ಎಂದು ಕೂಗಿದರು.

ಸಾಧಾರಣ ಚೂರಿಯ ಆಘಾತವೇ ಕೊಲೆಯನ್ನು ಬಲಿದಾನವಾಗಿ ಮಾರ್ಪಡಿಸಿತ್ತು, ಮತ್ತು ದಾರಾನ ಮರಣ ಇತಿಹಾಸದ ಭವ್ಯ ಬಲಿದಾನಗಳಲ್ಲಿ ಒಂದಾಗಿ ಗಣಿಸಲ್ಪಟ್ಟಿತು!

*

ಇಂಥ ಮೃತ್ಯುವೇ ಮಹಾ ರಾಷ್ಟ್ರ ನಿರ್ಮಾತರಾದ ಸ್ವಾಮೀ ಶ್ರದ್ಧಾನಂದರನ್ನು ಜನತೆಯ ಸ್ಮೃತಿಸಂಸ್ಕಾರಗಳಲ್ಲಿ ಒಬ್ಬ(ಹಿಂದೂ) ಜಾತೀಯ ನೇತಾರರನ್ನಾಗಿ ಮಾಡಿತು.

ಸ್ವಾಮೀ ಶ್ರದ್ಧಾನಂದರೇ ಅಜ್ಞಾನಾಂಧಕಾರದಲ್ಲಿ ಶಿಕ್ಷಣದ ರಾಷ್ಟ್ರೀಕರಣದ ಕನಸು ಕಂಡು ತಮ್ಮ ಕೈಯಾರೆ ಅದನ್ನು ಗುರುಕುಲದ ರೂಪದಲ್ಲಿ ಸಾಕಾರಗೊಳಿಸಿದ್ದರು.

ದಿಲ್ಲಿಯ ಜುಮ್ಮಾ ಮಸೀದಿಯಲ್ಲಿ ಹಜರತ್ ಇಮಾಮರ ಜಾಗದಲ್ಲಿ ನಿಂತು ಪ್ರವಚನವಿತ್ತ ಹಿಂದುಗಳೆಂದರೆ ಸ್ವಾಮೀ ಶ್ರದ್ಧಾನಂದರೊಬ್ಬರೇ!

'ಮಾರ್ಶಲ್ ಲಾ'ದ ವೇಳೆ ಇಂಗ್ಲೀಷರ ತೋಪಿಗೆ ಧೈರ್ಯದಿಂದ ಎದೆಯೊಡ್ಡಿದ ಕೆಚ್ಚು ಶ್ರದ್ಧಾನಂದರಂತಹರಿಗೇ ಶೋಭಿಸುತ್ತದೆ.

ಆದರೆ...ಹಾಯ್! ಇಂಥ ಶ್ರದ್ಧಾನಂದರೇ ಒಬ್ಬ (ಮುಸ್ಲಿಂ) ಜಾತೀಯ ಹುಚ್ಚನ ಗುಂಡಿಗೆ ಆಹುತಿಯಾಗಿ ಸತ್ತುಹೋದರು. ಮೃತ್ಯುವೇ ಜೀವನಕ್ಕಿಂತ ಶಕ್ತಿಶಾಲಿಯೆನಿಸಿತು...ಮನುಷ್ಯ ಮನುಷ್ಯನಂತೆ ಬದುಕುವುದು ತನ್ನ ಪುರುಷಾರ್ಥದಿಂದ...ತನ್ನ ಪ್ರತಿಭೆಯಿಂದ, ಆದರೆ ಮನುಷ್ಯನಂತೆಯೇ ಅವನು ಸಾವಿಗೀಡಾಗುವುದು ಅವನ ಭಾಗ್ಯಾಧೀನವೋ ಕಲಾಧೀನವೋ ಎಂಬುದನ್ನು ನಾನರಿಯೆ. ಬಹುಶಃ ಅದು ಅವೆರಡರ ಅಧೀನವೂ ಆಗಿರಬಹುದು!

ಮೌಲಾನಾ ಮಹಮ್ಮದ್ ಅಲಿಯವರ ಜೀವನ ಸ್ವಾಮೀ ಶ್ರದ್ಧಾನಂದರಿಗೆ ತೀರ ವಿರುದ್ಧವಾದುದು ಅವರು ಜೀವನವಿಡೀ ದೈವಭಕ್ತರಾಗಿ ಉಳಿದರು. ಎಂದೂ ದೇಶಸೇವಕರಾಗಲಿಲ್ಲ. ಇಂಗ್ಲೀಷರ ಮಿತ್ರರಾಗಿರಲೂ ಇಲ್ಲ. ದೇಶಸೇವೆಯ ಕಾರ್ಯರಂಗಕ್ಕಿಳಿದಾಗಲೂ ತಮ್ಮದೇ ದಾರಿ ಹಿಡಿದರು. ಇಷ್ಟೇ ಅಲ್ಲ, ಅವರು ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿ ಆರಿಸಲ್ಪಟ್ಟರು. ಅಧ್ಯಕ್ಷ ಭಾಷಣದಲ್ಲಿ ಅಸ್ಪೃಶ್ಯರನ್ನು ಹಿಂದೂ-ಮುಸ್ಲಿಮರಲ್ಲಿ ಅರ್ಧಅರ್ಧವಾಗಿ ಹಂಚಿಕೊಳ್ಳಬೇಕೆಂಬ ಅಮೂಲ್ಯ ವಿಚಾರಗಳನ್ನು ಪ್ರಕಟಿಸಿದರು!

ಆಮೇಲೆ ಅವರ ಹೆಸರೇನೂ ಅಷ್ಟಾಗಿ ಕೇಳಿಬರಲಿಲ್ಲ. ಆದರೆ ಮುಂದೆ ಅಕಸ್ಮಾತ್ ದುಂಡು ಮೇಜಿನ ಪರಿಷತ್ತಿನಲ್ಲಿ ಅವರ ಭಾವುಕತನವು ಈ ವಾಕ್ಯಗಳಲ್ಲಿ ಹೊರಹೊಮ್ಮಿತು......'ನಾನು ಮೋಜಿನ ಭಾಷಣ ಕೊಡಲೆಂದು ಇಂಗ್ಲಂಡಿಗೆ ಬಂದವನಲ್ಲ. ನಾನು ನನ್ನ ದೇಶಕ್ಕಾಗಿ ಸ್ವಾತಂತ್ರ್ಯ ಪಡೆಯಲು ಬಂದಿದ್ದೇನೆ. ಒಂದೋ ನೀವು ನನಗೆ ಆ ಸ್ವಾತಂತ್ರ್ಯ ನೀಡಬೇಕು...... ಅಥವಾ ನನ್ನಸಮಾಧಿಗಾಗಿ ಸ್ಥಳ ಕೊಡಬೇಕು.'

ನಿಜಕ್ಕೂ ಮರುದಿನವೇ ಅವರು ಹೃದಯ ಸ್ತಂಭನದಿಂದ ಮೃತಿ ಹೊಂದಿದರು.

ಒಂದೇ ಒಂದು ವಾಕ್ಯವು ಮಹಮ್ಮದ್ ಅಲಿಯವರು ಮರೆತ ಹೆಸರನ್ನು ಜನಮನದಲ್ಲಿ ಹೊಚ್ಚ ಹೊಸದಾಗಿ ಮೂಡಿಸಿತು. ಜನ ಅದನ್ನು ಕೇಳಿ "......ದಾರಿ ತಪ್ಪಿದರೂ ಏನಾಯಿತು? ಎಷ್ಟೆಂದರೂ ಕುಲೀನ ದೇಶಭಕ್ತನಲ್ಲವೆ?" ಎಂದು ಉದ್ಗರಿಸಿತು.

*

ಸಾವಿನ ತಮಾಷೆಗಳು ಬಹು ವಿಚಿತ್ರ. ಕೆಲವರನ್ನು ತನ್ನ ಉಡಿಯಲ್ಲಿಟ್ಟು ಮಹತ್ವಿಕೆಯಿತ್ತರೆ, ಕೆಲವರನ್ನು ದೂರಕ್ಕೊಯ್ದು ಮಹತ್ವಿಕೆ ನೀಡುತ್ತದೆ.

ಮಹಾತ್ಮಾ ಸಾಕ್ರೆಟಿಸನ ವಿಚಾರಾಗ್ನಿಯನ್ನು

ಆ ಯುಗದ ಧರ್ಮಾಂಧ ನೇತಾರರು ಸಹಿಸದಾದರು. ಆಗ ಅವರು ಶಾಸನಾಧಿಕಾರವನ್ನುಪಯೋಗಿಸಿ, ಮೊಕದ್ದಮೆಯ ಸೋಗು ನಡೆಸಿ ಅವನಿಗೆ ಮೃತ್ಯು ದಂಡನೆಯನ್ನಿತ್ತರು.

ಮೃತ್ಯುದಂಡನೆಯ ಹಿಂದಿನ ರಾತ್ರಿ ಸಾಕ್ರೆಟಿಸನ ಭಕ್ತರೆಲ್ಲ ಸಾಹಸಮಾಡಿ, ಅವನನ್ನು ಜೈಲಿನಿಂದ ಪಾರುಗೊಳಿಸಲು ಉಪಾಯ ಹೂಡಿದರು. ಆದರೆ ಅವರು ನಟ್ಟಿರುಳಲ್ಲಿ ಆ ವಿಚಾರವನ್ನು ಸಾಕ್ರೆಟಿಸನಿಗೆ ತಿಳಿಸಿದಾಗ ಅವನೆಂದ— 'ನಾನು ಜೀವಮಾನವಿಡೀ ಪ್ರಚಾರ ಮಾಡಿದ ಸಿದ್ಧಾಂತಗಳನ್ನು ಕೇವಲ ಮೃತ್ಯುಭಯಕ್ಕಾಗಿ ತ್ಯಾಗ ಮಾಡಲೆ? ನಡೆಯಿರಿ; ನಾನಿಲ್ಲೇ ಸಾಯುವೆ; ಓಡಿಹೋಗಲಾರೆ!'

ಹೀಗೆ ಸಾವಿನ ಮಡಿಲಲ್ಲಿ ನಿದ್ರಿಸಿದ ಸಾಕ್ರೆಟಿಸ್ ಸಾಧಾರಣ ಪ್ರಚಾರಕ ಸ್ಥಾನದಿಂದ ಬಹು ಎತ್ತರಕ್ಕೇರಿ ಅಮರ ವಿಚಾರಕನೆನಿಸಿಬಿಟ್ಟ.

*

ಮನುಷ್ಯ ತನ್ನ ಕಲೆ ಹಾಗೂ ಭಾಗ್ಯದಿಂದಷ್ಟೇ ಒಳ್ಳೇ ಸಾವು ಪಡೆಯುವುದಲ್ಲ— ಕೆಲವೊಮ್ಮೆ ಅವನ ಶತ್ರುಗಳೂ ಮೃತ್ಯುವಿಗೆ ಸುಂದರರೂಪ ಕೊಡುವುದುಂಟು.

೧೯೨೪ ರಲ್ಲಿ ಲಾಲಾ ಲಜಪತರಾಯರು ಕಾಂಗ್ರೆಸಿನಲ್ಲಿ ದಂಗೆಯೆದ್ದುದೆಂದರೆ ತಮ್ಮ ಭಾಗ್ಯದ ವಿರುದ್ಧವೆ ದಂಗೆಯೆದ್ದಂತಾಯಿತು. ಪಂಜಾಬ್ ಕೇಸರಿಯಾಗಿ ಬದುಕಿದ್ದಾಗ, ಅವರು ಹೋದಲ್ಲೆಲ್ಲ ವಾತಾವರಣ ಬಿಸಿಯೇರುತ್ತಿತ್ತು. ಆದರೀಗ ಅವರ ಜೀವನದ ಸುತ್ತಲೂ ಔದಾಸೀನ್ಯದ ದಟ್ಟಮಂಜು ಮುಸುಕಿತ್ತು!

ಹೀಗೆಯೇ ೧೯೨೮ ನೇ ಇಸ್ವಿಯು ಸಾಯ್‌ಮನ್ ಕಮಿಶನಿನ ಬಹಿಷ್ಕಾರದ ಬಿಸಿ ವಾತಾವರಣವನ್ನು ಹಿಡಿದು ದೇಶದಲ್ಲಿ ಕಾಲಿಟ್ಟಿತ್ತು. ಸಾಯ್‌ಮನ್ ಕಮಿಶನ್ ಲಾಹೋರಿನಲ್ಲಿ... ಮತ್ತು ಲಜಪತರಾಯರು ಬಹಿಷ್ಕಾರದ ಮುಖಂಡರು.

'ಸಾಯ್‌ಮನ್ ಗೋ ಬ್ಯಾಕ್'— ಎಂದು ಒಂದು ದಿನ ಅವರು ಸಿಂಹಗರ್ಜನೆ ಮಾಡಿದರು. ಪೋಲೀಸ್ ವ್ಯವಸ್ಥಾಪಕ ಸಾಂಡರ್ಸನ ಕಿವಿಗಳಲ್ಲಿ ಈ ಗರ್ಜನೆ ಸುತ್ತಿಗೆಯಂತೆ ಏಟು ಹಾಕಿತು. ಅವನ ಹೃದಯ ಮೆದುಳುಗಳಷ್ಟೇ ಅಲ್ಲ— ಕೈಗಳೂ ಹುಚ್ಚೆದ್ದವು. ಅವನ ಲಾಠಿಯು ಲಜಪತರಾಯರನ್ನು ಬಲಿ ಪಡೆದೇ ವಿಶ್ರಾಂತಿ ಹೊಂದಿತು.

ಸಾಂಡರ್ಸ್ ಅವರನ್ನು ಕೊಂದನೇನೋ ನಿಜ; ಆದರೆ ಅವರು ಸತ್ತೇ ಜೀವನದ ಸುತ್ತಲೂ ವ್ಯಾಪಿಸಿದರು; ಮತ್ತು ಆ ಮಂಜನ್ನು ಭೇದಿಸಲು ಸಮರ್ಥರಾದರು. ಅವರ ಸ್ಮಶಾನಯಾತ್ರೆಯಲ್ಲಿ ಇಡೀ ಲಾಹೋರೇ ಭಾಗವಹಿಸಿತ್ತು. ಇಂದೂ ಅವರ ನೆನಪಾದಾಗ ಆ ಭವ್ಯ ದೃಶ್ಯ ಕಣ್ಣೆದುರು ನಲಿದಾಡುತ್ತಿದೆ!

*

ಇವೆಲ್ಲ ನೇತಾರರ ಕತೆಗಳು ದೊಡ್ಡದೊಡ್ಡ ಮನುಷ್ಯರ ಜೀವನದ ಘಟನೆಗಳು. ಆದರೆ ಮೃತ್ಯುವಿನ ಚಮತ್ಕಾರ ದೊಡ್ಡವರು ಸಣ್ಣವರೆಂಬ ಭೇದವನ್ನೆಣಿಸುವುದಿಲ್ಲ. ೧೯೫೦ ರಲ್ಲಿ ಆಸಾಮದ ಅಂಚೆಪೇದೆಯೊಬ್ಬನ ಮೃತ್ಯು ಮಹಾ ಮೃತ್ಯುವಾಗಿ ಹೆಸರು ಪಡೆಯಿತು.

ಇಬ್ಬರು ಅಂಚೆಪೇದೆಗಳು ಅಂಚೆಚೀಲಗಳನ್ನು ಹಿಡಿದು ಕಾಡು ಹಾದಿಯಲ್ಲಿ ಸಾಗುತ್ತಿದ್ದರು. ಅಕಸ್ಮಾತ್ ಎಲ್ಲಿಂದಲೋ ಒಂದು ಹುಲಿ ಅವರಲ್ಲೊಬ್ಬನ ಮೇಲೆರಗಿತು. ಸಾವಿನ ಭಯಂಕರ ದವಡೆಗೆ ಸಿಲುಕಿದ ಅವನು ತನ್ನ ಚೀಲವನ್ನು ಮತ್ತೊಬ್ಬನ ಕಡೆಗೆಸೆಯುತ್ತ... 'ಇಗೋ, ಈ ಚೀಲವನ್ನು ಜಾಗ್ರತೆಯಾಗಿ ಒಯ್ದು ಆಫೀಸಿಗೆ ತಲುಪಿಸು; ಇಮರೆಯಬೇಡ... ಲ್ಲದಿದ್ದರೆ ನನ್ನ ಆತ್ಮ ಯಾವಾಗಲೂ ಆ ಬಗ್ಗೆ ಒದ್ದಾಡುವುದು' ಎಂದ.

ಈ ಕರ್ತವ್ಯನಿಷ್ಠೆ ಅವನ ವಿಭಾಗದಲ್ಲೆಲ್ಲ ಪ್ರಶಂಸಿತವಾಗಿ ಎಲ್ಲರಿಗೂ ಒಂದು ಪ್ರೇರಣಾಸ್ರೋತವಾಗಿ ಮಾರ್ಪಟ್ಟಿತು.

ಸಾವನ್ನೆದುರಿಸುವುದೊಂದು ಮಹಾ ಸಾಹಸ.

ಆದರೆ ಕೆಲವೊಮ್ಮೆ ಸಾವಿಗೆ ಆಹ್ವಾನವೀಯುವುದೂ ಜೀವನಕ್ಕೆ ಹೊಸ ಬೆಳಕು ನೀಡಬಲ್ಲದು.

'ಹರಿಜನಸೇವಕ'ದಲ್ಲಿ ಪ್ರಕಟವಾದ ಈ ಘಟನೆ ಅದೆಷ್ಟು ಮರ್ಮಸ್ಪರ್ಶಿಯಾದುದು! ಒಬ್ಬ ಬೇಟೆಗಾರ ಯಾವುದೋ ಹಳ್ಳಿಗೆ ಹೋಗಿ ನವಿಲಿಗೆ ಗುರಿಯಿಟ್ಟ. ಅದನ್ನು ಕಂಡ ಹಳ್ಳಿಗನೊಬ್ಬ 'ಹಾಗೆ ಮಾಡಬಾರದೆ'ಂದು ಬಾರಿಬಾರಿ ಹೇಳಿದ. ಆದರೆ ಬೇಟೆಗಾರ ಒಪ್ಪಲಿಲ್ಲ. ಆಗ ಆ ಹಳ್ಳಿಗ ಬೇಟೆಗಾರನಿಗೂ ನವಿಲಿಗೂ ನಡುವೆ ಬಂದು ನಿಂತ. ಆವೇಶದಲ್ಲಿದ್ದ ಬೇಟೆಗಾರ ಗುಂಡು ಹಾರಿಸಿಯೇ ಬಿಟ್ಟ. ಹಳ್ಳಿಗ ಗಾಯಗೊಂಡು ನೆಲಕ್ಕುರುಳಿದ. ಹಳ್ಳಿಯ ಜನರೆಲ್ಲ ಗುಂಪಾಗಿ ಆ ಬೇಟೆಗಾರನನ್ನು ಕೊಲ್ಲಲೆಳಸಿದಾಗ ಆ ಗಾಯಾಳು ಅದೇತೋ ಮೆಲ್ಲನೆ ಅವರೆಡೆಗೆ ಬಂದು ಹೀಗೆಂದ 'ನಾನು ನವಿಲನ್ನೇ ಕೊಲ್ಲಲು ಬಿಡದಾಗ, ಇವನನ್ನೆಂತು ಸಾಯಗೊಡಲಿ?'

ಈ ಸಾಧಾರಣ ಉದಾಹರಣೆಯಿಂದಲೇ ಆ ಸಾಮಾನ್ಯ ಹಳ್ಳಿಗನು ಭಾರತೀಯ ಜೀವನದಲ್ಲಿ ಪ್ರಖ್ಯಾತವಾದ ಅಹಿಂಸಾಕರುಣೆಗಳೆಂಬ ಶಾಶ್ವತ ಸಂಸ್ಕಾರಗಳ ಸಜೀವ ಪ್ರತಿನಿಧಿಯೆನಿಸಿಬಿಟ್ಟ!

*

ಮೃತ್ಯು ಈ ಜೀವನದ ಅಂತ್ಯ; ಮತ್ತು ಮುಂದಿನ ನವಜೀವನದ ಆರಂಭ. ಸಾವಿನಿಂದ ಸಾಧ್ಯವಾದಷ್ಟು ತಪ್ಪಿಸಿಕೊಳ್ಳುವುದೇ ಜೀವನದ ಪುರುಷಾರ್ಥ. ಮೃತ್ಯುವನ್ನು ಅಗತ್ಯವಿದ್ದಾಗ ಸ್ವೀಕರಿಸುವುದೂ ಜೀವನದ ಚರಮವಿಕಾಸ.

ಮೃತ್ಯುವಿನ ವಿಷಯದಲ್ಲಿ ಇವು ಭಿನ್ನ ಭಿನ್ನ ಅಭಿಪ್ರಾಯಗಳಾದವು. ಆದರೆ ಮೃತ್ಯು ವಿಚಾರದಲ್ಲಿ ನಮ್ಮ ಜ್ಞಾನಕೋಶದ ಸರ್ವೋತ್ತಮ ರತ್ನವಾವುದು ?

ನಮ್ಮ ರಾಷ್ಟ್ರೀಯ ಇತಿಹಾಸದ ಅತಿ ರೋಮಾಂಚಕಾರಿ ಮೊಕದ್ದಮೆಯು 'ಭಗತ್‌ಸಿಂಹ ಬಾಂಬ್ ಕೇಸ್' ಎಂಬ ಹೆಸರಿನಿಂದ ಬ್ರಿಟಿಷ್ ನ್ಯಾಯಾಲಯದೆದುರು ಬಂತು. ಆಗ ರಾಷ್ಟ್ರದ ಸುಪ್ತ ವಾತಾವರಣದಲ್ಲಿ ವಿದ್ಯುತ್ಸಂಚಾರವಾದಂತಾಯಿತು.

ಮೊಕದ್ದಮೆ ನಡೆಯುತ್ತಿದ್ದಾಗಲೇ ಕ್ರಾಂತಿಕಾರೀ ಪಾರ್ಟಿಯ ಸದಸ್ಯರಲೊಬ್ಬನಾದ ಫಣೀಂದ್ರ ಮುಖರ್ಜಿ ಪೋಲೀಸರೊಡನೆ ಸೇರಿಕೊಂಡ. ಪಾರ್ಟಿಯ ರಹಸ್ಯಗಳೆಲ್ಲ ಈಗ ಗಂಡಾಂತರದಲ್ಲಿದ್ದವು. ಅವನನ್ನು ಗುಂಡಿಕ್ಕಿಕೊಲ್ಲಬೇಕೆಂದು ನಿಶ್ಚಯವಾಯಿತು.

ಆದರೆ ಆವಾರು ಗುಂಡು ಹೊಡೆಯುವವರು ? ಬಿಹಾರದಲ್ಲಿ ಪಾರ್ಟಿಯ ಮೀಟಿಂಗ್ ನಡೆಯಿತು. ಮೀಟಿಂಗಿನಲ್ಲಿ ಪಾರ್ಟಿಯ ಮುಖಂಡ ಕಿಶೋರೀಪ್ರಸನ್ನಸಿಂಹರೂ ಅವರ ಪತ್ನಿ ಸುನೀತಿದೇವಿಯೂ ಇದ್ದರು.

'ಈ ಕಾರ್ಯವನ್ನು ನನಗೊಪ್ಪಿಸಿರಿ' ಎಂದಳು ಸುನೀತಿದೇವಿ. ಆದರೆ ಅದನ್ನವಳಿಗೆ ಕೊಡದೆ ಮತ್ತೊಬ್ಬರಿಗೆ ಕೊಡಲಾಯಿತು. ಅವರು ಆ ಕೆಲಸವನ್ನು ಸಫಲವಾಗಿ ನಡೆಸಿಯೂಬಿಟ್ಟರು.

ಈ ಘಟನೆ ನಡೆದ ಕೆಲ ವರ್ಷಗಳಲ್ಲೇ ಸುನೀತಿದೇವಿ ಕ್ಷಯರೋಗಕ್ಕೆ ತುತ್ತಾದಳು. ಪ್ರಯತ್ನವೂ ವ್ಯರ್ಥವಾಯಿತು. ಆಗ ಅವಳು ಪತಿಯೊಡನೆ...'ನನ್ನ ಕೊನೆಕಾಲ ಸಮೀಪಿಸುತ್ತಿದೆ; ಈಗ ಒಂದು ಮಾತು ಹೇಳಬೇಕಾಗಿದೆ'—ಎಂದಳು.

'ಏನದು?'—ಕಿಶೋರೀಬಾಬು ಪ್ರಶ್ನಿಸಿದರು.

'ಮನುಷ್ಯನಿಗೆ ಮನುಷ್ಯನಂತೆ ಸಾಯುವ ಸಂದರ್ಭ ದೊರೆತಾಗ ಅವನನ್ನು ತಡೆಯಬೇಡಿ!'

ಈ ಸಂಸ್ಮರಣವನ್ನು ಮಸೂರಿಯಲ್ಲಿ ಕಿಶೋರೀಬಾಬುಗಳಿಂದಲೇ ಕೇಳಿದಾಗ, ನನ್ನ ಮನದಲ್ಲಿ ಹೀಗೆ ಯೋಚನೆಯುಂಟಾಯಿತು—ಮನುಷ್ಯ ತನ್ನಿಂದಾದಷ್ಟೂ ಜೀವಿಸಲು ಯತ್ನಿಸಬೇಕು; ಆದರೆ ಮನುಷ್ಯನಂತೆ ಸಾಯುವ ಸಂದರ್ಭ ಬಂದಾಗ ಅವನೆಂದೂ ಹಿಂಜರಿಯಬಾರದು. ಇದೇ ಮೃತ್ಯುವಿನ ಬಗ್ಗೆ ಮನುಷ್ಯನ ಜ್ಞಾನಕೋಶದ ಸರ್ವೋತ್ತಮ ರತ್ನ !

*

ಅನುವಾದ: "ಸವ್ಯಸಾಚಿ"

ಇದುವೆ ಜೀವ, ಇದು ಜೀವನ

ಕಳೆದ ವರ್ಷ ಮಂಗಳೂರಿನಲ್ಲಿ ನಡೆದ ಪಂಚವಾರ್ಷಿಕ ಯೋಜನೆಯ ಪ್ರದರ್ಶನದಲ್ಲಿ ಪ್ರದರ್ಶಕರಾಗಿ ನಾವು ಕೆಲವು ವಿದ್ಯಾರ್ಥಿಗಳು ನಿಯುಕ್ತರಾಗಿದ್ದೆವು. ಪ್ರದರ್ಶನವನ್ನು ನೋಡಲು ಬಂದವರಿಗೆ ಅಲ್ಲಿನ ಚಿತ್ರ, ವಸ್ತುಗಳ ಕುರಿತು ಯೋಗ್ಯ ವಿವರಣೆ ಒದಗಿಸುವ ಕೆಲಸ ನಮ್ಮದು. ನನಗೆ ಈ ಕೆಲಸದೊಂದಿಗೆ ಅಲ್ಲೇ ಇನ್ನೊಂದು ಬಾಗಿಲ ಬಳಿ ಇರಿಸಲಾದ ಅಭಿಪ್ರಾಯ ಪುಸ್ತಕದ ಜವಾಬ್ದಾರಿಯನ್ನೂ ವಹಿಸಿಕೊಡಲಾಗಿತ್ತು.

ಸಂದರ್ಶಕರಾಗಿ ಬಂದ ಮಂಗಳೂರಿನ ವ್ಯಾಪಾರಿಯೊಬ್ಬರಿಗೆ ಪ್ರದರ್ಶನದ ಎಲ್ಲಾ ವಿಭಾಗಗಳನ್ನೂ ತೋರಿಸಿಯಾದ ಬಳಿಕ ಅವರನ್ನು ಆ ಪುಸ್ತಕದಲ್ಲಿ ಅಭಿಪ್ರಾಯ ಬರೆಯುವಂತೆ ಕೇಳಿಕೊಂಡೆ. ಬಲು ಸಂತೋಷದಿಂದ ಒಪ್ಪಿಕೊಂಡು ಅವರು "ಈ ಅಭಿಪ್ರಾಯಗಳನ್ನು ತೆಗೆದುಕೊಂಡು ಏನು ಮಾಡುವಿರಿ?" ಎಂದು ಕೇಳಿದರು. "ಅವನ್ನು ದಿಲ್ಲಿಗೆ ಪರಿಶೀಲನೆಗೆ ಕಳುಹಿಸಲಾಗುವುದು" ಎಂದುತ್ತರವಿತ್ತೆನು ನಾನು. ಅವರು ಸಾವಕಾಶವಾಗಿ ತಮ್ಮ ಅಭಿಪ್ರಾಯ ಬರೆದರು. "ಈ ಪ್ರದರ್ಶನ ಸುವ್ಯವಸ್ಥಿತವಾಗಿದ್ದು ಪಂಚವಾರ್ಷಿಕ ಯೋಜನೆಗಳ ಮೂಲಕ ನಾವು ಸಾಧಿಸಿದ ಅಪಾರ ಪ್ರಗತಿಯ ಬೃಹತ್‌ಸ್ವರೂಪವನ್ನು ಚೆನ್ನಾಗಿ ತೋರಿಸುತ್ತದೆ. . . . ಪ್ರಶಂಸನೀಯವಾದುದು. . . . . ಈ ಅಭಿವೃದ್ಧಿ ಕಾರ್ಯಗಳಲ್ಲಿ ಸಿಮೆಂಟು ಹಾಗು ಉಕ್ಕಿನ ಪಾತ್ರ ಹಿರಿದಾದುದು ಎಂದು ಹೇಳದಿರಲಾರೆ" ಎಂದು ಬರೆದು ಅದರ ಕೆಳಗೆ ತಮ್ಮ ಹೆಸರು, ತಾವಿರುವ ಬೀದಿ, ಪ್ರದೇಶಗಳ ಹೆಸರು ಬರೆದು ಹೊರಟು ಹೋದರು.

ನಾನು ಹಿಂದಿರುಗಿ ಬಂದು ಬೇರೊಬ್ಬ ಸಂದರ್ಶಕರೊಬ್ಬರಿಗೆ ವಿವರಣೆಯೀಯುತ್ತಿದ್ದಾಗ, ಆಗ ತಾನೆ ಅಭಿಪ್ರಾಯ ಬರೆದು ಹೊರಟು ಹೋದ ಆ ವ್ಯಾಪಾರೀ ಮಹಾನುಭಾವರು ಹಿಂದಿರುಗಿಬಂದು ಆ ಪುಸ್ತಕದಲ್ಲಿ ಮತ್ತೂ ಏನನ್ನೋ ಶೀಘ್ರವಾಗಿ ಬರೆಯುವುದನ್ನು ನೋಡಿದೆ. ನನಗೆ ಕುತೂಹಲವುಂಟಾಯಿತು. ಅವರು ಹೋದ ಬಳಿಕ ಆ ಅಭಿಪ್ರಾಯ ಪುಸ್ತಕದ ಬಳಿ ಹೋಗಿ ಅವರು ಬರೆದಿದ್ದ ಪುಟ ತೆಗೆದು ನೋಡಿದೆ.

ಆ ವ್ಯಕ್ತಿ ತಮ್ಮ ಹೆಸರು ಬರೆದಾದ ನಂತರ ಉಳಿದ ಸ್ವಲ್ಪ ಜಾಗದಲ್ಲೇ ದೊಡ್ಡ ಅಕ್ಷರಗಳಲ್ಲಿ "ಸಿಮೆಂಟ್ ಸ್ಟಾಕಿಸ್ಟ್" ಎಂದು ಸೇರಿಸಿ ಹೋಗಿದ್ದರು.

—ಎ. ಶಂಕರನಾರಾಯಣ ಹೆಬ್ಬಾರ್,
ಕುಂದಾಪುರ.

ಬಹಳ ಬಡತನದಲ್ಲಿ ಬೆಳೆದ ನನಗೆ ನನ್ನ ತಾಯಿ ಕಾಡುಕಟ್ಟಿಗೆ ಉರಿಸಿ ಅಡಿಗೆ ಮಾಡುವಾಗ ಸುರಿಸುತ್ತಿದ್ದ ಕಣ್ಣೀರು ಮರೆಯಲಾರದ ದೃಶ್ಯವಾಗಿತ್ತು. ಹೀಗಾಗಿ ಸ್ವಂತ ದುಡಿಯತೊಡಗಿ ಮೊದಲನೇ ತಿಂಗಳ ಸಂಬಳ ಕೈಗೆ ಬಂದೊಡನೆ ನನಗೆ ಬಂದ ವಿಚಾರವೆಂದರೆ ತಾಯಿಗೊಂದು ಕುಕರ್ ಕಳಿಸಬೇಕೆಂಬುದು. ಹೋಟೆಲಿನ

ಬಿಲ್ಲು ತೀರಿಸಿ ಉಳಿದ ಹಣವನ್ನೆಲ್ಲ ಕೊಟ್ಟು ಒಂದು ಕುಕರ್ ಕೊಂಡು ಪ್ಯಾಕ್ ಮಾಡಿಸಿ ಮರುದಿನ ಟಪಾಲಿಗೆ ಕಳಿಸಬೇಕೆಂದು ಬಿಡಾರಕ್ಕೊಯ್ಯಲು ಲೋಕಲ್ ಗಾಡಿ ಹತ್ತಿದೆ. ಕುಕರ್‌ನ್ನು ರ್‍ಯಾಕಿನಲ್ಲಿಟ್ಟು ಕುಳಿತಿದ್ದಾಗ ಸ್ವಲ್ಪ ದೂರದಲ್ಲಿ ಕುಳಿತಿದ್ದ ನನ್ನ ಮಿತ್ರನನ್ನು ಕಂಡು ಅವನ ಕಡೆ ಹೋಗಿ ಹರಟೆ ಹೊಡೆಯತೊಡಗಿದೆ. ಇಳಿಯು ಬೇಕಾದ ಸ್ಟೇಶನ್ ಸಮೀಪಿಸಿದಾಗ ತಿರುಗಿ ಬಂದು ನೋಡುತ್ತೇನೆ, ಕುಕರ್ ಕಾಣೆಯಾಗಿದೆ.

ತುಂಬ ವ್ಯಥೆಗೊಂಡು ನಾನು ಕುಕರಿನ ಆಶೆ ಬಿಟ್ಟು ಕೆಳಗಿಳಿದೆ. ಆದರೆ ಒಂದು ವಾರದಲ್ಲಿ ನನ್ನ ತಾಯಿಯಿಂದ ಕುಕರ್ ಮುಟ್ಟಿದ ಬಗ್ಗೆ ಪತ್ರ ಬಂದಾಗ ನನ್ನ ಆಶ್ಚರ್ಯಕ್ಕೆ ಸೀಮೆಯೆ ಉಳಿಯಲಿಲ್ಲ. ಅದರಲ್ಲಿ "ನೀನಿಟ್ಟಿದ್ದ ಪತ್ರವೂ ಸಿಕ್ಕಿತು. ಆದರೆ ಪತ್ರದ ಮೇಲ್ಗಡೆ ಕೆಂಪುಮಶಿಯಲ್ಲಿ 'ಕಳ್ಳರಿಗೂ ತಾಯಂದಿರಿದ್ದಾರೆ' ಎಂದು ಬರೆದದ್ದರ ಅರ್ಥ ಮಾತ್ರ ನನಗಾಗಲಿಲ್ಲ" ಎಂದು ತಾಯಿ ಬರೆದಿದ್ದರು.

—ಎಂ. ವಿ. ಪಿ., ಮುಂಬಯಿ

ಆ ಭಾನುವಾರ ನಾವು ಹಲವು ಮಿತ್ರರು 'ನಾಜ್' ಮಂದಿರಕ್ಕೆ ಸಿನೆಮಾ ನೋಡಲು ಬಸ್ಸಿನಲ್ಲಿ ಹೊರಟಿದ್ದೆವು. ಒಬ್ಬಳು ತಡವಾಗಿ ಬಂದ ಮಹಿಳೆ ಸ್ಥಳ ಸಿಗದ್ದರಿಂದ ನಿಂತಿದ್ದಳು. ಅವಳ ಕೈಯಲ್ಲೊಂದು ಮುದ್ದು ಮಗು ಬೇರೆ ಇತ್ತು. ಆದರೂ ಯಾವ ಗಂಡಸೂ ಎದ್ದು ನಿಂತು ಅವಳಿಗೆ ಸ್ಥಳ ಕೊಡುವ ಔದಾರ್ಯ ತೋರಿಸಲಿಲ್ಲವಾಗಿ ಅವಳು ನಿಂತುಕೊಂಡೇ ಸಾಗಬೇಕಾಯಿತು.

ನಮ್ಮ ತಂಡದ ರಾಘವ ಅವಳು ನಿಂತಿದ್ದ ಸ್ಥಳದ ಹತ್ತಿರವೇ ಕುಳಿತಿದ್ದ. ಅವನ ಕಣ್ಣುಗಳು ಮಗುವಿನ ಮುಖದಿಂದ ತಾಯಿಯ ಮುಖಕ್ಕೆ ತಾಯಿಯ ಮುಖದಿಂದ ಮಗುವಿನ ಮುಖಕ್ಕೆ ದೃಷ್ಟಿ ಹಾಯಿಸುತ್ತಿದ್ದವು. ಆದರೆ ಅವಳಿಗೆ ಸ್ಥಳ ಕೊಡುವ ವಿಚಾರ ಅವನಿಗೆ ಬರಲಿಲ್ಲ. ಮುಂದಿನ ನಿಲ್ದಾಣದಲ್ಲಿ ಹೆಚ್ಚು ಜನ ಹತ್ತಿದರು. ಯಾರೂ ಇಳಿಯಲಿಲ್ಲ. ಆ ಮಹಿಳೆ ನಿಂತೇ ಸಾಗಬೇಕಾಯಿತು.

ಹೊಸದಾಗಿ ಹತ್ತಿ ಬಂದವರಲ್ಲಿ ಎತ್ತರವಾಗಿ ಗಂಭೀರವಾಗಿ ಆಧುನಿಕ ವೇಷ ಧರಿಸಿದ ಮಹನೀಯರೊಬ್ಬರಿದ್ದರು. ರಾಘವನ ಹಿಂಬದಿಗೇ ಬಂದು ನಿಂತ ಅವರು ಕೆಲ ನಿಮಿಷಗಳ ವರೆಗೆ ಅವನನ್ನು ನೋಡುತ್ತಿದ್ದದನ್ನು ನಾವು ಗಮನಿಸಿದೆವು. ಆದರೆ ಮುಂದಿನ ಸೀಟನ ಬೇರೊಂದು ಪಕ್ಕದಲ್ಲಿದ್ದ ಸಿಂಧೀ ಸುಂದರಿಯ ಮೇಲೆ ಕಣ್ಣಿಟ್ಟಿದ್ದ ರಾಘವ ಅದನ್ನು ಗಮನಿಸಲೇ ಇಲ್ಲ. ಆಮೇಲೆ ಆ ಮಹನೀಯರು ಮೆಲ್ಲಗೆ ರಾಘವನನ್ನು ಸ್ಪರ್ಶಿಸಿ "ಗುಡ್ ಮಾರ್ನಿಂಗ ಮಿ. ರಾಘವ" ಎಂದರು. ರಾಘವ ಬೆಚ್ಚಿ ಬಿದ್ದು ನೋಡಿದ. ಪರಿಚಯದ ಕಳೆ ಅವನ ಮುಖದಲ್ಲಿ ಬೆವರಿನೊಡನೆ ಮೂಡಿತು. ಗಾಬರಿಯಿಂದಾತ, "ಗುಡ್ ಮಾರ್ನಿಂಗ್" ಎಂದು ನುಡಿದು ಎದ್ದು ನಿಂತು ಅವರಿಗೆ ಸ್ಥಳ ಬಿಟ್ಟುಕೊಟ್ಟು ನಿಂತ.

ಮಹನೀಯರು ಕೂಡ್ರದೆ ಆ ಕೂಸಿನ ತಾಯಿಯನ್ನು ಅಲ್ಲಿ ಕೂಡ್ರಲು ಕೇಳಿಕೊಂಡರು.

ಅವರು ರಾಘವನ ಕಚೇರಿಯ ಬಡತಿ ಶಾಖೆಯ ಅಧಿಕಾರಿಯೆಂದು ತಿಳಿಯಿತು. ಆದರೆ ಅವರು ಕಲಿಸಿದ ಸದ್ಗುಣದ ಪಾಠ ಬಲವತ್ತರವಾದುದಿತ್ತು.

— ಸಿ. ಕೆ. ಹೆಜ್ಮಾಡಿ



ಒಂದು ಅದ್ಭುತರಮ್ಯ ಅನುಭವ

ಅಂದು ಅವರು ಸ್ವತಃ ಬಂದಿದ್ದರು

ರತನಲಾಲ ಜೋಶಿ

ರಾತ್ರಿ ೧೧ ಗಂಟೆಯ ಸಮಯ. ಗ್ಯಾಲರಿಯಲ್ಲಿ ಕೂತು ರೋಮಾಂ ರೋಲಾಂರ "ಜ್ಯಾಂ ಕ್ರಿಸ್ತಾಫ್" ಓದುತ್ತಿದ್ದೆ. ರೋಲಾಂರ ಓದುಗರು ರಸಾಸ್ವಾದಕ್ಕೇನೂ ತ್ರಾಸಪಡಬೇಕಾಗಿಲ್ಲ. ಓದಲಿಕ್ಕೆ ಪ್ರಾರಂಭಿಸಿದೊಡನೆಯೇ ರಸತರಂಗವು ಉಕ್ಕಿಬಂದು ನೀವು ಅದರಲ್ಲಿ ನಿಮಗ್ನರಾಗುವಿರಿ.

......ಮಳೆಗರೆಯುತ್ತಿತ್ತು, ಹವೆ ಶಾಂತವಾಗಿತ್ತು, ಎಲ್ಲಿಯೂ ಯಾವ ಬಗೆಯ ಉದ್ವೇಗವೂ ಇಲ್ಲ. ಯಾಕೋ ಏನೋ ನನಗೆ ಈ ನೀರವತೆ ಅಸಹ್ಯವೆನಿಸಿತು. ಮನಸ್ಸು ಮತ್ತೆ ಮತ್ತೆ ಕುಶಂಕೆಗಳಿಂದ ಚಂಚಲವಾಯಿತು. ಒಂದೆರಡು ಸಲ ಮುಗಿಲಿನ ಕಡೆ ನೋಡಿದೆ. ಒಂದು ಕರೀ ಮೋಡ ಬಿಟ್ಟರೆ ಮತ್ತೇನೂ ವಿಶೇಷವಾಗಿ ಕಾಣಿಸಲಿಲ್ಲ.

ನಾನು ಮತ್ತೆ ಓದತೊಡಗಿದೆ. ವಾಕ್ಯಗಳು, ಪರಿಚ್ಛೇದಗಳು ಪರ್ವತವನ್ನು ಸೀಳಿ ಬರುವ ಜಲಧಾರೆಗಳಂತೆ ಬಂದು ನನ್ನ ಚೇತನೆಯನ್ನು ಜೊತೆಯಲ್ಲಿ ಕೊಚ್ಚಿಕೊಂಡೊಯ್ಯತೊಡಗಿದವು. ಈ ಧಾರೆಗಳೊಂದಿಗೇ ನನ್ನ ಎಲ್ಲ ಶಂಕೆ ಆಶಂಕೆಗಳು ಹರಿದು ನಡೆದವು. ನಾನೂ ಹೊರಟೆನು. ನನ್ನ ಕಣ್ಮುಂದಿನ ಪ್ರತ್ಯಕ್ಷವೆಲ್ಲ ಮರೆಯಾಗಿ ಅಲ್ಲಿ ರೋಲಾಂ ರ ಚಿತ್ರ ಸಾಕಾರವಾಗತೊಡಗಿತು. ಚಿತ್ರ ಕ್ರಿಸ್ತನ ಚಿತ್ರಗಳೊಂದಿಗೆ ಕೊಂಚ ಹೊಂದುತ್ತದೆ. ನನ್ನ ಅವ್ಯಕ್ತ ಮನವನ್ನಾವರಿಸಿತು ಈ ಚಿತ್ರ. ನಾನು ಮೂಕನಾಗಿದ್ದೆ. ನಿಶ್ಚಲನಾಗಿದ್ದೆ. ನಿರ್ವಿಚಿಂತನಾಗಿದ್ದೆ.

'ಸಾಪ್ತಾಹಿಕ ಹಿಂದುಸ್ತಾನ' ದಿಂದ

ಸಣ್ಣದಾಗಿ ಮೂಡಿದ್ದ ಆ ಮೂರ್ತಿ ಬೆಳೆಯುತ್ತ ನಡೆದು ಭೂಮಿಯಿಂದ ಆಕಾಶದವರೆಗೆ ಹಬ್ಬಿತು. ನಾನು ವಿಸ್ಮಯಮುಗ್ಧನಾಗಿ ನೋಡತೊಡಗಿದೆ. ಮೂರ್ತಿ ಇನ್ನೂ ಹಬ್ಬುತ್ತಿತ್ತು. ಅಂಗಪ್ರತ್ಯಂಗಗಳು ಕ್ಷೀಣವಾಗುತ್ತಾ ಪುನಃ ಮೂರ್ತಿ ನಿರಾಕಾರವಾಗತೊಡಗಿತು. ಸ್ವಲ್ಪ ಹೊತ್ತಿನಲ್ಲೇ ಏನಾಯಿತೋ! ಮೂರ್ತಿಯ ರೋಮರೋಮದಿಂದ ನೀರು ಒಡೆಯತೊಡಗಿತು. ನೋಡುನೋಡುವಷ್ಟರಲ್ಲಿ ಸುತ್ತೆಲ್ಲ ನೀರೇ ನೀರು ಆಯಿತು. ಕ್ಷಣದಲ್ಲಿ ನೀರಿನಲ್ಲಿ ತೆರೆಗಳೆದ್ದವು. ಭಯಂಕರವಾಗಿ ಅಬ್ಬರಿಸುತ್ತ ನಡೆದವು ಈ ತೆರೆಗಳು.

ಈ ವೇಗವು ಗಾಳಿಯದಾಗಿತ್ತು. ಇದು ಭಯಂಕರ ಬಿರುಗಾಳಿಯ ರೂಪ ತಾಳಿತು. ಆ ಪ್ರಚಂಡ ಜಲಾಶಯವನ್ನು ಲೋಟವಲ್ಲಿ ತುಂಬಿದ ನೀರಿನಂತೆ ಅಲ್ಲಾಡಿಸತೊಡಗಿತು. ತೆರೆಗಳ ಅಬ್ಬರದಂತೇ ಬಿರುಗಾಳಿಯ ಶಂಖನಾದವೂ ಸಾಹಸ-ವಿದಾರಕವಾಗಿತ್ತು. ನಾನು ಸಂಪೂರ್ಣ ಎಚ್ಚರಿದ್ದೆ. ದೇಹ-ಮನಗಳೆರಡೂ ಸ್ವಸ್ಥವಾಗಿದ್ದವು. ಪ್ರಕೃತಿಯ ಈ ವಿರಾಡ್ರೂಪವನ್ನು ನೋಡಿ ಮೈ ನಡುಗಿತು.

ಬಿರುಗಾಳಿ ಹೆಚ್ಚಿತು. ಮನೆಗಳ ಚಪ್ಪರಗಳು ಹಾರಿದವು. ಉಸುಬಿನ ಆಟದ ಮನೆಗಳಂತೆ ಮನೆಗಳು ಉರುಳಿದವು. ಗಿಡಗಳು ಮುರಿದವು. ರಸ್ತೆ ಬಂದಾದವು. ಬಿರುಗಾಳಿಯ ಇಂಥ ತಾಂಡವವನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಭೀತಿಯಿಂದ ನಾನು ಅತ್ತಿತ್ತ ನೋಡಿದೆ. ಎದ್ದು ನಿಂತೆ. ಸಮಾಧಿಭಂಗವಾಯಿತೇನೋ ಎಂಬಂತೆ ಎವೆ ಇಕ್ಕುವುದರೊಳಗಾಗಿ ಎಲ್ಲವೂ ಮಾಯವಾಯಿತು. ಉಳಿದವರು ನಾನು ಮತ್ತು ಟೋ-ಲಾಂರ ಪುಸ್ತಕ 'ಜ್ಯಾಂ ಕ್ರಿಸ್ತೋಫ್.'

ಆಶ್ಚರ್ಯದಿಂದ ಸ್ತಬ್ಧನಾದವನಾಗಿ ಇದಾವುದೋ ಅನಿಷ್ಟದ ಅನುಭವವಾದಂತೆ ನಾನು ಕೋಣೆಯಲ್ಲಿ ಹೋಗಿ ಮಲಗಿಕೊಂಡೆ. ದೇಹ ದಣಿದಿತ್ತು. ಮನಸ್ಸು ವ್ಯಸ್ತವಾಗಿತ್ತು. ಹಾಸಿಗೆಗೆ ಬೆನ್ನು ಹಚ್ಚುತ್ತಲೇ ನಿದ್ರೆ ಬಂದುಬಿಟ್ಟಿತು. ದಿನಾಲೂ ಇಷ್ಟು ಬೇಗ ನಿದ್ದೆ ಹತ್ತುವುದಿಲ್ಲ.

'ಅದು ೧೯೪೪'ರ ಮಾರ್ಗಶೀರ್ಷ. ಚಳಿಗಾಲ. ಅಡ್ಡಮಳೆಯ ಚಿಹ್ನೆಗಳಿದ್ದವು. ಕಟ್ಟಡದ ಮೂರನೇ ಅಂತಸ್ತಿನಲ್ಲಿ ನಾವು ಇರುತ್ತಿದ್ದೆವು. ನಾನು ನನ್ನ ಹೆಂಡತಿ ಮತ್ತು ಮೂರು ಮಕ್ಕಳು. ನನ್ನ ಕೋಣೆಗಳು ದಂಡೆಗಿದ್ದು ಬಲಗಡೆಗೆ ನೆರೆಯವರ ಕೋಣೆಗಳಿದ್ದವು. ಮನೆಯ ಗ್ಯಾಲರಿ ಪಶ್ಚಿಮಕ್ಕಿತ್ತು. ಸಮುದ್ರದ ಗಾಳಿ ತಡೆ ಇಲ್ಲದಂತೆ ಬರುತ್ತಿತ್ತು. ಬೇಸಗೆಯಲ್ಲೂ ಬೀಸಣಿಗೆ ಬೇಕಿರಲಿಲ್ಲ. ನಮ್ಮ ಮನೆಯ ಎಲ್ಲರೂ, ನೆರೆಹೊರೆಯವರೂ ಮಲಗಿದ್ದರು. ರಸ್ತೆಯ ಮೇಲಿನ ರಹದಾರಿಯೂ ಬಂದಾಗಿತ್ತು.

ನಾನು ಎಚ್ಚತ್ತಾಗ ರಾತ್ರಿ ಎರಡು ಗಂಟೆಯಾಗಿತ್ತು. ಮುಂಬಯಿ ನಗರವು ಮಳೆಯಲ್ಲಿ ತೊಯ್ದಿತ್ತು. ಬಿರುಗಾಳಿ ಬಿಟ್ಟಿತ್ತು. ನಮ್ಮ ಕಿಟಿಕಿಯ ಮೇಲೆ ಮಳೆ ಅಪ್ಪಳಿಸುತ್ತಿತ್ತು. ಹನಿಗಳು ಒಳಗೆ ಸಿಡಿಯುತ್ತಿದ್ದವು. ಸಾಗರದ ಗಾಳಿಯ ಸ್ನೇರಿದ ರೌದ್ರನಾದವು ಪಡುವ ದಿಬ್ಬಗಳ ಮೇಲಪ್ಪಳಿಸಿ ಇಮ್ಮಡಿಯಾಗಿ ಪ್ರತಿಧ್ವನಿತವಾಗುತ್ತಿತ್ತು. ಆದರೂ ನಗರವು ಶಾಂತವಾಗಿತ್ತು. ಇಂಥ ರಾತ್ರಿಗಳ ಅನುಭವ ಈ ಜನರಿಗಿದೆ.

ನಾನು ಎಚ್ಚತ್ತ ಕಾರಣವನ್ನೂ ಹೇಳುವೆ. ನಾನು ಎಚ್ಚರಾದಾಗ ಹಾಸಿಗೆಯ ಮೇಲೆ ನಿಂತಿದ್ದೆ. ಕೌಪೀನಧಾರಿಯೊಬ್ಬ ನನ್ನ ಎರಡೂ ಭುಜಗಳನ್ನು ಗಟ್ಟಿಯಾಗಿ ಹಿಡಿದು ನಿಂತಿದ್ದ; ಅವನೇ ನನ್ನನ್ನು ಹಾಸಿಗೆಯಿಂದ ಎಬ್ಬಿಸಿದ್ದ. ನಾನು ಏಳಬಾರದೆಂದು ಪ್ರತಿಭಟಿಸಿದ್ದೂ ನನಗೆ ಜ್ಞಾಪಕವಿದೆ. ಆದರೂ ಆತ ಬಲವಂತ ಮಾಡಿ ಎಬ್ಬಿಸಿದ್ದ.

ನಾನು ಸ್ವಿಚ್ ಹಾಕಿದೆ. ಆದರೆ ಬೆಳಕೇ ಇಲ್ಲ. ನನ್ನ ಹೆಂಡತಿ ಮಕ್ಕಳು ಮತ್ತು ನೆರೆಯವರು ಎಲ್ಲರೂ ಎಂದಿನಂತೆ ಶಾಂತವಾಗಿ ನಿದ್ರಿಸಿದ್ದಾರೆ. ಏನು ಮಾಡಬೇಕೋ ತಿಳಿಯದಂತಾಯಿತು ನನಗೆ.

ಬಿರುಗಾಳಿಯ ಅಬ್ಬರ ಹೆಚ್ಚಿತು. ಮಳೆಯೂ

ಜೋರಾಯಿತು. ಮಲಗುವ ಮೊದಲು ನೋಡಿದ್ದ ದೃಶ್ಯವೇ ಮತ್ತೆ ಕಣ್ಮುಂದೆ ಬಂತು ನನ್ನ ನವಿರುಗಳು ಎದ್ದು ನಿಂತವು. ಆ ದೃಶ್ಯ ಸತ್ಯವಾದರೆ ಎಂಥ ಭಯಂಕರ ಅನಾಹುತವಾದೀತು! ನನ್ನ ಈ ಅವಸ್ಥೆಯನ್ನು ಕಂಡು ಆ ವ್ಯಕ್ತಿ ನನ್ನತ್ತ ಬಂದು ಮಾತಾಡಿತು. "ಈ ಮನೆ ಇನ್ನರ್ಧ ಗಂಟೆಯೊಳಗೆ ಬೀಳಲಿದೆ. ಇಲ್ಲಿಂದ ಬೇಗ ಹೊರಡು. ನಡೆ ಕೆಳಗೆ ಹೋಗೋಣ."

ನಾನು ಹೌದು ಇಲ್ಲ ಅನ್ನುವುದರೊಳಗಾಗಿ ಆತ ಕೋಣೆಯ ಬಾಗಿಲನ್ನು ತೆರೆದ. ನಾನು ಹೆಂಡತಿ ಮಕ್ಕಳನ್ನೆಬ್ಬಿಸಿದೆ. ಆಗ ನನ್ನ ಕಿರಿಯ ಮಗಳು ಕೇವಲ ೧೫ ದಿನದ ಕೂಸು. ಎಲ್ಲರನ್ನು ಕರೆದುಕೊಂಡು ನಾನು ಕೆಳಗಿಳಿದೆ. ಆತ ನಮ್ಮ ಮುಂದೆ ಮುಂದೇ ಅಟ್ಟ ಇಳಿಯುತ್ತಿರುವುದನ್ನು ನಾವು ಕಂಡೆವು. ಮನೆಗೆ ಹತ್ತಿ ಪೋಸ್ಟ್ ಆಫೀಸ್ ಇತ್ತು. ಅಲ್ಲಿಯ ಪೋಸ್ಟ್ ಮಾಸ್ತರರು ನನ್ನ ಸ್ನೇಹಿತರು. ಬಾಗಿಲ ತೆರೆದು ಅವರು ನಿಂತಿದ್ದರು. ಕೈಯಲ್ಲಿ ಕಂದೀಲಿತ್ತು. "ನೀವೆಲ್ಲರೂ ಬಂದಿರಾ? ಏನು ಸಮಾಚಾರ?" ಎಂದು ಆಶ್ಚರ್ಯದಿಂದ ಕೇಳಿದರು.

ಏನು ಹೇಳಲಿ? "ಬಿರುಗಾಳಿಯ ಚಿಹ್ನ ಕಾಣಿಸಿದವು. ಅದಕ್ಕೆ ನಿಮ್ಮ ಗಟ್ಟಿಯಾದ ಮನೆಗೆ ಬಂದೆ" ಎಂದು ಹೇಳಿದೆ. ಆದರೆ ಅವರು, "ಇದಕ್ಕೇಕೆ ಹೆದರುವಿರಿ? ಇಂಥ ಬಿರುಗಾಳಿ ಇಲ್ಲಿ ಪ್ರತಿ ವರ್ಷ ಬೀಸುತ್ತದೆ" ಎಂದು ಹೇಳಿದರು.

ನಾನು ಎಲ್ಲರನ್ನೂ ಒಳಗೆ ಕರೆದೊಯ್ದೆ. ಅವರ ಪತ್ನಿಯೂ ಅವರೊಟ್ಟಿಗೆ ನನ್ನ ಈ ವರ್ತನೆಗಾಗಿ ನಗೆಯಾಡಿದರು. ಹುಡುಗರು ಮಲಗಿದವು. ನಾವು ಸ್ವಲ್ಪ ಹೊತ್ತು ಹರಟುತ್ತಿದ್ದೆವು. ಈ ನಡುವೆಯೇ ಗಾಳಿಯ ವೇಗ ಅತೀವ ಹೆಚ್ಚಿದ್ದರಿಂದ ಅವರೂ ಆಶಂಕಿತರಾದರು. ಅವರು ನನ್ನೊಂದಿಗೆ ನನ್ನ ಮನೆಯ ವರೆಗೆ ಬಂದರು. ಮೂರನೇ ಮಜಲು ಏರಿದೆವು. ಗಾಳಿ ಭಯಂಕರ ರೂಪ ತಾಳಿತು. ನೆರೆಯವರು ಎಚ್ಚತ್ತರು. ಆದರೂ ಯಾರೂ ಮನೆ ಬಿಟ್ಟು ಹೊರಬರಲಿಲ್ಲ. ನಾನು ಎಲ್ಲರನ್ನೂ ಹೊರಬೀಳಲು ಕೇಳಿಕೊಂಡೆ. ಹಲವರು ನಕ್ಕರು. ಆದರೂ ಬಹಳ ಹೇಳಿಕೊಂಡಾಗ ಹೆಣ್ಣುಮಕ್ಕಳು ಹೊರಬರಲು ಒಪ್ಪಿದರು. ಎಲ್ಲರೂ ಕೆಳಗಿಳಿದರು. ನಾವು ಇಳಿದು ಹೊರಗೆ ಬರುವುದೇ ತಡ, ನಮ್ಮ ಕೋಣೆಗಳು ಕುಸಿಯಲಾರಂಭಿಸಿದವು. ಚಪ್ಪರಗಳು ಗಾಳಿಯಲ್ಲಿ ಹಾರಿ ಹೊರಟವು.

ನೆರೆಯವರು ನೋಡಿ ಚೀರಿಕೊಂಡರು - ಅವರೆಲ್ಲರನ್ನು ಪೋಸ್ಟ್ ಆಫೀಸಿನಲ್ಲಿ ಸುರಕ್ಷಿತವಾಗಿ ಇರಿಸಲಾಯಿತು. ಬಿರುಗಾಳಿ ರಾಕ್ಷಸವಾಯಿತು. ಮನೆಗಿಡಗಳು ಮುರಿಮುರಿದು ಬೀಳತೊಡಗಿದವು. ಸಿನೆಮಾದ ರಟ್ಟಿನ ಮನೆಗಳುರುಳಿದಂತೇ ಕಾಣುತ್ತಿತ್ತು ಆ ದೃಶ್ಯ.

ಕೆಲ ಹೊತ್ತಿನಲ್ಲೇ ನಾವು ಹೊರಬಿದ್ದೆವು. ವಿನಾಶದ ನಗ್ನನರ್ತನ ನಡೆದಿತ್ತು. ಜನರು ತ್ರಾಹಿತ್ರಾಹಿ ಎನ್ನುತ್ತಿದ್ದರು. ರಸ್ತೆಗಳಲ್ಲಿ ನಡುಮಟ್ಟ ನೀರು. ಪ್ರಚಂಡ ಪ್ರಭಂಜನವು ತಾಸಿಗೆ ೭೨ ಮೈಲು ವೇಗದಿಂದ ಬೀಸುತ್ತಿತ್ತು. ಕೆಳಮಜಲಿನಲ್ಲಿ ಆರಾರು ಫೂಟು ನೀರು ನಿಂತಿತ್ತು. ದೊಡ್ಡದೊಡ್ಡ ಮನೆಗಳ ನೆಲಗಟ್ಟುಗಳೇ ಬುಡದಲ್ಲಿ ನಡುಗುತ್ತಿದ್ದವು.

ಎಷ್ಟೋ ಜನರು ಮಲಗಿಯೇ ಇದ್ದರು. ಎಷ್ಟೋ ಜನರು ನೀರಿನಲ್ಲಿ ಹರಿದು ಹೋದರು. ತಾಳೆಮರಗಳು ಹಾರುತ್ತಿದ್ದವು. ಎಂಟು ಗಂಟೆಗಳ ಈ ಮಹಾವಿಪ್ಲವವು ಮುಂಬಯಿ ನಗರವನ್ನು ಗದಗದ ನಡುಗಿಸಿತು. ನಮ್ಮ ಮನೆ ಭಗ್ನವಾಯಿತು. ಏನೂ ಉಳಿಯಲಿಲ್ಲ. ಹಾರಿ ಹೋಯಿತು. ತೇಲಿಹೋಯಿತು. ಎಲ್ಲವೂ ನಷ್ಟವಾಯಿತು. ಗರ್ವ ಮತ್ತು ಅಹಂಕಾರದ ಮೂರ್ತಿಮಂತ ಅವತಾರದಂತಿರುವ ಮುಂಬಯಿ ನಗರವು ಧ್ವಂಸದ ಕರಾಲ ಬಾಹುಗಳಲ್ಲಿ ಅನಾಥ ಶಿಶುವಿನಂತೆ ಚೀತ್ಕಾರ ಮಾಡುತ್ತಿತ್ತು

ಕೋಟಿಗಟ್ಟಲೆ ಹಾನಿಯಾಯಿತು. ವಿತ್ತ ಜೀವಿತಗಳ ಅಪಾರ ಹಾನಿಯಾಯಿತು. ಬಡ

ವರು ತೀರ ಬಡವರಾದರು. ಕೆಲವರು ಮುಂದೆ ಹಲವು ವಾರಗಳ ವರೆಗೆ ಒಲೆ ಹೊತ್ತಿಸಲಿಲ್ಲ. ಬೇರೆ ಬೇರೆ ಬೇನೆಗಳೂ ಬಂದವು. ವಿನಾಶವು ತನ್ನ ನಿರ್ಮಮತ್ವವನ್ನು ಪರಿಪೂರ್ಣ ರೀತಿಯಲ್ಲಿ ತೋರಿಸಿತು.

ಕೊನೆಗೂ ಗೆಲವು ಮನುಷ್ಯನಿಗೇ ಮತ್ತೆ ಹೊಸ ನಿರ್ಮಾಣವಾಯಿತು, ಹೊಸ ವಿಕಾಸವು ಆಗತೊಡಗಿತು. ಧ್ವಂಸವು ಮನಸ್ಸಿನಿಂದಲೂ ಮರೆಯಾಗಲಾರಂಭಿಸಿತು. ವಿಷಾದವನ್ನು ಯಾರಾದರೂ ನೆನಪಿಡಲು ಯತ್ನಿಸುವರೆ? ನಮ್ಮ ಮುರಿದ ಮನೆಯೂ ಮತ್ತೆ ಎದ್ದು ನಿಂತಿತು. ಹವನಪೂಜನಗಳೊಂದಿಗೆ ವಿಧಿವತ್ ನಾವು ಅದನ್ನು ಪ್ರವೇಶಿಸಿದೆವು. ನನ್ನ ಪ್ರೀತಿಯ ಗ್ಯಾಲರಿಯೂ ಪುನರ್ನಿರ್ಮಿತವಾಯಿತು. ಈ ಬಾರಿ ಅದು ಮತ್ತಷ್ಟು ಹಿಗ್ಗಿತ್ತು. ನನ್ನ ಮೇಜನ್ನು ಅಲ್ಲಿ ಸ್ಥಾಪಿಸಿದೆ. ಪುನಃ ನನ್ನ ಏಕಾಂತ ಸ್ವಾಧ್ಯಾಯವು ಪ್ರಾರಂಭವಾಯಿತು.

ಇಷ್ಟಾದರೂ ಉಳಿದುಕೊಂಡಿದ್ದ 'ಜಾಮ್ಯ ಕ್ರಿಸ್ತಾಫ್' ನಾನು ಪುನಃ ಓದತೊಡಗಿದೆ. ಅದೇ ಆನಂದ, ಅದೇ ಬಗೆಯ ರಸೋದ್ರೇಕ ಉಂಟಾಗತೊಡಗಿತು. ಮೂರುನಾಲ್ಕು ದಿನಗಳಲ್ಲಿ ಗ್ರಂಥ ವಾಚನ ಮುಗಿಯಿತು. ಇದನ್ನು ನಾನು ಮೂರನೇ ಸಲ ಓದಿದೆ. ಎರಡು ಮೂರು ದಿನಗಳ ವರೆಗೆ ಅದೇ ರಸಾವರಣದಲ್ಲಿರುತ್ತಿದ್ದೆ.

ಒಂದು ದಿನ ಪೋಸ್ಟ್ ಮಾಸ್ತರರು ಬಂದರು. ಆ ಈ ಮಾತುಗಳಾದ ಮೇಲೆ ಬಿರುಗಾಳಿಯ ರಾತ್ರಿಯ ಮಾತೂ ಬಂತು. ನಾನು ಮೊದಲಿನಿಂದ ಕೊನೆಯ ವರೆಗೆ ಎಲ್ಲ ವೃತ್ತಾಂತವನ್ನರುಹಿದೆ. ಅವರು ಆಶ್ಚರ್ಯದಿಂದ ಕೇಳುತ್ತ ಕುಳಿತಿದ್ದರು. ಆಮೇಲೆ ಅದೇ ಸಾಧು ಅವರಿಗೂ ನಮ್ಮ ಬರವಿನ ಸೂಚನೆ ಕೊಟ್ಟಿದ್ದನೆಂದು ತಿಳಿಸಿದರು. ಅಂತೆಯೇ ಅವರು ಕಂದೀಲಿನೊಂದಿಗೆ ಹೊರಗೆ ಬಂದಿದ್ದರಂತೆ. ನಾನು ಬಾಯ್ದೆರೆದು ಅವರನ್ನು ನೋಡುತ್ತಲೇ ಕೂತೆ. ನಸುನಕ್ಕು ಅವರು ಆ ಸಾಧುವನ್ನು ತಾವು ಹಲವು ಬಾರಿ ಕಂಡಿರುವುದಾಗಿ ಹೇಳಿದರು. "ಎಲ್ಲಿ?" ನಾನು ಕೇಳಿದೆ. "ಅರುಣಾಚಲದಲ್ಲಿ." ಅವರು ಹೇಳಿದರು. ಮುಂದುವರೆಸಿ ಗದ್ಗದ ಸ್ವರದಲ್ಲಿ ಹೇಳಿದರು: "ನನ್ನ ಇಷ್ಟದೇವರು ಎಷ್ಟು ಕೃಪಾಳುವಾಗಿದ್ದಾರೆಂದು ನಿಮಗೆ ಗೊತ್ತಿಲ್ಲ. ಅವರು ಕರುಣಾಸಾಗರರು. ಅಂದು ರಾತ್ರಿ ಅವರು ಸ್ವತಃ ಬಂದಿದ್ದರು. ಹೋಗುವಾಗ ಹೂನಗೆ ನಕ್ಕು ಅಂತರ್ಧಾನರಾದರು. ನಾನು ಕೃತಾರ್ಥನಾದೆ." *

ಅರುಣಾಚಲದ ರಮಣಮಹರ್ಷಿಗಳು ಆಗ ತಿರುವಣ್ಣಾಮಲೆಯಲ್ಲಿ ತೀವ್ರ ಕ್ಯಾನ್ಸರಿನಿಂದ ಬಳಲುತ್ತ ಹಾಸಿಗೆ ಹಿಡಿದಿದ್ದರು. ಆದರೆ ಅವರ ಮಹಿಮೆ ಕಾಲದೂರಾತೀತವಾಗಿತ್ತೆಂದು ಈ ಸತ್ಯಾನುಭವ ತೋರಿಸುತ್ತದೆ.

ಮನುಷ್ಯರ ಮನಸ್ಸು

ಮನುಷ್ಯರ ಮನಸ್ಸು ಎಷ್ಟು ವಿಚಿತ್ರ! ನಾವು ಮನಸಾ ಪ್ರೀತಿಸುವ ವ್ಯಕ್ತಿಯ ಮೇಲೇ ಎಷ್ಟೋ ಸಲ ಸಿಟ್ಟಾಗುತ್ತೇವೆ. ಯಾರ ಸ್ಮರಣೆಯಿಂದ ಮೈನವಿರೇಳುವುದೋ ಹೃದಯ ಅರಳುವುದೋ ಅವರೇ ನಮ್ಮೆದುರು ಬಂದರೆ ಎಷ್ಟೋ ಸಂದರ್ಭಗಳಲ್ಲಿ ನಾವು ಅವರೊಂದಿಗೆ ಕಠೋರ ಶಬ್ದಗಳಲ್ಲಿ ಮಾತಾಡುತ್ತೇವೆ. ಯಾವ ವ್ಯಕ್ತಿಗಾಗಿ ನಮ್ಮ ಮನಸ್ಸು ವ್ಯಾಕುಲವಾಗುವುದೋ ಆ ವ್ಯಕ್ತಿ ಭೆಟ್ಟಿಯಾದಾಗ ಆ ವ್ಯಕ್ತಿ ನಮಗೆ ಅಪ್ರಿಯವೆಂಬಂತೆ ನಮ್ಮ ವರ್ತನೆಯಿಂದ ತೋರಿಸುತ್ತೇವೆ. ಈ ರೀತಿಯ ನಮ್ಮ ವರ್ತನೆಯ ಬಗ್ಗೆ ನಾವೆಷ್ಟೋ ವಿಚಾರಮಾಡಿ ಹೀಗಾಗಬಾರದೆಂದು ಅಂದುಕೊಳ್ಳುತ್ತೇವೆ. ಆದರೂ ಮತ್ತೆ ಹೀಗೆಯೇ ಆಗುತ್ತದೆ. ಮನೋವ್ಯಾಪಾರ ಎಷ್ಟು ರಹಸ್ಯಮಯ ಹಾಗೂ ವಿಚಿತ್ರವಾಗಿದೆಯಲ್ಲವೆ?

ಮೂರು ಬಾರಿ ಸತ್ತು ಈಗ ಕೃತಕ ಹೃದಯದ
ಮಿಡಿತದಿಂದ ಅವನು ಬದುಕಿದ್ದಾನೆ

ಅವನ ಹೃದಯ ಪ್ಲಾಸ್ಟಿಕ್ಕಿನದು

ಆರ್. ನಾರಾಯಣ ಅಯ್ಯರ್

ವೇಗವಾಗಿ ಸಂಚರಿಸುತ್ತಿದ್ದ ವಾಹನಗಳ ಅರಿವೇ ಇಲ್ಲದವನಂತೆ, ಡುಸೆಲ್‌ಡಾರ್ಫ್ ನಗರದ ರಾಜಮಾರ್ಗದ ಮಧ್ಯೆ ಹ್ಯಾನ್ಸ್ ಫಿನ್‌ಕೆಂಟಿ ಎಂಬ ೨೦ ವರ್ಷದ ತರುಣನು ನಡೆದು ಬರುತ್ತಿದ್ದನು. ಅಂದು ಅವನ ಮನಸ್ಸು ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದಿತು. ಅದಕ್ಕೆ ಕಾರಣವೂ ಇದ್ದಿತು.

ಗೆಳತಿಯರಲ್ಲೆಲ್ಲಾ ಅತ್ಯಂತ ಸುಂದರಿಯೆನ್ನಿಸಿದ್ದ ಮೇರಿಯೆಟ್ಟಳ ಪದತಲದಲ್ಲಿ ಅವನು ತನ್ನ ಹೃದಯವನ್ನರ್ಪಿಸಿದ್ದನು. "ಪ್ರಿಯತಮೆ, ನಿನಗಾಗಿ ನಾನು ನೂರು ಬಾರಿ ಬೇಕಾದರೂ ನನ್ನ ಪ್ರಾಣವನ್ನೇ ಅರ್ಪಿಸಲು ಸಿದ್ಧನಿರುವೆನು," ಎಂದು ಅವನು ನುಡಿದಿದ್ದನು. ಮೇರಿಯೆಟ್ಟಳು ಅವನನ್ನು ನಿರಾಕರಿಸಿರಲಿಲ್ಲ. ಅವಳಿತ್ತಿದ್ದ ಚುಂಬನದ ಸವಿಯನ್ನು ಮನದಲ್ಲಿಯೆ ನೆನೆ ನೆನೆಯುತ್ತ, ತನ್ನನ್ನು ತಾನೇ ಮರೆತು ಆ ತರುಣನು ಮಾರ್ಗವನ್ನನುಕ್ರಮಿಸಿದ್ದನು.

ಕಿರ್ರೆಂದು ಬ್ರೆಕ್ ಹಾಕಿದ ಶಬ್ದ. ತರುಣನು ಅಪಘಾತಕ್ಕೊಳಗಾಗಿದ್ದನು. ಜನರು ಅಪಘಾತವು ನಡೆದ ಎಡೆಗೆ ಧಾವಿಸಿ ಬಂದರು. ಚೌಕದಲ್ಲಿದ್ದ ಪೋಲೀಸಿನವನೂ ಓಡಿ ಬಂದನು. ಅಪಘಾತವು ನಡೆದ ನಾಲ್ಕು ನಿಮಿಷಗಳೊಳಗೆ, ಆಂಬುಲೆನ್ಸ್ ವ್ಯಾನಿನಲ್ಲಿ ಸಮೀಪದ ಸರಕಾರಿ ಆಸ್ಪತ್ರೆಗೆ ತರುಣನನ್ನು ಸಾಗಿಸಲಾಯಿತು.

ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಯುವಕನನ್ನು ವೈದ್ಯರು ಪರೀಕ್ಷಿಸಿ ನೋಡಿದರು. ದುರ್ಬಲವಾಗಿ ಮಿಡಿಯುತ್ತಿದ್ದ ನಾಡಿಯು, ಪರೀಕ್ಷಿಸುತ್ತಿದ್ದಂತೆಯೇ ನಿಂತು ಹೋಯಿತು.

ತರುಣನು ಸತ್ತಿದ್ದನು.

ಕ್ಷಣಕಾಲವೂ ವಿಳಂಬ ಮಾಡದೆ ವೈದ್ಯರು ಹೃದಯವನ್ನು ಉತ್ತೇಜನಗೊಳಿಸಬಲ್ಲ "ಕೋರಮಿನ್," ಎಂಬ ವಸ್ತುವನ್ನು ಇಂಜಕ್ಷನ್ ಮೂಲಕ ರಕ್ತಗತವಾಗುವಂತೆ ಮಾಡಿದರು. ಆಶ್ಚರ್ಯ! ಒಂದೂವರೆ ನಿಮಿಷಗಳಲ್ಲಿ ಹೃದಯವು ಪುನಶ್ಚೇತನಗೊಂಡು, ಕ್ರಮೇಣ ನಾಡಿಯು ಮಿಡಿಯುವುದು ಗೋಚರವಾಗಲಾರಂಭಿಸಿತು. ಆದರೆ, ಮತ್ತೆ ಎರಡು ನಿಮಿಷಗಳಲ್ಲಿ ನಾಡಿಯ



ಮಿಡಿತವು ಕ್ಷೀಣಿಸಲಾರಂಭವಾಗಿ ೩೦ ಸೆಕೆಂಡು ಗಳಲ್ಲಿ ಹೃದಯವು ತನ್ನ ಕ್ರಿಯೆಯನ್ನು ನಿಲ್ಲಿಸಿಯೇ ಬಿಟ್ಟಿತು.

ತರುಣನು ಎರಡನೆಯ ಬಾರಿ ಸತ್ತಿದ್ದನು!

ತಡಮಾಡದೆ ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಿ, ಹೃದಯವನ್ನು ಹೊರತೆಗೆದು ಅದರ ಮಾಂಸ ಖಂಡಗಳನ್ನು ಮೃದುವಾಗಿ "ಮ್ಯಾಸೇಜ್" ಮಾಡುತ್ತಾ ಹೋದರು. ಪ್ರಾಣ ಹೋದ ೫-೬ ನಿಮಿಷಗಳೊಳಗಾಗಿಯೇ ಹೀಗೆ ಹೃದಯವನ್ನು ಮ್ಯಾಸೇಜ್ ಮಾಡುವುದರಿಂದ, ಅದು ಪುನಶ್ಚೇತನಗೊಳ್ಳುವ ಸಂಭವವಿರುವುದಂತೆ. ಕಳವಳ, ಕುತೂಹಲಗಳಿಂದ ವೈದ್ಯರ ಮುಖವು ಕಳೆಗುಂದಿದ್ದಿತು. ಆದರೆ ೯೦ ಸೆಕೆಂಡುಗಳ ನಂತರ ಹೃದಯವು ಪುನಶ್ಚೇತನಗೊಂಡು ಮಿಡಿಯುವ ಸೂಚನೆಯು ಕಂಡುಬಂದಾಗ ಅವರ ಮುಖವು ಪ್ರಫುಲ್ಲಗೊಂಡಿತು.

ಹೃದಯವನ್ನು ಇನ್ನೂ ೩೦ ಸೆಕೆಂಡುಗಳಷ್ಟು ಕಾಲ ಮ್ಯಾಸೇಜ್ ಮಾಡಿ ಸ್ವಸ್ಥಾನದಲ್ಲಿಟ್ಟು, ಶಸ್ತ್ರ ಚಿಕಿತ್ಸೆಯ ಗಾಯವನ್ನು ಹೊಲಿಯಲು ವೈದ್ಯರು ಸಿದ್ಧರಾದರು. ಆದರೆ ೧೫ ಸೆಕೆಂಡು ಗಳೊಳಗಾಗಿ ನಾಡಿಯ ಬಡಿತವು ಪುನಃ ದುರ್ಬಲಗೊಂಡು, ಮತ್ತೆ ೧೫ ಸೆಕೆಂಡುಗಳಲ್ಲಿ ಹೃದಯವು ಪುನಃ ತನ್ನ ಕ್ರಿಯೆಯನ್ನು ನಿಲ್ಲಿಸಿಬಿಟ್ಟಿತು.

ತರುಣನು ಮೂರನೆಯ ಬಾರಿ ಸತ್ತಿದ್ದನು!

ಮಿಂಚಿನ ವೇಗದಿಂದ ವೈದ್ಯರು ಪುನಃ ಯುವಕನ ಹೃದಯವನ್ನು ಹೊರತೆಗೆದು ಮ್ಯಾಸೇಜ್ ಮಾಡಲಾರಂಭಿಸಿದರು. ವೈದ್ಯರ ಕಣ್ಣುಸನ್ನೆಯನ್ನನುಸರಿಸಿ ಆತನ ಸಹಾಯಕ ವೈದ್ಯರು, ರಕ್ತವನ್ನು ಪಂಪ್ ಮಾಡಬಲ್ಲ, ಸಣ್ಣ ಸ್ಟೈಯಿನ್ ಲೆಸ್ ಸ್ಟೀಲಿನ ವಿದ್ಯುತ್ ಚಾಲಿತ ಪಂಪನ್ನು ಕ್ಷಣಮಾತ್ರದಲ್ಲಿ ತಂದಿಟ್ಟರು. ವೈದ್ಯರು ಹೃದಯದಿಂದ ಹೊರಡುವ ರಕ್ತನಾಳಗಳಲ್ಲೊಂದನ್ನು ಕತ್ತರಿಸಿ ಪಂಪಿಗೆ ಜೋಡಿಸಿದರು. ಹೃದಯವು ಮಾಡಬೇಕಾಗಿದ್ದ ಕೆಲಸವನ್ನು ಈಗ ಪಂಪು, ಮಾಡಲಾರಂಭಿಸಿತು. ಅದು ರಕ್ತವನ್ನು ಪಂಪ್ ಮಾಡಿದಂತೆಲ್ಲಾ, ರಕ್ತದಲ್ಲಿ ಆಮ್ಲಜನಕವನ್ನು ವಿಲೀನಗೊಳಿಸುವಂತೆ ಮಾಡಲು ಜೋಡಣೆಯಿದ್ದಿತು.

ಅಪಘಾತಕ್ಕೊಳಗಾಗಿದ್ದ ಹೃದಯದ ಯಾವ ಯಾವ ಭಾಗಗಳು ಶಿಥಿಲಗೊಂಡು, ಮೃತ್ಯುವಿನೊಡನೆ ವೈದ್ಯರು ನಡೆಸಿದ ಹೋರಾಟದಲ್ಲಿ ಅವರಿಗೆ ಮೂರು ಬಾರಿಯೂ ಅಪಜಯವನ್ನು ತಂದಿದ್ದುವು, ಎನ್ನುವುದನ್ನು ಪರೀಕ್ಷಿಸಿ ಕಂಡು ಹಿಡಿಯಲು, ಈಗ ಅವಕಾಶವು ದೊರಕಿದಂತಾಯಿತು. ಶಿಥಿಲಗೊಂಡಿದ್ದ ಎರಡು ರಕ್ತನಾಳಗಳ ಭಾಗಗಳಿಗೆ ಪ್ರತಿಯಾಗಿ ವೈದ್ಯರು ರಕ್ತನಾಳದ ಬ್ಯಾಂಕಿನಿಂದ ಬೇರೆ ಎರಡು ರಕ್ತನಾಳಗಳನ್ನು ತರಿಸಿ ಕಸಿ ಮಾಡಿದರು. ಹೃದಯದ ಒಳಗಡೆ ಶಿಥಿಲಗೊಂಡಿದ್ದ ಟ್ರೈಕಸ್‌ಪಿಡ್ ಎಂಬ ಕವಾಟವನ್ನು "ಟೆಫ್ಲಾನ" ಎಂಬ ಪ್ಲಾಸ್ಟಿಕ್ ವಸ್ತು ವಿಶೇಷದಿಂದ ಕಸಿಮಾಡಿ ಹೊಂದಿಸಲಾಯಿತು.

ಈಗ ವಿದ್ಯುತ್ ಚಾಲಿತ ಪಂಪು ಮಾಡುತ್ತಿದ್ದ ಕೆಲಸವನ್ನು ಹೃದಯವು ವಹಿಸಬಲ್ಲುದೆಂಬ ಭರವಸೆಯು ವೈದ್ಯರಿಗೆ ಬಂದಿತು. ಪಂಪನ್ನು ನಿಲ್ಲಿಸಿ, ಅವರು ಹೃದಯಕ್ಕೆ ತನ್ನ ಸ್ವಾಭಾವಿಕ ಕರ್ತವ್ಯವನ್ನು ನಿರ್ವಹಿಸಲು ಬಿಟ್ಟರು. ಹೃದಯವು ತನ್ನ ಕೆಲಸವನ್ನು ಸಮರ್ಪಕವಾಗಿ ನಡೆಸಲಾರಂಭಿಸಿತು. ವೈದ್ಯರು ಸಮಾಧಾನದ ನಿಟ್ಟುಸಿರನ್ನು ಬಿಟ್ಟರು. ಆದರೆ.........

ಆದರೆ ೩ ನಿಮಿಷಗಳ ನಂತರ ಹೃದಯವು ಪುನಃ ಇದ್ದಕ್ಕಿದ್ದಂತೆಯೇ ತನ್ನ ಕ್ರಿಯೆಯನ್ನು ನಿಲ್ಲಿಸಿಬಿಟ್ಟಿತು.

ತರುಣನು ನಾಲ್ಕನೆಯ ಬಾರಿ ಸತ್ತಿದ್ದನು!

ವೈದ್ಯರು ಪುನಃ ಹೃದಯದ ಕೆಲಸವನ್ನು ವಿದ್ಯುತ್‌ಚಾಲಿತ ಪಂಪಿಗೆ ವಹಿಸಿಕೊಟ್ಟರು. ಹೃದಯದ ಕ್ರಿಯೆಗಳ ಮೇಲೆ ಹತೋಟಿಯನ್ನಿಟ್ಟಿರುವ ಮೆದುಳಿನ ಭಾಗವು ಶಿಥಿಲಗೊಂಡಿರಬೇಕು, ಎಂಬ ಅಂಶವು ಅವರಿಗೆ ಖಚಿತವಾಯಿತು. ಹಾಗಾದರೆ ಆ ತರುಣನ ಹೃದಯವನ್ನು ಪುನಶ್ಚೇತನಗೊಳಿಸುವುದು ಸಾಧ್ಯವೇ ಇರಲಿಲ್ಲ.

ಇನ್ನುಳಿದಿದ್ದುದು ಒಂದೇ ಒಂದು ಮಾರ್ಗ. ಅದೆಂದರೆ, ಹಿಂದೊಮ್ಮೆ ನಾಯಿಯ ಮೇಲೆ ಪ್ರಯೋಗವನ್ನು ನಡೆಸಿದಾಗ ವಿಜಯವನ್ನು ಗಳಿಸಿಕೊಟ್ಟಿದ್ದ ಕೃತಕ ಹೃದಯದ ಉಪ

ಯೋಗ. "ಪಾಲ್ಯಥೀನ್" ಎಂಬ ಪ್ಲಾಸ್ಟಿಕ್‌ನಿಂದ ತಯಾರಿಸಿದ ಆ ಹೃದಯದಲ್ಲಿ ಒಂದು ಸಣ್ಣ ಪಂಪ್ ಇದೆ. ಅದನ್ನು ಒಂದು ಸಣ್ಣ "ಟ್ರಾನ್ಸಿಸ್ಟರ್ ವಿದ್ಯುತ್ಕೋಶ"ದ ಸಹಾಯದಿಂದ ನಡೆಸಬಹುದು. ವೈದ್ಯರು ತರುಣನ ಕಿಬ್ಬೊಟ್ಟೆಯ ಮಾಂಸಖಂಡದೊಳಕ್ಕೆ ಒಂದು ಟ್ರಾನ್ಸಿಸ್ಟರ್ ವಿದ್ಯುತ್ಕೋಶವನ್ನು ಕೂಡಿಸಿ ಅದರ ಮೂಲಕ ಕೃತಕ ಹೃದಯವು ತನ್ನ ಕೆಲಸವನ್ನು ನಿರ್ವಹಿಸುವಂತೆ ಮಾಡಿದರು. ಈ ಬಾರಿಯ ಶಸ್ತ್ರ ಚಿಕಿತ್ಸೆಯು ಸಫಲಗೊಂಡಿತು. ತರುಣನು ಕೆಲವೇ ದಿನಗಳಲ್ಲಿ ಓಡಾಡುವಂತಾದನು.

ಹೀಗೆ ನಾಲ್ಕು ಬಾರಿ ಮೃತಪಟ್ಟು, ಆದರೆ ಪ್ರತಿಬಾರಿಯೂ ಆತನ ಹೃದಯವನ್ನು ಮಿಡಿಸಿ ಜೀವಂತಗೊಳಿಸಿದ ಅದ್ಭುತವನ್ನು ಆಸ್ಪತ್ರೆಯ ಅಧಿಕಾರಿಗಳು ಪ್ರಕಟಗೊಳಿಸಿದ್ದಾರೆ.

ವಿದ್ಯುತ್ಕೋಶದ ಸಹಾಯದಿಂದ ಈ ಕೃತಕ ಹೃದಯವು ಐದು ವರ್ಷಗಳ ಕಾಲ ಕೆಲಸ ಮಾಡಬಹುದೆಂದು ಅಂದಾಜು ಮಾಡಲಾಗಿದೆ. ಅನಂತರ ಅದರ ಬದಲು ಬೇರೆ ಉಪಕರಣವನ್ನು ಕೂಡಿಸಬೇಕಾಗುವುದು.

ಕೃತಕ ಹೃದಯದ ನೆರವಿನಿಂದ ಜೀವಂತನಾಗಿರುವುದಾದರೂ, ತನ್ನ ನಿಜ ಹೃದಯವನ್ನೇ ಪ್ರಿಯತಮೆಯ ಪದತಲದಲ್ಲಿ ಸಮರ್ಪಿಸಿದ್ದ ಫಿನ್‌ಕೆಂಟಿಯನ್ನು, ಆತನ ಪ್ರೇಯಸಿಯು ಎಂದೆಂದೂ ಕೈಬಿಡುವುದಿಲ್ಲೆಂದು ಪ್ರಮಾಣ ಮಾಡಿದ್ದಾಳೆಂದು ವರದಿಯಾಗಿದೆ! *

ಗುರುದೇವ ನಾನಲ್ಲ!

'ನಿನ್ನ ಪಥದಲ್ಲಿ ನೀ ನಡೆ ಕಬೀರಾ!'— ಎಂದೊಮ್ಮೆ ಅನುಭಾವಿಕ ವೀರರು ತಮ್ಮನ್ನು ಕುರಿತು ತಾವೇ ಹೇಳಿಕೊಂಡರು. ಸಹಜ ಅನುಭವವಿಲ್ಲದೆ ಶಿಷ್ಯರನ್ನು ಗುಂಪು ಕಟ್ಟಿಕೊಳ್ಳುವುದನ್ನೆ ವೃತ್ತಿಯಾಗಿ ಮಾಡಿಕೊಂಡಿದ್ದ ವೇಷಧಾರಿ ಗುರುಗಳನ್ನು ಕಂಡು, ಮಾನವನ ಸಹಜ ಜ್ಞಾನವನ್ನು ಎತ್ತಿ ಹಿಡಿದು ಹೇಳಿದ ಮಾತಿದು. ಗುರುದೇವ ರವೀಂದ್ರನಾಥ ಠಾಕೂರರ ಜೀವಮಾನದಲ್ಲೂ ಒಮ್ಮೆ ಇಂಥದೇ ಒಂದು ಘಟನೆ ಜರುಗಿತು.

೧೯೧೪ ರ ಸಂದರ್ಭ. ಒಮ್ಮೆ ಕಾಕಾ ಕಾಲೇಲ್ಕರರು ಶಾಂತಿನಿಕೇತನದಲ್ಲಿ ಎಲ್ಲರಿಗಿಂತ ಮೊದಲು ಕವೀಂದ್ರ ರವೀಂದ್ರರನ್ನು ಕಂಡು ಕೇಳಿದರು— "ನಾನು ನಿಮ್ಮ 'ಗೀತಾಂಜಲಿ' ಮುಂತಾದ ಆಂಗ್ಲ ಗ್ರಂಥಗಳನ್ನು ಓದಿದೆನೆ. ಈಗ ನಿಮ್ಮ ಹಲವು ಆಧ್ಯಾತ್ಮಿಕ ಅನುಭವಗಳನ್ನರಿಯುಬೇಕೆಂಬುದು ನನ್ನ ಬಯಕೆ" ವಿಶೇಷವಾದ ಪ್ರಶ್ನೆಯನ್ನು ಕೇಳುವ ಮೊದಲೇ ಅವರೆಂದರು— "ಜನರು ನನ್ನನ್ನು 'ಗುರು-ದೇವ' ಎನ್ನುತ್ತಾರೆ. ಆದರೆ ನನಗೆ ಮಾನವೀಯ ಗುರುವಿನಲ್ಲಿ ವಿಶ್ವಾಸವಿಲ್ಲ. ಒಬ್ಬ ಮನುಷ್ಯ ಇನ್ನೊಬ್ಬನಿಗೆ ಗುರುವಾಗಬಲ್ಲ, ಒಬ್ಬನು ಬೇರೊಬ್ಬನಿಗೆ ಮಾರ್ಗದರ್ಶಕನಾಗಬಲ್ಲನೆಂಬುದನ್ನು ನಾನು ಒಪ್ಪಲಾರೆ. ಅಧ್ಯಾತ್ಮ ಪಥದಲ್ಲಿ ತನ್ನ ಗುರಿಯತ್ತ ಸಾಗಲು ಪ್ರತಿಯೊಬ್ಬ ಮಾನವನೂ ತನ್ನ ದಾರಿಯನ್ನು ತಾನೇ ಆರಿಸಿಕೊಳ್ಳಬೇಕು ಮಾತ್ರವಲ್ಲ, ನಿರ್ಮಿಸಲೂ ಬೇಕಾಗುತ್ತದೆ. ಅಧ್ಯಾತ್ಮ ಯಾವಾಗಲೂ ಅಜ್ಞಾತ ಸಾಗರದಂತೆ, ಇಲ್ಲಿ ಎಲ್ಲರೂ ತಮ್ಮ ತಮ್ಮ ನಾವೆಗಳಿಗೆ ತಾವೇ ಹುಟ್ಟು ಹಾಕಬೇಕಾಗುತ್ತದೆ. ನನ್ನ ಸಾಧನೆ ಲಭಿಸಿದು ನಾನು ಕವಿಯಾದುದರಿಂದ."

—ರಾ. ನಾ. ರತನ


ಪಾಕಗೃಹದಲ್ಲಿ ತುಷಾರ್
ಇದ್ದರೆ ಮನೆಯಲ್ಲಿ ಸ್ವಾಸ್ಥ್ಯ
ಕುಟುಂಬದ ಆರೋಗ್ಯವು ಅವರುಣ್ಣುವ ಆಹಾರದ ಮೇಲೆ ಅವಲಂಭಿಸಿರುತ್ತದೆಂದು ಪ್ರತಿಯೊಬ್ಬ ಬುದ್ಧಿಶಾಲಿ ತಾಯಿಯೂ ಅರಿತಿದ್ದಾಳೆ. ಅವಳಿಗೆ ಗೊತ್ತಿರುವ ಇನ್ನೊಂದು ಮಾತೇನೆಂದರೆ—ಅಡಿಗೆಗೆ ಅತ್ಯುತ್ತಮವಾದದ್ದು ತುಷಾರ್—'ಎ' ಮತ್ತು 'ಡಿ' ವಿಟಮಿನ್‌ಗಳನ್ನೊಳಗೊಂಡ ವನಸ್ಪತಿ.
Tushar
4 Kilos
NET WEIGHT
ತುಷಾರ್
'ಎ' ಮತ್ತು 'ಡಿ'
ವಿಟಮಿನ್‌ಗಳನ್ನೊಳಗೊಂಡ ವನಸ್ಪತಿ
ತುಂಗಭದ್ರಾ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನೂಲ್
ASP/TI-7

ನಗೆಮಲ್ಲಿಗೆ

ಹಲ್ಲಿನ ಸೆಟ್ಟು ಹಾಕಿಸಿಕೊಂಡಿದ್ದ ಗಿರಾಕಿಯೊಬ್ಬ ಎಷ್ಟು ದಿನವಾದರೂ ಬಿಲ್ಲು ತೀರಿಸದಿದ್ದುದರಿಂದ ಕೋಪಗೊಂಡ ಹಲ್ಲಿನ ಡಾಕ್ಟರ "ಆ ಬಡ್ಡೀಮಗನ ಹತ್ತಿರ ನಾನೇ ಹೋಗಿ ಒದ್ದು ವಸೂಲು ಮಾಡಿ ತರುತ್ತೇನೆ" ಎಂದು ಕಂಪೌಂಡರನ ಹತ್ತಿರ ಹೇಳಿ ಹೊರಬಿದ್ದ.

ಡಾಕ್ಟರ್ ಮರಳಿದಾಗ ಅವನ ಮುಖ ಬಾಡಿದ್ದನ್ನು ನೋಡಿ, "ನೀವು ಹೋದರೂ ಕೊಡಲಿಲ್ಲವೆ?" ಎಂದು ಕೇಳಿದ.

ಡಾಕ್ಟರ್ ಹೇಳಿದ: "ಕೊಡಲಿಲ್ಲ ಮಾತ್ರವಲ್ಲ, ನನ್ನ ಹಲ್ಲಿನಿಂದಲೇ ನನ್ನ ಕೈ ಕಚ್ಚಿದ."

*

ವಾದಿ-ನಾನು ಅವನ ಮನೆಗೆಹೋದಾಗ ಆತನ ಮನೆಯಲ್ಲಿ ಆ ಪಾತ್ರೆಯನ್ನು ಕಂಡೆ. ಅದರ ಮುಚ್ಚಳ ಸಹಾ ತಗ್ಗಿಹೋಗಿತ್ತು. ಖಂಡಿತವಾಗಿಯೂ ಅದು ನನ್ನದೇ.

ಅಪರಾಧಿ ಕಡೆಯ ವಕೀಲ— ಅದರ ಮುಚ್ಚಳ ತಗ್ಗಿ ಹೋದ ಮಾತ್ರಕ್ಕೆ ಅದು ನಿನ್ನದೇ ಎಂದು ಹೇಳಲಾಗುವುದಿಲ್ಲ. ನನ್ನ ಮನೆಯಲ್ಲಿ ಸಹಾ ಮುಚ್ಚಳ ತಗ್ಗಿ ಹೋಗಿರುವ ಅದೇ ತರಹದ ಒಂದು ಪಾತ್ರೆ ಇದೆ.

ಆತ—(ಸಂತೋಷಗೊಂಡು) ಹಾಗಾದರೆ ಸಿಕ್ಕಿತು ಸ್ವಾಮಿ! ನನ್ನ ಮನೆಯಲ್ಲಿ ಕಳವಾದದ್ದು ಒಂದಲ್ಲಾ ಎರಡು ಪಾತ್ರೆಗಳು!

*

ಮುದಿ ಸಾಹೇಬರು ಗಡ್ಡಕ್ಕೆ ಮಾತ್ರ ಕಪ್ಪು ಬಣ್ಣ ಹಾಕುತ್ತಿದ್ದರು. ತಲೆಗೆ ಯಾವಾಗಲೂ ಟೋಪಿ ಇರುತ್ತಿದ್ದುದರಿಂದ ಅದನ್ನು ಬಣ್ಣ ಹಾಕದೇ ಬಿಟ್ಟಿದ್ದರು. ಒಮ್ಮೆ ಅವರು ಮಿತ್ರನೊಡನೆ ಮಾತಾಡುತ್ತಿದ್ದಾಗ ಏನೋ ತಾಗಿ ಟೋಪಿ ಬಿದ್ದು ಹೋಯಿತು.

"ಎಲಾ ಏನಿದು? ನಿಮ್ಮ ತಲೆ ಬೆಳ್ಳಗಿದೆ. ಗಡ್ಡ ಮಾತ್ರ ಕಪ್ಪಾಗಿದೆಯಲ್ಲ" ಎಂದು ಮಿತ್ರರು ಆಶ್ಚರ್ಯ ವ್ಯಕ್ತಪಡಿಸಿದರು.

ಸಾಹೇಬರು ಹಿಂಜರಿಯದೆ ಉತ್ತರವಿತ್ತರು: "ಇದರಲ್ಲಿ ಏನಾಶ್ಚರ್ಯ? ನನ್ನ ಗಡ್ಡ ನನ್ನ ತಲೆಗಿಂತ ಹದಿನಾರು ವರ್ಷ ವಯಸ್ಸಿನಲ್ಲಿ ಕಿರಿಯದು."

—ಎಂ. ಎಲ್. ಗುರುರಾಜ ರಾವ್

*

ಪೋಲೀಸ್- ತನ್ನ ಮಾತೃಭಾಷೆಯನ್ನು ತುಚ್ಛವಾಗಿ ಕಂಡು, ಹಂಗಿಸಿದನೆಂದು ಆತನನ್ನು ಈತ ಚಾಕುವಿನಿಂದ ಹೊಡೆದ.

ಅಧಿಕಾರಿ— ಈತನ ಮಾತೃ ಭಾಷೆ ಯಾವುದು?

ಪೋಲೀಸ್— ಕನ್ನಡ.

ಅಧಿಕಾರಿ— ಹಾಗಾದರೆ ನೀನು ಹೇಳುವುದು ಸುಳ್ಳು, ಅವನನ್ನು ಬಿಟ್ಟುಬಿಡು.

*

ಒಬ್ಬ (ಅಂಗಡಿಕಾರನಿಗೆ): "ನನಗೆ ನಿನ್ನಲ್ಲಿರುವ ಎಲ್ಲ ಕೊಳೆತ ಮೊಟ್ಟೆಗಳು ಬೇಕಾಗಿವೆ."

ಅದಕ್ಕೆ ಅಂಗಡಿಗಾರ: "ಏಕೆ ಸ್ವಾಮಿ? ಇದನ್ನು ತೆಗೆದುಕೊಂಡು ನೀವೇನು ಮಾಡುವಿರಿ? ಏನು ಈ ರಾತ್ರಿ ಮೈದಾನಿಗೆ ಬರುವ ಹೊಸ ಭಾಷಣಕಾರನನ್ನು ನೋಡ ಹೋಗುವಿರಾ ಹೇಗೆ?"

ಬಂದ ಗಿರಾಕಿ:— "ಹಾಗಲ್ಲಯ್ಯಾ? ಬರುವ ಆ ಹೊಸ ಭಾಷಣಕಾರ ನಾನೇ.."

—ರಮೇಶ ಪೈ

ಪತ್ನಿ— (ಪೇಟೆಗೆ ಹೊರಟದ್ದ ಗಂಡನಿಗೆ) ಈ ಇಲಿಗಳ ಗಲಾಟೆ ಜಾಸ್ತಿ ಆಗಿಬಿಟ್ಟಿದೆ, ಅದಕ್ಕೆ ಏನಾದರೂ ತರ್ತೀರಾ?

ಗಂಡ— (ಕೋಪದಿಂದ) ಏನು? ಏನಾದರೂ ತರೋದೆ? ಮನೇಲಿರೋದು ತಿಂದುಕೊಂಡು ಬಿದ್ದಿರೋಕೆ ಅವಕ್ಕೆ ಇಷ್ಟ ಇಲ್ದಿದ್ರೆ, ಮನೆಬಿಟ್ಟು ಹೋಗ್ಲಿ....

*

ಜಡ್ಜಿ— ವರ್ಷಕ್ಕೆ ತಪ್ಪುಮಾಡಿ ಎಷ್ಟು ಸಲಾನಯ್ಯಾ ಕೋರ್ಟಿಗೆ ಬರೋದು? ನಾಚಿಕೆಯಾಗೋದಿಲ್ವೆ?

ಅಪರಾಧಿ— ನನಗೆ ಹೋಗಲಿ; ತಾವು ದಿನಾಲೂ ಬರ್ತೀರಲ್ಲಾ ಸಾರ್..

*

ಮಗ(ಆನೆಕಾಲು ರೋಗಿಯನ್ನುಕಂಡು ತಂದೆಯೊಡನೆ):— "ಅಪ್ಪ, ಅದೇನಪ್ಪ ಅವನ ಒಂದು ಕಾಲು ಉಬ್ಬಿ ದಪ್ಪವಾಗಿದೆ?"

ಅಪ್ಪ:— "ಛೂ.. ಹಾಗೆಲ್ಲ ಗೇಲಿ ಮಾಡಬೇಡ. ಅವನು ಸಿಟ್ಟಗೆದ್ದಾನು ಜೋಕೆ.."

ಮಗ:— "ಮತ್ತೇನೆನ್ನಬೇಕಪ್ಪ?.."

ಅಪ್ಪ:— "ಒಂದು ಕಾಲು ಸಪೂರ ಅನ್ನು!"

*

ಆಗಲೇ ೨೫,೦೦೦ ರೂಪಾಯಿಯ ವಿಮಾ ಪಾಲಿಸಿಯನ್ನು ಕೊಂಡಿದ್ದ ಆ ವ್ಯಾಪಾರಿ ಮಹನೀಯ ಅದನ್ನು ತನ್ನ ಮನೆಗೆ ರವಾನಿಸಿ ಕೊಟ್ಟು ತಾನು ವಿಮಾನದಲ್ಲಿ ದೂರದ ದೇಶಕ್ಕೆ ಹೋಗುವ ಮುನ್ನ ತನ್ನ ಅದೃಷ್ಟವನ್ನು ಪರೀಕ್ಷಿಸಲೆಂದು ಒಂದು ಆಣೆಯನ್ನು ಆ ಅದೃಷ್ಟ ಸೂಚಕ ಮೆಶಿನಿಗೆ ಹಾಕಿದನು.

ಆಗ ಅದರಿಂದ ಬಂತು ಈ ಅದೃಷ್ಟ ಸೂಚಕ ಕಾರ್ಡು:—

"ಇತ್ತೀಚೆಗೆ ಹಾಕಿದ ಬಂಡವಾಳ ಬಹು ದೊಡ್ಡ ಪ್ರಮಾಣದಲ್ಲಿ ಲಾಭಾಂಶ ತ ಬಹುದು." ಬುದ್ಧಿವಂತ ವ್ಯಾಪಾ ಪ್ರಯಾಣ ನಿಲ್ಲಿಸಿದ!

—ರಮೇಶ ಪ

*

ಅವಳು: "ಗಂಡಸರಿಗೆ ಯಾವ ವಿಚಾ ರವನ್ನಾದರೂ ಹೇಳಿದರೆ ಅದನ್ನು ಒಂದ ಕಿವಿಯಿಂದ ಕೇಳಿ ಮತ್ತೊಂದು ಕಿ ಯಿಂದ ಬಿಟ್ಟುಬಿಡುತ್ತಾರೆ."

ಅವನು: "ಅದು ನಿಜ! ಆದರೆ ಹೆಂಗ ರಿಗೆ ಯಾವುದೆ ಒಂದು ವಿಚಾರವನ್ನು ಹೇ ದರೂ ಅದನ್ನು ಎರಡು ಕಿವಿಯಿಂದಲ ಕೇಳಿ ಬಾಯಿಯಿಂದ ಹೊರಬಿಡುತ್ತಾರೆ!"

*

ಸುಂದರ- (ಮಿತ್ರನೊಡನೆ) ನಿನ್ನೆ ಓವ ಜ್ಯೋತಿಷಿ, ನಾನು ಯಾರದ್ದೋ ಹಣ ಗಂಟನ್ನು ಮುಳುಗಿಸಿ ಜೈಲಿಗೆ ಹೋ ಲಿದ್ದೇನೆ ಎಂದು ಕಣಿ ಹೇಳಿದ. ವಿಚಿ ವಲ್ಲವೇ ಇದು?

ಗೆಳೆಯ- ಸುಳ್ಳು! ಅದನ್ನು ನೀನ ನಂಬಬೇಡ. ಈ ಜಗತ್ತಿನಲ್ಲಿ ಹಣ ಗಂಟನ್ನು ಕೊಡುವಷ್ಟು ನಿನ್ನ ಮೇ ವಿಶ್ವಾಸವಿಡುವವರು ಯಾರೂ ಇಲ್ಲ.

*

ಗಂಡ- (ಬಸ್ಸು ತಪ್ಪಿ ಹೋದ ಸಿ ನಿಂದ) ನೀನು ಕನ್ನಡಿಯೆದುರು ಅಷ ಘಂಟೆ ಕುಳಿತು ಹೊತ್ತು ಕಳೆಯದಿದ್ದಿದ್ದ ನಾವು ಸಮಯದಲ್ಲೇ ಸ್ಟೇಶನ್ ತಲು ಬಹುದಾಗಿತ್ತು.

ಹೆಂಡತಿ- ಅಲ್ರೀ! ನೀವಿಷ್ಟು ಅವಸ ಮಾಡಿ ನನ್ನನ್ನಿಲ್ಲಿ ಓಡಿಸಿಕೊಂಡು ಬ ದಿದ್ದಿದ್ದರೆ ನಾವು ಸುಖವಾಗಿ ಮುಂದ ಬಸ್ಸಿನಲ್ಲೇ ಪ್ರಯಾಣಿಸಬಹುದಾಗಿತ್ತು.

ರಾಗಿಣಿಯ ಸೌಂದರ್ಯದ ಗುಟ್ಟು...

'ಲಕ್ಸ್‌ನಿಂದ'

ಆಕರ್ಷಕವಾಗುವುದು ಮುಖಕಾಂತಿ

ಸಿನೆಮ ತಾರೆಯರ
ಶುದ್ಧವಾದ,
ಸೌಮ್ಯವಾದ
ಸೌಂದರ್ಯ-ಸೋಪು



'ನನ್ನ ಮೆಚ್ಚಿನ ಸಾಬೂನಿಗೆ ನನ್ನ ಮೆಚ್ಚಿನ ಬಣ್ಣಗಳು!'

ಅನ್ನುತ್ತಾಳೆ ಸೌಂದರ್ಯವತಿ ಸಿನೆಮತಾರೆ ರಾಗಿಣಿ.

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

LTS. 112-X29 KN

ಶ್ರೀಮುದ್ರಾಮಾಯಣ ದರ್ಶನಂ

ಲಾಂಗೂಲಾಚಾರ್ಯ

ಒಬ್ಬ ರಾಜನಿಗೆ ಒಂದು ಹೆಂಡತಿ ಕಡಿಮೆ ಇದ್ದಿದ್ದರೆ, ಅಥವಾ ಆ ಹೆಂಡತಿಯ ಮನಸ್ಸು ಸ್ವಲ್ಪ ಕಡಿಮೆ ಗಟ್ಟಿಯಾಗಿದ್ದಿದ್ದರೆ ಅಥವಾ ಅವನ ರಥದ ಗಾಲಿಯ ಕೀಲು ಸ್ವಲ್ಪ ಹೆಚ್ಚು ಗಟ್ಟಿಯಾಗಿದ್ದಿದ್ದರೆ—ರಾಮಾಯಣವೇ ಆಗುತ್ತಿದ್ದಿಲ್ಲ. ಅಲ್ಪ ಸಂಗತಿಗಳು ಮಹಾರಾಮಾಯಣಗಳಿಗೆ ಹೇಗೆ ಕಾರಣವಾಗುತ್ತವೆಂದು ಇದು ತೋರಿಸುತ್ತದೆ.

ದಶರಥರಾಜ ಮೂರು ಹೆಂಡಂದಿರನ್ನು ಏಕೆ ಮಾಡಿಕೊಂಡ ಎಂಬ ಪ್ರಶ್ನೆಗೆ ಯಾರೂ ಸಮರ್ಪಕ ಉತ್ತರ ಕೊಟ್ಟಿಲ್ಲ. ಅವನು ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಂಡದ್ದೇಕೆಂಬ ಬಗ್ಗೆ ನನ್ನಲ್ಲೊಂದು "ಥಿಯರಿ" ಇದೆ. ಅವನ ತಂದೆ ಅಜರಾಜ ಒಂದೇ ಹೆಂಡತಿಯನ್ನು ನಂಬಿ ಬದುಕಿದ್ದ. ದಶರಥ ಹುಟ್ಟಿ ಕೆಲವೇ ಕಾಲದಲ್ಲಿ ಒಂದು ದಿನ ಆಕಾಶದಿಂದ ಒಂದು ಹೂಮಾಲೆ ಬಿದ್ದು ಇಂದುಮತಿ ಸತ್ತಮೇಲೆ, ಅಜರಾಜ ಎಷ್ಟು ಕಂಗಾಲಾಗಿ ಹೋದನೆಂದರೆ ಅವನಿಗೆ ಜಗತ್ತೇ ಶೂನ್ಯವಾಗಿ ಕಂಡಿತು. ಅಯೋಧ್ಯೆಯ ಹೊರಗೊಂದು ಗುಡಿಸಲು ಹಾಕಿಕೊಂಡು ಸತ್ತ ಹೆಂಡತಿಯನ್ನೇ ಧೇನಿಸಿ ಕೊರಗುತ್ತ ಆತ ಅಕಾಲ ಮರಣಕ್ಕೆ ತುತ್ತಾದ.

ತಂದೆಯ ಈ ದುರವಸ್ಥೆಯಿಂದ ಚಿಕ್ಕ ಬಾಲಕನಾಗಿದ್ದ ದಶರಥನ ಮನಸಿನ ಮೇಲೆ ಗಾಢವಾದ ಪರಿಣಾಮವಾಗಿರಬೇಕು. ಒಂದೇ ಹೆಂಡತಿಯನ್ನು ನಂಬಿರುವುದರಲ್ಲಿ ಅಡಕವಾದ ಅಪಾಯವನ್ನಾತ ಮನಗಂಡು ತಾನಂತೂ ಒಂದು "ಸ್ಪೇರ್" ಹೆಂಡತಿಯನ್ನು ಇಟ್ಟುಕೊಳ್ಳುವುದಾಗಿ ಆಗಲೇ ನಿರ್ಧರಿಸಿಕೊಂಡಿರಬೇಕು. ಒಂದು ಹೆಂಡತಿ ಸತ್ತಮೇಲೆ ಇನ್ನೊಬ್ಬಳನ್ನು ಮಾಡಿಕೊಳ್ಳಬಾರದಿತ್ತೇ ಎಂದು ನೀವು ಕೇಳುತ್ತೀರಿ. ಆದರೆ ಒಮ್ಮೆ ಒಂದು ಹೆಂಡತಿಗೆ ತಗಲಿಕೊಂಡ ಮೇಲೆ ಹೊಸ ಹೆಂಡತಿಗೆ ಹೊಂದಿಕೊಳ್ಳುವುದು, ಒಂದು ಬ್ರ್ಯಾಂಡಿನ ಸಿಗರೇಟು ಬಿಟ್ಟು ಇನ್ನೊಂದಕ್ಕೆ ಹೊಂದಿಕೊಳ್ಳುವಷ್ಟೇ ಕಷ್ಟ. ಹಿಂದಿನ ಬ್ರ್ಯಾಂಡಿನ ರುಚಿಯನ್ನು ನೆನೆಯುತ್ತ ನೀವು ಈಗಿನ ಬ್ರ್ಯಾಂಡಿನ ಸವಿಯನ್ನು ಅನುಭವಿಸಲಾರದೇ ಹೋಗುತ್ತೀರಿ. ಅದಕ್ಕಾಗಿ ದಶರಥ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಬ್ರ್ಯಾಂಡುಗಳ ಅಭ್ಯಾಸಮಾಡಿಕೊಂಡನೆಂದು ತೋರುತ್ತದೆ. ನನ್ನ ಅಭಿಪ್ರಾಯದಲ್ಲಿ ಅವನು ಜಾಣನೇ ಸೈ.

ಎರಡಾದ ಮೇಲೆ ಮೂರೂ ಆಗಲಿ ಎಂದು ದಶರಥ ಕೈಕೇಯಿಯನ್ನು ಮದುವೆಯಾದ. ಅಲ್ಲೇ ಅವನು ಜಾರಿದನೆಂದು ನನ್ನ ಮತ. ಆದರೆ ಅವನಿಗೆ ತಕ್ಕ ಕಾರಣವೂ ಇದ್ದಿರಬಹುದು. ಬಹುಶಃ ಕೌಸಲ್ಯೆ ಸುಮಿತ್ರೆಯರು ತುಂಬ ಜಗಳವಾಡತೊಡಗಿದ್ದರಿಂದ ಅವನು ಬೇಸತ್ತು "ತೃತೀಯಃ ಪಂಥಾಃ" ಹಿಡಿಯಲು ಮನಸು ಮಾಡಿರಬಹುದು. ಯಾರಾದರೂ ಇಬ್ಬರು ಜಗಳವಾಡುತ್ತಿದ್ದಾಗ ಮೂರನೆಯವಳು ತನಗೆ "ಓಪನ್" ಆಗಿರುತ್ತಾಳಲ್ಲ ಎಂದು ಲೆಕ್ಕ ಹಾಕಿರಬಹುದು. ಇದರಿಂದ ಅವನಿಗೆ ಇಬ್ಬರನ್ನೂ ಏಕಕಾಲದಲ್ಲಿ ಸಂತೈಸುವ ಉಭಯ ಸಂಕಟ ತಪ್ಪುತ್ತಿತ್ತು.



ಅಂತೂ ದಶರಥ ಮೂರನೆಯವಳನ್ನು ಮದುವೆಯಾದ. ಅವಳನ್ನು ತನ್ನೊಡನೆ ಯುದ್ಧಕ್ಕೆ ಕರೆದೊಯ್ಯುವ ಹುಚ್ಚು ಅವನಿಗೆ ಏಕೆ ಅಂಟಿತೆಂದು ರಾಮಾಯಣದಲ್ಲಿ ಎಲ್ಲಿಯೂ ಹೇಳಿಲ್ಲ. ಆದರೆ ಆ ವಿಚಾರ ನನಗೆ ಗೊತ್ತಿದೆಯೆಂದು ಹೇಳಬಲ್ಲೆ. ದಶರಥ ಮುದುಕನಾಗುತ್ತ ಬಂದಿದ್ದ. ಅವನ ಗುರಿ ಅಷ್ಟು ಸರಿಯಾಗಿರಲಿಲ್ಲವೆಂದು ತೋರುತ್ತದೆ. ಆದರೆ ತನ್ನ ರಥದಲ್ಲಿ ದೃಷ್ಟಿಬಾಣಗಳನ್ನು ಎತ್ತೆತ್ತಲೂ ಹಾರಿಸುವ ಬಿನ್ನಾಣಗಿತ್ತಿ ತರುಣಿಯೊಬ್ಬಳನ್ನು ಕರೆದೊಯ್ದರೆ ಶತ್ರುವೀರರ ಕಣ್ಣು ಗುರಿ ಒಂದೆಡೆ, ಬಾಣದ ಗುರಿ ಬೇರೊಂದೆಡೆ, ಆಗಿ ಅವರು ಗೊಂದಲಕ್ಕೀಡಾಗುವರೆಂದು ದಶರಥ ಎಣಿಸಿದ. ಅದು ತಪ್ಪಾಗಲಿಲ್ಲ. ಅವನು ಯುದ್ಧದಲ್ಲಿ ಗೆದ್ದದ್ದರಲ್ಲಿ ಆಶ್ಚರ್ಯವಿಲ್ಲ. ನನ್ನನ್ನು ಕೇಳಿದರೆ, ಯುದ್ಧ ವಿದ್ಯೆಗೆ ಇದು ದಶರಥನ ಮೌಲಿಕ ಕೊಡುಗೆಯಾಗಿತ್ತು. ಈ ಗತ್ತನ್ನು ಅವನ ಅನಂತರ ಬಂದವರು ಉಪಯೋಗಿಸಿಕೊಳ್ಳದೆ ಇದ್ದದ್ದು ದುರದೃಷ್ಟಕರ.

ದಶರಥ ತುಂಬ ಎಚ್ಚರಗೇಡಿ ವೀರನಾಗಿರಬೇಕು. ಯುದ್ಧಕ್ಕೆ ಹೊರಡುವ ಮೊದಲು ತನ್ನ ರಥದ ಗಾಲಿಯ ಕೀಲು ಸರಿಯಾಗಿದೆಯೋ ಎಂದು ನೋಡಿಕೊಳ್ಳದೆ ಹೊರಡುತ್ತಿದ್ದ. ನಮ್ಮ ರೈಲಿನವರು ತೆಗೆದುಕೊಳ್ಳುವಷ್ಟು ಮುಂಜಾಗ್ರತೆಯನ್ನು ಕೂಡ ಆತ ತೆಗೆದುಕೊಳ್ಳಲು ತಪ್ಪಿದ್ದು ಆಶ್ಚರ್ಯ. ಹೀಗಾಗಿ ಯುದ್ಧದ ನಡುವೆ ಗಾಡಿಯ ಕೀಲು ಜಾರಿಯೋ ಮುರಿದೋ ಹೋಯಿತು. ಚುರುಕು ಕಣ್ಣಿನ ಕೈಕೇಯಿ ಇದನ್ನು ಕಂಡಳು. ರಥ ಬಿದ್ದರೆ ಗಂಡನಿಗೆ ಮತ್ತು ತನಗೆ ಬರುವ ವಿಪತ್ತನ್ನು ಊಹಿಸಿದಳು. ಕೀಲಿಯ ತೂತಿಗೆ ತನ್ನ ಕಿರಿಬೆರಳನ್ನು ತುರುಕಿ ಗಾಲಿ ಸರಿದು ಬೀಳುವುದನ್ನು ತಡೆದಳು. ಕೈಕೇಯಿಯ ಧೈರ್ಯ ಎಷ್ಟು ಬಲವಾಗಿತ್ತೋ ಅಷ್ಟೇ ಅವಳ ಕಿರಿಬೆರಳೂ ಗಟ್ಟಿಯಾಗಿರಬೇಕು. ಚಲಿಸುತ್ತಿರುವ ಯುದ್ಧರಥದ ಗಾಲಿಯ ಕೀಲಿನ ತೂತಿನಲ್ಲಿ ಬೆರಳು ತುರುಕಿಸಲು ಸಾಧ್ಯವಾಗಬೇಕಾದರೆ ಕೈಕೇಯಿಯ ತೋಳು ಎಷ್ಟು ಉದ್ದವಾಗಿರಬೇಕು, ಅವಳ ಕೈಬೆರಳು ಎಷ್ಟು ದಪ್ಪವಾಗಿರಬೇಕು ಎಂದೆಲ್ಲ ತರ್ಕವಿತರ್ಕ ಮಾಡುತ್ತ ಈ ಇಡೀ ಕಥೆಯ ಸತ್ಯತ್ವದ ಬಗ್ಗೆಯೆ ಸಂದೇಹವನ್ನುಂಟು ಮಾಡಲು ಕೆಲ ಸಂಶೋಧಕ ಬುಧರು ಪ್ರಯತ್ನಿಸುತ್ತಾರೆ. ನಮ್ಮ ಪುರಾಣಗಳ ಬಗ್ಗೆ ಇಂಥ ಅಬ್ರಹ್ಮಣ್ಯವಾದ ಸಂಶೋಧಕ ವೃತ್ತಿ ಸಲ್ಲದೆಂದಿಷ್ಟೇ ಹೇಳಬೇಕಾಗಿದೆ.

ಕಾಳಗ ಮುಗಿದ ಮೇಲೆಯೆ ತನ್ನ ಹೆಂಡತಿ ತನಗೆ ಮಾಡಿದ ಉಪಕಾರದ ಅರಿವು ದಶರಥನಿಗೆ ಬಂದದ್ದು. ಮೆಚ್ಚಿ ಅವಳಿಗೆ ಎರಡು ವರಗಳನ್ನು ದಯಪಾಲಿಸಿದ. ಒಂದು ಉಪಕಾರಕ್ಕೆ ಎರಡು ವರಗಳನ್ನು ಏಕೆ ಕೊಡಬೇಕಾಗಿತ್ತು? ಹೆಂಗಸಿಗೆ ಒಂದು ವರ ಕೊಡುವದೇ ಅಪಾಯಕರ. ಆದರೆ ದಶರಥನ ಈ ಹೆಡ್ಡತನ ಕ್ಷಮ್ಯವಾಗಿದೆ. ಅವಳು ಅವನ ಮೂರನೇ ಹೆಂಡತಿಯಾಗಿದ್ದಳು ಮತ್ತು ನೆತ್ತರು ಸುರಿಯುವ ಅವಳ ಕಿರಿಬೆರಳು ಅವನ ಕಣ್ಮುಂದಿತ್ತು. ಕೈಕೇ-ಯಿ ಈ ವರಗಳನ್ನು ನ್ಯಾಸವಾಗಿ ಅಂದರೆ ರಿಝರ್ವ್ ಆಗಿ ಇಟ್ಟಳು. ಅವು ಟೈಂಬಾಂಬಿನಂತೆ ರಾಮಾಯಣವನ್ನು ಸ್ಫೋಟಗೊಳಿಸಿದವು.

ರಾಜರಿಗೆ ಮಕ್ಕಳಾಗದಿರುವದು ತ್ರೇತಾಯುಗದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿತ್ತು. (ಬಹುಶಃ ಇದು ಸಾಮಾನ್ಯ ಜನರಿಗೂ ವ್ಯಾಪಿಸಿದ ಸಮಸ್ಯೆಯಾಗಿತ್ತೆಂದು ನಂಬಲು ಆಧಾರಗಳಿವೆ. ಭಾರತೀಯರು ಮಕ್ಕಳನ್ನು ಹಡೆಯುವುದರಲ್ಲಿ ಎಂದು ಪಳಗಿದರೆಂಬುದು ಸಂಶೋಧಕರಿಗೆ ಒಂದು ವಿಷಯವಾಗಬಲ್ಲದು.) ದಶರಥನ

ಮುತ್ತಜ್ಜ ದಿಲೀಪನಿಗೆ ಬಹುಕಾಲ ಮಕ್ಕಳಾಗದೇ ಆತ ಕಾಮಧೇನುವಿನ ಮಗಳಾದ ನಂದಿನಿಯನ್ನು ಸೇವಿಸಬೇಕಾಯಿತು. ಈ ಸೇವೆಯ ನಡುವೆ ಆ ಆಕಳು ಅವನಿಗಿತ್ತ ತೊಂದರೆಗಳನ್ನು ನೋಡಿದರೆ ಮಕ್ಕಳಾಗದಿದ್ದರೆ ಹೋಗಲಿ, ಈ ಪೀಡಾ ಸಾಕು ಎನಿಸುತ್ತದೆ. ಮಿಥಿಲೆಯ ಜನಕರಾಜನಿಗೆ ಮಕ್ಕಳಾಗದೆ ಅವನು ಯಜ್ಞಕ್ಕಾಗಿ ನೆಲ ಊಳುತ್ತಿರುವಾಗ ಒಂದು ಹೆಣ್ಣು ಮಗು ಸಿಕ್ಕಿತಂತೆ. ಅರ್ಥಾತ್ ಆ ಕಾಲದಲ್ಲಿ ಹೆಂಗಸರ ಹೊಟ್ಟೆಯಲ್ಲಿ ಹೊರತು ಎಲ್ಲೆಲ್ಲಿಯೂ ಶಿಶುಗಳು ಹುದುಗಿರುತ್ತಿದ್ದವು.

ದಶರಥ ಮಹಾರಾಜನೂ ಇದಕ್ಕೆ ಅಪವಾದವಾಗಿರಲಿಲ್ಲ. ಮಕ್ಕಳನ್ನು ಪಡೆಯುವ ನೈಸರ್ಗಿಕ ವಿಧಾನವನ್ನು ಅನೇಕ ಕಾಲ ಪ್ರಯತ್ನಿಸಿ ವಿಫಲನಾಗಿ ಆತ ಕೊನೆಗೆ ಕೃತಕ ವಿಧಾನಕ್ಕೆ ಶರಣು ಹೋಗಬೇಕಾಯಿತು. ಪುತ್ರ ಕಾಮೇಷ್ಟಿಯನ್ನು ಮಾಡಿ ಯಜ್ಞ ಪುರುಷನು ಕೊಟ್ಟ ಪಾಯಸವನ್ನು ದಶರಥ ತನ್ನ ಹೆಂಡರಿಗೆ ಪಾಲುಮಾಡಿ ಕೊಟ್ಟ. ದಶರಥ ತುಂಬ ಮರವೆಯ ಸ್ವಭಾವದವನೆಂದೂ ಪಾಯಸವನ್ನು ಹಂಚುವಾಗ ಕೌಸಲ್ಯ ಕೈಕೇಯಿಯರಿಗೆ ಮಾತ್ರ ಕೊಟ್ಟು ಆ ಮೇಲೆ ನೆನೆದುಕೊಂಡು ಅವರಿಬ್ಬರಿಂದಲೂ ಸ್ವಲ್ಪ ಸ್ವಲ್ಪವನ್ನು ನಡುವಿನವಳಿಗೆ ಕೊಡಿಸಿದನೆಂದೂ ಕೆಲವರು ಹೇಳುತ್ತಾರೆ. ಹೀಗಾಗಿ ಇಬ್ಬರ ನ್ಯಾಯ ನಡುವಿನವನಿಗೆ ಆಯ ಎಂಬ ಹಾಗೆ ಸುಮಿತ್ರೆಗೆ ಡಬ್ಬಲ್ ಪಾಯಸ ಮತ್ತು ಡಬ್ಬಲ್ ಮಕ್ಕಳು ಸಿಕ್ಕುವಂತಾಯಿತು. ಇಬ್ಬರು ಮಕ್ಕಳಿದ್ದುದರಿಂದ ಮುಂದೆ ಸುಮಿತ್ರೆಗೆ ತುಂಬ ಅನುಕೂಲವಾಯಿತು. ಒಬ್ಬನನ್ನು ರಾಮನೊಡನೆ ಕಾಡಿಗೆ ಕಳಿಸಿ ಇನ್ನೊಬ್ಬನನ್ನು ಭರತನೊಡನೆ ನಾಡಿನಲ್ಲಿ ಉಳಿಸಿ ಎರಡೂ ಪಕ್ಷಗಳೊಡನೆ ಒಳ್ಳೇ ಸಂಬಂಧವನ್ನು ಕಾಯ್ದುಕೊಳ್ಳಲು ಅವಳಿಗೆ ಸಾಧ್ಯವಾಯಿತು. ಏಕಕಾಲದಲ್ಲಿ ಎರಡೂ ಪಕ್ಷಗಳಲ್ಲಿರುವ ಈ ರಾಜಕೀಯ ಗತ್ತಿಗೆ ಇಂಗ್ಲೀಷಿನಲ್ಲಿ 'running with the hares and hunting with the hounds' ಮೊಲಗಳೊಡನೆ ಓಡುತ್ತ ನಾಯಿಗಳೊಡನೆ ಬೇಟೆಯನ್ನು ಆಡುವ ನೀತಿ ಎನ್ನುತ್ತಾರೆ.

ದಶರಥನ ನಾಲ್ವರು ಮಕ್ಕಳಲ್ಲಿ ಹಿರಿಯನಾದ ಶ್ರೀರಾಮ ಆದರ್ಶವಾದಿಯಾಗಿ ಬೆಳೆಯಲಿದ್ದ. ಅವನು ಚಿಕ್ಕವನಾಗಿದ್ದಾಗ ನಡೆದ ಒಂದು ಘಟನೆ ಇದನ್ನು ಮುನ್-ಸೂಚಿಸಿತ್ತು. ಒಂದಾನೊಂದು ಹುಣ್ಣಿಮೆಯ ದಿನ ಮಗು ರಾಮಚಂದ್ರ ಆಕಾಶದಲ್ಲಿ ಚಂದ್ರನನ್ನು ಕಂಡು ಅದು ತನಗೆ ಬೇಕೆಂದು ಅಳತೊಡಗಿದ. ಅವನ ರಂಪಾಟ ಎಷ್ಟು ಹೆಚ್ಚಾಯಿತೆಂದರೆ, ಅರಮನೆಯೆಲ್ಲ ಗಾಬರಿಯಿಂದ ಅಲ್ಲೋಲ ಕಲ್ಲೋಲವಾಗಿ ಹೋಯಿತು. ಅಷ್ಟರಲ್ಲಿ ಯಾರಿಗೋ ಒಂದುಪಾಯ ಹೊಳೆದು ಅವರು ಒಂದು ಕನ್ನಡಿಯನ್ನು ತಂದು ಮಗುವನ್ನು ಚಂದ್ರನಿಗೆ ಬೆನ್ನಾಗಿ ಕೂಡ್ರಿಸಿ ಕನ್ನಡಿಯನ್ನು ಅದರ ಕೈಗೆ ಕೊಟ್ಟರು.



ಕನ್ನಡಿಯಲ್ಲಿ ಚಂದ್ರನನ್ನು ಕಂಡು ರಾಮಚಂದ್ರ ಸಂತುಷ್ಟನಾಗಿ ಅಳು ನಿಲ್ಲಿಸಿದ. ಇದು ಶುದ್ಧ ಆದರ್ಶವಾದಿಗಳ ಲಕ್ಷಣವೆಂದು ಇಲ್ಲಿ ಹೇಳಬಹುದಾಗಿದೆ. ಅವರು ಬಾನಿನಲ್ಲಿರುವ ಚಂದ್ರನನ್ನು ಭೂಮಿಗೆ ತರಬೇಕೆಂದು ಹಟ ತೊಟ್ಟು ಪ್ರಪಂಚವನ್ನೆಲ್ಲ ತಲೆ ಕೆಳಗು ಮಾಡುವಷ್ಟು ಗದ್ದಲ ಎಬ್ಬಿಸುತ್ತಾರೆ. ಕಡೆಗೆ ಚಂದ್ರನ ನೆರಳನ್ನು ಕೊಟ್ಟರೇ ಚಂದ್ರನು ಸಿಕ್ಕಿದನೆಂದು ಸಮಾಧಾನಹೊಂದುತ್ತಾರೆ.

ಶ್ರೀರಾಮಚಂದ್ರ ತಾರುಣ್ಯದಲ್ಲಿ ಕಾಲಿಡುತ್ತಿದ್ದಾಗ್ಗೆ ವಿಶ್ವಾಮಿತ್ರ ಋಷಿ ಒಂದು ದಿನ ಅಯೋಧ್ಯೆಗೆ ಬಂದ. ನಿಮಗೆಲ್ಲ ಗೊತ್ತಿರುವಂತೆ ಈತ ಕ್ಷತ್ರಿಯತ್ವದಿಂದ ಬ್ರಾಹ್ಮಣತ್ವಕ್ಕೆ ಪ್ರೊಮೋಶನ್ ಪಡೆದ ಒಬ್ಬ ರಾಜ. ಪೌರೋಹಿತ್ಯದ ಸಿವಿಲ್ ಸರ್ವೀಸಿನಲ್ಲಿ ಬ್ರಾಹ್ಮಣರು ಎಲ್ಲ ಸ್ಥಾನ

ಗಳನ್ನು ಆಕ್ರಮಿಸಿಕೊಂಡು ಇತರರಿಗೆ ಅಲ್ಲಿ ಪ್ರವೇಶ ಕೊಡದಿದ್ದ ಆ ಕಾಲದಲ್ಲಿ ಬ್ರಾಹ್ಮಣತ್ವಕ್ಕಾಗಿ ಹೋರಾಡಿ ಗದ್ದ ವಿಶ್ವಾಮಿತ್ರನನ್ನು ಭಾರತದ ಪ್ರಥಮ ಬ್ರಾಹ್ಮಣೇತರ ಪ್ರಮುಖನೆಂದು ಹೇಳಲಡ್ಡಿಯಿಲ್ಲ. ಅವನು ಬ್ರಾಹ್ಮಣನಾದದ್ದಷ್ಟೇ ಅಲ್ಲ ಉದ್ದವಾದ ಗಡ್ಡ ಬೆಳಸಿ ಋಷಿ ಕೂಡ ಆದ. ಆವೊತ್ತಿನಿಂದ ವಿಶ್ವಾಮಿತ್ರ ಸತ್ಯ ಹೇಳುವ ರಾಜರಿಗೆ ತೊಂದರೆ ಕೊಡುವದು, ತ್ರಿಶಂಕುಸ್ವರ್ಗವನ್ನು ನಿರ್ಮಿಸುವದು ಮೊದಲಾದ ಉಪದ್ವ್ಯಾಪಗಳನ್ನು ಮಾಡುತ್ತ ತಿರುಗುತ್ತಿದ್ದ.

ಈ ಸಮಯದಲ್ಲಿ ವಿಶ್ವಾಮಿತ್ರ ಸಿದ್ಧಾಶ್ರಮ ಎಂಬ ಅಡವಿಯಲ್ಲಿ ಒಂದು ಯಜ್ಞ ಮಾಡಬೇಕೆಂದಿದ್ದ. ಈ ಯಜ್ಞಗಳೆಂದರೆ ಕಾಡುಗಳಲ್ಲಿ ವಾಸಿಸುತ್ತಿದ್ದ ರಾಕ್ಷಸರಿಗೆ ಆಗುತ್ತಿದ್ದಿಲ್ಲ. ಯಜ್ಞ ಎಂದು ಒಳ್ಳೇ ತುಪ್ಪವನ್ನು ಬೆಂಕಿಯಲ್ಲಿ ಹಾಕಿ ಸುಡುವದು ಅವರಿಗೆ ತಪ್ಪಾಗಿ ಕಾಣಿಸುತ್ತಿತ್ತೋ ಅಥವಾ ಇವರು ಎಬ್ಬಿಸಿದ ಹೊಗೆಯಿಂದಾಗಿ ಅವರ ಉಸಿರು ಕಟ್ಟುತ್ತಿತ್ತೊ ನನಗೆ ಗೊತ್ತಿಲ್ಲ. ಇದು ಋಷಿಗಳಿಗೆ ಗೊತ್ತಾಗಿ ಅವರು ತಮಗೆ ಆಗದಿದ್ದ ರಾಕ್ಷಸರಿದ್ದ ಅಡವಿಗಳಿಗೆ ಬಂದು ಯಜ್ಞ ಮಾಡುತ್ತಿದ್ದರೆಂದೂ ಆಗ ಸಹಜವಾಗಿ ಜಗಳಕ್ಕೆ ಬಂದ ರಾಕ್ಷಸರನ್ನು ಆ ನೆವದಿಂದ ಕ್ಷತ್ರಿಯರಿಂದ ಕೊಲ್ಲಿಸುತ್ತಿದ್ದರೆಂದೂ ದ್ರಾವಿಡ ಕಳಗದವರು ಹೇಳುತ್ತಾರೆ.

ಸಿದ್ಧಾಶ್ರಮದಲ್ಲಿ ತಾಟಕಿ ಮತ್ತು ಅವಳ ಇಬ್ಬರು ಮಕ್ಕಳಾದ ಸುಬಾಹು, ಮಾರೀಚರು ಇದ್ದು ಅವರ ಮೇಲೆ ಏಕೋ ವಿಶ್ವಾಮಿತ್ರನಿಗೆ ಸೇಡು ತೀರಿಸಿಕೊಳ್ಳಬೇಕೆನಿಸಿ ಅವನು ಈ ಯಜ್ಞದ ನೆವ ಹೂಡಿದ್ದನೆಂದೂ ದ್ರಾವಿಡ ಕಳಗದವರ ಹೇಳಿಕೆಯಿದೆ. ಅವರನ್ನು ಕೊಲ್ಲಲೆಂದೇ ಅವನು ದಶರಥನನ್ನು ಹೆದರಿಸಿ ರಾಮ-ಲಕ್ಷ್ಮಣರನ್ನು ಕರೆದುಕೊಂಡು ಹೋದನು. ರಾಮನಿಗೆ ಹೆಂಗಸರನ್ನು ಕೊಲ್ಲುವುದಕ್ಕೆ ಸ್ವಲ್ಪ ಮನಸು ಅಳಕುತ್ತಿತ್ತು. ಆದರೆ ವಿಶ್ವಾಮಿತ್ರನು ರಾಮನಿಗೆ ಸರಿಯಾಗಿ ಅರ್ಥವಾಗದ ಆರ್ಷ ಸಂಸ್ಕೃತದಲ್ಲಿ ಅನೇಕ ಶಾಸ್ತ್ರವಚನಗಳನ್ನು ಉದ್ಧರಿಸಿ ಅವನನ್ನು ತೀರ ಮಾನಸಿಕ ಗೊಂದಲಕ್ಕೆ ಗುರಿಪಡಿಸಿದ್ದರಿಂದ ರಾಮ ಒಪ್ಪಿ ತಾಟಕಿಯನ್ನೂ ಅವಳ ಒಬ್ಬ ಮಗನನ್ನೂ ಕೊಂದು ಇನ್ನೊಬ್ಬನನ್ನು ಓಡಿಸಿದ.



ರಾಕ್ಷಸರನ್ನು ಕೊಲ್ಲುವದರಲ್ಲಿ ಹೀಗೆ ಗ್ರ್ಯಾಜುಯೇಟತನಾದ ಶ್ರೀರಾಮಚಂದ್ರನನ್ನು ವಿಶ್ವಾಮಿತ್ರನು ಮಿಥಿಲೆಗೆ ಕರೆದುಕೊಂಡು ಹೊರಟನು. ಆಗ ಮಿಥಿಲೆಯಲ್ಲಿ ಜನಕರಾಜ ಆಳುತ್ತಿದ್ದ. ಈ ಜನಕನ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುವದು ಅವಶ್ಯ.

"ಮಿಥಿಲಾಯಾಂ ಪ್ರದೀಪ್ತಾಯಾಂ ನಮೇ ಕಿಂಚನ ದಹ್ಯತಿ" ಎಂದು ಹೇಳಿದ್ದಕ್ಕಾಗಿ ಈತನು ತತ್ವಜ್ಞಾನಿಗಳ ವರ್ಗದಲ್ಲಿ ಪ್ರಸಿದ್ಧನಾಗಿದ್ದ. ಅರ್ಥಾತ್ ರೋಂ ನಗರ ಸುಡುತ್ತಿದ್ದಾಗ 'ನೀರೋ' ದೊರೆ ಪಿಟೀಲು ಬಾರಿಸುತ್ತಿದ್ದರೆ ಮಿಥಿಲೆ ಸುಡುತ್ತಿದ್ದಾಗ ಜನಕ ತತ್ವಜ್ಞಾನ ಹೇಳುತ್ತಿದ್ದ. "ಮಿಥಿಲೆ ಸುಟ್ಟರೆ ನನ್ನದೇನೂ ಸುಡುವುದಿಲ್ಲ" ಎಂದು ಜನಕ ಏಕೆ ಹೇಳಿದ? ಎಂಬ ವಿಚಾರದಲ್ಲಿ ನಾನು ಸಾಕಷ್ಟು ತಲೆ ಕೆಡಿಸಿಕೊಂಡ ನಂತರ ಒಂದು ನಿರ್ಣಯಕ್ಕೆ ಬಂದಿದ್ದೇನೆ. ಈ ಕಾಲದ ಅನೇಕ ರಾಜಕಾರಣಿಗಳು ತಮ್ಮ ಆಸ್ತಿಯನ್ನು ಆಪತ್ಕಾಲ ಬಂದರೆ ಇರಲಿ ಎಂದು ವಿದೇಶಗಳ ಬ್ಯಾಂಕುಗಳಲ್ಲಿ ತೊಡಗಿ

ಸುವ ಹಾಗೆ ಜನಕನೂ ತನ್ನ ಸೊತ್ತಿನ ಬಹು ಭಾಗವನ್ನು ತನ್ನ ರಾಜ್ಯದ ಹೊರಗೆ ಇಟ್ಟಿದ್ದುದರಿಂದ ಅವನಿಗೆ "ನನ್ನದೇನೂ ಸುಡುವುದಿಲ್ಲ" ಎಂದು ಧೈರ್ಯದಿಂದ ಹೇಳಲು ಶಕ್ಯವಾಯಿತು.

ಜನಕನಿಗೆ ನೆಲ ಉಳುವಾಗ ಸಿಕ್ಕಿದ ಮಗಳ ಮದುವೆ ಮಾಡಬೇಕೆಂದು ಆತ ಈ ಸಮಯದಲ್ಲಿ ನಿರ್ಧರಿಸಿದ್ದ. ಆ ಕಾಲದಲ್ಲಿ ಮದುವೆ ಮಾಡಬೇಕಾದರೆ ಕುಂಡಲಿ ನೋಡುವುದು, ಹೆಣ್ಣು ತೋರಿಸುವುದು ಮೊದಲಾದ ಪದ್ಧತಿಗಳ ಬದಲು ಒಂದು ವಿಚಿತ್ರ ಕ್ರಮ ಜಾರಿಯಲ್ಲಿತ್ತು. ನೀವು ಹೋಗಿ ಕನ್ಯಾಪಿತನ ಮನೆಯಲ್ಲಿದ್ದ ಯಾವುದಾದರೂ ಬಿಲ್ಲನ್ನು ಮುರಿದು ಹಾಕಿಬಿಟ್ಟರೆ ಅವನ ಮಗಳು ನಿಮಗೆ ಮಾಲೆ ಹಾಕುತ್ತಿದ್ದಳು. ಜನಕನ ಮನೆಯಲ್ಲಿ ಒಂದು ಹಳೇ ಬಿಲ್ಲು ಇತ್ತು. ಅದು ಎಷ್ಟು ಹಳೆಯದು, ಯಾವಾಗಿನಿಂದ ಮಿಥಿಲೆಯಲ್ಲಿತ್ತು ಎಂದು ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ. ಅದನ್ನು ಹಿಂದೆ ಶಿವನು ಉಪಯೋಗಿಸುತ್ತಿದ್ದನೆಂದು ಪ್ರತೀತಿ ಇತ್ತು. ಅವನು ಅದನ್ನು ಏಕೆ ಕೈಬಿಟ್ಟನೆಂಬ ಬಗ್ಗೆಯೂ ವಿಶ್ವಸನೀಯ ಆಧಾರಗಳಿಲ್ಲ. ಅದು ತೀರ ಹಳೆಯದಾಯಿತೆಂದೆ? ಅಥವಾ ತ್ರಿಶೂಲವು ಬಿಲ್ಲಿಗಿಂತ ಹೆಚ್ಚು ಅನುಕೂಲವಾದ ಆಯುಧವೆಂದು ಕಂಡುಕೊಂಡ ಮೇಲೆ ಅವನು ಕೋದಂಡವನ್ನು ರಿಟೈರ್ ಮಾಡಿಸಿದ್ದರೂ ಇರಬಹುದು.

ಅದು ಹೇಗೆಯೆ ಇರಲಿ, ಬಿಲ್ಲು ಭಾರಿ ದೊಡ್ಡದಿತ್ತೆಂಬದನ್ನಂತೂ ಎಲ್ಲರೂ ಒಪ್ಪುತ್ತಾರೆ. ಅದರ ಕೀರ್ತಿ ಎದೆ ನಡುಗಿಸುವಂತಿತ್ತು. ಈ ಬಿಲ್ಲಿಗೆ ಹೆದೆಯೇರಿಸುವವರಿಗೆ ತನ್ನ ಮಗಳನ್ನು ಕೊಡುವುದಾಗಿ ಜನಕ ಘೋಷಿಸಿದ ನಂತರ ತಮ್ಮ ಕೈತೋರಿಸಲು ಬಂದ ಅನೇಕರು ಅದರ ಗಾತ್ರ ನೋಡಿ, ಅದರ ಕೀರ್ತಿ ಕೇಳಿಯೆ ಹೆದರಿ ಹೋಗಿದ್ದರೆಂಬ ಅನುಮಾನಕ್ಕೆ ಆಸ್ಪದವಿದೆ. ರಾವಣ ಕೂಡ ಈ ಕೀರ್ತಿ ಶನಿಯ ಪ್ರತಾಪದಿಂದಲೇ ಅಂಜಿರಬೇಕು. ರಾಮ ಮಾತ್ರ ಬಂದು ನೋಡಿದ, ಎತ್ತಿದ ಮತ್ತು ಮುರಿದ. ಅದಕ್ಕೆ ನಿಜವಾಗಿ ಹೆದರಬೇಕಾದ್ದಿಲ್ಲ. ಅದು ಸಾವಿರಾರು ವರ್ಷದಿಂದ ಇಟ್ಟಲ್ಲೇ ಅನೇಕ ಕಡೆ ಲಡ್ಡಾಗಿದೆ ಎಂಬ ಗುಟ್ಟನ್ನು ವಿಶ್ವಾಮಿತ್ರನಷ್ಟೇ ಅರಿತಿದ್ದನೆಂದೂ ಅವನು ರಾಮನಿಗೆ ಮೊದಲೇ ಹೇಳಿಟ್ಟಿದ್ದನೆಂದೂ ಯಾವ ಪುರಾಣದಲ್ಲಿಯೂ ಹೇಳಿಲ್ಲ.

ಸೀತೆ ಶ್ರೀರಾಮನನ್ನು ವರಿಸಿದಳು. ಇದೇ ಸಂದರ್ಭ ಸಾಧಿಸಿ ಜನಕನು ತನ್ನ ಮನೆತನದಲ್ಲಿ ಬೆಳೆಯುತ್ತಿದ್ದ ಹುಡುಗಿಯರನ್ನೆಲ್ಲ ದಶರಥನ ಇತರ ಮಕ್ಕಳಿಗೆ ಮದುವೆ ಮಾಡಿಕೊಟ್ಟು ಪಾರಾದ. ರಾಮನ ತಮ್ಮಂದಿರೂ ಬಿಲ್ಲುಗಳನ್ನು ಮುರಿದುಹಾಕಬೇಕೆಂದು ಅವನೇಕೋ ಹಟ ಹಿಡಿಯಲಿಲ್ಲ.

ಇದು ಕರ್ನಾಟಕ ಕಾವ್ಯಕುಠಾರ ಬಿರುದಾಂಕಿತ ಶ್ರೀಮಲ್ಲಾಂಗೂಲಾಚಾರ್ಯ ವಿರಚಿತಮಾದ ಶ್ರೀಮದ್ರಾಮಾಯಣ ದರ್ಶನ ಗದ್ಯಮಹಾಪ್ರಬಂಧದೊಳ್ ಬಾಲಕಾಂಡಂ ಸಂಪೂರ್ಣಮ್

॥ ಶ್ರೀ ಶ್ರೀ ॥

*

ಬ್ರಿಟಿಶ್ ಅರ್ಥಶಾಸ್ತ್ರಿಯೊಬ್ಬನ ಹತ್ತಿರ ವಿದ್ಯಾರ್ಥಿಯೊಬ್ಬನು ಅರ್ಥಶಾಸ್ತ್ರದಲ್ಲಿ "ಮಂದಿ", "ಮುಗ್ಗಟ್ಟು" ಮತ್ತು "ಗಾಬರಿ" ಶಬ್ದಗಳ ಅರ್ಥವೇನೆಂದು ಕೇಳಿದ.

"ಬಲು ಸುಲಭ" ಎಂದ ಅರ್ಥಶಾಸ್ತ್ರಿ. "ಮಂದಿ ಎಂದರೆ ವ್ಯಾಪಾರ ವ್ಯವಹಾರ ಕುಂದಿ ಜನ ಟೊಂಕಪಟ್ಟಿ ಬಿಗಿ ಮಾಡಬೇಕಾದ ಕಾಲ; ಅನಂತರ ಮುಗ್ಗಟ್ಟು ಎಂದರೆ ಬಿಗಿಮಾಡಲಿಕ್ಕೆ ಟೊಂಕಪಟ್ಟಿಯೇ ಇಲ್ಲದಾಗುವ ಕಾಲ; ಕಡೆಗೆ ಟೊಂಕಪಟ್ಟಿಯನ್ನು ಅಗತ್ಯವಾಗಿ ಮಾಡುವ ಇಜಾರವೇ ಇಲ್ಲದಂತಾದರೆ ಅದು ಗಾಬರಿ."

ಅಕ್ಷಯ ಪಾತ್ರೆ - ಪಿಚ್ ಲೇಕ್

ರಮೇಶ ಜಾನಿ.

ಶ್ರೀನಿವಾಡ್‌ನಲ್ಲಿ ಪಿಚ್ ಲೇಕ್ ಎಂಬ ಡಾಂಬರಿನ ಹೊಂಡವೊಂದಿದೆ. ಈ ಹೊಂಡದ ವಿಚಾರದಲ್ಲಿ ಎರಡು ಬಗೆಯಾಗಿ ಹೇಳುತ್ತಾರೆ. ಅದರಲ್ಲೊಂದು ದಂತಕಥೆಯಾಗಿದ್ದರೆ ಇನ್ನೊಂದು ವೈಜ್ಞಾನಿಕ ವಿವರಣೆಯಾಗಿದೆ. ಇದರಲ್ಲಿ ಸತ್ಯವಾದದ್ದು ಯಾವುದೇ ಇರಲಿ, ಡಾಂಬರಿನ ಈ ಅಂದಗೇಡಿ ಹೊಂಡ ಅತ್ಯಂತ ಜನೋಪಕಾರಿಯಾಗಿದೆಯೆಂಬ ಮಾತು ಮಾತ್ರ ತೀರ ನಿಜ. ಜಗತ್ತಿನ ಪ್ರತಿಯೊಂದು ದೇಶದ ರಾಜಮಾರ್ಗವೂ ಈ ಡಾಂಬರನ್ನು ಬಳಿದುಕೊಂಡೇ ತಯಾರಾಗಿದೆಯೆನ್ನಬಹುದು. ವಿಚಿತ್ರವೆಂದರೆ ಈ ಹೊಂಡದಿಂದ ಡಾಂಬರನ್ನು ಎಷ್ಟು ತೆಗೆದರೂ ಮತ್ತೆ ಅದು ಮೊದಲಿನಂತೆಯೆ ತುಂಬಿಕೊಳ್ಳುತ್ತದೆ. ಕೇವಲ ಅರ್ಧ ಶತಮಾನದಷ್ಟು ಕಾಲದಲ್ಲಿ ಇದು ೫೦ ಲಕ್ಷ ಟನ್ ಡಾಂಬರನ್ನು ಕೊಟ್ಟಿದ್ದರೂ ಹೊಂಡದ ನುಣುಪಾದ ಬಿರುಸಾದ ಮೇಲ್ಮೈ ಇದ್ದಕ್ಕಿದ್ದಂತೆಯೆ ಇದೆಯಲ್ಲದೆ ಸವಕಳಿಯ ಸುಕ್ಕೊಂದೂ ಕಾಣಿಸುವುದಿಲ್ಲ.

ದಂತಕಥೆ ಹೇಳುತ್ತದೆ: ಬಹಳ ಹಿಂದಿನ ಕಾಲದಲ್ಲಿ ಟ್ರಿನಿಡಾಡಿನ ಆಕಾಶವನ್ನೆಲ್ಲ ಹಮ್ಮಿಂಗ್ ಹಕ್ಕಿಗಳು ಮುಚ್ಚಿಬಿಡುತ್ತಿದ್ದವು. ಈಗಲೂ ಹಾಗೆಯೆ ಇದೆ. ಈ ಹಕ್ಕಿಗಳಲ್ಲಿ ತಮ್ಮ ಮೃತ ಪಿತೃಗಳ ಆತ್ಮಗಳು ವಾಸಿಸುತ್ತವೆ ಎಂದು ಅಲ್ಲಿಯ ಮೂಲನಿವಾಸಿಗಳು ನಂಬಿದ್ದರು. ಈ ನಂಬಿಕೆಯನ್ನು ಮೂದಲಿಸಿ, ಈ ಮೂಲನಿವಾಸಿಗಳನ್ನು ಗೆದ್ದ ಚಾಯಮಾ ಇಂಡಿಯನ್ನರು ಈ ಸುಂದರ ಹಕ್ಕಿಗಳನ್ನು ಕೊಂದು ತಿಂದರು. ಅವುಗಳ ಗರಿಗಳಿಂದ ತಮ್ಮ ದೇಹ ಗಳನ್ನಲಂಕರಿಸಿಕೊಂಡರು. ಕೋಪದಿಂದ ಕಂಪಿ ಸುತ್ತಲೇ ಮಹಾ ಆತ್ಮವು ಈ ಚಾಯಮಾ ಜನರ ಅಕೃತ್ಯವನ್ನು ನಿರೀಕ್ಷಿಸುತ್ತಲಿತ್ತು. ಕೊನೆಗೆ ಸೇಡಿನ ಕ್ಷಣ ಬಂತು. ವಿಜಯೋನ್ಮತ್ತರಾದ ಚಾಯಮಾ ಜನರೂ ಅವರಿದ್ದ ಹಳ್ಳಿಯೂ ಅಕಸ್ಮಾತ್ತಾಗಿ ನೆಲದಲ್ಲಿ ಮುಳುಗಿಹೋಯಿತು. ಅರೆಕ್ಷಣದಲ್ಲಿ ಜನರಿಂದ ತುಂಬಿ ತುಳುಕುತ್ತಿದ್ದ ನೆಲದ ಭಾಗದಲ್ಲಿ ಒಂದು ಸರೋವರವೇ ನಿರ್ಮಾಣವಾಗಿಹೋಯಿತು. ಡಾಂಬರಿನ ಗಟ್ಟಿ ಮುಟ್ಟಾದ ಕವಚದಡಿ ಇಡೀ ಹಳ್ಳಿಯ ಜೀವಂತ ಸಮಾಧಿಯಾಗಿಬಿಟ್ಟಿತು.

ವಿಜ್ಞಾನ ಹೇಳುವ ಕಥೆಯೆ ಬೇರೆ. ಇದು ಹೆಚ್ಚು ಸತ್ಯವೆನಿಸಬಹುದಾದರೂ ಮೇಲಿನ ಕಥೆಯಷ್ಟು ರೋಚಕವಾಗಿಲ್ಲ. ಒಮ್ಮೆ ಭೂಮಿಯ ಒಂದು ವಿಶಿಷ್ಟ ಚಲನದಿಂದ ಅರಲು, ಗ್ಯಾಸು ಮತ್ತು ಪೆಟ್ರೋಲಿಯಂ ಒಂದಾಗಿ ಮೃತ ಜ್ವಾಲಾಮುಖಿಯೊಂದರ ಬಾಯಿಂದ ಹೊರ ಬಿದ್ದವು. ನೀರಿನ ಅಂಶವೆಲ್ಲ ಆರಿದ ಮೇಲೆ ಡಾಂಬರು ಒಂದೇ ಉಳಿದು ಈಗ ಕಾಣುವ ಡಾಂಬರಿನ ಹೊಂಡ ತಯಾರಾಯಿತು.

ಈ ಹೊಂಡ-ಇದನ್ನು ಸರೋವರವೆಂದರೇನೇ ಹೆಚ್ಚು ಸಮರ್ಪಕವಾದೀತು—ಮೂರು ನೂರು ಅಡಿ ಆಳವಾಗಿಯೂ ೧೧೪ ಎಕರೆಯಷ್ಟು ವಿಸ್ತೀರ್ಣವಾಗಿಯೂ ಇದೆ. ಇದೊಂದು ಕಪು

'ಮಿರರ್' ನಿಂದ

ರಸ್ತೆಯೊ ಎನಿಸುವಂತಿದೆ ಇದರ ರೂಪ. ಮಧ್ಯ ಬಿಂದುವಿನ ಬಳಿ ಬಿಟ್ಟರೆ ಉಳಿದೆಲ್ಲ ಕಡೆ ಡಾಂಬರು ಒಣಗಿ ಗಟ್ಟಿಯಾಗಿರುವದರಿಂದ ಇದರ ಮೇಲೆ ನೆಲದ ಮೇಲಿನಂತೆಯೆ ಓಡಾಡ ಬಹುದಾಗಿದೆ. ಈ ಸರೋವರದಿಂದ ಹೊರಡುವ ಬಿಸಿಯಾದ ಹೊಗೆ ಅನೇಕ ಸಲ ಆಕಾಶದಿಂದ ಮಳೆಯನ್ನು ಬರಿಸುತ್ತದೆ. ಆದರೆ ಅದರಿಂದ ಇದರ ದಂಡೆಯ ಮೇಲಿನ ನೆಲವೇನೂ ಹಸಿರಾಗುವದಿಲ್ಲ. ದಂಡೆಯಲ್ಲಿ ಅಲ್ಲಲ್ಲಿ ಒಣಗಿ ಬಾಡಿದ ಹುಲ್ಲುಗಾವಲನ್ನು ಬಿಟ್ಟರೆ ಎಲ್ಲವೂ ಬಂಜರಾಗಿದೆ.

ಡಾಂಬರನ್ನು ತೋಡುವಾಗಿನ ದೃಶ್ಯ ಅದ್ಭುತವಾಗಿರುತ್ತದೆ.-ಸಾಲುಸಾಲಾಗಿ ನಿಂತು ಜನ ಕೊಡಲಿಯಿಂದ ಪೆಟ್ಟುಹಾಕಿ ಅಲ್ಲಲ್ಲಿ ತಗ್ಗು ತೋಡುತ್ತಾರೆ. ಡಾಂಬರನ್ನು ಬಳಿದು ಟ್ರಕ್ಕುಗಳಲ್ಲಿ ತುಂಬುತ್ತಾರೆ.

ಆ ಮೇಲೆ ಮತ್ತೆ ನಿಸರ್ಗ ತನ್ನ ಕಾರ್ಯವನ್ನಾರಂಭಿಸುತ್ತದೆ. ಸರೋವರದಾಳದಿಂದ ಡಾಂಬರು ಹರಿದು ಬಂದು ಈ ತಗ್ಗುಗಳನ್ನೆಲ್ಲ ತೀರ ಸ್ವಲ್ಪ ಕಾಲದಲ್ಲಿಯೆ ಮುಚ್ಚಿಬಿಡುತ್ತದೆ. ಇಲ್ಲಿಂದ ಟನ್‌ಗಟ್ಟಲೆ ಡಾಂಬರನ್ನು ತೆಗೆದಿದ್ದರು ಎಂಬುದರ ಲಕ್ಷಣವಾವುದೂ ಉಳಿಯುವದಿಲ್ಲ.

ತೋಡಿ ತೆಗೆದ ಡಾಂಬರು ಹಡಗುಗಳಲ್ಲಿ ನಾನಾ ದೇಶಗಳಿಗೆ ಕಳಿಸಲ್ಪಡುತ್ತದೆ. ಡಾಂಬರಿನಿಂದ ನೀರನ್ನು ಪ್ರತ್ಯೇಕಿಸಿ ಪೀಪಾಯಿಗಳಲ್ಲಿ ತುಂಬುತ್ತಾರೆ. ಅಲ್ಲಿ ಅದು ಒಣಗಿದ ನಂತರ ಪೀಪಾಯಿಗಳನ್ನು ಹಡಗಗಳಲ್ಲಿ ಹೇರಿ ಕಳಿಸುತ್ತಾರೆ.

ಈ ಸರೋವರದ ಉಪಕಾರ ನಾನಾಬಗೆಯಾಗಿದೆ. ಇದರಿಂದ ತಯಾರಾದ ಹಂಚುಗಳನ್ನು ಮನೆಗಳಿಗೆ ಹೊದಿಸುತ್ತಾರೆ. ಮೊದಮೊದಲು ಡಾಂಬರನ್ನು ಕೇವಲ ರಸ್ತೆಗಳಿಗಾಗಿ ಉಪಯೋಗಿಸುತ್ತಿದ್ದರು. ಈಗ ನೀರಿನ ದೊಡ್ಡ ದೊಡ್ಡ ಟಾಕಿಗಳಿಗೆ ಸುರಂಗ ಮಾರ್ಗಗಳಿಗೆ ಬಳಿಯಲು ಉಪಯೋಗಿಸುತ್ತಾರೆ.

ಕೋಲಂಬಸನಿಗಿಂತ ಒಂದು ಶತಮಾನ ತಡಮಾಡಿ ತ್ರಿನಿದಾದಿಗೆ ಹೋಗಿದ್ದ ಸರ್ ವಾಲ್ಟರ್ ರ್ಯಾಲೆಯೆ ಈ ಸರೋವರವನ್ನು ಮೊದಲಿಗೆ ಕಂಡವನು. ಆತನೇ ಇದರ ಉಪಯುಕ್ತತೆಯನ್ನು ಮನಗಂಡವನು.ತನ್ನ ಹಡಗಿಗೆ ಆತ ಈ ಡಾಂಬರನ್ನು ಬಳಿದಾಗ ಬಿಸಿಲಿನಲ್ಲಿ ಕೂಡ ಅದು ಕರಗುವದಿಲ್ಲವೆಂದು ಕಂಡುಕೊಂಡನು. ಹಡಗಿನ ಹಲಗೆಗಳಿಗೆ ನೀರಿನಿಂದ ರಕ್ಷಣೆಯೂ ಸಿಗುತ್ತಿತ್ತು. ಅಮೇರಿಕದಲ್ಲೀಗ ಕೃತ್ರಿಮವಾಗಿ ಇದೇ ಬಗೆಯ ಡಾಂಬರನ್ನು ತಯಾರಿಸತೊಡಗಿದ್ದಾರೆ.

ಸರೋವರದ ಆಳದಲ್ಲಿರುವ ಡಾಂಬರು ಸದಾ ಒಳಗಿಂದೊಳಗೆ ಕಡೆಯಲ್ಪಡುತ್ತದೆ. ಆದ್ದರಿಂದ ಆಗೊಮ್ಮೆ ಈಗೊಮ್ಮೆ ಯಾವುದಾದರೂ ಪ್ರಾಚೀನ ವಸ್ತುವೊಂದು ಮೇಲಕ್ಕೆ ಬರುತ್ತದೆ. ಪ್ರಾಚೀನ ಕಾಲದ ಪ್ರಾಣಿಗಳ ಅಸ್ಥಿಪಂಜರಗಳು ಹೀಗೆ ಮೇಲೆ ಬಂದಿವೆ.

ಕೆಲಕಾಲದ ಹಿಂದೆ ವಿಚಿತ್ರವಾದ ಆದರೆ ನೋಡಲು ಭೀಕರವಾದ ಒಂದು ಘಟನೆ ಜರುಗಿತು. ಒಂದು ಒಣಗಿ ಹೋದ ಮುದಿಗಿಡ ಈ ಸರೋವರದಿಂದ ಮೇಲಕ್ಕೆದ್ದು ನಿಂತಿತು. ಇಂಚು ಇಂಚಾಗಿ ಅದು ಮೇಲೆದ್ದು ಸರೋವರದ ಮೇಲ್ಮೈಯಿಂದ ೧೦ ಅಡಿ ಎತ್ತರವಾಗಿ ನಿಂತಿತು. ಜನ ಅಪರೂಪದ ವಸ್ತು ಎಂದು ಅದರ ಟೊಂಗೆಗಳ ತುಣುಕುಗಳನ್ನು ಕತ್ತರಿಸಿಕೊಂಡರು. ಸುಮಾರು ೫೧ ಶತಮಾನಗಳ ಹಿಂದಿನದೆಂದು ಭಾವಿಸಲಾದ ಈ ಗಿಡ ಈ ಇಪ್ಪತ್ತನೆಯ ಶತಮಾನದ ಹವಾಮಾನ ಒಗ್ಗಲಿಲ್ಲವೊ ಎಂಬಂತೆ ಮತ್ತೆ ಆ ಡಾಂಬರು ರಾಶಿಯಲ್ಲಿ ಅಡಗಿಕೊಂಡು ಕಣ್ಮರೆಯಾಯಿತು.

ತಾನು ಹುಟ್ಟಬೇಕಾದರೆ ಈ ಸರೋವರ ಮನುಷ್ಯ ಬಲಿಯನ್ನು ತೆಗೆದುಕೊಂಡಿರಬಹುದು. ಆದರೆ ಇಂದು ಮಾತ್ರ ಅದು ಜನೋಪಕಾರಿಯಾಗಿ ಬಾಳುತ್ತಿದೆ ಎಂಬುದು ನಿಜ. *

ಮೂವತ್ತು ಮೂರು

ಸುಖ ನಿಮಿಷಗಳು

ಮೂಲ: ಚೀನಿಸಾಹಿತಿ ಚಿನ್

ಡಿ. ಶೇಷ್‌ಗಿರಿರಾವ್

1 ವೈಶಾಖ ಮಾಸದ ಉರಿ ಬಿಸಿಲು; ಮನೆ ಅಂಗಳ ಒಲೆಯಂತೆ ಸುಡುತ್ತಿದೆ. ಮೈಯಿಂದ ಬೆವರು ಧಾರಾಳವಾಗಿ ಸುರಿಯುತ್ತಿದೆ. ಮಧ್ಯಾಹ್ನದ ಊಟ ಸೇರದು. ನೊಣಗಳ ಕಾಟ ತಡೆಯಲಸಾಧ್ಯ. ಈ ಪರಿಸ್ಥಿತಿಯಲ್ಲಿ ಆಕಾಶವನ್ನು ಗುಡುಗು ಸೀಳಿ ಮಳೆಯನ್ನು ಹೊತ್ತ ಕರಿ ಮೋಡಗಳು ಯೋಧರಂತೆ ಸಾಲು ಸಾಲಾಗಿ ನುಗ್ಗುತ್ತವೆ. ಸೂರಿನಿಂದ ಮಳೆ ನೀರು ಪ್ರವಾಹದಂತೆ ಸುರಿಯುತ್ತದೆ. ಬೆವರು ಸುರಿಯುವುದು ನಿಲ್ಲುತ್ತದೆ. ನೊಣಗಳು ಎಲ್ಲೋ ಮಾಯವಾಗುತ್ತವೆ. ಊಟ ಬೇಕೆನಿಸುತ್ತದೆ. ಏನು ಸುಖ!



2 ಹತ್ತು ವರ್ಷದಿಂದ ಕಾಣದಿದ್ದ ಗೆಳೆಯ ಸಂಜೆ ಆಗಮಿಸುತ್ತಾನೆ. ಕುಶಲ ಪ್ರಶ್ನೆ ಹಾಕಿ, ಕೂಡಿಸುವುದಕ್ಕೂ ಮುಂಚೆ, ಒಳಗಿನ ಕೋಣೆಗೆ ಹೋಗಿ, ಹೆಂಡತಿಯನ್ನು ಮನೆಯಲ್ಲಿ ಮದ್ಯವಿದೆಯೇ ಎಂದು ವಿಚಾರಿಸುತ್ತೇನೆ. ಸಂತೋಷದಿಂದ ಅವಳು ತನ್ನ ಚಿನ್ನದ ಹೆರಳು ಕಂಬಿಯನ್ನು ತೆಗೆದು ಕೊಡುತ್ತಾಳೆ. ಮಾರಿದರೆ ಮೂರು ದಿನಕ್ಕೆ ಸಾಕಾಗುವಷ್ಟು ಹೆಂಡ ತರಬಹುದು. ಏನು ಸುಖ!

3 ಕೋಣೆಯಲ್ಲಿ ಒಬ್ಬನೇ ಕುಳಿತಿದ್ದೇನೆ. ಮಂಚದ ಹತ್ತಿರ ಸುಂಡಿಲಿ ಏನನ್ನೋ ಕಡಿಯುವ ಶಬ್ದ ಕೇಳಿಬರುತ್ತದೆ. ಯಾವ ಪುಸ್ತಕವನ್ನೋ, ಇನ್ನೇನನ್ನೋ ಎಂದು ಯೋಚಿಸುವಷ್ಟರಲ್ಲಿ ಒಂದು ದೊಡ್ಡ ಬೆಕ್ಕು ಬಾಲ ಅಲ್ಲಾಡಿಸುತ್ತಾ, ಏನನ್ನೋ ಹೊಂಚು ಹಾಕುತ್ತಿರುವಂತೆ ಕಣ್ಣು ಬಿಟ್ಟುಕೊಂಡು ಬರುತ್ತದೆ. ನಾನು ಒಂದು ಕ್ಷಣ ಉಸಿರು ಹಿಡಿದು ನೋಡುತ್ತಿರಲು, ಆ ಇಲಿ ಬೆಕ್ಕಿನ ದವಡೆ ಸೇರುತ್ತದೆ. ಏನು ಸುಖ!

4 ನನ್ನ ಚಿತ್ರಶಾಲೆಯ ಮುಂಭಾಗದಲ್ಲಿದ್ದ ಎರಡು ಜಾತಿ ಹಣ್ಣು, ಹೂವಿನ ಗಿಡಗಳನ್ನು ಕಿತ್ತೊಗೆದು ಹತ್ತಿಪ್ಪತ್ತು ಹಸಿರು ಬಾಳೆ ತಂದು ಈಗ ತಾನೆ ನೆಟ್ಟಿದ್ದೇನೆ. ಏನು ಸುಖ!

5 ಕೆಲವು ಹಗಲುಗನಸಿನ ಗೆಳೆಯರೊಂದಿಗೆ ವಸಂತ ಕಾಲದ ರಾತ್ರಿಯಲ್ಲಿ ಕುಡಿಯುತ್ತಿದ್ದೇನೆ; ಅರ್ಧಂಬರ್ಧ ಅಮಲು ಏರಿದೆ. ಆ ಸಮಯದಲ್ಲಿ ಜಾಣ ಆಳು ಹುಡುಗ ದೊಡ್ಡ ದೊಡ್ಡ ಪಟಾಕ್ಷಿ ಪೊಟ್ಟಣ ನನ್ನ ಕೈಯಲ್ಲಿಡುತ್ತಾನೆ. ನಾನು ಹೊರಗೆ ಹೋಗಿ ಪಟಾಕ್ಷಿಗಳನ್ನು ಹೊತ್ತಿಸಿ ಬರುತ್ತೇನೆ. ಗಂಧಕದ ಘಾಟು ಮೂಗಿನಲ್ಲಿ ತುಂಬಿ, ತಲೆಯನ್ನು ಹೊಕ್ಕು ದೇಹಾದ್ಯಂತ ತೃಪ್ತಿ ಕೊಡುತ್ತದೆ. ಏನು ಸುಖ!

6 ಬೀದಿಯಲ್ಲಿ ಹೋಗುತ್ತಿರುವಾಗ ಇಬ್ಬರು ಜಗಳವಾಡುತ್ತಿರುವುದು ಕಾಣತ್ತದೆ. ಕೋಪದಿಂದ ಇಬ್ಬರಿಗೂ ಮುಖ ಕೆಂಪೇರಿದೆ. ಆದರೂ ಮರ್ಯಾದೆಯಿಂದ ಮಾತನಾಡುತ್ತಾ, ಬಹುವಚನ ಪ್ರಯೋಗ ಮಾಡುತ್ತಿದ್ದಾರೆ. ವಾಗ್ಯುದ್ಧಕ್ಕೆ ಕೊನೆಯೇ ಇಲ್ಲವೇನೋ ಅನಿಸುವಾಗ, ಒಬ್ಬ ಧಡೂತಿ ಆಸಾಮಿ ಕೈಗಳನ್ನು ಜೋರಾಗಿ ಆಡಿಸುತ್ತಾ ಬಂದು ಚರ್ಚೆ

ಲಿನ್‌ಯುಟಾಂಗರ ಪುಸ್ತಕದಿಂದ'

ಸಾಕುಮಾಡಿ ಎಂದು ಕೂಗಿಕೊಳ್ಳುತ್ತಾನೆ. ಏನು ಸುಖ!



7 ನಮ್ಮ ಮಕ್ಕಳು ನೀರು ಪಾತ್ರೆಯಿಂದ ಹರಿದಂತೆ ಸರಾಗವಾಗಿ ಭಾರತ ವಾಚನ ಮಾಡುವುದು ಏನು ಸುಖ!

8 ಊಟ ಮುಗಿಸಿ, ಅಂಗಡಿಗೆ ಹೋದಾಗ ಸಣ್ಣ ವಸ್ತು ಒಂದರ ಕಡೆಗೆ ಮನಸ್ಸು ತಿರುಗುತ್ತದೆ. ಸಾಕಷ್ಟು ಚೌಕಾಸಿ ಮಾಡಿದರೂ ಅಂಗಡಿ ಹುಡುಗನಿಗೂ ನನಗೂ ಬೆಲೆಯಲ್ಲಿ ಕೊಂಚ ವ್ಯತ್ಯಾಸ ಉಳಿಯುತ್ತದೆ. ಆಗ ತೋಳಿನಿಂದ ಆ ವ್ಯತ್ಯಾಸದಷ್ಟೇ ಬೆಲೆ ಬಾಳುವ ಸಣ್ಣ ವಸ್ತು ತೆಗೆದು ಆ ಹುಡುಗನ ಮುಂದೆ ಎಸೆಯುತ್ತೇನೆ. ಅವನು ಸಂತೃಪ್ತನಾಗಿ ನೀವು ಉದಾರಿ ಎಂದು ನನಗೆ ತಲೆಬಾಗಿಸುತ್ತಾನೆ. ಏನು ಸುಖ!

9 ಊಟವಾದ ಮೇಲೆ ಮಾಡಲು ಕೆಲಸವಿಲ್ಲದೆ ಹಳೇ ಪೆಟ್ಟಿಗೆ ತೆಗೆದು ಕೂಡುತ್ತೇನೆ. ನಮ್ಮ ಮನೆಯವರಿಂದ ಸಾಲ ತೆಗೆದುಕೊಂಡಿದ್ದ ಅನೇಕರು ಬರೆದು ಕೊಟ್ಟಿದ್ದ ಪತ್ರಗಳು ಕಣ್ಣಿಗೆ ಬೀಳುತ್ತವೆ. ಅವರಲ್ಲಿ ಕೆಲವರು ಸತ್ತುಹೋಗಿದ್ದಾರೆ; ಮಿಕ್ಕ ಅನೇಕರಿಂದ ಹಣ



ವಾಪಸು ಬರುವಂತಿಲ್ಲ. ಆದ್ದರಿಂದ ಆ ಪ[illegible]ನೆಲ್ಲ ಗುಡ್ಡೆಹಾಕಿ, ಕಡ್ಡಿ ಗೀರಿ, ಹೊಗೆ ಗಗನಕ್ಕೆ ಏರುವುದನ್ನು ನೋಡುತ್ತೇನೆ. ಏನು ಸುಖ!

10 ಬೇಸಿಗೆ ದಿನ. ಯುವಕ[illegible] ಯರು ಪದ ಹಾಡುತ್ತಾ [illegible] ನೀರು ಹಾಯಿಸುವುದನ್ನು ನೋಡುವ್ವದಕ್ಕೆ ಹೊ[illegible]ಟಿದೇನೆ. ಭರದಿಂದ, ಭೋರ್ಗರೆಯುತ್ತಿಕೊಂಡು ಬರುವ ನೀರು ಕಾವ ಬೆಳ್ಳಿ ಅಥವಾ ಕರಗುವ ಮಂಜಿನಂತೆ ಹೊಳೆಯುತ್ತಿದೆ. ಏನು ಸುಖ!

11 ಬೆಳಿಗ್ಗೆ ಎದ್ದಾಗ, [illegible] ಯಾರೋ ನಿಟ್ಟುಸಿರು ಬಿಡುತ್ತಾ, ರಾತ್ರಿ ಯಾರೋ ಸತ್ತ ಸಮಾಚಾರ ಹೇಳುತ್ತಿ[illegible] ಕೇಳಿಸುತ್ತದೆ. ಯಾರೆಂದು ಕೇಳಿದಾಗ ನಮ್ಮ ಊರಿನ ಅತ್ಯಂತ ಕಠಿಣ ಸ್ವಭಾವದ [illegible]ಗ್ರೇಸರನೆಂದು ಗೊತ್ತಾಗುತ್ತದೆ. ಏನು ಸುಖ!

12 ಬೇಸಿಗೆಯ ಒಂದು [illegible] ಜನರು ನೀರು ಹಾಯಿಸ[illegible] ದೊಡ್ಡದೊಂದು ಬೊಂಬನ್ನು [illegible] ಕಾಣಿಸುತ್ತದೆ. ಏನು ಸುಖ!

13 ಹೋದ ತಿಂಗಳೆಲ್ಲಾ [illegible] ನಾನು ಈ ದಿನ ಬೆಳಿಗ್ಗೆ ಹಾಸಿಗೆ ಬಿಟ್ಟು ಏಳಲಾರೆ. ಅನಿರೀಕ್ಷಿತವಾಗಿ ಆಕಾಶ ಮೋಡಗಳಿಲ್ಲದೆ ನಿರ್ಮಲವಾಗಿರುವ ಸೂಚನೆ ಕೊಡುವ ಹಕ್ಕಿಗಳ ವಾದ್ಯಗೋಷ್ಠಿ ಕಿವಿಗೆ ಬೀಳುತ್ತದೆ. ತಕ್ಷಣ ಎದ್ದು ಕಿಟಕಿಯಿಂದ ಹೊರಗೆ ಇಣಿಕಿ ನೋಡುತ್ತೇನೆ. ವಾತಾವರಣ [illegible]ದಿಂದ ಆವರಿಸಿದೆ. ಸುತ್ತಲೂ ಅರಣ್ಯ ಸ್ನಾನ ಮುಗಿಸಿಕೊಂಡಿದೆಯೋ ಎಂಬಂತೆ ಭಾಸವಾಗುತ್ತದೆ. ಏನು ಸುಖ!

14 ದೂರದ ಯಾರೋ ನನ್ನನ್ನು ನೆನಸಿಕೊಂಡಂತೆ ಭಾಸವಾಗುತ್ತದೆ. ಮಾರನೇ ದಿನ ಆತನನ್ನು ನೋಡಿಕೊಂಡು ಬರಲು ಹೋಗುತ್ತೇನೆ. ಆತ ಕೊಠಡಿಯಲ್ಲಿ ಕೂತು ಒಂದು ಪತ್ರ ಓದುತ್ತಿದ್ದಾನೆ. ನನ್ನನ್ನು ಕಂಡು, ಮಾತಿಲ್ಲದೆ, ತೋಳೆಳೆದು ಕೂರಿಸಿ 'ನೀನು ಬಂದಿ


ರುವೆಯಲ್ಲ, ಇದನ್ನು ಸ್ವಲ್ಪ ನೋಡು' ಎನ್ನುತ್ತಾನೆ. ಗಳಿಗೆಗಳ ಹೊತ್ತು ನಾವಿಬ್ಬರೂ ನಕ್ಕುನಲಿಯುತ್ತೇವೆ. ಬಹಳ ಹೊತ್ತಾದ ಮೇಲೆ ಅವನಿಗೆ ಹಸಿವೆಯಾಗಿ 'ನಿನಗೂ ಹಸಿವೆಯಲ್ಲವೇ ?' ಎಂದು ಕೇಳುವನು. ಏನು ಸುಖ !



15 ಮನೆ ಕಟ್ಟುವ ದೃಢ ಮನಸ್ಸಿಲ್ಲದೆ ಅನಿರೀಕ್ಷಿತವಾಗಿ ಕೊಂಚ ಹಣ ಬಂದಿದ್ದರಿಂದ ಮನೆ ಕಟ್ಟಲು ಪ್ರಾರಂಭವಾಯಿತು. ಮರ, ಕಲ್ಲು, ಇಟ್ಟಿಗೆ, ಗಾರೆ ಬೇಕೆಂಬ ಮಾತು ಹಗಲು, ರಾತ್ರಿ ಕೇಳಬೇಕಾಯಿತು. ಎಲ್ಲೆಲ್ಲಿ ಸಾಲ ಸಿಗಬಹುದೋ ಅಲ್ಲೆಲ್ಲಾ ಕೈನೀಡಬೇಕಾಯಿತು. ಕೊನೆಗೆ ಮನೆ ತಯಾರಾಯಿತು. ಕೆಲಸಗಾರರೆಲ್ಲಾ ಬಿಟ್ಟು ಹೋದರು. ಮಿತ್ರರೆಲ್ಲಾ ಬಂದು ಸುಖಾಸೀನರಾಗಿದ್ದಾರೆ. ಏನು ಸುಖ!

16 ಚಳಿಗಾಲದ ಒಂದು ರಾತ್ರಿ, ಕುಡಿಯುತ್ತಿರುವಾಗ ಒಂದು ಸಮಯದಲ್ಲಿ ಬಹಳ ಚಳಿ. ಕಿಟಕಿ ತೆರೆದು ಹೊರಗೆ ನೋಡಿದರೆ ಅಂಗಯ್ಯಗಲದ ಹಿಮದ ಹಲ್ಲೆ ಉದುರುತ್ತಿದೆ. ಮತ್ತು ಅಷ್ಟು ಹೊತ್ತಿಗೆ ೩-೪ ಅಂಗುಲ ದಪ್ಪ ದಪ್ಪ ಮಂಜು ನೆಲದ ಮೇಲೆ ಬಿದ್ದಿದೆ. ಏನು ಸುಖ!

17 ಬೇಸಿಗೆ ಮಧ್ಯಾಹ್ನದಲ್ಲಿ ಹರಿತವಾದ ಚಾಕುವಿನಿಂದ ದೊಡ್ಡ ಕಲ್ಲಂಗಡಿ



ಹಣ್ಣನ್ನು ಸೀಳುಮಾಡಿ; ಕೆಂಪು ಬಣ್ಣದ ತಟ್ಟೆಯಲ್ಲಿ ಜೋಡಿಸುವುದು ಏನು ಸುಖ!

18 ಹಿಂದಿನಿಂದ ಸಂನ್ಯಾಸಿಯಾಗಬೇಕೆಂಬ ಆಶೆ ಇದೆ; ಆದರೆ ಮಾಂಸ ತಿನ್ನಲಾಗುವುದಿಲ್ಲವಲ್ಲಾ ಎಂಬ ವ್ಯಥೆ ಇತ್ತು. ದೀಕ್ಷೆ ಪಡೆದ ಮೇಲೆ ರಾಜಾರೋಷವಾಗಿ ಮಾಂಸಾಹಾರ ಮಾಡಬಹುದಾದರೆ, ಈ ಕ್ಷಣ ಒಂದು ಚೊಂಬು ನೀರು ಕಾಯಿಸಿ, ಹರಿತವಾದ ಕತ್ತಿಯಿಂದ ತಲೆ ನುಣ್ಣಗೆ ಬೋಳಿಸಿಬಿಟ್ಟೇನು. ಏನು ಸುಖ !

19 ದೇಹದ ಗೋಪ್ಯ ಜಾಗದಲ್ಲಿ ಅಲ್ಲಲ್ಲಿ ಕಜ್ಜಿ ತುರಿ ಉಂಟಾಗಿ, ಏಕಾಂತದಲ್ಲಿ ಆ ಜಾಗಕ್ಕೆ ಬಿಸಿ ನೀರು ಸುರಿದುಕೊಳ್ಳುವುದು ಏನು ಸುಖ !

20 ಪೆಟ್ಟಿಗೆಯಲ್ಲಿ ಬಾಲ್ಯ ಸ್ನೇಹಿತ ಬರೆದಿದ್ದ ಕಾಗದ ಆಕಸ್ಮಾತ್ತಾಗಿ ಸಿಕ್ಕಿದರೆ ಏನು ಸುಖ !

21 ಸಂಪಾದನೆ ಇಲ್ಲದ ಸಾಹಿತಿ ಸಾಲಕ್ಕಾಗಿ ಬರುತ್ತಾನೆ. ಸಂಕೋಚದಿಂದ ಆ ಮಾತು ಈ ಮಾತು ಆಡುತ್ತಿರುತ್ತಾನೆ. ಅವನ ಕಷ್ಟ ನೋಡಲಾರದೆ, ಎಷ್ಟು ಬೇಕು ಎಂದು ಗೋಪ್ಯವಾಗಿ ಕೇಳಿ, ಕೂಡಲೆ ಒಳಗೆ ಹೋಗಿ, ಹಣ ತಂದು ಕೊಟ್ಟ ಮೇಲೆ 'ಹೊರಡಬೇಕೆ? ಅಥವಾ ಮದ್ಯಪಾನಕ್ಕೆ ಹೊತ್ತುಂಟೋ ?' ಎಂದು ಕೇಳುವುದು ಏನು ಸುಖ !

22 ಚಿಕ್ಕ ದೋಣಿಯಲ್ಲಿ ಯಾನ ಮಾಡುತ್ತಿದ್ದೇನೆ. ಆ ದೋಣಿಗೆ ಹಾಯಿಗಳಿಲ್ಲ. ಎದುರಿಗೊಂದು ಹಾಯಿಗಳುಳ್ಳ ದೋಣಿ ಬರುತ್ತಿದೆ. ಅದಕ್ಕೆ ಲಗತ್ತಾಗುವ ಉದ್ದೇಶದಿಂದ ಕೊಕ್ಕೆ ಎಸೆಯುತ್ತೇನೆ; ಅದು ಗುರಿ ತಪ್ಪುತ್ತದೆ. ಕೂಡಲೆ ಹಗ್ಗ ಎಸೆಯುತ್ತೇನೆ; ಹಗ್ಗದಿಂದ ಭದ್ರಪಡಿಸಿದ ನನ್ನ ದೋಣಿ ಆ ದೋಣಿಯ ಹಿಂದುಗಡೆ ಸರಾಗವಾಗಿ ಹೋಗುತ್ತದೆ. ನಾನು 'ಟೂಫೂ' ಕವಿಯ ಕವನವನ್ನು ಹಾಡುತಾ ಯಾನ ಮಾಡುತ್ತೇನೆ. ಏನು ಸುಖ !

23 ಮಿತ್ರರೊಡನೆ ವಾಸಿಸಲು ಮನೆ ಬೇಕಾಗಿದೆ; ಯಾರೋ ಅಡಕವಾದ ಮನೆ ಉಂಟು, ದೊಡ್ಡದೇನಲ್ಲ, ೧೦-೧೨ ಕೊಠಡಿ, ಮುಂದೆ ನದಿ, ಸುತ್ತಲೂ ಮರಗಳು ಎಂದು ಹೇಳುತ್ತಾರೆ. ಆತನನ್ನು ರಾತ್ರಿ ಊಟಕ್ಕೆ ನಿಲ್ಲಿಸಿಕೊಂಡು, ಮನೆ ನೋಡುವುದಕ್ಕೆ ಹೋಗುತ್ತೇವೆ. ಹೆಬ್ಬಾಗಿಲೊಳಗೆ ಹೋದಕೂಡಲೆ ೬-೭ ಗುಂಟೆಯಷ್ಟು ಖಾಲಿ ಜಾಗ ಇರುವುದು ಕಾಣುತ್ತೆ. 'ಪರವಾಗಿಲ್ಲ. ಹಣ್ಣು, ತರಕಾರಿಗೆ ಕೊರತೆಯಿಲ್ಲ' ಎಂದುಕೊಳ್ಳುತ್ತೇನೆ. ಏನು ಸುಖ!



24 ದೇಶಾಂತರ ಹೋಗಿದ್ದ ಒಬ್ಬ ಬಹಳ ದಿನದ ಮೇಲೆ ಊರಿಗೆ ವಾಪಸ್ಸಾಗುತ್ತಾನೆ. ಊರಿನ ಹೆಬ್ಬಾಗಿಲು ಕಣ್ಣಿಗೆ ಬೀಳುತ್ತೆ, ನದಿಯ ಎರಡು ದಡದಲ್ಲೂ ಹೆಂಗಸರು,ಮಕ್ಕಳು, ಅಪನ ಸ್ವಂತ ಊರಿನ ಗ್ರಾಮ್ಯ ಭಾಷೆಯಲ್ಲಿ ಮಾತನಾಡುತ್ತಿರುವುದು ಕೇಳಿಸುತ್ತದೆ. ಏನು ಸುಖ!

25 ಅಮೂಲ್ಯವಾದ ಹಳೇ ಕಾಲದ ಪಿಂಗಾಣಿ ಸಾಮಾನು ಒಡೆದುಹೋದಾಗ, ಅದರ ರಿಪೇರಿ ಅಸಾಧ್ಯ ಎಂಬುದು ತಿಳಿದೇ ಇದೆ. ಚೂರುಗಳನ್ನು ಕೈಯಲ್ಲಿ ತಿರುಗಿಸುತ್ತಾ ಹೋದಷ್ಟೂ ಮನಸ್ಸಿಗೆ ಬೇಜಾರು. ಆದ್ದರಿಂದ ಅಡಿಗೆಯವನಿಗೆ ಆ ಚೂರುಗಳನ್ನು ಒಪ್ಪಿಸಿ, ಯಾವುದೊ ಹಳೆ ಪಾತ್ರೆಯಂತೆ ಉಪಯೋಗಿಸಬೇಕೆಂದೂ ನನ್ನ ಎದುರಿಗೆ ಪುನಃ ತರಕೂಡದೆಂದೂ ಹೇಳುತ್ತೇನೆ. ಏನು ಸುಖ!

26 ನಾನು ಸಂನ್ಯಾಸಿಯಲ್ಲ, ರಾತ್ರಿ ತಪ್ಪು ಮಾಡಿಬಿಡುತ್ತೇನೆ. ಹೀಗೆ ಮಾಡಿದೆ ನಲ್ಲಾ ಎಂದು ಬೆಳಿಗ್ಗೆ ಮನಸ್ಸು ಕೊರೆಯುತ್ತದೆ. ಕೂಡಲೇ ಮಾಡಿದ ತಪ್ಪು ಒಪ್ಪಿಕೊಳ್ಳುವುದು ಬೌದ್ಧಮತದ ಪ್ರಕಾರ ತಕ್ಕ ಪ್ರಾಯಶ್ಚಿತ್ತ ಎಂದು ನೆನಪು ಬರುತ್ತೆ. ಎಲ್ಲರಿಗೂ—ಸ್ನೇಹಿತರಾಗಲಿ, ಹೊಸಬರಾಗಲಿ— ನನ್ನ ತಪ್ಪಿನ ವಿಷಯ ಮುಚ್ಚು-ಮರೆಯಿಲ್ಲದೆ ಹೇಳಿಬಿಡುತ್ತೇನೆ. ಏನು ಸುಖ!

27 ಯಾರೋ ದಪ್ಪ ದಪ್ಪ ಅಂದರೆ ಒಂದಡಿ ಎತ್ತರದ ಅಕ್ಷರದಲ್ಲಿ ಬರೆಯುವುದನ್ನು ನೋಡುವುದು ಏನು ಸುಖ!

28 ಕೊಠಡಿಯಲ್ಲಿ ಕಣ್ಣು ಕುಕ್ಕುವಂತೆ ಹಾರಾಡುತ್ತಿರುವ ಕಣಜ ಹುಳಕ್ಕೆ ಹೊರಕ್ಕೆ ಹೊಗಲು, ಕಿಟಕಿ ತೆಗೆದು ಅವಕಾಶ ಮಾಡಿಕೊಡುವುದು ಏನು ಸುಖ!

29 ಗ್ರಾಮಾಧಿಕಾರಿ ಸಾಯಂಕಾಲ ನಗಾರಿ ಹೊಡಿಸಿ ಜನರನ್ನೆಲ್ಲಾ ವಿಶ್ರಾಂತಿಗೆ ಮನೆಗೆ ಹೋಗಿರೆಂದು ಆಜ್ಞೆಗೈವುದು ಏನುಸುಖ!

30 ಗಗನ ಚುಂಬಿಯಾದ ಪಟದ ದಾರ ಕಿತ್ತು ಹೋಗಿ, ಪಟ ಕೆಳಗೆ ಕಳಚುವ ದೃಶ್ಯ ಎಷ್ಟು ಸುಖ!

31 ಒಣ ಹುಲ್ಲುಗಾವಲು ಅಕಸ್ಮಾತ್ ಹತ್ತಿಕೊಂಡಾಗ ಜ್ವಾಲೆಯ ಮುಂದೋಟದ ದೃಶ್ಯ ಎಷ್ಟು ಸುಖ!

32 ನಮ್ಮ ಸಾಲದ ಹೊರೆಯನ್ನೆಲ್ಲಾ ಕೆಳಕ್ಕೆ ಇಳುಕುವುದು ಏನು ಸುಖ!

33 ಗುಂಗುರು ಕೂದಲಿನ ವಾಡಿಯುವನ ಕತೆ ಓದುವುದು ಏನು ಸುಖ! (ಇವನು ನಲ್ಲನಲ್ಲೆಯವರು ಪಲಾಯನವಾಗುವುದಕ್ಕೆ ಸಹಾಯ ಮಾಡಿ, ದೂರದ ಊರಿನಲ್ಲಿದ್ದ ತನ್ನ ಮನೆ ಅವರಿಗೆ ಕೊಟ್ಟು, ಅದೃಶ್ಯನಾದನಂತೆ.) *

ಎದೆನಡುಗಿಸುವ ಒಂದು

ಅಮೇರಿಕನ್ ಕಥೆ



ಲೂಸಿಗೆ ಪ್ರೇಮಿ ದೊರಕಿದ

ಕ್ವಿಂಟಿನ್ ಪೆಟ್ರಿಕ್

ಮೆಕ್ಸಿಕೊದಲ್ಲಿಯ ಪ್ರವಾಸಿಕರು ತೊಡುವಂತೆ ಕೈಗಳಿಲ್ಲದ ಕೋಟುಗಳನ್ನು ತೊಟ್ಟಿದ್ದ ಅವರು ಮೇಜಿನ ಸುತ್ತು ಬೆಳಗಿನ ಉಪಾಹಾರಕ್ಕಾಗಿ ಕುಳಿತಿದ್ದರು. ಫಿಲಾಡೆಲ್ಫಿಯದ ಗೌರವಯುತ ಉಪನಗರಗಳಲ್ಲಿ ವಾಸವಾಗಿರುವ ಮಧ್ಯ ವಯಸ್ಸಿನ ಸಭ್ಯ ಮಹಿಳೆಯರಿವರು ಎಂದು ಆ ಮೂವರ ಮುಖಗಳು ಸಾರಿಹೇಳುತ್ತಿದ್ದವು.

ವಿದೇಶಗಳಲ್ಲಿ ಈ ಮೊಗಲು ಪ್ರವಾಸ ಮಾಡಿ ಅನುಭವವಿದ್ದ ಕುಮಾರಿ ಎಲೆನ್ ಯಾರ್ನೆಲ್ ಪರಿಚಾರಿಕೆಯನ್ನು ಕೂಗಿ ಕಾಫಿ ತರಹೇಳಿದಳು. ಮೆಕ್ಸಿಕೊದಲ್ಲಿ ಬೆಳಗಿನ ಹವೆ ತುಂಬ ಥಂಡಿ ಎಂದು ಆ ಮೂವರಲ್ಲಿ ಹಿರಿಯಳಾದ ಶ್ರೀಮತಿ ವೆರಾ ಟ್ರೂಗಾಡ್ ಅನ್ನತೊಡಗಿದ್ದಳು; ಅವಳು "ಬಿಸಿಬಿಸಿಯಾಗಿರಲಿ" ಎಂದಳು.

ಆದರೆ ಕುಮಾರಿ ಲೂಸಿ ಬ್ರಾಮ್ ಏನನ್ನೂ ಹೇಳಲಿಲ್ಲ. ಮೇರಿಯೊ ಬರುವ ಹೊತ್ತಾಯಿತೇ ಎಂದು ತಿಳಿದುಕೊಳ್ಳುವುದಕ್ಕಾಗಿ ಅವಳು ತನ್ನ ಕೈಗಡಿಯಾರವನ್ನು ನೋಡಿಕೊಂಡಳು. "ಅಲ್ಲಾ ಲೂಸಿ, ಮೇರಿಯೊ ಒಂದಿಷ್ಟು ಬೇಗ ಬಂದಿದ್ದರೆ ಚೆನ್ನಾಗುವುದಲ್ಲವೆ? ಒಳ್ಳೆಯ ಬಿಸಿಬಿಸಿಯಾದ ಉಪಾಹಾರ ದೊರೆಯುವ ಯಾವುದಾದರೂ ಹೊಟೆಲ್ಲಿಗೆ ಆತ ನಮ್ಮನ್ನು ಕರೆದೊಯ್ಯುತ್ತಿದ್ದ" ಎಂದಳು ಎಲೆನ್.

"ಈಗಾಗಲೇ ಮೇರಿಯೊ ನಮಗಾಗಿ ತುಂಬ ಕೆಲಸ ಮಾಡುತ್ತಿದ್ದಾನೆ." ಲೂಸಿಯ ಮುಖ ಆರಕ್ತವಾಯಿತು. ಅವಳ ಈ ಸ್ನೇಹಿತೆಯರು ಮೇರಿಯೊನ ವಿಷಯದಲ್ಲಿ ಅವಳಿಗೆ ಆಸಕ್ತಿಯುಂಟಾಗಿದೆ ಎಂಬರ್ಥದಲ್ಲಿ ಚೇಷ್ಟೆ ಮಾಡತೊಡಗಿದ್ದರು. ಅಲ್ಲದೆ ಎಲೆನ್ನಳು ಮೇರಿಯೋನ ಮಾತೆತ್ತಿದಾಗ ತಾನು ಆತನ ಪುಷ್ಟವಾದ

ಕಾಲುಗಳ ಬಗ್ಗೆ ಯೋಚನೆ ಮಾಡುತ್ತಿದ್ದಳು, ಅವಳ ಮುಖ ನಾಚಿ ಕೆಂಪಾಗಿತ್ತು. ಹೀಗಾಗಿ ಕ್ಲೋಚಿಮಿಲ್ಕೊದ ತೇಲುವ ತೋಟವನ್ನು ತೋರಿಸಲೆಂದು ಮೇರಿಯೊ ಅವರನ್ನೆಲ್ಲ ದೋಣಿಯಲ್ಲಿ ಕೂಡ್ರಿಸಿಕೊಂಡು ಅಡ್ಡಾಡಿಸುತ್ತಿದ್ದಾಗ ಅವನ ಪುಷ್ಟ ಕಾಲುಗಳು ಲೂಸಿಯ ಕಣ್ಣಿಗೆ ಬಿದ್ದಿದ್ದವು.

ತನ್ನ ೫೨ ವರ್ಷದ ಧರ್ಮಭೀರು ಕೌಮಾರ್ಯ ಜೀವನದಲ್ಲಿ ಬಹುಶಃ ಒಮ್ಮೆಯೂ (ಉಪಾಹಾರದ ಹೊತ್ತಿನಲ್ಲಂತೂ ಖಂಡಿತ ಅಲ್ಲ) ಲೂಸಿ ಯಾವನೊಬ್ಬ ಗಂಡಸಿನ ಕಾಲುಗಳನ್ನು ಕುರಿತು ಯೋಚಿಸಿರಲಿಲ್ಲ. ಒಂದು ತಿಂಗಳ ಹಿಂದೆ ಅವಳು ಮೆಕ್ಸಿಕೊಕ್ಕೆ ಬಂದಾಗಿನಿಂದ ಅವಳಲ್ಲಿ ಇನ್ನೂ ಬದಲಾವಣೆಯಾಗಿತ್ತು. ಬಹುಶಃ ಈ ಎರಡನೆಯ ಬದಲಾವಣೆ ತುಸು ಮೊದಲೇ ಆಗಿದ್ದರೂ ಆಗಿರಬಹುದು. ಅವಳ ರೋಗಿಷ್ಠ ತಂದೆ ಅಕಸ್ಮಾತ್ತಾಗಿ ಅವಳಿಗೆ ಅಪಾರ ಸಂಪತ್ತನ್ನು ಬಿಟ್ಟು ಸತ್ತಿದ್ದ. ಅವಳು ಹಣದಿಂದ ಧನಿಕಳಾದಂತೆ ಸ್ವಾತಂತ್ರ್ಯದಲ್ಲೂ ಧನಿಕಳಾಗಿದ್ದಳು. ಆದರೆ ಲೂಸಿಗೆ ಅದರ ಅನುಭವ ಬಂದದ್ದು ಮೆಕ್ಸಿಕೊದಲ್ಲಿ ಮೇರಿಯೊನನ್ನು ಕಂಡ ದಿನ.

ಅದು ಲೂಸಿಯ ಜೀವನದಲ್ಲಿ ಒಂದು ಮಹತ್ವದ ದಿನವಾಗಿತ್ತು. ಇನ್ನೂ ಅವಳ ಅಳುಕು ಹೃದಯವನ್ನು ತುಸು ತುಸು ಪೀಡಿಸುತ್ತಿದ್ದ ಅವಳ ಸ್ವಾತಂತ್ರ್ಯದ ಅಸ್ತಿತ್ವವು ಅಂದು ಮುಂಜಾನೆ ಅವಳು ಹಾಸಿಗೆಯಿಂದೇಳುವ ಹೊತ್ತಿಗೇ ಜಾಗೃತವಾಗಿತ್ತು. ಅವಳು ಆ ಉಂಗುರವನ್ನು ಕಂಡಾಗಲಂತೂ ತನ್ನ ಒಡೆಯ ತಾನೇ ಎಂಬ ಭಾವ ಅವಳಲ್ಲಿ ಚರಮ ಸೀಮೆಯನ್ನು ಮುಟ್ಟಿತ್ತು.

ಪೇಟೆಯಲ್ಲಿ ಚಿನಿವಾಲನೊಬ್ಬನ ಅಂಗಡಿಯಲ್ಲಿ ಅವಳು ಆ ಉಂಗುರವನ್ನು ಕಂಡಳು. ವೆರಾ ಮತ್ತು ಎಲೆನ್ ಅಂಗಡಿಕಾರನೊಡನೆ ಒಂದು ಹೇರ್‌ಪಿನ್ನಿನ ಬೆಲೆಯನ್ನು ಚೌಕಸಿ ಮಾಡುತ್ತಿದ್ದಾಗ ಅದು ಅವಳ ಕಣ್ಣಿಗೆ ಬಿತ್ತು. ಅದೇನೂ ಅಂಥ ಕಿಮ್ಮತ್ತಿನ ಉಂಗುರವಾಗಿರಲಿಲ್ಲ-ಬೆಳ್ಳಿಯ ತೆಳ್ಳನ್ನ ಉಂಗುರಕ್ಕೆ ಒಂದು ಬಿಳಿ ಹರಳನ್ನು ಕೂಡ್ರಿಸಿ ತಯಾರಿಸಿದ್ದ ಉಂಗುರ ಅದು. ಆದರೆ ಆ ಹರಳಿನ ಹೊಳಪಿನಲ್ಲಿ ಏನೋ ಒಂದು ಆಕರ್ಷಣೆಯಿತ್ತು. ಲೂಸಿ ಅದನ್ನು ತನ್ನ ಬೆರಳಿಗೆ ಹಾಕಿಕೊಂಡಳು. ಹರಳು ಸೂರ್ಯ ಪ್ರಕಾಶವನ್ನು ಅವಳ ಮೇಲೆ ಪ್ರತಿಫಲಿಸಿತು. ಆ ಪ್ರಕಾಶವು ಆ ಉಂಗುರಕ್ಕಿಂತಲೂ ಹೆಚ್ಚು ಬೆಲೆ ಬಾಳುತ್ತಿದ್ದ ಅವಳ ತಾಯಿಯ ವಾಙ್ನಿಶ್ಚಯದ ಉಂಗುರವನ್ನು ಮರೆಯುವಂತೆ ಮಾಡಿತು. ಲೂಸಿಗೆ ಏಕೊ ಬಲು ಉಲ್ಲಾಸವೆನಿಸಿತು. ಜೊತೆಗೆ ಕ್ವೇಕರ್ ಪಂಥದ ನೈತಿಕ ಜೀವನದಲ್ಲಿ ಪಳಗಿದ್ದ ಅವಳಿಗೆ ಇದು ತರವಲ್ಲವೆಂದೂ ಅನಿಸಿರಬೇಕು. ತನಗೆ ಬೆನ್ನು ಮಾಡಿ ನಿಂತಿದ್ದ ವೆರಾ ಮತ್ತು ಎಲೆನ್ನರತ್ತ ನೋಡುತ್ತ ಅವಳು ಉಂಗುರವನ್ನು ಬೆರಳಿನಿಂದ ಕಳಚಲು ಯತ್ನಿಸಿದಳು.

ಉಂಗುರ ಬರಲಿಲ್ಲ. ಅವಳಿನ್ನೂ ಅದನ್ನು ಜಗ್ಗುತ್ತಿದ್ದಾಗ ಅವಳ ಬಳಿಗೆ ಬಂದ ವೆರಾ ಮತ್ತು ಎಲೆನ್ "ವ್ಹಾ! ವ್ಹಾ! ಎಷ್ಟು ಸುಂದರ" ಎಂದರು.

"ಲೂಸಿ, ಎಷ್ಟು ಮುದ್ದಾಗಿದೆ!"

"ವಾಙ್ನಿಶ್ಚಯದ ಉಂಗುರದಂತೆಯೆ ಸುಂದರವಾಗಿದೆ."

ಲೂಸಿ ನಾಚಿದಳು. "ಮೂರ್ಖರಂತಾಡಬೇಡಿರಿ. ಹುಡುಗವಯಸ್ಸಿನವರಿಗೆ ಹೇಳಿದ್ದು ಇದು. ಸಹಜವಾಗಿ ಹಾಕಿ ನೋಡಿದೆ ಅಷ್ಟೆ. ಈಗ ಅದನ್ನು ತೆಗೆಯಲಿಕ್ಕೆ..." ಅವಳು ಉಂಗುರವನ್ನು ಮತ್ತೊಮ್ಮೆ ಜಗ್ಗಿದಳು. ಅಂಗಡಿಕಾರ ಅವಳ ಬಳಿಯಲ್ಲಿಯೆ ನಿಂತು "ಚೆನ್ನಾಗಿ ಕಾಣುತ್ತಿದೆ, ಸುಂದರವಾಗಿ ಕಾಣುತ್ತಿದೆ" ಎನ್ನುತ್ತಿದ್ದ.

"ತೆಗೆದುಕೊಂಡುಬಿಡಮ್ಮಾ ಲೂಸಿ" ಎಲೆನ್ ಧೈರ್ಯಮಾಡಿ ಹೇಳಿದಳು.

"ಛಿ! ಎಂಥ ಗೋಳಿದು. ಆದರೆ ಉಂಗುರವನ್ನು ತೆಗೆಯಲಿಕ್ಕೇ ಆಗುತ್ತಿಲ್ಲ. ಕೊಳ್ಳದೆ ವಿಧಿಯಿಲ್ಲವೆಂದು ಕಾಣುತ್ತದೆ."

ಲೂಸಿ ಆ ಉಂಗುರವನ್ನು ತುಸು ಹೆಚ್ಚೇ

ಹಣವನ್ನು ಕೊಟ್ಟು ಕೊಂಡಳು. ಹಣಕಾಸಿನ ವ್ಯವಹಾರದಲ್ಲಿ ಚತುರಳಾಗಿದ್ದು ಈ ಪ್ರವಾಸದಲ್ಲಿಯ ಆರ್ಥಿಕ ವಿಷಯಗಳನ್ನೆಲ್ಲ ನೋಡಿಕೊಳ್ಳುತ್ತಿದ್ದ ಎಲೆನ್ ಅಂಗಡಿಕಾರನೊಡನೆ ವ್ಯಾಪಾರ ಮುಗಿಸುತ್ತಿದ್ದಾಗ ಲೂಸಿ ವೆರಾಳಿಗೆ 'ಹೊಟೆಲ್ಲಿಗೆ ಹೋದೊಡನೆಯೆ ಸಾಬೂನು ಹಚ್ಚಿಕೊಂಡು ಉಂಗುರವನ್ನು ಕಳಚಿಡುತ್ತೇನೆ" ಎಂದಳು.

ಆದರೆ ಅವಳು ಆ ಉಂಗುರವನ್ನು ಕಳಚಿಡಲಿಲ್ಲ. ಅದು ಹೇಗೊ ಅವಳ ನೂತನವಾದ ಅಸ್ಪಷ್ಟ ಸಂತೋಷ-ಉತ್ಸಾಹಗಳು ಅದರ ಸುತ್ತೇ ಹೆಣೆದುಕೊಂಡಂತಿದ್ದವು.

ಟಾಕ್ಸ್ಕೊದಲ್ಲಿಯಂತೂ ಲೂಸಿಯ ಉತ್ಸಾಹಕ್ಕೆ ಮಿತಿಯೆ ಇರಲಿಲ್ಲ. ಅಂದು ಸಂಜೆ ವೆರಾ ಮತ್ತು ಎವೆನ್ ಕಾಲುನೋವಿನಿಂದ ಕೋಣೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಸಾಂಟಾ ಪ್ರಿಸ್ಕಾ ಚರ್ಚನ್ನು ಮತ್ತೊಮ್ಮೆ ನೋಡಿ ಬರಲು ಲೂಸಿ ನಿರ್ಧರಿಸಿದಳು. ಮೊದಲನೆಯ ಸಲ ನೋಡಹೋದಾಗ ಅವಳಿಗೆ ತನ್ನ ಸ್ನೇಹಿತೆಯರ ಹಾಜರಿಯಿಂದ ಏನೇನೂ ಸುಖವೆನಿಸಿರಲಿಲ್ಲ. ಅವಳಿಗೆ ಆ ಚರ್ಚಿನ ಶಾಂತ ವಾತಾವರಣದಲ್ಲಿ ಏಕಾಕಿಯಾಗಿದ್ದು ಆ ಗಭೀರ ಶಾಂತಿಯ ಸುಖ ಅನುಭವಿಸುವ ಬಯಕೆಯಿತ್ತು.

ಅವಳು ಚರ್ಚಿನೊಳಗೆ ಹೋದಾಗ ಮುದಿಕ್ಕೆತ ಹೆಂಗಸೊಬ್ಬಳು ಮೊಣಕಾಲೂರಿ ಕುಳಿತು ಪ್ರಾರ್ಥನೆ ಮಾಡುತ್ತಿದ್ದಳು. ಭಾವನಾವಶಳಾದ ಲೂಸಿ ತನಗರಿವಿಲ್ಲದಂತೆಯೇ ಆ ಹೆಂಗಸಿನಂತೆಯೆ ಮೊಣಕಾಲೂರಿ ಕುಳಿತು ತನ್ನ ಎದೆಯ ಮೇಲೆ ಕ್ರಾಸಿನ ಚಿಹ್ನ ಮಾಡಿಕೊಂಡಳು.

ಲೂಸಿ ಮೊಣಕಾಲೂರಿ ಕುಳಿತಿದ್ದು ತುಸು ಹೊತ್ತು ಮಾತ್ರ. ಆದರೆ ಅವಳು ಏಳುವ ಮೊದಲೇ ಅವಳಿಗೆ ತನ್ನ ಬಲಬದಿಯಲ್ಲಿ ಇನ್ನಾರೊ ಇರುವುದರ ಅರಿವಾಯಿತು.

ಅತ್ತ ಕಣ್ಣು ಹಾಯಿಸಿದಾಗ ಬಿಳಿ ಸೂಟು ಧರಿಸಿದ ಮೆಕ್ಸಿಕನ್ ಯುವಕನೊಬ ಮೊಣಕಾಲೂರಿ ಪ್ರಾರ್ಥನೆ ಸಲ್ಲಿಸುತ್ತಿರುವುದು ಕಾಣಿಸಿತು. ಭಕ್ತಿಯಿಂದ ಬಾಗಿದ ಅವನ ತಲೆಯ ಮೇಲೆ ಕಪ್ಪು ಕೂದಲು ಹೊಳೆಯುತ್ತಿತ್ತು. ಅವಳು ಎದ್ದು ನಿಲ್ಲುತ್ತಿದ್ದಾಗ ಅವಳ ಮತ್ತು ಅವನ ಕಣ್ಣುಗಳು ಕೂಡಿದವು. ನೋಟ ಕ್ಷಣಮಾತ್ರದ್ದಾದರೂ ಅವನ ಮುಖಚರ್ಯೆ ಅವಳ ಮನದಲ್ಲಿ ಸ್ಪಷ್ಟವಾಗಿ ಮೂಡಿಬಿಟ್ಟಿತು.

ಅವಳು ಹರ್ಷಚಿತ್ತದಿಂದಲೆ ಚರ್ಚಿನಿಂದ ಹೊರಟಳು. ಸಂಜೆಯ ಪ್ರಕಾಶ ಅಳಿದಿತ್ತು. ನಿರ್ಜನವಾದಂತಾಗಿದ್ದ ರಸ್ತೆಯಲ್ಲಿ ಅವಳು ತನ್ನ ಹೊಟೆಲ್ಲಿನತ್ತ ನಡೆದು ಹೋಗುತ್ತಿದ್ದಾಗ ರಾತ್ರಿ ಬಂದೇಬಿಟ್ಟಿತ್ತು. ಕಲ್ಲುನೆಲದ ಮೇಲೆ ಅವಳ ಹೆಜ್ಜೆಯ ಪ್ರತಿಧ್ವನಿ ಅವಳ ಏಕಾಕಿತನವನ್ನು ಸಾರುವಂತಿತ್ತು. ಅವಳ ಎದುರಿನಲ್ಲಿ ಯಾವನೋ ಒಬ್ಬ ಗಂಡಸು ತುಸು ತೊನೆಯುತ್ತಲೇ ಗುಡ್ಡವನ್ನೇರಿ ಬರುತ್ತಿದ್ದ. ಲೂಸಿಯೇನೂ ಅಂಜುಬುರುಕಳಲ್ಲ. ಆದರೂ ಬರುವಾತ ಕುಡಿದಿದ್ದಾನೆ ಎಂಬುದರಿಂದ ಅವಳಿಗೆ ತುಸು ಭಯವಾಯಿತು. ಅವಳು ಸುತ್ತಲೂ ನೋಡಿದಳು. ಒಬ್ಬರೂ ಇರಲಿಲ್ಲ. ತಿರುಗಿ ಚರ್ಚಿಗೇ ಹೋಗಿಬಿಡಬೇಕೆಂಬ ಅಂಜುಗುಳಿ ವಿಚಾರ ಅವಳಿಗೆ ಬಂತು. ಆದರೆ ಅವಳು ಹಾಗೆ ಮಾಡಲಿಲ್ಲ. ಎಷ್ಟಾದರೂ ತಾನು ಅಮೇರಿಕನ್ನಳು, ತನ್ನನ್ನಾರೂ ಪೀಡಿಸಲಿಕ್ಕಿಲ್ಲ ಎಂದು ಧೈರ್ಯ ತಾಳಿ ಅವಳು ಮುನ್ನಡೆದಳು.

ಆದರೆ ಎದೆ ಇನ್ನೂ ಹೊಡೆದುಕೊಳ್ಳುತ್ತಲಿತ್ತು. ಆ ಮನುಷ್ಯ ಸಮೀಪಕ್ಕೆ ಬಂದಾಗ ಅವಳನ್ನು ನೋಡಿದವನೇ ಅವಳ ಹತ್ತಿರಕ್ಕೇ ಬಂದ. ಅವನ ಗಡ್ಡ ಬೆಳೆದಿತ್ತು. ಬಾಯಿಂದ ಮದ್ಯದ ವಾಸನೆ ಇಡುಗುತ್ತಿತ್ತು. ಅವನು ಸ್ಪೆನಿಶ್ ಭಾಷೆಯಲ್ಲಿ ಬಡಬಡಿಸಿದ್ದೇನೂ ಲೂಸಿಗೆ ಅರ್ಥವಾಗಲಿಲ್ಲ. ಅವನು ಬಿಕ್ಕೆ ಬೇಡುತ್ತಿದ್ದಾನೆಂದು ಅವಳಿಗೆ ಅರಿವಾದರೂ ಸಂಘಟಿತವಾದ ದಾನಧರ್ಮಗಳಿಗೆ ಅಭ್ಯಸ್ತಳಾಗಿದ್ದ ಅವಳಿಗೆ ಹೀಗೆ ಬೀದಿ ತಿರುಕರಲ್ಲಿ ಸಹಾನುಭೂತಿಯಿರಲಿಲ್ಲ.

ಅವಳು "ಇಲ್ಲ" ವೆಂಬಂತೆ ತಲೆಯಲ್ಲಾಡಿಸಿ ಮುಂದೆ ಹೊರಟಳು. ಆದರೆ ಹೊಲಸು ಕೈ-ಯೊಂದು ಅವಳ ಅಂಗಿಯ ತೋಳನ್ನು ಹಿಡಿದು ದೀನ ಸ್ವರದಲ್ಲಿ ಯಾಚನೆಯನ್ನು ಮುಂದುವರಿಸಿತು. ಬಯಸಿದ್ದಕ್ಕಿಂತಲೂ ಹೆಚ್ಚು ಜೋರಿನಿಂದ ಅವಳು ತನ್ನ ಕೈಯನ್ನು ಕೊಸರಿಕೊಂಡಳು. ಆ ಮನುಷ್ಯನ ಕಣ್ಣುಗಳಲ್ಲಿ ಕೋಪದ ಕಿಡಿ ಕಾಣಿಸಿತು. ಆತ ಸಿಟ್ಟಿನಿಂದಲೆ ಕೈಯೆತ್ತಿದ.

ಆ ಮನುಷ್ಯನೇನೂ ನಿಜವಾಗಿಯೂ ಅವಳನ್ನು ಹೊಡೆಯಬಯಸಿರಲಿಲ್ಲ. ಆದರೆ ಅವನು ಕೈ ಎತ್ತಿದಾಗ ಸ್ವಾಭಾವಿಕವಾಗಿ ಲೂಸಿ ಹಿಂದೆ ಸರಿದಳು. ಹಿಂದೆ ಸರಿಯುವಾಗ ಅವಳ ಬೂಟಿನ ಎತ್ತರದ ಹಿಮ್ಮಡ ಏರು ತಗ್ಗಾಗಿದ್ದ ಕಲ್ಲಿನ ನೆಲದಲ್ಲಿ ತೊಡಕಿಕೊಂಡದ್ದರಿಂದ ಅವಳು ಧೊಪ್ಪೆಂದು ಬಿದ್ದುಬಿಟ್ಟಳು. ಕಾಲು ಉಳುಕಿ ಮೇಲೇಳಲಾರದೆ ಬಿದ್ದುಕೊಂಡಿದ್ದಾಗ ಆ ಮನುಷ್ಯ ಭೀಕರನಾಗಿ ನೋಡುತ್ತ ತನ್ನ ಮೇಲೆ-ರಗಿ ನಿಂತಿರುವಂತೆ ಅವಳಿಗನಿಸಿತು. ಲೂಸಿಯ ಎದೆ ಭಯದಿಂದ ಕಂಪಿಸಿಹೋಯಿತು.

ಅಷ್ಟರಲ್ಲಿ ಮತ್ತೊಬ್ಬಾತ ಅಲ್ಲಿಗೆ ಬಂದ. ಬಿಳಿ ಸೂಟನ್ನು ಧರಿಸಿದ್ದನಾತ. ಲೂಸಿಗೆ ಅವನ ಮುಖ ಕಾಣದಿದ್ದರೂ ಚರ್ಚಿನಲ್ಲಿ ತಾನು ಕಂಡ ತರುಣ ಇವನೇ ಎಂದೆನಿಸಿತು. ಅವನ ಕೈ ಭಿಕ್ಷುಕನನ್ನು ಬದಿಗೆ ಸರಿಸಿದ್ದು ಅವಳಿಗೆ ಕಂಡಿತು. ಭಿಕ್ಷುಕ ಹಿಂದೆ ಸರಿದು ಏನೇನೊ ಗೊಣಗುತ್ತ ಹೊರಟುಹೋದ. ಆ ತರುಣನ ಮುಖ ತನ್ನ ಮುಖದತ್ತ ಬಂದದ್ದೂ ಅವನ ಬಲಿಷ್ಠವಾದ ಕೈ ತನ್ನನ್ನೆತ್ತಿ ನಿಲ್ಲಿಸುತ್ತಿರುವುದೂ ಅವಳಿಗೆ ವೇದ್ಯವಾಯಿತು. ಅವನು ಹೇಳುತ್ತಿದ್ದುದು ಅವಳಿಗೆ ಅರ್ಥವಾಗದಿದ್ದರೂ ಧ್ವನಿಯು ಮಾತ್ರ ಮೃದುವೂ ಕಳಕಳಿಯಿಂದ ಕೂಡಿದ್ದೂ ಆಗಿತ್ತು.

"ನಾನು ಮೇರಿಯೊ, ಚರ್ಚಿನಲ್ಲಿದ್ದೆನಲ್ಲ. ನಾನು ನಿಮಗೆ ಸಹಾಯ ಮಾಡಿದೆ" ಎಂದು ಮೇರಿಯೊ ಓಡುತ್ತಿದ್ದ ಭಿಕ್ಷುಕನತ್ತ ನೋಡುತ್ತ ಹರಕು ಮುರುಕು ಇಂಗ್ಲೀಷಿನಲ್ಲಿ ಲೂಸಿಗೆ ಹೇಳಿದ. ಚಂದ್ರಪ್ರಕಾಶದಲ್ಲಿ ಅವನ ಹಲ್ಲುಗಳು ಹೊಳೆದವು.

ಕಾಲು ಉಳುಕಿ ನಿಲ್ಲಲು ಕೂಡ ಆಗದಂತಿದ್ದ ಮೇರಿಯನ್ನು ಆತ ಹೆಚ್ಚು ಕಡಿಮೆ ಹೊತ್ತೇ ಹೊಟೆಲ್ಲಿಗೆ ತಂದ. ವೆರಾ ಮತ್ತು ಎಲೆನ್ನರು ಲೂಸಿಯನ್ನು ಮಲಗಿಸಿ ಉಪಚಾರ ಮಾಡುತ್ತಿದ್ದಾಗ ಎಲೆನ್ ಕಿವಿಮಾತಿನಲ್ಲಿ ಕೇಳಿದಳು; "ಲೂಸಿ, ಎಷ್ಟು ಕೊಡಲಿ ಅವನಿಗೆ?"

ಆದರೆ ಲೂಸಿ ದೃಢ ಸ್ವರದಲ್ಲಿ ಹೇಳಿದಳು "ಊಂಹುಂ. ಹಣ ಕೊಟ್ಟರೆ ಅವನಿಗೆ ಅವಮಾನ ಮಾಡಿದಂತಾದೀತು."

ಮೇರಿಯೊನಿಗೆ ಈ ಸಂವಾದದ ಅರ್ಥವಾದಂತೆ ಕಂಡಿತು. ಆತ ಏನೇನೊ ಹೇಳಿದ. ಅದರಲ್ಲಿ "ಕೊದ್ರೆ" ಎಂಬ ಒಂದು ಶಬ್ದದ ಹೊರತು ಮತ್ತೇನೂ ಲೂಸಿಗೆ ಅರ್ಥವಾಗಲಿಲ್ಲ. ಕೊನೆಗೆ ಮೇರಿಯೊ ಮಾತು ನಿಲ್ಲಿಸಿ ಲೂಸಿಯ ಎಡಗೈಯನ್ನು—ಆ ಬಿಳಿ ಹರಳಿನ ಉಂಗುರವಿದ್ದ ಕೈಯನ್ನು—ಚುಂಬಿಸಿ ನಮಸ್ಕಾರ ಮಾಡಮಾಡುತ್ತ ಕೋಣೆಯಿಂದ ಹೊರ-ಬಿದ್ದುಹೋದ.

ಮೇರಿಯೊ ಈ ಮೂವರು ಮಧ್ಯವಯಸ್ಸಿನ ಸ್ತ್ರೀಯರ ಬಾಳಿನಲ್ಲಿ ಕಾಲಿರಿಸಿದ್ದು ಈ ಬಗೆಯಲ್ಲಿ. ಅಕಸ್ಮಾತ್ತಾಗಿ ಆದ ಪರಿಚಯವನ್ನು ಬೆಳೆಸಿಕೊಳ್ಳಲು ಆತ ನಿರ್ಧರಿಸಿದನೆಂದು ಕಾಣುತ್ತದೆ. ಮರುದಿನ ಬೆಳಿಗ್ಗೆ ಆತ ಲೂಸಿಯ ಪ್ರಕೃತಿಯ ವಿಚಾರ ಮಾಡಲೆಂದು ಬಂದ. ಆಗಲೇ ಲೂಸಿ ಅವನ ಮುಖವನ್ನು ಸರಿಯಾಗಿ ನೋಡಿದ್ದು. ಅವನೇನೂ ನಿಜವಾಗಿ ಸುಂದರ ಪುರುಷನಾಗಿರಲಿಲ್ಲ. ಅವನ ಉದ್ದನ್ನ ಹುಬ್ಬುಗಳಿಂದ ಕೂಡಿದ ಕಣ್ಣುಗಳು ತೀರ ಹತ್ತಿಯಾಗಿದ್ದಂತಿದ್ದವು. ಅವನ ತುಂಬುತುಟಿಗಳ ಮೇಲಿನ ಮೀಸೆ ಸ್ವಲ್ಪ ಉದ್ದವೇ ಎನಿಸುತ್ತಿತ್ತು. ಬಡಕಲಾಗಿ ಕಂಡರೂ ಅವನ ಮೈಕಟ್ಟು ಬಲವಾಗಿತ್ತು. ಆದರೆ ಅವನಲ್ಲಿರುವ ಏನೋ ಒಂದು ವಿಶೇಷವು ಅವನು

ವಿಶ್ವಾಸಾರ್ಹನೂ ಪ್ರೀತಿಪಾತ್ರನೂ ಆಗುವಂತೆ ಮಾಡುತ್ತಿತ್ತು.

ತಾನೊಬ್ಬ ವಿದ್ಯಾರ್ಥಿ, ಈ ರಜಾ ಕಾಲದಲ್ಲಿ ಒಂದಿಷ್ಟು ಹಣ ಗಳಿಸಬೇಕೆಂದಿದ್ದೇನೆ ಎಂದನಾತ. ತಾನು ಅವರಿಗೆ ಮಾರ್ಗದರ್ಶಕನಾಗುವುದಾಗಿ ಹೇಳಿದ. ಕಾಲು ಉಳುಕಿದ ಲೂಸಿ ನಡೆಯಲಾರಳಾದ್ದರಿಂದ ಒಂದು ಕಾರನ್ನು ಬಾಡಿಗೆಗೆ ಹಿಡಿಯಬೇಕು, ತಾನು ಅದನ್ನು ನಡೆಸುವೆ ಎಂದನಾತ. ಅದಕ್ಕಾಗಿ ಆತ ಕೇಳಿದ ಪ್ರತಿಫಲವೂ ಬಹಳ ಕಡಿಮೆಯಾಗಿತ್ತು. ಲೂಸಿ ಮತ್ತು ಅವಳ ಗೆಳತಿಯರು ಹೆಚ್ಚು ಕೊಡುವೆವೆಂದರೂ ಆತ ತೆಗೆದುಕೊಳ್ಳಲೊಪ್ಪಲಿಲ್ಲ.

ಮರುದಿನ ಆತ ಬಾಡಿಗೆಯ ಕಾರೊಂದನ್ನು ತಂದ. ಬಾಡಿಗೆ ಎಷ್ಟು ಕಡಿಮೆಯಿತ್ತೆಂದರೆ ಅದು ಚೌಕಸಿಯಲ್ಲಿ ನಿಸ್ಸೀಮಳಾದ ಎಲೆನ್ನಳ ಬಾಯನ್ನೂ ಮುಚ್ಚಿಸಿಬಿಟ್ಟಿತು. ಅಂದಿನಿಂದ ಮೇರಿಯೊ ಆ ಮೂವರು ಸ್ತ್ರೀಯರನ್ನು ನಿತ್ಯವೂ ಬೇರೆ ಬೇರೆ ಪ್ರೇಕ್ಷಣೀಯ ಸ್ಥಳಗಳಿಗೆ ಕಾರಿನಲ್ಲಿ ಕೊಂಡೊಯ್ಯತೊಡಗಿದ.

ಸದಾ ಶುಭ್ರ ಬಟ್ಟೆ ತೊಡುತ್ತಿದ್ದ ಆತನ ನಿತ್ಯಾಗಮನ—ಮೂವರಿಗೂ—ಪ್ರಿಯವಾಗಿತ್ತು. ಲೂಸಿಗಂತೂ ಹೇಳುವುದೇ ಬೇಡ. ಅವರ ಮನೋರಂಜನೆಗಾಗಿ ಸದಾ ಆತ ಯೋಜನೆಗಳನ್ನು ಮಾಡಿಟ್ಟಿರುತ್ತಿದ್ದ. ಒಂದು ದಿನ ಆತ ಅವರನ್ನು ಪೊಪೊಕೆಟಪೆಟ್ಲ ಪರ್ವತಕ್ಕೆ ಕರೆದೊಯ್ದ. ಆ ಪರ್ವತದ ಮೇಲಿನ ದೃಶ್ಯ ನಿಜವಾಗಿಯೂ ಸುಂದರವಾಗಿತ್ತು. ಅದು ಹೇಗೊ ಒಂದು ಕ್ಷಣಕಾಲ ಅವರಿಬ್ಬರೇ ಇದ್ದಾಗ ಮೇರಿಯೊ ಲೂಸಿಯ ಕೈಯನ್ನು ತನ್ನ ಕೈಲಿ ಹಿಡಿದು ಅದುಮಿದ.

ಭಾಷೆಯ ತೊಡಕಿದ್ದುದರಿಂದ, ತಾವಿಬ್ಬರೂ ಮೆಕ್ಸಿಕೊದಲ್ಲಿಯ ಒಂದು ಅದ್ಭುತ ಸೌಂದರ್ಯವನ್ನು ಅನುಭವಿಸುತ್ತಿರುವುದು ತನಗೆ ಸಂತೋಷವನ್ನುಂಟುಮಾಡಿದೆ ಎಂದು ತಿಳಿಯಪಡಿಸುವುದೇ ಮೇರಿಯೊನ ಕೈ ಅದುಮುವಿಕೆಯ ಅರ್ಥವಾಗಿತ್ತು. ಅವನ ಅದುಮುವಿಕೆಯಲ್ಲಿ ಲೂಸಿಯ ಕೈಲಿದ್ದ ಹರಳಿನ ಉಂಗುರ ಒತ್ತಲ್ಪಟ್ಟು ಬೆರಳಿಗೆ ವೇದನೆಯಾಯಿತು. ಜೊತೆಗೆ ಅವಳಲ್ಲಿ ಮತ್ತಾವುದೋ ಒಂದು ಭಾವನೆಯೂ ಉದಯಿಸಿತು.

ಇನ್ನು ಟಾಕ್ಸ್ಕೊದಲ್ಲಿದ್ದುದು ಸಾಕು, ಮೆಕ್ಸಿಕೊ ನಗರದಲ್ಲಿರೋಣ ಎಂದು ನಿರ್ಧರಿಸಿ ಲೂಸಿ ಮೇರಿಯೊನ ಕೆಲಸವನ್ನು ಬಿಡಿಸಲು ಹಾಗೂ ಅವನಿಗೆ ಒಂದು ನೂರು ಪೆಸೊಗಳನ್ನು ಇನಾಮಾಗಿ ಕೊಟ್ಟು ಇನ್ನು ಬರುವುದು ಬೇಡವೆಂದು ತಿಳಿಸಲು ಎಲೆನ್ನಳಿಗೆ ಹೇಳಿದಳು. ಆದರೆ ಈ ಕೆಲಸ ಒಂದು ಪರ್ವತವನ್ನು ಅದರ ಸ್ಥಳದಿಂದ ಕದಲಿಸುವಷ್ಟೆ ಕಠಿನವಾಗಿತ್ತು. ಎಲೆನ್ ಹೇಳಿದಾಗ ಮೇರಿಯೊ ನಕ್ಕ. ಕೊಡಮಾಡಿದ ನೂರು ಪೆಸೊಗಳನ್ನು ತೆಗೆದುಕೊಳ್ಳದೆ ಲೂಸಿಯೊಡನೆಯೆ ಮಾತಾಡಿದ. "ಮೆಕ್ಸಿಕೊ ನಗರದಲ್ಲಿ ದುಷ್ಟರಿದ್ದಾರೆ. ನಾನು ನಿಮ್ಮ ಕಾಳಜಿ ತೆಗೆದುಕೊಳ್ಳುತ್ತೇನೆ. ನೀವು ಹಣ ಕೊಡುತ್ತೀರಿ, ನಿಜ. ಆದರೆ ಅದಕ್ಕಿಂತಲೂ ನಿಮಗೆ ಎಲ್ಲವನ್ನೂ ತೋರಿಸಬೇಕಾದುದು ಮಹತ್ವದ ಮಾತು."

ಅಂತರಂಗದಲ್ಲಿ ಬೇಡವೆಂಬ ಭಾವನೆಯಿದ್ದರೂ ಲೂಸಿ ಅವನ ಮಾತುಗಳಿಗೆ ಒಪ್ಪಿದಳು. ಮೇರಿಯೊ ಅವರ ಜೊತೆ ಮೆಕ್ಸಿಕೊ ನಗರಕ್ಕೆ ತೆರಳಿದ.

ಮೆಕ್ಸಿಕೊ ನಗರಕ್ಕೆ ಬಂದು ಎರಡು ವಾರಗಳಾದ ನಂತರ ತಿಯೋಟಿ ಹುಕಾನ ಪಿರಾಮಿಡ್‌ಗಳನ್ನು ನೋಡಲು ಅವರು ಹೊರಟರು. ಕ್ರಮದಂತೆ ಲೂಸಿ ಮೇರಿಯೋನ ಮಗ್ಗಲಲ್ಲಿ ಕುಳಿತಿದ್ದಳು. ಮೇರಿಯೊ ಒಳ್ಳೆಯ ಡ್ರೈವರನಾಗಿದ್ದ. ಆತ ಮಾರ್ಗದಲ್ಲಿ ಕಣ್ಣಿಟ್ಟು ಗಾಡಿ ಬಿಡುವುದನ್ನು ನೋಡುವುದರಲ್ಲಿ ಅವಳಿಗೊಂದು ಬಗೆಯ ಆನಂದವಾಗುತ್ತಿತ್ತು. ಆತ ಆಗಾಗ ತನ್ನಷ್ಟಕ್ಕೆ ಗೊಣಗಿಕೊಳ್ಳುವುದನ್ನು ಕೇಳುವುದರಲ್ಲಿ ಸಂತೋಷವೆನಿಸುತ್ತಿತ್ತು. ಆತ ತನ್ನ ಮುಖವನ್ನು ಅವಳತ್ತ ತಿರುವಿ ತನ್ನ ಕಪ್ಪು ಕಣ್ಣುಗಳ ದಿಟ್ಟ

ದೃಷ್ಟಿಯನ್ನು ಅವಳ ಮುಖದ ಮೇಲಿಂದ ಎದೆಯ ಮೇಲಿಳಿಸಿದಾಗ ಮಾತ್ರ ಅವಳಿಗೆ ತುಸು ಸಂಕೋಚವೆನಿಸುತ್ತಿತ್ತು.

ಇಂದು ಕೂಡ ಹಾಗೆಯೆ ಆದಾಗ ಅವಳು ಇಂಗ್ಲೀಷಿನಲ್ಲಿ "ಮೇರಿಯೊ, ನಾವು ಅಮೇರಿಕ ದಲ್ಲಿ ಹೇಳುವ ಹಾಗೆ ನೀನು ಸ್ತ್ರೀಯರೊಡನೆ ಚಲ್ಲಾಟವಾಡುವವನಾಗಿರುವಿ. ಇಲ್ಲಿ ಮೆಕ್ಸಿ-ಕೋದ ಹುಡುಗಿಯರಿಗೆ ನೀನು ಬಲು ಪ್ರಿಯ ನಾಗಿರಬೇಕು" ಎಂದಳು.

ಮೇರಿಯೊಗೆ ಮೊದಲು ಈ ಮಾತಿನ ಅರ್ಥ ವಾದಂತೆ ಕಾಣಲಿಲ್ಲ. ಆ ಮೇಲೆ ಆತ, "ಹುಡು ಗಿಯರು–ಛೆ! ಛೆ!" ಅವನ ಕೈಗಳು ಅವನ ಒಳ ಕಿಸೆಯಿಂದ ಒಂದು ಮುದ್ದೆಯಾದ ಫೋಟೋ ವನ್ನು ಹೊರಗೆ ತಂದವು. "ನನ್ನ ಹುಡುಗಿ ಇವ-ಳು—" ಎಂದನಾತ.

ಲೂಸಿ ಆ ಫೋಟೋವನ್ನಿಸಿದುಕೊಂಡಳು. ಅದು ಅವಳಿಗಿಂತಲೂ ವಯಸ್ಸಾದವಳೊಬ್ಬಳ ಚಿತ್ರವಾಗಿತ್ತು. ಮುಖದ ಮೇಲೆ ಚಿಂತೆ-ಬೇನೆ ಗಳ ಗೆರೆಗಳಿದ್ದವು.

"ನಿನ್ನ ತಾಯಿಯೇನು? ನನಗವಳ ವಿಚಾರ ವನ್ನು ಹೇಳು" ಎಂದಳು ಲೂಸಿ.

ಮೇರಿಯೊ ಬಡಬಡನೆ ಹೇಳತೊಡಗಿದ. ಅವು ಗಳಲ್ಲಿ ಹೆಚ್ಚಿನ ಶಬ್ದಗಳು ಲೂಸಿಗೆ ತಿಳಿಯುತ್ತಿರ ಲಿಲ್ಲ. ಒಟ್ಟಿನಲ್ಲಿ ಮೇರಿಯೊನ ತಾಯಿ ಕಡು ಬಡವೆ, ತಂದೆಯಿಲ್ಲದ ಅನಾಥ ಮಕ್ಕಳ ಜೋ-ಪಾನ ಮಾಡುವುದರಲ್ಲಿ ಅವಳು ಹಳ್ಳಿಯಲ್ಲಿ ತನ್ನ ಜೀವನ ಸವೆಸಿದ್ದಾಳೆ, ಅವಳೊಬ್ಬ ತಪಸ್ವಿನಿ ಯಂತಿದ್ದಾಳೆ, ಮೇರಿಯೊ ಅವಳನ್ನು ದೇವರಂತೆ ಪೂಜಿಸುತ್ತಾನೆ ಎಂದಿಷ್ಟು ಅವಳಿಗೆ ಅರ್ಥವಾ ಯಿತು.

ಮೇರಿಯೊ ಉತ್ಸಾಹಭರದಿಂದ ಮಾತಾಡು ತ್ತಿರುವಾಗ, ಹೇಗಾದರೂ ಮಾಡಿ ಮೇರಿಯೊ ನಿಂದ ಅವನ ತಾಯಿಯ ವಿಳಾಸ ದೊರಕಿಸಿಕೊ ಳ್ಳಬೇಕು, ಮೇರಿಯೊನನ್ನು ಕಾಲೇಜಿನಲ್ಲಿ ಓದಿ ಸಲು ಸಾಲುವಷ್ಟು ಹಣವನ್ನು ಅವಳಿಗೆ ಕಳಿಸಿ ಕೊಡಬೇಕು, ಮಗ ಅಭಿಮಾನದಿಂದ ಹಣ ಸ್ವೀಕರಿಸದಿದ್ದರೂ ತಾಯಿ ಸ್ವೀಕರಿಸಿಯಾಳು ಎಂದೆಲ್ಲ ಲೂಸಿ ಯೋಚಿಸಿದಳು.

"ಅದೇ ಏನು ಪಿರಾಮಿಡ್? ಇಜಿಪ್ತಿನ ಪಿರಾ-ಮಿಡ್ಡಿನ ಎದುರು ಇದು ಏನೂ ಅಲ್ಲ." ಎಲಿನ್ನಳ ನಿರಾಶೆಯ ಧ್ವನಿ ಲೂಸಿಯ ವಿಚಾರಮಾಲಿಕೆ ಯನ್ನು ಭಂಗಗೊಳಿಸಿತು.

ಆದರೆ ಆ ಸೂರ್ಯ ಮತ್ತು ಚಂದ್ರನ ಪಿರಾ-ಮಿಡ್ಡುಗಳನ್ನು ಕಂಡು ಲೂಸಿ ತುಂಬ ಆನಂದ ಪಟ್ಟಳು. ಟಾಕ್ಸೋದ ಚರ್ಚಿನಲ್ಲಿ ಅನುಭವಕ್ಕೆ ಬಂದಂಥ ದಿವ್ಯ ಆನಂದದ ಅನುಭವ ಅವಳಿಗಾ ಯಿತು.

ತುಂಬ ಸೆಕೆ, ವಯಸ್ಸೂ ಆಯಿತು, ತಾನು ಮೇಲೆ ಬರುವುದಿಲ್ಲವೆಂದು ಎಲಿನ್ ಹೇಳಿದಳು. ವೆರಾ ಕೂಡ ದನಿಗೂಡಿಸಿದಳು.

ಮೇರಿಯೊನ ಸಹಾಯದಿಂದ ಲೂಸಿ ಮೆಟ್ಟಲು ಗಳನ್ನೇರುತ್ತ ಪಿರಾಮಿಡ್ಡಿನ ಶಿಖರವನ್ನು ಮುಟ್ಟಿ ದಳು. ಅಲ್ಲಿ ಅವರಿಬ್ಬರೂ ಒಟ್ಟಿಗೆ ಸಮಸಮೀಪ ಕುಳಿತರು. ೫೦ ವರ್ಷ ದಾಟಿದ, ಪದವೀಧರ ಳಾದ ಈ ಸುಸಂಸ್ಕೃತ ಹೆಂಗಸು, ಮೆಕ್ಸಿಕೋದ ಒಳನಾಡಿನ ಹಳ್ಳಿಯಿಂದ ಬಂದಿದ್ದ ಹೆಚ್ಚುಕಡಿಮೆ ಅಜ್ಞಾನಿಯೆ ಎನ್ನಬಹುದಾದ ಹುಡುಗ–ಇಬ್ಬರೂ ಒಟ್ಟಿಗೆ ಪಿರಾಮಿಡ್ಡಿನ ಶಿಖರದ ತುದಿಯಿಂದ ಸುತ್ತಲಿನ ದೃಶ್ಯಗಳನ್ನು ನೋಡತೊಡಗಿದರು.

ಮೊದಲು ವರ್ಷಕ್ಕೊಮ್ಮೆ ನಡೆಯುತ್ತಿದ್ದ ಜಾತ್ರೆ, ಆಗ ಕೊಡುತ್ತಿದ್ದ ಬಲಿ ಇತ್ಯಾದಿಗಳ ಕಥೆಯನ್ನು ಮೇರಿಯೊ ಹೇಳುತ್ತಿದ್ದಾಗ ಲೂಸಿ ಅರ್ಧ ಕಣ್ಣು ಮುಚ್ಚಿಕೊಂಡು ಆ ದೃಶ್ಯಗಳನ್ನು ಮನದಲ್ಲಿ ಚಿತ್ರಿಸಿಕೊಳ್ಳತೊಡಗಿದಳು. ಪಿರಾಮಿ ಡ್ಡಿನ ಕೆಳಗಡೆ ಕಾಣುತ್ತಿದ್ದ ವಿಶಾಲ ಬಯಲಿ ನಲ್ಲಿ ನೆರೆದ ಜನಸಮ್ಮರ್ದ, ಪಿರಾಮಿಡ್ಡಿನ ಮೆಟ್ಟ ಲುಗಳ ಮೇಲೆ ತಮ್ಮ ತಮ್ಮ ಸ್ಥಾನದಲ್ಲಿ ನಿಂತಿದ್ದ ಅರ್ಚಕರು— ಬಲಿಗಾಗಿ ತಂದಿದ್ದ ಶುಭ್ರವಸ್ತ್ರ ಧಾರಿಯಾದ ಹುಡುಗ.

ಲೂಸಿಯ ಮನಶ್ಚಕ್ಷುವಿಗೆ ಕಾಣಿಸಿದ ಈ ಬಿಳಿ


LIFEBUOY
SOAP
LIFEBUOY SOAP

ಯಂಗಿ ಹುಡುಗ ಮೇರಿಯೊನೆ ಆಗಿದ್ದ. ಅವನ ಬಗ್ಗೆ ಹುಟ್ಟಿದ ಕರುಣೆ ಅನುಕಂಪಗಳ ಆಘಾತದ ಮೂಲಕವಾಗಿ, ಅವಳ ಕೈ—ಆ ಅಗ್ಗದ ಹರಳಿನ ಉಂಗುರ ಧರಿಸಿದ್ದ ಕೈ—ತನ್ನಷ್ಟಕ್ಕೆ ಮೇರಿಯೋನ ಕೈಯತ್ತ ಚಾಚಲು ಅವನ ಪುಷ್ಟ ಕೈ ಅದನ್ನು ಅದುಮಿ ಹಿಡಿಯಿತು.

ಮೇರಿಯೊನ ಬಾಹುಗಳು ತನ್ನ ದೇಹವನ್ನು ಬಳಸಿದ್ದು, ಅವನ ತಲೆ ತನ್ನ ಎದೆಯ ಮೇಲೆ ಒರಗಿದ್ದು ಲೂಸಿಗೆ ಅರಿವೇ ಆಗಲಿಲ್ಲ. ಬೆಲ್ಲದ ವಾಸನೆಯಂಥ ಅವನ ಮೈಯ-ವಾಸನೆ, ಅವನ ತಲೆಯ ಎಣ್ಣೆಯ ವಾಸನೆ ಅವಳ ಮೂಗಿಗೆ-ಬಡಿದಾಗ ಇಡೀ ಫಿಲಾಡೆಲ್ಫಿಯವೇ ಅವಳಿಗೆ ನೆನಪಾಯಿತು. ಅವಳು ಅವಸರದಿಂದ ಎಚ್ಚತ್ತು ವಾಸ್ತವಿಕ ಪ್ರಪಂಚಕ್ಕೆ ಬಂದಳು. ಕೆಳಗೆ ಅವಳ ಗೆಳತಿಯರು ಅವಳಿಗಾಗಿ ಕಾದಿದ್ದರು.

ಹೋಟೆಲ್ಲಿಗೆ ಮರಳುತ್ತಿದ್ದಾಗ ಅವಳು ಹಿಂದಿನ ಸೀಟಿನಲ್ಲಿ ಕುಳಿತಳು. ಮುಖ ಬಿಗಿದುಕೊಂಡಿದ್ದ ಮೇರಿಯೊನ ಜೊತೆಯಲ್ಲಿ ಎಲೆನ್ನಳು ಕುಳಿತು ಸಂಭಾಷಣೆಯ ವ್ಯರ್ಥ ಪ್ರಯತ್ನ ಮಾಡಿದಳು.

ಹೋಟೆಲ್ ಮುಟ್ಟಿದ ಮೇಲೆ "ನಾಳೆ ಆದಿತ್ಯವಾರ. ನೀನು ರಜೆ ತೆಗೆದುಕೊ" ಎಂದಳು ಲೂಸಿ.

ಮೇರಿಯೊ "ಛೆ ! ಛೆ" ಎಂದ. ಲೂಸಿ "ನಾಳೆ ಬೇಡ ಮೇರಿಯೊ" ಎಂದಾಗ ಅವನ ಮುಖ ನಿರಾಶನಾದ ಮಗುವಿನ ಮೋರೆಯಂತೆ ಕಂಡಿತು. ಆ ಮೇಲೆ ಅವನ ಚರ್ಯೆ ಬದಲಾಯಿತು. ಅವನ ಕಣ್ಣುಗಳು ಲೂಸಿಯ ಕಣ್ಣುಗಳನ್ನು ಆಹ್ವಾನಿಸಿದವು.

ಕೋಣೆಯೊಳಗೆ ಹೋಗುತ್ತಿದ್ದಾಗ ಲೂಸಿಯ ಎದೆ ಬಲವಾಗಿ ಬಡಿದುಕೊಳ್ಳುತ್ತಿತ್ತು. ಮೇರಿಯೋನ ಕಣ್ಣುಗಳಲ್ಲಿ ವ್ಯಕ್ತವಾಗುತ್ತಿದ್ದ ಇಂಗಿತಜ್ಞತೆಯು ಅವಳಲ್ಲಿ ಇದುವರೆಗೂ ಅವಳು ಯೋಚಿಸಲು ಕೂಡ ಹಿಂಜರಿಯುತ್ತಿದ್ದ ಭಾವನೆಯನ್ನು ಬಹಿರಂಗ ಮಾಡಿತು. ಅವಳಿಗೀ ಸಂದೇಹವೇ ಉಳಿಯಲಿಲ್ಲ.

ಅದು ಹೇಗೊ—ಅವಳಿಗೆ ತಿಳಿಯ ಯಾವುದೊ ಒಂದು ಕಾರಣಕ್ಕಾಗಿ, ಅವ ಮುಗ್ಧ ಮನಸ್ಸಿಗೆ ಅರ್ಥವಾಗದ ಒಂದು ಕಾ ಣಕ್ಕಾಗಿ ಮೇರಿಯೊ ಅವಳನ್ನು—ಅವ ದೇಹವನ್ನು ಬಯಸಿದ್ದ.

ಅಂದು ರಾತ್ರಿ ತನ್ನ ಜೀವನದಲ್ಲೊಮ್ಮೆಯ ಮಾಡದ ಕೆಲಸವೊಂದನ್ನು ಲೂಸಿ ಮಾಡಿದಳ ತನ್ನ ರಾತ್ರಿಯ ಉಡುಪಿನಲ್ಲಿ ಅವಳು ಕನ್ನಡಿಯ ಎದುರು ನಿಂತು ತನ್ನ ರೂಪವನ್ನು ಅಳೆದು ನೋಡಿದಳು. ಅವಳಿಗೇನೂ ಹೊಸತ ಕಾಣಿಸಲಿಲ್ಲ. ಅವಳ ಹೃದಯದಲ್ಲಿ ಉಂಟಾ ಗುತ್ತಿದ್ದ ಅದ್ಭುತ ಬದಲಾವಣೆಯ ಲಕ್ಷಣಗಳ ವುವೂ ಮೋರೆಯ ಮೇಲಿರಲಿಲ್ಲ. ಅವಳ ಮುಖ ಸುಂದರವಾಗಿರಲಿಲ್ಲ. ಅವಳು ತರುಣಿಯಾಗಿ ದ್ದಾಗಲೂ ಅದು ಸುಂದರವಾಗಿರಲಿಲ್ಲ. ಈಗ ಈ ಮಧ್ಯವಯಸ್ಸಿನಲ್ಲಿ ಅದು ಇನ್ನಷ್ಟು ಕಳೆಗೆಟ್ಟಿತ್ತು. ಅವಳ ಕೂದಲು ಬೆಳ್ಳಗಾಗಿತ್ತು, ಆದರೆ ಪೂರ್ಣ ವಲ್ಲ. ಅದು ಮೃದುವಾಗಿಯೂ ಸುಂದರವಾ ಗಿಯೂ ಇತ್ತು. ಅವಳ ಕಣ್ಣುಗಳು ಸುಂದ ವಾಗಿದ್ದರೂ ವಯಸ್ಸಿನ ಮೂಲಕ ಅವುಗಳ ಸುತ್ತ ಗೆರೆಗಳು ಬಿದ್ದಿದ್ದವು. ಅವಳ ಸ್ತನ ಳಿನ್ನೂ ಜೋಲು ಬಿದ್ದಿರದಿದ್ದರೂ ಅವಳೇನು ಸುಂದರಿಯರಲ್ಲಿ ಎಣಿಕೆಯಾಗುವವಳಾಗಿರಲಿಲ್ಲ ಅವಳ ಮುಖ ಮೈ ಯಾವುದರಲ್ಲಿಯೂ ಆಕ ರ್ಷಕ ಅಂಶವಿರಲಿಲ್ಲ. ಹಾಗಿದ್ದರೂ ಒಬ್ಬ ಸುಂದರ ಮೆಕ್ಸಿಕನ್ ತರುಣ ಅವಳ ದೇಹವನ್ನು ಬಯಸಿದ್ದ.

ಲೂಸಿಗೆ ಆ ಬಗ್ಗೆ ಖಾತ್ರಿಯಿತ್ತು.

ತರುಣರನೇಕರು ಹಣದಾಸೆಯಿಂದ ಶ್ರೀ-ಮಂತ ವೃದ್ಧೆಯರನ್ನು ಪ್ರೀತಿಸುವ ನಟನೆ ಮಾಡುತ್ತಾರೆಂದು ಲೂಸಿ ಬಲ್ಲಳು. ಆದ ಮೇರಿಯೊ ತನ್ನ ಕೆಲಸಕ್ಕೆ ಹೆಚ್ಚಿನ ಸಂಭಾವನ ಕೊಟ್ಟರೂ ಬೇಡವೆಂದಿದ್ದ. ಲೂಸಿ ಶ್ರೀಮಂತಳ

ಎಂಬುದೂ ಅವನಿಗೆ ಗೊತ್ತಿರಲಿಲ್ಲ. ಹಣದ ಉದ್ದೇಶವೇ ಇದ್ದರೆ ಯಾವಾಗಲೂ ಹಣದ ಪಾಕೀಟನ್ನು ಬಳಿ ಇಟ್ಟುಕೊಂಡು ಕೊಡತೆಗೆದುಕೊಳ್ಳುವುದನ್ನು ಮಾಡುತ್ತಿದ್ದ ಎಲೆನ್ನಳ ಮೇಲೆ ಅವನ ಕಣ್ಣು ಬೀಳಬೇಕಾಗಿತ್ತು. ತಾನು ಉಪಯೋಗಿಸುತ್ತಿರುವ ಹಣ ಲೂಸಿಯದು ಎಂಬ ಸಂಶಯ ಕೂಡ ಇತರರಿಗೆ ಬಾರದಷ್ಟು ದಕ್ಷತೆಯಿಂದ ಎಲೆನ್ ವ್ಯವಹಾರ ಮಾಡುತ್ತಿದ್ದಳು.

ಇಲ್ಲ. ಮೆಕ್ಸಿಕೋದಲ್ಲಿ ಲೂಸಿಗಿಂತ ಎಷ್ಟೋ ಶ್ರೀಮಂತರಾಗಿ ಕಾಣುವ ಅನೇಕ ಸ್ತ್ರೀಯರಿದ್ದರು. ಮೇರಿಯೊನಂಥವನ ಸಹವಾಸ ಪಡೆಯುವಲ್ಲಿ ಧನ್ಯತೆಯನ್ನು ಕಾಣಬಹುದಾದ ಅನೇಕ ಸುಂದರ ಹುಡುಗಿಯರಿದ್ದರು.

ಹಾಗಿದ್ದರೂ ಈ ತರ್ಕವಿರುದ್ಧವಾದ ಸತ್ಯವನ್ನು ಕಂಡು ಲೂಸಿ ಭಯಭೀತಳಾದಳು.

ಅವಳಲ್ಲಿದ್ದ ಯಾವುದೊ ಕೌಮಾರ್ಯ ಭಾವನೆಯೊಂದು ಅವಳಿಗೆ ಗಂಡಾಂತರದ ಎಚ್ಚರಿಕೆಯಿತ್ತಿತು.

ಲೂಸಿ ಚಂಚಲಚಿತ್ತಳಲ್ಲ. ಅವಳು ತಾನು ಈಗಲೇ ಏನಾದರೂ ಮಾಡಬೇಕೆಂದು ನಿರ್ಧರಿಸಿದಳು. ಹಾಸಿಗೆಯಲ್ಲಿ ಮಲಗಿಕೊಂಡು ಅವಳು ನಿರ್ಧಾರ ಮಾಡಿದಳು.

ಬಸ್‌ಸ್ಟಾಂಡಿನಲ್ಲಿ ಲೂಸಿ ಮತ್ತು ವೆರಾ ನಿಂತಿದ್ದರು. ಯಾವಾಗಲೂ ಥಂಡಿ ಥಂಡಿ ಎನ್ನುತ್ತಿದ್ದ ವೆರಾಳ ಮಾತಂತಿರಲಿ, ಲೂಸಿಗೂ ಆ ವಸಂತ ಋತುವಿನ ಬಿಸಿಲಿನಲ್ಲಿ ಥಂಡಿಯೆನಿಸತೊಡಗಿತ್ತು. ಅವಳ ಮೂಗು ಕಣ್ಣು ಕೆಂಪಗಾಗಿದ್ದವು. ಬಸ್ಸು ಇನ್ನೂ ಇಪ್ಪತ್ತು ನಿಮಿಷಗಳಲ್ಲಿ ಬಿಡಲಿತ್ತು. ಮೇರಿಯೊನಿಗೆ ಕೊನೆಯ ಮಾತನ್ನು ತಿಳಿಸಲು ಹಿಂದೆ ಉಳಿದಿದ್ದ ಎಲೆನ್ನಳ ಹಾದಿಯನ್ನವರು ಕಾಯುತ್ತಲಿದ್ದರು.

ಕೊನೆಗೆ ಬಂದಳು ಎಲೆನ್. ಅವಳ ಮೂಗೂ ಕೆಂಪಗಾಗಿತ್ತು.

"ನೀನು ಹಾಗೆ ಮಾಡಬಾರದಿತ್ತು ಲೂಸಿ. ಅದು ಕ್ರೂರತನವೇ ಸೈ." ಎಲೆನ್ನಳು ನೂರು ಪೆಸೊಗಳ ಎರಡು ನೋಟುಗಳನ್ನೂ ಲೂಸಿಯ ಕೈಗೆ ತುರುಕುತ್ತ "ನಾನು ಇದನ್ನು ಕೊಟ್ಟಾಗ ಮೇರಿಯೊ ನನ್ನನ್ನು ಹೊಡೆಯುತ್ತಾನೆ ಎಂದೇ ಭಾವಿಸಿದೆ. ನಿನ್ನ ಪತ್ರವನ್ನೋದಿದಾಗಂತೂ ಆತ ಮಗುವಿನಂತೆ ಅತ್ತುಬಿಟ್ಟ" ಎಂದಳು.

ಲೂಸಿ ಮಾತನಾಡಲಿಲ್ಲ. ಪಾಝ್ಕುರೋದವರೆಗಿನ ಬೇಸರಿಕೆಯ ದೀರ್ಘ ಪ್ರವಾಸಕಾಲದಲ್ಲಿ ಕೂಡ ಅವಳು ಮಾತನಾಡಿದ್ದು ತೀರ ಸ್ವಲ್ಪವೇ.

ಹೋಟೆಲ್ಲಿನಲ್ಲಿ ಮೂವರೂ ಕುಳಿತಿದ್ದರು. ಮರುದಿನದ ತಿರುಗಾಟದ ಹಂಚಿಕೆಯನ್ನು ಎಲೆನ್ ಹಾಕುತ್ತಿದ್ದಾಗ ಅವಳ ಮಾತಿನತ್ತ ಲೂಸಿಯ ಲಕ್ಷ್ಯವೇ ಇರಲಿಲ್ಲ. ತುಸು ಹೊತ್ತಿನ ಮೇಲೆ ಅವಳು "ಥಂಡಿಯಾಗುತ್ತಿದೆ. ಹೋಗಿ ಮಲಗಿಕೊಳ್ಳುತ್ತೇನೆ" ಎಂದು ಎದ್ದು ನಡೆದಳು.

ಲೂಸಿಯ ಕೋಣೆಯಿಂದಲೂ ಪಾಝ್ಕುರೊ ಕೆರೆಯ ನೋಟ ಕಾಣಿಸುತ್ತಿತ್ತು. ಅಲ್ಲಿ ಕವಿಯುತ್ತಿದ್ದ ಕತ್ತಲೆಯಲ್ಲಿ ಮೀನುಗಾರರು ಮೆಲ್ಲಗೆ ಮಾತಾಡುತ್ತ ತಮ್ಮ ಕೆಲಸ ಮಾಡುತ್ತಿದ್ದರು. ಲೂಸಿ ಅವರನ್ನೇ ನೋಡುತ್ತ ಕುಳಿತಳು. ಅವಳು ಮೇರಿಯೊನ ಬಗ್ಗೆ ಯೋಚಿಸುತ್ತಿದ್ದಳು. ಅವನ ವಿಚಾರದಿಂದ ಅವಳಿಗೆ ವ್ಯಥೆಯಾಗುತ್ತಿತ್ತು. ಮೆಕ್ಸಿಕೊ ನಗರದಿಂದ ಹೊರಟಾಗಿಂದಲೂ ಅವಳು ಅವನ ಬಗ್ಗೆ ವಿಚಾರ ಮಾಡುತ್ತಲೆ ಇದ್ದಳು. ಎಲೆನ್ನಳ ಮುಖಾಂತರ ಅವನನ್ನು ಬೀಳ್ಕೊಂಡದ್ದು ಅವಳಿಗೀಗ ಸರಿಯೆನಿಸುತ್ತಿರಲಿಲ್ಲ. ತುಸು ಅನ್ಯಾಯ ಮಾಡಿದೆ...

ಅವಳ ವಿಚಾರ ಮಾಲಿಕೆ ಒಮ್ಮೆನಿಂತಾಗ ಅಲ್ಲಿ ಕೆಳಗಡೆ ಆ ಮೀನುಗಾರರ ನಡುವೆ ಒಂದು ಶುಭ್ರವಸ್ತ್ರಧಾರಿ ವ್ಯಕ್ತಿ ಕಾಣಿಸಿತು. ಲೂಸಿ ದಿಟ್ಟಿಸಿ ನೋಡಿದಳು. ಅವಳ ಹೃದಯ ಜೋರಾಗಿ ಬಡಿಯಿತು. ಕಣ್ಣಗಲಿಸಿ ಆ ಕತ್ತಲೆಯಲ್ಲವಳು ನೋಡಿದಳು. ಹೌದು. ಆ ಚಲನವಲನದಲ್ಲಿ ಆ ಆಕೃತಿಯಲ್ಲಿ ಏನೊ ಒಂದು ಪರಿಚಿತವಾದ ಅಂಶವಿದೆ.

ಆದರೆ ಛೆ! ಆತ ಮೇರಿಯೊ ಆಗಿರಲಿಕ್ಕಿಲ್ಲ. ಆತ ನೂರಾರು ಮೈಲುಗಳಾಚೆ ಮೆಕ್ಸಿಕೊ ನಗರದಲ್ಲಿದ್ದ. ತಾನಿಲ್ಲಿಗೆ ಬರುವುದನ್ನು ಹೇಳಬಾರದೆಂದು ಲೂಸಿ ಎಲೆನ್ನಳಿಗೆ ಕಟ್ಟಪ್ಪಣೆ ಮಾಡಿದ್ದಳು.

ಆ ಶುಭ್ರವಸ್ತ್ರಧಾರಿ ವ್ಯಕ್ತಿ ಅವಳ ಕಿಡಿಕಿಯತ್ತಲೇ ಬರತೊಡಗಿತು. ಒಂದು ಮನೆಯ ತೆರೆದ ಬಾಗಿಲಿನಿಂದ ಪ್ರಕಾಶ ಜ್ಯೋತಿಯೊಂದು ಅದರ ಮೇಲೆ ಬಿದ್ದಿತು. ಈಗ ಸಂಶಯವುಳಿಯಲೇ ಇಲ್ಲ.

ಆ ವ್ಯಕ್ತಿ ಮತ್ತಾರೂ ಅಲ್ಲ-ಮೇರಿಯೋನೇ.

ಅವಳು ಬಾಲ್ಕನಿಯ ಮೇಲಿಂದ ಬಗ್ಗಿದಳು. ಅವಳ ಹೃದಯ ಹುಚ್ಚು ಹಕ್ಕಿಯ ರೆಕ್ಕೆಗಳಂತೆ ಬಡಿದುಕೊಳ್ಳುತ್ತಿತ್ತು. ಆತ ಅವಳಿಂದ ಕೆಳಗಡೆ— ಕೇವಲ ಹದಿನೈದು ಅಡಿ ಕೆಳಗಡೆ ನಿಂತಿದ್ದ.

"ಓ! ನಿಮ್ಮನ್ನು ಕಂಡೆ. ನಿಮ್ಮನ್ನು ಕಾಣುತ್ತೇನೆಂದು ನನಗೆ ನಂಬಿಕೆಯಿತ್ತು" ಆತ ಬಹು ನಿದಾನವಾಗಿ ಅವಳಿಗರ್ಥವಾಗುವ ಸ್ಪಾನಿಶ್ ಭಾಷೆಯಲ್ಲಿ ಹೇಳಿದ.

"ಆದರೆ ಮೇರಿಯೊ, ನೀನು ಹೇಗೆ..."

"ಬಸ್ ಕಂಪನಿ ನನಗೆ ಹೇಳಿತು."

ಅವನು ನಕ್ಕ. ಅವನ ಹಲ್ಲುಗಳು ಹೊಳೆದವು. "ಮಿಸ್ ಲೂಸಿ, ನೀವೇಕೆ ನನ್ನನ್ನು ಕಾಣದೆ ಹೊರಟುಬಂದಿರಿ?"

ಲೂಸಿ ಉತ್ತರವೀಯಲಿಲ್ಲ.

"ಆದರೆ ನಾನೀಗ ನಿಮ್ಮ ಕಾಳಜಿ ತೆಗೆದುಕೊಳ್ಳಲು ಬಂದಿದ್ದೇನೆ. ನಾಳೆ ನಾನು ಮತ್ತು ನೀವು ಇಬ್ಬರೇ ನಿಮ್ಮ ಉಳಿದಿಬ್ಬರು ಸ್ನೇಹಿತೆಯರು ಏಳುವ ಮೊದಲೇ ಸರೋವರಕ್ಕೆ ಹೋಗೋಣ. ಆಗ ಆಕಾಶದಲ್ಲಿ ಚಂದ್ರನಿರುತ್ತಾನೆ. ಆಮೇಲೆ ಸೂರ್ಯ ಉದಯಿಸುತ್ತಾನೆ."

"ಹುಂ."

"ಮುಂಜಾನೆ ಐದು ಗಂಟೆಗೆ ಬರುತ್ತೇನೆ. ದೋಣಿ ತಯಾರಿಟ್ಟಿರುತ್ತೇನೆ. ಹಕ್ಕಿಗಳು ಏಳುವ ಮೊದಲೆ ಇಲ್ಲಿ ಬಂದು ಕಾಯುತ್ತೇನೆ."

"ಹುಂ."

"ಗುಡ್‌ನೈಟ್."

ಲೂಸಿ ಕೋಣೆಯೊಳಗೆ ಹೋದಳು. ಅವಳ ಕೈಗಳು ನಡುಗುತ್ತಿದ್ದವು. ಬಟ್ಟೆ ಕಳಚಿ ಅವಳು ಹಾಸಿಗೆಯ ಮೇಲೆ ಅಡ್ಡಾದಳು.

ಅವಳ ಕಿಟಕಿಯ ಕೆಳಗಿಂದ ಸೀಟಿಯ ಧ್ವನಿ ಕೇಳಿಸಿ ಮೇರಿಯೊ ಬಂದಿದ್ದಾನೆಂದು ತಿಳಿದಾಗ ಕೂಡ ಅವಳ ಮೈ ನಡುಗುತ್ತಲೇ ಇತ್ತು.

ಅವಳು ಮೆಲ್ಲಗೆ ಎದ್ದು ಬಟ್ಟೆ ಹಾಕಿಕೊಂಡಳು. ಕೆಳಗಿಳಿದು ಬಂದಳು. ಎಲ್ಲರೂ ನಿದ್ದೆಯಲ್ಲಿದ್ದರು. ಅವಳು ಹೊರಬಿದ್ದುದನ್ನಾರೂ ನೋಡಲಿಲ್ಲ.

ಮೇರಿಯೊ ಅವಳ ಕೈಯನ್ನು ಅಮುಕಿ ಮುತ್ತಿಟ್ಟ. ಅವಳನ್ನು ಮೆಲ್ಲಗೆತ್ತಿ ದೋಣಿಯಲ್ಲಿ ಕೂಡ್ರಿಸಿದ. ಲೂಸಿ ಪ್ರತಿಭಟಿಸಲಿಲ್ಲ. ವಿಧಿಯು ತನ್ನನ್ನು ಈ ರೀತಿ ತಪ್ಪಿಸಲಾರದ ಘಟನೆಗೊಳಪಡಿಸುತ್ತಿದೆ ಎಂದವಳಿಗೆ ಅನಿಸಿತು.

ಮೇರಿಯೊ ನಿಜ ಹೇಳಿದ್ದ. ಹುಣ್ಣಿಮೆಯ ಚಂದ್ರ ಆಕಾಶದಲ್ಲಿ ಹೊಳೆಯುತ್ತಿದ್ದ. ಲೂಸಿ ದೋಣಿಯಲ್ಲಿ ತನ್ನ ಕೋಟಿನ ಮೇಲೆ ಮಲಗಿದ್ದಳು. ಥಂಡಿಯಿದ್ದರೂ ಅವಳಿಗೆ ಅದರ ಅರಿವಿರಲಿಲ್ಲ. ಎದ್ದು ನಿಂತು ಕುಶಲತೆಯಿಂದ ದೋಣಿ ನಡೆಸುತ್ತಿದ್ದ ಮೇರಿಯೊನನ್ನು ಅವಳು ನೋಡುತ್ತಲಿದ್ದಳು. ಆತ ಹಾಡುತ್ತಲಿದ್ದ.

ಅವನ ಧ್ವನಿ ಅಷ್ಟು ಮಧುರವಾಗಿದೆ ಎಂದು ಲೂಸಿಗೆ ಅದುವರೆಗೂ ತಿಳಿದಿರಲಿಲ್ಲ. ಹಾಡು ಪ್ರಿಯವಾಗಿತ್ತು. ಮೇರಿಯೊನ ದೃಷ್ಟಿ ಅವಳ ಮೇಲೆ ಪ್ರೀತಿಯಿಂದ ಹರಿಯುತ್ತ ಅವಳ ಕೈಗಳ ಮೇಲೆ ಬಂದು ನೆಲೆಸಿತು. ಆ ಅಗ್ಗದ ಹರಳು ಚಂದ್ರಪ್ರಕಾಶದಲ್ಲಿ ಥಳಥಳಿಸುತ್ತಿತ್ತು.

ಲೂಸಿಗೆ ಸಮಯ ಅಥವಾ ಸ್ಥಾನದ ಪ್ರಜ್ಞೆ ಇರಲಿಲ್ಲ. ಅವಳಿಗೆ ಅಸ್ತವಾಗುತ್ತಿದ್ದ ಚಂದ್ರ-ನಕ್ಷತ್ರಗಳ ಭಾನವಿರಲಿಲ್ಲ. ಅವಳೊಂದು ಅನಿರ್ವಚನೀಯವಾದ ಆಳವಾದ ಸಮಾಧಾನದಲ್ಲಿ

ದ್ದೆಳು. ಮೇರಿಯೊನ ಧ್ವನಿ ಕೇಳಿ ಅವಳು ಬೆಚ್ಚಿದಳು.

"ಕೇಳಿ, ಹಕ್ಕಿಗಳ ಹಾಡು."

ಕೆರೆಯಲ್ಲಿ ತನ್ನ ಸುತ್ತಲೂ ಇದ್ದ ಚಿಕ್ಕ ನಡುಗಡ್ಡೆಗಳಿಂದ ಆ ಹಕ್ಕಿಗಳ ಹಾಡು ಬರುವುದನ್ನು ಲೂಸಿ ಕೇಳಿದಳು. ಮೇರಿಯೊ ಹುಟ್ಟು ಹಾಕುವುದನ್ನು ನಿಲ್ಲಿಸಿ ಒಂದು ಪುಡಿಕೆ ಬಿಚ್ಚಿದ. ಅದರಲ್ಲಿ ತಿಂಡಿಯಿತ್ತು. ಮೆಕ್ಸಿಕೊ ಮದ್ಯದ ಬಾಟಲಿಯೊಂದನ್ನೂ ಆತ ತಂದಿದ್ದ.

ತನ್ನ ದೊಡ್ಡ ಮಡಚುವ ಚಾಕುವಿನ ನಾಲಿಗೆಯ ಮೇಲೆ ಬೆಣ್ಣೆಯನ್ನಿಟ್ಟು ಮೇರಿಯೊ ಕೈ ಮುಂದೆ ಮಾಡಿದ. ಲೂಸಿಗೆ ಎಂದಿಲ್ಲದ ಹಸಿವಾದಂತೆನಿಸಿ ಅವಳು ಬಕಬಕ ತಿಂದು ಮದ್ಯವನ್ನು ಕುಡಿದಳು. ಅದರ ಅಮಲಿನಿಂದ ಅವಳಿಗೆ ತಾರುಣ್ಯದ ಹುರುಪು ಮೂಡಿದಂತಾಯಿತು. ಮೇರಿಯೊನ ಮಾತುಗಳನ್ನು ಕೇಳಿ ಅವಳು ನಗುತ್ತಿದ್ದಳು. ಆತ ತನ್ನ ನೋಟದಿಂದ ಅವಳ ಮೈದಡವುತ್ತಲೇ ಇದ್ದ.

ತಿಂಡಿ-ತೀರ್ಥ ಮುಗಿದ ಮೇಲೆ ಮೇರಿಯೊ ಮತ್ತೆ ದೋಣಿಯನ್ನು ಇನ್ನಿಷ್ಟು ಕೆರೆಯ ಮಧ್ಯಕ್ಕೆ ನಡೆಸಿದ.

ಆ ನಡುಗಡ್ಡೆ ಕಣ್ಣಿಗೆ ಬಿದ್ದಾಗ ಮೇರಿಯೊ ಆರಿಸಿದ ಸ್ಥಳ ಇದೇ ಎಂದು ಲೂಸಿಗೆ ಅನಿಸಿತು. ಉಳಿದವುಗಳಿಗಿಂತ ಅದು ಹೆಚ್ಚು ಏಕಾಂತವಾಗಿರುವಂತೆ ಕಂಡಿತು. ಮೇರಿಯೊ ಹುಲ್ಲುಹಾವಸೆಗಳ ನಡುವೆ ಜಾಗ್ರತೆಯಿಂದ ದೋಣಿಯನ್ನು ನಡೆಸಿದ. ನಡುಗಡ್ಡೆಯ ದಂಡೆ ಬರಲು ಅವನು ಅವಳ ಕೈಹಿಡಿದೆಬ್ಬಿಸಿ "ಬಾ" ಎಂದ.

ಅವಳು ಮಗುವಿನಂತೆ ಅವನನ್ನು ಹಿಂಬಾಲಿಸಿದಳು. ಒಣ ನೆಲದಲ್ಲಿ ಅವನು ಅವಳ ಕೋಟು ಹಾಸಿದ. ಅವಳು ಮಲಗುತ್ತಿದ್ದಾಗ ಆತ ಅವಳ ತಲೆಯನ್ನು ತನ್ನ ತೊಡೆಯಮೇಲಿರಿಸಿಕೊಂಡು ಕುಳಿತ. ಅವನ ಬಿಸಿಯುಸಿರು ಅವಳ ಮುಖಕ್ಕೆ ಬಡಿಯತೊಡಗಿತು.

ಸಾಂಟಾ ಪ್ರಿಸ್ಕಾ ಚರ್ಚಿನಲ್ಲಿ ಜರುಗಿದ ಮೊದಲ ಭೆಟ್ಟಿಯ ಕ್ಷಣದಿಂದ ಈ ಮುಹೂರ್ತದತ್ತವೇ ಸಕಲ ಘಟನೆಗಳು ತಮ್ಮನ್ನು ನಡೆಸುತ್ತಿದ್ದವು ಎಂಬ ಅರಿವಿನಿಂದ ಲೂಸಿ ಕಣ್ಮುಚ್ಚಿದಳು. ಮೇರಿಯೋನ ಕೈ ಅವಳ ಕೂದಲು, ಮುಖಗಳನ್ನು ಮೃದುವಾಗಿ ನೇವರಿಸುತ್ತಿದ್ದವು. ಆತ ಅವಳ ಕೈಯನ್ನು ಹಿಡಿದುಕೊಂಡು ಹರಳಿನ ಉಂಗುರವನ್ನು ಮುಟ್ಟಿ ನೋಡಿದ್ದು ಅವಳಿಗೆ ತಿಳಿಯಿತು.

ಆತ ಉಂಗುರವನ್ನು ಮುಟ್ಟಿದ ಕ್ಷಣದಲ್ಲಿಯೆ ಅವಳಿಗೆ ಸತ್ಯ ಗೊತ್ತಾಯಿತು. ಅವನ ಬೆರಳುಗಳ ಅದಮ್ಯವಾದ ಆಕಾಂಕ್ಷೆಯ ಸ್ಪರ್ಶವನ್ನು ಅವಳು ಅರಿತಳು. ಇದೆಲ್ಲ ಸೃಷ್ಟಿವಿರುದ್ಧವೆನ್ನಬಹುದಾದಂಥ ಪ್ರಸಂಗ ಜರುಗುತ್ತಿದೆಯಲ್ಲ ಎಂದು ಸಂದೇಹಗೊಂಡಿದ್ದಳು ಅವಳು.

ಅವನ ಕೈಗಳು ಮೇಲಕ್ಕೆ ಬಂದವು. ಇನ್ನೂ ಕೋಮಲವಾಗಿದ್ದ ಅವನ ಬೆರಳುಗಳು ಅವಳ ಗಂಟಲನ್ನು ಮುಟ್ಟಿದವು. ಅವಳು ಕೂಗಲಿಲ್ಲ. ಅವಳಿಗೆ ಅಂಜಿಕೆಯೂ ಅನಿಸಲಿಲ್ಲ.

ಅವನ ಬೆರಳುಗಳ ಹಿಡಿತ ಬಿಗುವಾಗುತ್ತಿದ್ದಂತೆ ಅವನ ಮುಖ ಅವಳ ಮುಖದ ಮೇಲೆ ಬಾಗಿತು. ಅವರ ತುಟಿಗಳು ಅವನ ಮೊದಲನೆಯ ಮತ್ತು ಒಂದೇ ಒಂದಾದ ಮುತ್ತಿನಲ್ಲಿ ಕೂಡಿದವು.

ರಕ್ತಮಯವಾದ ಚಾಕುವನ್ನು ಮೇರಿಯೊ ದೂರ ಬೀಸಾಡಿದ. ಅವನಿಗೆ ರಕ್ತವನ್ನು ಕಂಡರಾಗುತ್ತಿರಲಿಲ್ಲ. ಉಂಗುರವನ್ನು ಪಡೆಯುವುದಕ್ಕಾಗಿ ಬೆರಳನ್ನು ಕತ್ತರಿಸಬೇಕಾಗಿ ಬಂದದ್ದು ಅವನಲ್ಲಿ ಜುಗುಪ್ಸೆಯನ್ನುಂಟುಮಾಡಿತ್ತು.

ಲೂಸಿಯ ಇನ್ನೊಂದು ಬೆರಳಲ್ಲಿದ್ದ ಅವಳ ತಾಯಿಯ ವಾಙ್ನಿಶ್ಚಯದ ಉಂಗುರವನ್ನಾತ ಕಣ್ಣೆತ್ತಿ ಕೂಡ ನೋಡಲಿಲ್ಲ. ಪ್ಚು! ಅಗ್ಗದ ಉಂಗುರ ಅದು. ಈಗ ಕೆಲ ವಾರಗಳಿಂದ ಅವನನ್ನು ಆಕರ್ಷಿಸಿದ್ದು ಈ ಬಿಳಿ ಹರಳಿನ ಉಂಗುರವೇ ಆಗಿತ್ತು.

ಆತ ಕೋಟನ್ನು ಲೂಸಿಯ ಮೈಮೇಲೆ ಸರಿ

ಯಾಗಿ ಹೊದಿಸಿದ. ಹೆಣವನ್ನು ಕೆರೆಯ ಹುಲ್ಲಿನಲ್ಲಿ ಅಡಗಿಸಬೇಕೆಂಬ ವಿಚಾರವೇನೋ ಅವನಿಗೆ ಬಂತು. ಆದರೆ ಅದು ಅಲ್ಲಿಂದ ತೇಲಿ ಹೋಗಿ ಮೀನುಗಾರರ ಕಣ್ಣಿಗೆ ಬಿದ್ದರೆ...ಇಲ್ಲಿ ಈ ನಡುಗಡ್ಡೆಯ ಮೇಲೆ ಯಾರಾದರೂ ಬಂದು ಅವರ ಕಣ್ಣಿಗೆ ಬೀಳುವಷ್ಟರಲ್ಲಿ ಎಷ್ಟೋ ಸಮಯ ಕಳೆಯಬಹುದು. ಮೇಲೆ ಆಕಾಶದಲ್ಲಿ ಸದಾ ಹಾರಾಡುತ್ತಿದ್ದ ಹದ್ದುಗಳನ್ನು ಅವನು ಕಣ್ಣೆತ್ತಿ ನೋಡಿದ.

ಮರಳಿ ನೋಡದೆ ಮೇರಿಯೊ ದೋಣಿಯಲ್ಲಿ ಕುಳಿತು ಹೊರಟ. ದಂಡೆಗೆ ಬಂದ ಮೇಲೆ ದೋಣಿಯನ್ನು ಮುಗಚಿ ನೀರಿನೊಳಗೆ ದೂಡಿ ಬಿಟ್ಟ.

ಅಮೇರಿಕದ ಹೆಂಗಸೊಬ್ಬಳು ಅನುಭವಹೀನನಾದವನೊಬ್ಬನೊಡನೆ ಜಲವಿಹಾರಕ್ಕೆ ಹೋಗಿದ್ದಳು; ಇಬ್ಬರೂ ಮುಳುಗಿ ಸತ್ತರು; ಇಷ್ಟು ದೊಡ್ಡ ಕೆರೆಯನ್ನು ಹೆಣಗಳ ಶೋಧಕ್ಕಾಗಿ ಅಧಿಕಾರಿಗಳೆಂದೂ ಶೋಧಿಸುವುದಿಲ್ಲ.

ಮೇರಿಯೊ ರೇಲ್ವೆ ಹಳಿಗಳತ್ತ ಹೆಜ್ಜೆಹಾಕಿದ. ಆತ ಯಾವುದಾದರೂ ರೇಲ್ವೆ ಗಾಡಿಯನ್ನೇರುವ. ನಾಳೆ ಮುಂಜಾನೆ ಆತ ತನ್ನ ಹಳ್ಳಿಯಲ್ಲಿರಲೂ ಬಹುದು.

ತನ್ನ ತಾಯಿ ಈ ಉಂಗುರವನ್ನು ಕಂಡು ಖಂಡಿತವಾಗಿಯೂ ಆನಂದಿತಳಾಗುವಳು ಎಂದು ಅವನಿಗೆ ನಂಬಿಗೆಯಿತ್ತು.

*



ಕಾವ್ಯದ ಬೆಲೆ

ಲೋಕಪ್ರಿಯತೆಯ ಶಿಖರದ ಮೇಲಿದ್ದ ಕನ್ನಡ ಕವಿ ಕುವೆಂಪು ಅವರನ್ನು ಕಾಣಲು ಅವರ ಭಕ್ತನೊಬ್ಬ ಅವರಲ್ಲಿಗೆ ಹೋಗಿದ್ದ. ಮಾತುಕತೆ ಆದಾಗಲೇ ಪ್ರಕಟವಾಗಿದ್ದ ಅವರ 'ರಾಮಾಯಣ ದರ್ಶನಂ' ದ ಕುರಿತು ನಡೆದಿತ್ತು. ಆ ಬೃಹತ್ಕೃತಿಯನ್ನು ಮನಸಾರೆ ಹೊಗಳಿದ ನಂತರ ಆ ಭಕ್ತನು ಏನೋ ನೆನಪಾದಂತೆ ತಡೆದು ಸ್ವಲ್ಪ ಆಕ್ಷೇಪದ ಧ್ವನಿಯಲ್ಲಿ "ಅದೆಲ್ಲ ಸರಿ ಪುಟ್ಟಪ್ಪನವರೇ, ಆದರೆ ತಮ್ಮ ಆ ಪುಸ್ತಕದ ಬೆಲೆ ಮಾತ್ರ ಬಹಳೇ ಹೆಚ್ಚು—ಸಾಮಾನ್ಯನಿಗೆ ನಿಲುಕದಷ್ಟು—ಆಯಿತು" ಎಂದನು. ವಿನಯಶಾಲಿ ಪುಟ್ಟಪ್ಪ ಮರುಮಾತನಾಡದೆ ಮುಗುಳು ನಕ್ಕುಬಿಟ್ಟರು.

ಮಾತು ಸಾಗಿದಂತೆ ಪುಟ್ಟಪ್ಪನವರ ದೃಷ್ಟಿ ಆ ಭಕ್ತನ ಕಾಲೆಡೆ ಹೋಯಿತು. ಆವನು ಹೊಚ್ಚಹೊಸದಾದ ಬೂಟನ್ನು ಹಾಕಿಕೊಂಡು ಬಂದಿದ್ದ. ಪುಟ್ಟಪ್ಪ ಸ್ವಲ್ಪ ತಡೆದು, "ಅಲ್ಲರೀ, ನಿಮ್ಮ ಬೂಟ್ಸು ಬಹಳ ಸೊಗಸಾಗಿವೆಯಲ್ಲ! ಎಷ್ಟಕ್ಕೆ ಕೊಂಡಿರಿ?"

"ಬೂಟ್ಸೇ, ಇದೀಗ ಹದಿನಾರು ರೂಪಾಯಿ ಕೊಟ್ಟು ತೆಗೆದುಕೊಂಡೆ."

ಆಗ ಪುಟ್ಟಪ್ಪನವರು ಬಿಟ್ಟರು ನುಡಿಬಾಣ: "ಓಹೋ, ಹಾಗಾದರೆ ನನ್ನ ಪುಸ್ತಕದ ಬೆಲೆಗಿಂತ ಹೆಚ್ಚೇ ಆಯಿತಲ್ಲ! ಈ ಬೂಟ್ಸು ಹೆಚ್ಚೆಂದರೆ ೧-೧॥ ವರ್ಷ ತಾಳಿದರೆ ಆ ಪುಸ್ತಕ ನೀವಿರುವಷ್ಟು ಕಾಲ ನಿಮ್ಮದಾಗಿ ನಿಮಗೆ ಆನಂದಕೊಡುವುದಲ್ಲ!"

— ಗೋಪಾಲ ಕಡ್ಲೆ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಊರ್ಜಿತ
(ಅ) ತೊಡೆಮುರಿದ (ಆ) ಊರನ್ನು ಗೆದ್ದ (ಇ) ಹಟಮಾರಿ (ಈ) ಸತ್ವವುಳ್ಳ

೨. ಉಪಪ್ಲವ
(ಅ) ತೇಲುವಿಕೆ (ಆ) ವಿಪತ್ತು (ಇ) ಸಹಾಯ (ಈ) ತಣಿವು

೩. ಕ್ಲಿನ್ನ
(ಅ) ದುಃಖಗೊಂಡ (ಆ) ಮುರಿದ (ಇ) ತೊಯ್ದ (ಈ) ಸುಟ್ಟ

೪. ಉನ್ಮುಖ
(ಅ) ಎದುರು ನೋಡುವ (ಆ) ಸೊಟ್ಟ ಮೋರೆಯುವ (ಇ) ಬಿಡುಗಡೆಹೊಂದಿದ (ಈ) ವಿರಕ್ತ

೫. ಪರಿದೇವನ
(ಅ) ದಯೆ (ಆ) ಹಲುಬುವಿಕೆ (ಇ) ತೊಳೆಯುವುದು (ಈ) ಅಂಗಿ

೬. ಪರ್ಯಾಯ
(ಅ) ಗೆಲವು (ಆ) ಅಸಂಬದ್ಧ (ಇ) ಸರದಿ (ಈ) ನಿವಾರಣೆ

೭. ನಿದಿಧ್ಯಾಸ
(ಅ) ಗಂಟು ಅಗೆಯುವುದು (ಆ) ಆಳವಾದ ಆಲೋಚನೆ (ಇ) ನಿಷ್ಪ್ರಯೋಜನ (ಈ) ಸದ್ದು ಮಾಡುವುದು

೮. ಪ್ರಾಕ್ತನ
(ಅ) ಮುಂದಿನ (ಆ) ಮುನ್ನಡೆ (ಇ) ಹಿಂದಿನ (ಈ) ಹೀರುಪಿಕೆ

೯. ಅಮೂರ್ತ
(ಅ) ಆಕಾರವಿಲ್ಲದ (ಆ) ತಲೆಯಿಲ್ಲದ (ಇ) ಅಮೃತ (ಈ) ಕಠಿನ

೧೦. ತಿಟ್ಟೆ
(ಅ) ಹಳ್ಳ (ಆ) ತುರಿಕೆ (ಇ) ಧೈರ್ಯವುಳ್ಳಾಕೆ (ಈ) ದಿನ್ನೆ

೧೧. ಡೊಗರು
(ಅ) ಮೊಣಕಾಲು (ಆ) ಬಡಿದಾಟ (ಇ) ಬಾಣ (ಈ) ಪೊಳ್ಳು

೧೨. ಮೇಳ
(ಅ) ಜೊತೆ (ಆ) ದಿಡ್ಡಿ (ಇ) ಮೋಡ (ಈ) ಬುದ್ಧಿ

I 6–12

‘ಶಬ್ದಭಾಂಡಾರ’ದ ಸರಿಯಾದ ಅರ್ಥಗಳು

೧. **ಊರ್ಜಿತ** (ಈ) ಸತ್ವವುಳ್ಳ, ಶಕ್ತಿಶಾಲಿ, ಬಲಿಷ್ಠ; ಶ್ರೇಷ್ಠ; ಉದಾತ್ತ; ಯಶಸ್ವಿ; ರದ್ದಾಗದ (ಕಾಗದ ಪತ್ರ ಇತ್ಯಾದಿ). ಉದಾ— ಅವನ ಗ್ರಹಗತಿ ಊರ್ಜಿತಕ್ಕೆ ಬಂದಿದೆ: ನಾನು ಕೊಟ್ಟ ಮಾತು ಇನ್ನೂ ಊರ್ಜಿತದಲ್ಲಿದೆ (ರದ್ದಾಗಿಲ್ಲ) [ಸಂ. ಊರ್ಜಾ = ಸತ್ವ, ಬೆಳವಣಿಗೆ— ಯಿಂದ].

೨. **ಉಪಪ್ಲವ** (ಅ) ವಿಪತ್ತು, ಕಷ್ಟ, ದುಃಖ; ತ್ರಾಸ; ಪೀಡನೆ; ಅರಾಜಕತೆ. [ಸಂ. ಉಪಪ್ಲು = ಪೀಡಿಸು ಎಂಬುದರಿಂದ].

೩. **ಕ್ಲಿನ್ನ** (ಇ) ತೊಯ್ದ, ಒದ್ದೆಯಾದ ಉದಾ— ಕ್ಲಿನ್ನ ದೃಷ್ಟಿಯಿಂದ ಅವಳು ನೋಡುತ್ತಿದ್ದಳು, ಅಂದರೆ ಅವಳ ಕಣ್ಣು ತೇವಗೊಂಡಿತ್ತು. [ಸಂ. ಕ್ಲಿದ್ = ಒದ್ದೆಯಾಗು— ಎಂಬುದರಿಂದ].

೪. **ಉನ್ಮುಖ** (ಅ) ಎದುರು ನೋಡುವ, ಮುಖವೆತ್ತಿದ; ಅಣಿಯಾದ, ಸಿದ್ಧವಾದ, (ಉದಾ.— ಅವನ ಗ್ರಹಗತಿ ಉದಯೋನ್ಮುಖವಾಗಿದೆ); ಆತುರ, ನಿರೀಕ್ಷಿಸುವ [ಸಂ. ಉತ್ = ಮೇಲೆ, ಮುಖ= ಮೋರೆ].

೫. **ಪರಿದೇವನ** (ಅ) ಹಲುಬುವಿಕೆ, ದುಃಖಿಸುವಿಕೆ, ಮರುಗುವಿಕೆ, ದೂರುವಿಕೆ; ಪಶ್ಚಾತ್ತಾಪ. ಉದಾ— ಕರ್ತವ್ಯ ಮಾಡಿದ ಮೇಲೆ ಸೋಲು ಬಂದರೆ ಪರಿದೇವನೆಯೇಕೆ? [ಸಂ. ಪರಿದಿವ್ = ಹಲುಬು].

೬. **ಪರ್ಯಾಯ** (ಇ) ಸರದಿ, ಕ್ರಮದಿಂದ ಪುನಃ ಪುನಃ ಜರಗುವುದು (ಉದಾ— ಇದು ನನ್ನ ಪರ್ಯಾಯ ಎಂದರೆ ನನ್ನ ಸರದಿ); ಇನ್ನೊಂದು ರೀತಿ (ಉದಾ— ಪರ್ಯಾಯವಾಗಿ ಹೇಳುವುದಾದರೆ ಅಂದರೆ ಇನ್ನೊಂದು ವಿಧವಾಗಿ ಹೇಳುವುದಾದರೆ); ಸುತ್ತು ಹಾಕುವಿಕೆ. [ಸಂ]

೭. **ನಿದಿಧ್ಯಾಸ** (ಅ) ಆಳವಾದ ಆಲೋಚನೆ, ಗಾಢ ವಿಚಾರ; ಒಂದೇ ವಿಷಯದ ಮೇಲೆ ಮನಸು ನೆಡುವುದು [ಸಂ. ನಿದಿಧ್ಯೈ = ಆಳವಾಗಿ ಯೋಚಿಸು]

೮. **ಪ್ರಾಕ್ತನ** (ಇ) ಹಿಂದಿನ, ಪುರಾತನ ಕಾಲದ, ಗತಕಾಲದ, ಹಳೆಯ, ಆದಿ ಕಾಲದ. ಪ್ರಾಕ್ತನ ವಿದ್ಯೆ ಅಂದರೆ ಹಿಂದಿನ ಕಾಲದ ಇತಿಹಾಸ ಸಂಸ್ಕೃತಿ ಮೊದಲಾದವುಗಳ ಶಾಸ್ತ್ರ [ಸಂ ಪ್ರಾಕ್= ಹಿಂದಿನ].

೯. **ಅಮೂರ್ತ** (ಅ) ಆಕಾರವಿಲ್ಲದ, ರೂಪರಹಿತ, ಶರೀರ ಅಥವಾ ಗಾತ್ರವಿಲ್ಲದ. ಉದಾ— ನನ್ನ ಕವಿತೆ ಅಮೂರ್ತವಾಗಿ ಉಳಿಯಿತು. ಅಂದರೆ ಅದು ರೂಪ ಧರಿಸಲಿಲ್ಲ. [ಸಂ.]

೧೦. **ತಿಟ್ಟೆ** (ಈ) ದಿಣ್ಣೆ, ದಿಬ್ಬ, ಚಿಕ್ಕಗುಡ್ಡ, ಎತ್ತರವಾದ ನೆಲ [ಕನ್ನಡ].


೧೧. **ಡೊಗರು** (ಈ) ಪೊಳ್ಳು, ಗೋಡೆ, ನೆಲ ಅಥವಾ ಮರದಲ್ಲಿರುವ ಹೊದರು. ಉದಾ: ಗೋಡೆಯಲ್ಲೊಂದು ಡೊಗರು ಬಿತ್ತು. [ಕನ್ನಡ]

೧೨. **ಮೇಳ** (ಅ) ಜೊತೆ, ಕೂಟ; ಮೋಜು; (ಸಂಗೀತದಲ್ಲಿ) ಶ್ರುತಿಗೂಡಿಸಿದ ವಾದ್ಯ; ನಾಟಕ ಅಥವಾ ಸಂಗೀತಗಾರರ ಕೂಟ. [ಸಂ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ ,,	....	ಉತ್ತಮ
೧೧—೧೨ ,,		ಅತ್ಯುತ್ತಮ


ಹಮಾಮ್ ನಲ್ಲಿ
ಏನೋ ಒಂದು ವಿಶೇಷತೆಯಿದೆ
ಅದು ನನ್ನಲ್ಲಿ
ಉಲ್ಲಾಸವು
ತುಂಬಿರುವಂತೆ
ಮಾಡುತ್ತದೆ
HAMAM
ವನಸ್ಪತಿ ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣದಿಂದ ಹಮಾಮ್ ಗಟ್ಟಿಯಾಗಿರುವುದು ಮಾತ್ರವಲ್ಲದೆ ಕೊನೆಯವರೆಗೆ ಸುಗಂಧಮಯವಾಗಿರುತ್ತದೆ. ನೆನಪಿಡಿರಿ, ಪ್ರತಿಯೊಂದು ಹಮಾಮ್ ಸಾಬೂನು ಹೆಚ್ಚು ಸಮಯ ಬರುತ್ತದೆ!
ಟಾಟಾ ತಯಾರಿಕೆ
ನನ್ನ ಮನೆಯವರಿಗೆಲ್ಲ ಹಮಾಮ್ ಎಂದರೆ ಬಹಳ ಪ್ರೀತಿ. ಅದರಲ್ಲಿ ಅಡಗಿರುವ ಒಂದು * ಗುಣದಿಂದ ನನಗೆ ಉಳಿತಾಯವಾಗುತ್ತದೆ!
ನೊರೆ...ಹೇರಳ ನೊರೆ ಎಂದರೆ ನನಗೆ ಬಹಳ ಆನಂದ. ಹಮಾಮ್ ಅಧಿಕ ನೊರೆ ಯನ್ನೀಯುತ್ತದೆ.
ಹಮಾಮ್ ನನ್ನ ಚರ್ಮಕ್ಕೆ ಅತ್ಯಂತ ಸೌಮ್ಯವಾಗಿರುತ್ತದೆ. ಅದರ ಪರಿಮಳ ಎಷ್ಟು ಮನೋಹರ!
THY-20-KAN



ಧ್ಯೇಯಕ್ಕಿಂತ ಮಾರ್ಗ ಮುಖ್ಯ ಎಂದು ಹೇಳುತ್ತಾರಿವರು

ಕನ್ನಡದ ಕೀರ್ತಿ ತಾರೆ ಪಂಢರಿಬಾಯಿ

ಜಿ. ಜಿ. ಹೆಗಡೆ

ಚತುರ್ಭಾಷಾ ತಾರೆ! ದಕ್ಷಿಣ ಭಾರತದ ಪ್ರಸಿದ್ಧ ನಟಿ!! ಎಂಥ ಥಳಕೊ, ಎಂಥ ಬೆಡಗೊ, ಎಂಥ ಒಯ್ಯಾರವೊ ಎಂದು ಮನದಲ್ಲಿ ಗುಣಾಕಾರ ಹಾಕಿಕೊಂಡು ಸಂಭ್ರಾಂತ ಚಿತ್ತದಿಂದ ಶ್ರೀಮತಿ ಪಂಢರಿಬಾಯಿಯನ್ನು ಕಾಣಹೋದವರಿಗೆ ಪ್ರತ್ಯಕ್ಷ ದರ್ಶನದಲ್ಲಿ ಕಾಣಿಸುವುದು ಒಂದು ಸಾತ್ವಿಕ ಸೌಂದರ್ಯದ ಮೂರ್ತಿ. ಸಾವಿರಸಾವಿರ ವೋಲ್ಟಿನ ಝಗ್ಗೆಂದು ಕಣ್ಣು ಕೋರೈಸುವ ವಿದ್ಯುತ್ ಬೆಳಕನ್ನು ನಿರೀಕ್ಷಿಸಿದವರಿಗೆ ಅನುಭವವಾಗುವುದು ಹುಣ್ಣಿಮೆಯ ಚಂದ್ರನ ಶೀತಲ ಪ್ರಭೆ. ಪಂಢರಿಬಾಯಿಯವರಲ್ಲಿ ಸಾಮಾನ್ಯವಾಗಿ ಸಿನೆಮಾ ತಾರೆಯರಲ್ಲಿ ಕಂಡುಬರುವ, ಯಾವುದನ್ನು ಜನ ಗ್ಲಾಮರ್ (Glamour) ಎಂದು ಕಣ್ಣು ಕಣ್ಣು ಬಿಡುತ್ತಾರೊ ಆ ಥಳಕಿನ ಲಕ್ಷಣ ಕಿಂಚಿತ್ತಾದರೂ ಕಾಣಿಸುವುದಿಲ್ಲ. ತಾರಾ ಪ್ರಪಂಚದಲ್ಲಿ ತನ್ನದೇ ಆದ ಕೆಲ ವೈಶಿಷ್ಟ್ಯಗಳಿಂದ ಕೂಡಿರುವ ಪಂಢರಿಬಾಯಿಯವರನ್ನು ಕಂಡಾಗ ಮೊದಲು ಕಂಡು ಬರುವ ವೈಶಿಷ್ಟ್ಯ ಇವೇ. "ಬನ್ನಿ. ಕುಳಿತುಕೊಳ್ಳಿ" ಎಂದು ಹಸನ್ಮುಖದಿಂದ ಪಂಢರಿಬಾಯಿ ಸ್ವಾಗತಿಸಿದಾಗ ಸಿನೆಮಾ ತಾರೆಯನ್ನು ಕಾಣುತ್ತಿದ್ದೇನೆ ಎಂಬ ಭಾವನೆ ಅಳಿದು ಹೋಗಿ ಆತ್ಮೀಯ ಸಹೋದರಿಯೊಬ್ಬಳನ್ನು ಕಾಣುತ್ತಿದ್ದೇನೆ ಎಂಬ ಭಾವ ಮೂಡಿಬಿಡುತ್ತದೆ.

ಕೀರ್ತಿ ಮತ್ತು ಧನ ಎರಡನ್ನೂ ಹುಟ್ಟಿಬಂದವರೆಲ್ಲ ಬಯಸುವುದು ಸಹಜವೇ. ಅವುಗಳ ಪ್ರಾಪ್ತಿಗಾಗಿ ಪ್ರಯತ್ನಿಸುವಾಗ ಆದಷ್ಟು ಸುಲಭ ಮಾರ್ಗವನ್ನು ಕಂಡುಕೊಳ್ಳಲು ಹೆಣಗುವುದೂ ಸ್ವಾಭಾವಿಕವೇ. ಆಗ, ಆ ಹಂಬಲದಲ್ಲಿ "ಫಲ" ಮುಖ್ಯವಾಗುವುದೇ ವಿನಾ ಅದನ್ನು ಪಡೆಯುವ ಮಾರ್ಗವಲ್ಲ. ಸಾಧನೆಯ ಸನ್ಮಾರ್ಗ

ಯಾವಾಗಲೂ ಕಠಿಣವಾಗಿರುವದರಿಂದ ಸುಲಭ ಮಾರ್ಗದತ್ತಲೇ ಜನರ ಒಲವು ಇರುತ್ತದೆ. ಆದರೆ ಕಠಿಣವಾದರೂ ಸನ್ಮಾರ್ಗದಿಂದಲೇ ನಡೆದು ಧ್ಯೇಯ ಸಾಧಿಸುವವರಿಗೆ ಸಿಗುವ ತೃಪ್ತಿ ಸಂತೋಷಗಳೇ ನಿಜವಾದ ತೃಪ್ತಿ ಸಂತೋಷ ಗಳಾಗಿರುತ್ತವೆ.

ಪಂಢರಿಬಾಯಿ ಇಂದು ಸಿನೆಮಾ ಪ್ರಪಂಚ ನಲ್ಲಿ ಒಂದು ಉನ್ನತವಾದ ಸ್ಥಾನವನ್ನು, ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ ಅದಕ್ಕಾಗಿ ಅವರು ಯಾವ ಮಾರ್ಗವಾ-ದರೂ ಸರಿ ಎಂದವರಲ್ಲ. 'ಸನ್ಮಾರ್ಗ'ವಲ್ಲ ಎಂಬ ಸಂಶಯ ಬಂದ ಸ್ಥಳದಲ್ಲಿ ಅವರು ಹೆಜ್ಜೆಯನ್ನು ಕೂಡ ಇಟ್ಟವರಲ್ಲ. ಯಾವ ಕಾರ್ಯವೇ ಆಗಲಿ, ಅದರಲ್ಲಿ ಪಾವಿತ್ರ್ಯವಿದೆ, ಹಿರಿಮೆಯಿದೆ, ಅವೆರ ಡನ್ನೂ ಕಾಯ್ದುಕೊಳ್ಳಬೇಕಾದುದು ಕಾರ್ಯ ಮಾಡುವವರ ಕರ್ತವ್ಯ, ಧರ್ಮ ಎಂದು ಅವರು ಅನ್ನುತ್ತಾರೆ. ಆಡಿದಂತೆ ಮಾಡುವವರು ತೀರ ಕಡಿಮೆಯಿರುವ ಈ ಜಗತ್ತಿನಲ್ಲಿ ಆಡಿದಂತೆಯೇ ನಡೆಯುವ ದೃಢ ಸಂಕಲ್ಪದ ವ್ಯಕ್ತಿಗಳನ್ನು ಕಂಡಾಗ ಒಂದು ಗೌರವ ಭಾವ ಸಹಜವಾಗಿಯೆ ಮನದಲ್ಲಿ ಮೂಡಿಬರುವುದು. ಪಂಢರಿಬಾಯಿ ಯವರನ್ನು ಕಂಡಾಗ ಉಂಟಾಗುವ ಗೌರವ ಭಾವ ಆತ್ಮೀಯತೆಗಳಿಗೆ ಅವರಲ್ಲಿರುವ ಈ ವಿಶಿಷ್ಟ ಸದ್ಗುಣವೇ ಕಾರಣವಾಗಿದೆ.

ಯಾರಿಗೇ ಆಗಲಿ ತಮ್ಮ ಕಾರ್ಯಕ್ಷೇತ್ರದಲ್ಲಿ ಉಳಿದೆಲ್ಲರಿಗಿಂತ ಶ್ರೇಷ್ಠನೆನ್ನಿಸಿಕೊಳ್ಳಬೇಕು ಎಂಬ ಹಂಬಲವಿರುವುದು ಸಹಜ. ಚಿತ್ರ ಪ್ರಪಂಚದ ನಟ-ನಟಿಯರ ಮಟ್ಟಿಗೆ ಹೇಳುವು ದಾದರೆ ಪ್ರತಿಯೊಬ್ಬ ನಟನಿಗೂ ತಾನು 'ಹೀರೊ' ಆಗಬೇಕು, ಪ್ರತಿಯೊಬ್ಬ ನಟಿಗೂ ತಾನು 'ಹೀರೊಯಿನ್' ಆಗಬೇಕು ಎಂಬ ಮಹತ್ವಾ ಕಾಂಕ್ಷೆ ಇದ್ದೇ ಇರುತ್ತದೆ. ಆ ಸ್ಥಾನವನ್ನು ಸಂಪಾದಿಸಲು ಆತ ಅಥವಾ ಆಕೆ ತನ್ನ ಕೈಲಾದ ಪ್ರಯತ್ನವನ್ನು ಮಾಡದೆ ಬಿಡುವುದಿಲ್ಲ. ಪ್ರಯ ತ್ನಕ್ಕೆ ಫಲ ಬಂತೊ ತನ್ನ ಯೋಗ್ಯತೆಯಿಂದ ಬಂತು ಎಂದುಕೊಳ್ಳುವುದು ವಾಡಿಕೆ. ಬಾರ ದಿದ್ದರೆ ಡೈರೆಕ್ಟರರ ಮೇಲೊ, ಪ್ರೊಡ್ಯೂಸರರ ಮೇಲೊ, ಮತ್ತಾರ ಮೇಲೊ ಅಪವಾದ ಹೊರಿ ಸುವುದೂ ನಿತ್ಯಮಾತು. ಬಹಳ ಮಟ್ಟಿಗೆ ಕೈಗೆ ಎಟುಕದ ದ್ರಾಕ್ಷೆ ಹಣ್ಣು ಹುಳಿ ಎಂದ ಹಾಗೆ ಇದೆ ಈ ಮಾತು. ದ್ರಾಕ್ಷೆ ಕೈಗೆ ಎಟುಕಿದವರು ಅದನ್ನು ಹುಳಿ ಎಂದು ತಿರಸ್ಕರಿಸಿದಾಗ ಆಶ್ಚರ್ಯಪಡಬೇಕಾದ್ದೇನಿರುವುದಿಲ್ಲ. ಆದರೆ ದ್ರಾಕ್ಷೆಹಣ್ಣು ಬಾಯಲ್ಲೆ ಬಂದು ಬೀಳುತ್ತಿರು ವಾಗ ಅದು ಬಂದು ಬೀಳುತ್ತಿರುವ ರೀತಿ ಮನ ಸ್ಸಿಗೆ ಒಗ್ಗಲಿಲ್ಲ ಎಂಬ ಕಾರಣದಿಂದ ಅದನ್ನು ಒಲ್ಲೆನೆನ್ನುವವರನ್ನು ಕಂಡರೆ ಮಾತ್ರ ಆಶ್ಚರ್ಯ ಪಡಲೇಬೇಕಾಗುತ್ತದೆ. ಅವರ ಮನಃಸ್ಥೈರ್ಯ ವನ್ನೂ ಪಾವಿತ್ರ್ಯದಲ್ಲಿರುವ ಅವರ ನಿಷ್ಠೆಯನ್ನೂ ಕಂಡು ಮೆಚ್ಚಬೇಕಾಗುತ್ತದೆ. ಕಲಾವಿದರಲ್ಲಿ ಇಂಥ ಗುಣವಿದ್ದರೆ ಅದೊಂದು ಅಪೂರ್ವ ವೈಶಿಷ್ಟ್ಯವೆನಿಸಿಕೊಳ್ಳುತ್ತದೆ. ಪಂಢರಿಬಾಯಿಯ ವರಲ್ಲಿ ಈ ಅಪೂರ್ವ ವೈಶಿಷ್ಟ್ಯವಿದೆ. ಅದು ಅವರ ವ್ಯಕ್ತಿತ್ವಕ್ಕೆ ಒಂದು ಸಾತ್ವಿಕ ಮೆರುಗನ್ನು ಕೊಟ್ಟಿದೆ. ಹೀರೊಯಿನ್ ಪಟ್ಟ ಸಿಕ್ಕರೆ ಏನು ಬೇಕಾದ್ದು ಕೊಡಬಲ್ಲೆ ಎನ್ನುವವರು ಹಲ ವಾರು ಜನರಿರುವಾಗ 'ಆ ಅತ್ಯಂತ ಸಲಿಗೆಯ, ಅನಿರ್ಬಂಧವಾದ ಹುಚ್ಚು ಪ್ರೇಮದ ಅಭಿನಯ ವನ್ನು ಮಾಡುವುದು ನನ್ನ ರೀತಿಗೆ, ನೀತಿಗೆ ಸಂಸ್ಕಾರಕ್ಕೆ ವಿಚಾರಕ್ಕೆ ಒಗ್ಗದು. ನಾನೊಲ್ಲೆ." ಎಂದು ಹೀರೊಯಿನ್ ಪಾತ್ರಗಳನ್ನು ನಿರಾಕರಿಸಿ ಸೋಜ್ವಲವಾದ ಇತರ ಪಾತ್ರಗಳನ್ನು ವಹಿಸು ತ್ತಿದ್ದಾರೆ ಪಂಢರಿಬಾಯಿಯವರು.

ಈ ಎಲ್ಲ ವೈಶಿಷ್ಟ್ಯಗಳು ಪಂಢರಿಬಾಯಿ ಯವರಲ್ಲಿ ಒಂದುಗೂಡಿರುವುದಕ್ಕೆ ಪ್ರಬಲವಾದ ಕಾರಣವೂ ಇದೆಯೆನ್ನಲಡ್ಡಿಯಿಲ್ಲ. ಅವು ಅವ ರಿಗೆ ಆನುವಂಶಿಕವಾಗಿ ಬಂದ ವರದಾನ ವೆಂದರೂ ತಪ್ಪಾಗದು. ಮಾತಾಪಿತೃಭಕ್ತಿ, ದೇವಭಕ್ತಿ, ಧರ್ಮ ಭಕ್ತಿ, ಶೀಲಭಕ್ತಿ ಮುಂತಾ ದವುಗಳೆಲ್ಲ ಬರೀ ಪುಸ್ತಕದ ಮಾತುಗಳೇ ಸರಿ

ಎಂದೆನಿಸುತ್ತಿರುವಂಥ ಇಂದಿನ ಕಾಲದಲ್ಲಿ ಪಂಢರಿಬಾಯಿಯವರು ತಮ್ಮ ಜೀವನದಲ್ಲಿ ತಮ್ಮ ತಂದೆ ಬೀರಿರುವ ಪ್ರಭಾವವನ್ನು ಕುರಿತು ಹೇಳುವಾಗ ಆ ಎಲ್ಲ ಶಬ್ದಗಳಲ್ಲಿರುವ ಮಹತಿ-ಸಾಮರ್ಥ್ಯಗಳ ಪ್ರತೀಕವೇ ಎದುರು ನಿಂತಂತೆ ಭಾಸವಾಗುತ್ತದೆ. ಜೀವನದ ಪ್ರತಿಯೊಂದು ಅನುಭವವನ್ನು ಹೇಳುವಾಗ, ಯಶಸ್ಸಿನ ಮರ್ಮವನ್ನು ಚರ್ಚಿಸುವಾಗ ಅವರ ಬಾಯಲ್ಲಿ "ನನ್ನ ತಂದೆ" ಎಂಬ ಶಬ್ದ ಬಂದೇ ಬರುತ್ತದೆ. ತಂದೆಯ ಗುಣ-ಸಂಪನ್ನತೆಯನ್ನು ಮಕ್ಕಳು ಹೊಂದದಿರುವುದನ್ನೆ ಹೆಚ್ಚಾಗಿ ಕಾಣುವ ನಮಗೆ ಪಂಢರಿಬಾಯಿ ಅದನ್ನು ಹೊಂದಿರುವ ವೈಶಿಷ್ಟ್ಯವೂ ಅಪೂರ್ವವೆನಿಸುತ್ತದೆ.

ಪಂಢರಿಬಾಯಿ ಹುಟ್ಟಿದ್ದು ಉತ್ತರ ಕನ್ನಡ ಜಿಲ್ಲೆಯ ಭಟಕಳದಲ್ಲಿ. ಇವರ ತಂದೆ ಎಂ. ರಂಗರಾವ್ ಅವರು ಮಂಗಳೂರಿನಲ್ಲಿ ಕ್ಯಾನರಾ ಹೈಸ್ಕೂಲಿನಲ್ಲಿ ಹೊಟ್ಟೆಯ ಪಾಡಿಗಾಗಿ ಡ್ರಾಯಿಂಗ್ ಮಾಸ್ತರರಾಗಿದ್ದರೂ ಅವರಲ್ಲಿ ದೈವಭಕ್ತಿ ಒಂದು ಹುಚ್ಚೆನ್ನಿಸುವಷ್ಟು ಮಟ್ಟಿಗೆ ಗಾಢವಾಗಿ ಬೆಳೆದಿತ್ತು. ಸಂಗೀತ, ಕೀರ್ತನೆ, ನಾಟಕಾದಿಗಳಲ್ಲಿ ಆಸಕ್ತಿಯಿದ್ದ ತಂದೆ ತಮ್ಮ ಹತ್ತು ಜನ ಹೆಣ್ಣು-ಗಂಡು ಮಕ್ಕಳಲ್ಲಿ ಅದನ್ನು ಮೂಡಿಸಲು ಯತ್ನಿಸಿದರು. ಚಿಕ್ಕಂದಿನಲ್ಲಿ ಧ್ರುವ, ಪ್ರಹ್ಲಾದ ಮೊದಲಾದ ಪಾತ್ರಗಳನ್ನು ವಹಿಸುವುದರ ಮೂಲಕ ನಾಟಕದಲ್ಲಿ ಆಸಕ್ತರಾಗಿದ್ದ ಎಂ. ರಂಗರಾವ್ ಅವರು 'ಶ್ರೀಕೃಷ್ಣ ಚೈತನ್ಯ ನಾಟಕಸಭಾ' ಎಂಬ ಕಂಪನಿಯನ್ನು ಕಟ್ಟಿದರು. ಅಲ್ಲಿ ಪಂಢರಿಬಾಯಿ, ಅವರ ಬಂಧು ವಿಮಲಾನಂದ ದಾಸ ಮೊದಲಾದವರಿಗೆ ರಂಗಭೂಮಿಯ ಶಿಕ್ಷಣದ 'ಶ್ರೀ'ಕಾರವಾದದ್ದು.

ಪಂಢರಿಬಾಯಿಗೆ ಇನ್ನೊಂದು ಹೆಸರೂ ಇದೆ, "ಗೀತಾ" ಎಂದು. ತಂದೆ ಹರಿಕೀರ್ತನೆಗಳನ್ನು ಮಾಡುತ್ತ ಪಂಢರಪುರಕ್ಕೆ ಹೊರಟಿದ್ದ ಸಮಯದಲ್ಲೇ ಪಂಢರಿಬಾಯಿ ಹುಟ್ಟಿದ್ದು. ಪಂಢರಿನಾಥನ ಕೃಪೆಯಿಂದಲೆ ಹುಟ್ಟಿದ ಮಗಳಿವಳು ಎಂದು

ಭಾವಿಸಿ ತಂದೆ 'ಪಂಢರಿ' ಎಂದು ಹೆಸರಿಟ್ಟರ
ಹಾಗೆಯೆ ತಮಗೆ ಪೂಜ್ಯವೂ ಪ್ರಿಯವೂ ಆಗಿರ
ಭಗವದ್ಗೀತೆಯ ಹೆಸರೂ ಇರಲೆಂದು "ಗೀತಾ
ಎಂಬ ಇನ್ನೊಂದು ಹೆಸರನ್ನೂ ಇರಿಸಿವರು. ತಾ
ನಿಟ್ಟ ಈ ಎರಡೂ ಹೆಸರುಗಳ ಪಾವಿತ್ರ್ಯವನ
ಮಗಳು ಉಳಿಸಿಕೊಂಡಿದ್ದಾಳೆ ಎಂದು ಇಂದ
ತಂದೆ ಹೆಮ್ಮೆಪಟ್ಟುಕೊಳ್ಳಬಹುದು. ಆ ತೃಪ್ತಿ
ಅವರದಾದರೆ, ಶ್ರೇಯಸ್ಸು ಅವರ ಮಗಳ ಮನ
ಮೇಲೆ ಬಿಂಬಿಸಿದ ಸಂಸ್ಕಾರಕ್ಕೆ, ಅದರಂತೆ ನ
ದುಕೊಳ್ಳುತ್ತಿರುವ ಮಗಳ ನಿರ್ಧಾರಕ್ಕೆ.

ಕೊಂಕಣಿ ಮನೆ ಮಾತಾಗಿರುವ ಪಂಢ
ಬಾಯಿ ಇಂದು ತಮಿಳು, ತೆಲಗು, ಹಿಂದಿ
ಕನ್ನಡಗಳಲ್ಲಿ ಆ ಆ ಭಾಷೆಯೆ ಮಾತೃಭಾಷೆಯೆ
ಎನ್ನುವ ಮಟ್ಟಿಗೆ ಸರಳವಾಗಿ, ಸರಾಗವಾ
ಮಾತನಾಡಿ ಅಭಿನಯಿಸುವುದನ್ನು ಕಂಡಾ
ವ್ಯಕ್ತಿಯ ಜ್ಞಾನ, ಪ್ರತಿಭೆಗಳ ವಿಕಾಸಕ್ಕೆ ಶಾಲ
ಶಿಕ್ಷಣವೇ ಬೇಕು ಎಂದೇನೂ ಅನಿಸುವುದಿಲ್ಲ
ಪಂಢರಿಬಾಯಿ ಓದಿದ್ದು ಎರಡನೇಯತ್ತೆಯ ವರೆ
ಮಾತ್ರ. ಶಾಲೆಯ ಶಿಕ್ಷಣದಿಂದ ವಂಚಿತಳಾ
ದರೂ ಅವರಿಗೆ ಸಂಪನ್ನ ಸಾತ್ವಿಕ ಜೀವನವನ
ಬಾಳಲು ಅಗತ್ಯವಿರುವ ಶಿಕ್ಷಣವನ್ನು ತಂ
ತಾವೇ ಒದಗಿಸಿಕೊಟ್ಟರು. ದೇವಭಕ್ತರಾ
ಅವರ ಮನೆಯಲ್ಲಿ ಸದಾ ರಾಮಾಯಣ, ಮಹಾ
ಭಾರತಗಳ ವಾಚನ ನಡೆದೇ ಇರುತ್ತಿತ್ತು
ಭಕ್ತರ ಕಥೆ, ಸಚ್ಚರಿತರ ಕಥೆಗಳು ನಿತ್ಯವ
ಮಕ್ಕಳ ಕಿವಿಗೆ ಬೀಳುತ್ತಿದ್ದವು.

ತಂದೆ ಮತ್ತು ಅಣ್ಣ ವಿಮಲಾನಂದರಂ
ಪಂಢರಿಬಾಯಿ ಕೂಡ ಹರಿಕೀರ್ತನೆಗಳನ್ನು
ಮಾಡಲು ಕಲಿತಳು. ಇನ್ನೂ ಹತ್ತು ವರ್ಷದ
ಬಾಲಿಕೆಯಾಗಿದ್ದಾಗಲೆ ಅವಳ ಪ್ರಥಮ ಕೀರ್ತನ
ಭಟಕಳದ ದತ್ತಾತ್ರೇಯ ದೇವಸ್ಥಾನದಲ್ಲಿ ನ
ಯಿತು. ಎರಡನೆಯ ಕೀರ್ತನೆ ಅಂದೇ ಸಂ
ಅಲ್ಲಿಗೆ ಎಂಟು ಮೈಲು ದೂರದಲ್ಲಿರುವ ಮುರ್ಡೇ
ಶ್ವರ ಎಂಬ ಕ್ಷೇತ್ರಸ್ಥಾನದಲ್ಲಿ ನಡೆಯಿತು. ಈ
ಕೀರ್ತನೆಗಳು ಪಂಢರಿಬಾಯಿಯ ಕಲಾಜೀವನದ

ನಾಂದಿಯಾದವು.

ಅಣ್ಣ ವಿಮಲಾನಂದರೊಂದಿಗೆ ಮೈಸೂರು ಸಂಸ್ಥಾನದಲ್ಲಿ ಕೀರ್ತನಗಳನ್ನು ಮಾಡುತ್ತ ಸಂಚರಿಸುತ್ತಿದ್ದಾಗಲೇ ವಿಮಲಾನಂದರು "ಆದರ್ಶ ನಾಟಕ ಕಂಪನಿ" ಎಂಬ ಸಂಘವೊಂದನ್ನು ಕಟ್ಟಿದರು. ಅವರು ಆಡಿದ "ಮುದುಕನ ಮದುವೆ" ನಾಟಕದಲ್ಲಿ ಪಂಢರಿಬಾಯಿ ಅಭಿನಯಿಸಿದಾಗ ಅವಳಿಗಿನ್ನೂ ೧೨ ವರ್ಷ. ಅವಳ ಅಭಿನಯವನ್ನು ಕಂಡು ಮೆಚ್ಚಿದ ಆಸ್ಥಾನ ವಿದ್ವಾನ ಟಿ. ಚೌಡಯ್ಯ ಮತ್ತು ಖ್ಯಾತ ನಟ ದಿ. ಹಿರಣ್ಣಯ್ಯನವರು "ವಾಣಿ" ಚಿತ್ರಪಟದಲ್ಲಿ 'ಗುರುಪುತ್ರಿ'ಯ ಪಾತ್ರ ವಹಿಸಲು ಅವಳನ್ನು ಕೇಳಿಕೊಂಡರು. ಕೊಯಿಮತ್ತೂರಿನಲ್ಲಿ ಈ ಚಿತ್ರ ತಯಾರಾಯಿತು.

ಚಿತ್ರಪ್ರಪಂಚದ ಬಾಗಿಲು ಹೀಗೆ ತೆಗೆದಾಗಲೂ ಸರಳವಾಗಿ ಒಳಗೆ ಹೋಗುವಂತಿರಲಿಲ್ಲ. ಹೆಣ್ಣುಮಕ್ಕಳು ಗಟ್ಟಿಯಾಗಿ ನಗುವುದನ್ನೂ ಸಹಿಸದಷ್ಟು ಸಂಪ್ರದಾಯವಂತರಾದ ರಂಗರಾಯರಿಗೆ ತಮ್ಮ ಮಗಳು ಸಿನಿಮಾ ನಟಿಯಾಗಿ ಚಿಟ್ಟಿಯಂತಾಗುವುದು ಹೇಗೆ ಒಪ್ಪೀತು? ಆದರೂ ಮುಂದೆ ಅನಿವಾರ್ಯ ಪರಿಸ್ಥಿತಿಗಳು ಒದಗಿ ಬಂದು ಪಂಢರಿಬಾಯಿ ಚಿತ್ರಪ್ರಪಂಚವನ್ನು ಶಾಶ್ವತವಾಗಿ ಸೇರುವಂತಾಯಿತು. ಶ್ರೀ ಹೊನ್ನಪ್ಪ ಭಾಗವತರು ತೆಗೆದ "ಗೋರಾಕುಂಬಾರ" ಎಂಬ ಭಕ್ತಿಪ್ರಧಾನ ಚಿತ್ರದಲ್ಲಿ ಪಾತ್ರ ವಹಿಸಲು ತಂದೆಯ ಅನುಮತಿ ಸಿಕ್ಕಿತು.

ಪ್ರತಿಭಾವಂತರಿಗೆ ಅವಕಾಶ ಸಿಗುವುದೇ ತಡ, ಅವರು ಪ್ರಗತಿಪಥದಲ್ಲಿ ರಭಸದಿಂದ ಮುನ್ನುಗ್ಗುತ್ತಾರೆಂಬುದು ಸುಳ್ಳಲ್ಲ. ಚಿತ್ರಪ್ರಪಂಚದಲ್ಲಿ ಕಾಲಿರಿಸಿದ ಪಂಢರಿಬಾಯಿಗೆ ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಎ. ವಿ. ಎಂ. ಕಂಪನಿಯ ಕರೆ ಬಂತು. ಗುಣಸಾಗರಿ, ಸತ್ಯ ಶೋಧನೆ, ಪರಾಶಕ್ತಿ ಎಂಬಿತ್ಯಾದಿ ಪ್ರಖ್ಯಾತ ತಮಿಳು ಚಿತ್ರಗಳಲ್ಲಿ ಪ್ರಧಾನ ಪಾತ್ರಗಳು ದೊರಕಿದವು.

ತನ್ನದು ಎಂಬ ಮೋಹ ಯಾರನ್ನೂ ಬಿಡುವುದಿಲ್ಲ. ತಮಿಳು, ತೆಲಗು ಚಿತ್ರಗಳಲ್ಲಿ ಹೆಸರು ಹಣ ಎರಡೂ ಧಾರಾಳವಾಗಿ ಸಿಗುತ್ತಿದ್ದರೂ ಪಂಢರಿಬಾಯಿಗೆ ಸಿಕ್ಕ ಯಶಸ್ಸಿನಿಂದ ಪೂರ್ಣ ಸಮಾಧಾನ ಸಿಗಲಿಲ್ಲ. ಕನ್ನಡ ಚಿತ್ರಗಳನ್ನು ನಿರ್ಮಿಸಬೇಕು ಎಂಬ ಮೋಹ ತೊಡಗಿ ಅವರು 'ಸಂತ ಸಖು,' 'ರಾಯರ ಸೊಸೆ' ಎಂಬೆರಡು ಕನ್ನಡ ಚಿತ್ರಗಳನ್ನು ತಯಾರಿಸಿದರು. (ಮಹಾಲಕ್ಷ್ಮಿ ಎಂಬ ತಮಿಳು ಚಿತ್ರವೊಂದನ್ನೂ ಇವರು ಸ್ವಂತ ತಯಾರಿಸಿದ್ದಾರೆ) ಆದರೆ ಕಾರಣಗಳು ಏನೇ ಇರಲಿ, ಇದರಿಂದ ತಾನು ಕನ್ನಡ ಚಿತ್ರಗಳನ್ನು ತಯಾರಿಸಿದೆ ಎಂಬ ಸಮಾಧಾನವಲ್ಲದೆ ಇನ್ನಾವ ಮಧುರ ಫಲವೂ ಅವರಿಗೆ ದೊರಕಲಿಲ್ಲವೆಂಬ ಮಾತು ಬೇರೆ.

ಚಿತ್ರ ಜಗತ್ತನ್ನು ಸೇರಿಕೊಂಡ ನಂತರದ ೧೪ ವರ್ಷಗಳಲ್ಲಿ ಪಂಢರಿಬಾಯಿ ಸುಮಾರು ೪೦–೫೦ ತಮಿಳು ಚಿತ್ರಗಳಲ್ಲಿ, ೫–೬ ತೆಲುಗು ಚಿತ್ರಗಳಲ್ಲಿ, ೮–೧೦ ಕನ್ನಡ ಚಿತ್ರಗಳಲ್ಲಿ ೪–೫ ಹಿಂದೀ ಚಿತ್ರಗಳಲ್ಲಿ ಪಾತ್ರ ವಹಿಸಿದ್ದಾರೆ. ಇಷ್ಟೆಲ್ಲ ವ್ಯಾಪದಲ್ಲಿಯೂ ಅವರ ರಂಗಭೂಮಿಯ ಮೇಲಿನ ಪ್ರೇಮ ಕಡಿಮೆಯಾಗಿರಲಿಲ್ಲ. 'ವರದಾಚಾರಿ ಸ್ಮಾರಕ ನಾಟಕ ಸಂಘ'ದವರು ಮುಂಬಯಿಯಲ್ಲಿ ಆಡಿದ ಶಾಕುಂತಲ, ನಿರುಪಮಾ ಮುಂತಾದ ನಾಟಕಗಳಲ್ಲಿ ಅವರು ಅಭಿನಯಿಸಿದರು. ಅವರ ಸ್ವಂತ 'ಶ್ರೀಕೃಷ್ಣ ಚೈತನ್ಯ ನಾಟಕ ಸಭಾ' ಭಕ್ತವಿಜಯ, ಪಾಣಿಗ್ರಹಣ, ಶಾಂತಿ ನಿವಾಸ ನಾಟಕಗಳನ್ನಾಡುತ್ತಿದೆ.

'ಭಾಭಿ' ಚಿತ್ರದಲ್ಲಿ ಅಭಿನಯಿಸಿದ ನಂತರವೇ ಮುಂಬಯಿಯ ಚಿತ್ರ ನಿರ್ಮಾಪಕರಿಂದ ಇವರಿಗೆ ಕರೆಗಳು ಬಂದವು. ಆದರೆ "ಚಾಂದ" ಮತ್ತು ಇನ್ನಿತರ ಮೂರು ಹಿಂದಿ ಚಿತ್ರಗಳಲ್ಲಿ ಅಭಿನಯಿಸುವಷ್ಟರಲ್ಲಿ ಇವರಿಗೆ ಹಿಂದೀ ಚಿತ್ರಪ್ರಪಂಚ ತಮಗೆ ಒಗ್ಗಿದ್ದಲ್ಲ ಎಂಬ ಅನುಭವ ಬಂತು. "ಏನಾಯಿತಲ್ಲಿ?" ಎಂದು ಕೇಳಿದರೆ ಅವರು ಹೇಳುವ ಉತ್ತರವಿದು. "ಅವರೇನೂ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಆದರೆ

ಅವರ ನಡೆ-ನುಡಿಯ ರೀತಿಯೆ ಬೇರೆ. ಸ್ತ್ರೀಪುರುಷರಲ್ಲಿರುವ ಅತಿಯಾದ ಸಲಿಗೆ ನನಗೆ ಹಿಡಿಸಲಿಲ್ಲ. ಚಿತ್ರ ಮುಹೂರ್ತದ ವೇಳೆಗೆ ಬಾಯಲ್ಲಿ ಫೇಡೆ ತುರುಕುವುದು, ವೈಕೈ ಮುಟ್ಟಿ ಮಾತಾಡುವುದು, ಹಲೊ ಎಂದು ತಬ್ಬಿಕೊಂಡು ಸ್ವಾಗತಿಸುವುದು ಮುಂತಾದವೆಲ್ಲ ನನಗೆ-ನನ್ನ ಮನಸ್ಸಿನ ಸಂಸ್ಕಾರಕ್ಕೆ ಹಿಡಿಸಲಿಲ್ಲ. ಅವರಿಗೆಲ್ಲ ಸಹಜವಾದದ್ದು ನನಗೆ ಅಸಹಜವೆನಿಸಿ ನಾನು ನಿರುಪಾಯಳಾಗಿ ಹಿಂದೀ ಪ್ರಪಂಚದಿಂದ ದೂರ ಸರಿದೆ. ಇಲ್ಲಿ ತಮಿಳು ತೆಲಗು, ಕನ್ನಡ ಚಿತ್ರ ಸಂಸ್ಥೆಗಳಲ್ಲಿ ಈ ಪದ್ಧತಿಗಳಿಲ್ಲ. ಈ ಅತಿ ಸಲಿಗೆಯ ಕೃತಿಗಳು ಸೇರಿಕೆಯಾಗುವದಿಲ್ಲವೆಂದೇ ನಾನು ಸಹಸಾ ನಾಯಿಕೆಯ ಪಾತ್ರವನ್ನು ವಹಿಸುವುದಿಲ್ಲ. ಆ ನಾಯಕ-ನಾಯಿಕೆಯರ ಪ್ರೇಮವಿಲಾಸ, ಹಾವಭಾವಗಳನ್ನು ನಾನು ಅಭಿನಯಿಸಲಾರೆ. ನನ್ನ ಮನಸ್ಸಿಗೇ ಒಗ್ಗದ್ದನ್ನು ನಾನು ಮಾಡುವುದಾದರೂ ಹೇಗೆ? ಮಾಡಿ ಯಶಸ್ವಿಯಾಗುವದಾದರೂ ಹೇಗೆ? ಆದ್ದರಿಂದ ಎರಡನೆಯ ಮುಖ್ಯ ಪಾತ್ರ-ಅತ್ತಿಗೆಯೊ, ಅತ್ತೆಯೊ ನಾದಿನಿಯೊ-ಏನೋ ವಹಿಸುತ್ತೇನೆ. ಅಭಿನಯಿಸಲು ಯಾವ ಪಾತ್ರವಾದರೇನು? ಭಾವನೆಯನ್ನು, ವಿಚಾರಗಳನ್ನು ನಿಷ್ಠೆಯಿಂದ ಯಥಾವತ್ತಾಗಿ ಪ್ರದರ್ಶಿಸಿದರೆ ಯಾವ ಪಾತ್ರದಲ್ಲಿಯಾದರೂ ಜನರ ಮೆಚ್ಚಿಗೆಗೆ ಪಾತ್ರರಾಗಬಹುದು." ಪಂಢರಿಬಾಯಿಯವರ ಪಾತ್ರಗಳನ್ನು ನೋಡಿದವರು ಈ ಮಾತನ್ನು ತಕರಾರಿಲ್ಲದೆ ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ಪಾತ್ರವೇ ಆಗಲಿ, ಅದಕ್ಕೆ ಸೈಜ ಕಳೆಯನ್ನು ತುಂಬಬಲ್ಲ ಸಾಮರ್ಥ್ಯ ಇದೆಯೆಂದೇ ಪಂಢರಿಬಾಯಿ ಇಂದು ನಾಯಿಕೆಯ ಪಾತ್ರ ವಹಿಸದಿದ್ದರೂ ಆ ಪಾತ್ರ ವಹಿಸುವವರಿಗಿಂತಲೂ ಹೆಚ್ಚಿನ ಖ್ಯಾತಿಯನ್ನೂ ಜನಪ್ರಿಯತೆಯನ್ನೂ ಗಳಿಸಿದ್ದಾರೆ.

ಕನ್ನಡ ಚಿತ್ರಪ್ರಪಂಚದ ವಿಷಯವನ್ನೆತ್ತಿ ಪ್ರಶ್ನೆ ಕೇಳಿದರೆ ಅವರೊಂದು ಮುಗ್ಧ ನಗು ನಕ್ಕು ಬಿಡುತ್ತಾರೆ. ಕನ್ನಡ ಚಿತ್ರಪ್ರಪಂಚದ ಒ... ಗುಟ್ಟನ್ನು ಬಲ್ಲವರು ಆ ನಗುವಿನ ಅರ್ಥಮಾ... ಕೊಳ್ಳಬಹುದು. ಅಂಗೈ ಹುಣ್ಣಿಗೆ ಕನ್ನಡಿ ಏ... ಎನ್ನುತ್ತದೆ ಆ ನಗು. ಅನೈಕ್ಯ, ಒಳಸಂಚು... ತಾವೇ ಶ್ರೇಷ್ಠರು ಎಂಬ ದುರಭಿಮಾನ, ಗುಂ... ಗಾರಿಕೆ ಇವುಗಳಿಂದಾಗಿ ಕನ್ನಡ ಚಿತ್ರಪ್ರಪಂ... ಕೆಡುತ್ತಲಿದೆ ಎಂದು ಅವರ ಅಭಿಪ್ರಾಯ.

ಸಾಮಾನ್ಯವಾಗಿ ಅಪೇಕ್ಷಿಸಬಹುದಾದ್ದನ್ನೆ... ಪಡೆದಿದ್ದರೂ ಪಂಢರಿಬಾಯಿಯವರಲ್ಲಿ ಇನ್ನೂ... ಕೆಲವು ಆಶೆಗಳಿವೆ. ಒಳ್ಳೆಯದಾದ ರೀತಿಯ... ಉತ್ತಮವಾದ ಕನ್ನಡ ನಾಟಕಗಳನ್ನಾಡಿ ಕ... ಡಕ್ಕೆ ಸೇವೆ ಸಲ್ಲಿಸಬೇಕು ಎಂಬುದು ಅದರ... ಒಂದು. ವಜ್ರೇಶ್ವರಿ ನಿತ್ಯಾನಂದ ಸ್ವಾಮಿಗ... ಶಿಷ್ಯರೂ ಪರಮ ದೈವಭಕ್ತರೂ ಆದ ತಂದೆ... ಇಚ್ಛೆಯಂತೆ ಬೆಂಗಳೂರಿನಲ್ಲಿ ಒಂದು ಆಶ್ರ... ವನ್ನು ಸ್ಥಾಪಿಸಬೇಕೆಂಬುದು ಇನ್ನೊಂದಾಗಿ...

ಮದ್ರಾಸಿನಲ್ಲಿ ಅವರು ಪಾಂಡುರಂಗ ದೇವಾ... ಲಯವನ್ನು ಕಟ್ಟಿಸಿದ್ದಾರೆ. ಪಂಢರಪುರದಿಂದಲ... ಶಿಲಾವಿಗ್ರಹವನ್ನು ತರಿಸಿ ಪ್ರತಿಷ್ಠಾಪಿಸಿದ್ದಾ... ೧೯೫೮ ರಿಂದಲೂ ಮದ್ರಾಸಿಗೆ ಹೋಗುವ ದೈ... ಭಕ್ತರಿಗೆ ಇದೊಂದು ಸಂದರ್ಶನೀಯ ಸ್ಥ... ವಾಗಿ ಪರಿಣಮಿಸಿದೆ. ತಂಗಿ ಮೈನಾವತಿ... ವಿವಾಹ ಜರುಗಿದ್ದು ಈ ದೇವಾಲಯದಲ್ಲಿಯೆ.

ತನ್ನಲ್ಲಿ ಏನಾದರೊಂದು ಗುಣವಿಶೇಷವಿ... ವುದಾದರೆ ಅದು ತನ್ನ ತಂದೆಯಿತ್ತ ಶಿಕ್ಷಣ... ಆಶೀರ್ವಾದದ ಫಲ ಎನ್ನುತ್ತಾರೆ ಪಂಢ... ಬಾಯಿ. "ಚಿತ್ರಗಳಲ್ಲಿ ನನ್ನ ಪಾತ್ರವನ್ನು ಕಂ... ಪ್ರಭಾವಿತರಾಗಿ ತಮ್ಮ ಜೀವನವನ್ನು ತಿ... ಕೊಂಡ ಎಷ್ಟೋ ಜನರ ಪತ್ರಗಳು ನನ... ಬಂದಿವೆ. ಅವನ್ನು ಕಂಡಾಗ ನನ್ನ ಜೀವ... ಸಾರ್ಥಕವಾಯಿತು ಎಂದು ನನಗನ್ನಿಸುತ್ತ... ಇದಕ್ಕಿಂತಲೂ ಹೆಚ್ಚೇನುಬೇಕು ಮನುಷ್ಯನಿಗೆ... ಎಂದು ಅವರು ಹೇಳುವಾಗ ಅವರ ಸುಂದ... ಮಧುರ-ತೃಪ್ತ ಜೀವನದ ಛಾಯೆ ಅವರ ಮು... ವನ್ನು ಬೆಳಗುತ್ತದೆ.


ಆರೋಗ್ಯವಾದ ಮಗು
ಮೋಹನ್ ಮತ್ತು ಕಮಲರಿಗೊಂದು ಮಗು
ದಾದಿಯು ಅವರಿಗೆ ಒಳ್ಳೆಯ ಸಲಹೆಯನ್ನು ಕೊಡುತ್ತಾಳೆ.
ಹೊಟ್ಟೆಯೊಳಗಿನ ಉಪದ್ರವ ಮತ್ತು ವಾಯುವಿನಿಂದ ನಿಮ್ಮ ಮಗುವನ್ನು ಸಂರಕ್ಷಿಸಿ...
MANNERS
ಮಗುವಿಗೆ ಪ್ರತಿದಿನ, ಎರಡು ಸಲ, ಮ್ಯಾನರ್ಸ್ ಗ್ರೈಪ್ ಮಿಕ್ಶ್ಚರ್ ಕೊಡಿ.....
ಮಗುವಿಗೆ ಮ್ಯಾನರ್ಸ್ ಗ್ರೈಪ್ ಮಿಕ್ಶ್ಚರಿನ ರುಚಿ ಹಿಡಿಸುತ್ತದೆ.
ಅವನೆಷ್ಟು ಹಸನ್ಮುಖಿಯೂ ಉತ್ಸಾಹಿಯೂ ಆಗಿದ್ದಾನೆಂದು ನೋಡು.
ತಿಂಗಳುಗಳ ತರುವಾಯ
ಮ್ಯಾನರ್ಸ್ ಗ್ರೈಪ್ ಮಿಕ್ಶ್ಚರ್ ಹಲ್ಲು ಬರುವ ಸಮಯದಲ್ಲಿ ಕೂಡ ಮಗುವನ್ನು ಆರೋಗ್ಯವಾಗಿಯೂ ಹಸನ್ಮುಖವಾಗಿಯೂ ಇಡುತ್ತದೆ.
ಮ್ಯಾನರ್ಸ್ ಗ್ರೈಪ್ ಮಿಕ್ಶ್ಚರ್ ಕೊಟ್ಟು
ಮುಖದಲ್ಲಿ ಪುನಃ ಮುಗುಳುನಗೆ ಮೂಡುವುದನ್ನು ನೋಡಿರಿ
GEOFFREY MANNERS & CO. LTD.

ರಹಸ್ಯಮಯಿ ರಾಜಕುಮಾರಿ

ವಿವಿಧ ಮೂಲಗಳಿಂದ

ಜರ್ಮನಿಯ ಕೃಷ್ಣಾರಣ್ಯ (ಬ್ಲಾಕ್ ಫಾರೆಸ್ಟ್)-ದ ಉತ್ತರ ಭಾಗದಲ್ಲಿ ಸ್ಟಟಗಾರ್ಟ್ ನಗರದ ಹತ್ತಿರ ಇರುವ ಅಂಟಲ್‌ಲೆಂಗನ್ ಹಾರ್ಟ್ ಎಂಬ ಕುಗ್ರಾಮದ ಒಂದು ಚಿಕ್ಕ ಹಾಳು ಬಿದ್ದ ತೋಟದಲ್ಲಿ ಜಿಂಕ್ ಶೀಟುಗಳಿಂದ ರಚಿಸಿದ ಮನೆಯೊಂದಿದೆ. ಅದರ ಆವಾರವನ್ನು ಮುಳ್ಳು ತಂತಿ ಬೇಲಿ ಆವರಿಸಿದೆ. ಅದರ ಗೇಟಿಗೆ ಯಾವಾಗಲೂ ಬೀಗ ಹಾಕಿರುತ್ತದೆ.

ಈ ಮನೆಯೊಳಗೆ ರಹಸ್ಯಮಯ ವ್ಯಕ್ತಿಯೊಂದು ವಾಸಿಸುತ್ತಿದೆ. ಅನ್ನಾ ಆಂಡರ್‌ಸನ್ ಎಂದವಳ ಹೆಸರು. ಬಾಹ್ಯ ಜಗತ್ತಿನಿಂದ ಸಂಪೂರ್ಣ ವಿರಕ್ತಳಾಗಿ ಯಾರಿಗೂ ಭೆಟ್ಟಿಕೊಡದೆ ಅರವತ್ತು ದಾಟಿದ ಈ ಮಹಿಳೆಯನ್ನು ಕಾಣಲೆಂದು ದೇಶವಿದೇಶಗಳಿಂದ ಜನ ಬರುತ್ತಾರೆ. ಯಾರಿಗೂ ಆ ಗೇಟಿನೊಳಗೆ ಬರಲು ಅವಕಾಶವಿಲ್ಲ. ನೆರೆಮನೆಯವರು ಕೂಡ ಅವಳನ್ನು ಕಾಣದೆ ಎಷ್ಟೋ ವರ್ಷವಾಗಿ ಹೋಯಿತು. ಎಷ್ಟೋ ವೇಳೆ ಗೇಟಿನಲ್ಲಿ ಕಾದು ನಿರಾಶರಾದ ಜನ ರೊಚ್ಚಿಗೆದ್ದು ಮನೆಯತ್ತ ಕಲ್ಲುಗಳನ್ನೊಗೆಯುತ್ತಾರೆ. ಅವು ತಗಡಿನ ಮೇಲೆ ಬಿದ್ದು ಸಪ್ಪಳ ಮಾಡುತ್ತವೆ.



ಈ ಮನೆಯೊಳಗಿರುವ ವ್ಯಕ್ತಿ ರಶಿಯದ ಕೊನೆಯ ಸಾರ್ವಭೌಮನ ಮಗಳು ಅನಾಸ್ತಾಶಿಯಾಳೆ? ಈ ಬಗ್ಗೆ ಒಂದಕ್ಕಿಂತ ಹೆಚ್ಚು ಪುಸ್ತಕಗಳು ಬರೆಯಲ್ಪಟ್ಟಿವೆ. ಒಂದು ನಾಟಕ ರಚಿಸಲ್ಪಟ್ಟಿದೆ. ಎರಡು ಚಲಚ್ಚಿತ್ರಗಳು ನಿರ್ಮಾಣವಾಗಿವೆ. ನ್ಯಾಯಾಲಯಗಳಲ್ಲಿ ದಾವೆಗಳಾಗಿವೆ. ಆದರೂ ರಹಸ್ಯ ಹಾಗೆಯೆ ಉಳಿದಿದೆ. ಬಹುಶಃ ನಿಜ ಸಂಗತಿ ಆ ಮಹಿಳೆಗೆ, ಅವಳ ಒಬ್ಬ ಸಹಕಾರಿಣಿಗೆ ಮತ್ತು ದೇವರಿಗೆ ಮಾತ್ರವೇ ಗೊತ್ತಿರಬಹುದು. ಮತ್ತು ಅದು ಅನಂತಕಾಲದ ವರೆಗೂ ಬಿಡಿಸಲ್ಪಡಲಾಗದ ಒಗಟುಗಳಲ್ಲಿ ಒಂದಾಗಿ ಉಳಿಯಬಹುದು.

ರಹಸ್ಯದ ಮೂಲ

೧೯೧೭ ರ ಆ ಘೋರ ವರ್ಷದಲ್ಲಿ ನಡೆದ ಘಟನೆಗಳಲ್ಲಿದೆ. ಮೊದಲನೇ ಮಹಾಯುದ್ಧದಲ್ಲಿ ಭಾಗವಹಿಸಿ ನಿಶ್ಶೇತನವಾದ ರಶಿಯದಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯಾಗಿ ಚಕ್ರವರ್ತಿ ಎರಡನೇ ನಿಕೊಲಸನನ್ನು ಪದಚ್ಯುತಗೊಳಿಸ

ಲಾಯಿತು. ಕೆರೆನ್ಸ್ಕಿಯ ಸರಕಾರ ನಿಕೊಲಸನನ್ನೂ ಅವನ ಕುಟುಂಬದವರನ್ನೂ ಬಂಧಿಸಿ ಸೆರೆಯಲ್ಲಿಟ್ಟರು. ಇದು ಫೆಬ್ರುವರಿ ೧೯೧೭ ರಲ್ಲಿ. ಎಂಟು ತಿಂಗಳ ನಂತರ ಕಮ್ಯುನಿಸ್ಟರು ಕೆರೆನ್ಸ್ಕಿಯ ಸರಕಾರವನ್ನು ಉರುಳಿಸಿ 'ಕೂಲಿಕಾರರ ಸರ್ವಾಧಿಕಾರ'ವನ್ನು ಸ್ಥಾಪಿಸಿದರು. ಬಂಧನದಲ್ಲಿದ್ದ ನಿಕೊಲಸ್ ಮತ್ತು ಅವನ ಪರಿವಾರ ಬಂಧನದಲ್ಲೇ ಉಳಿಯಿತು. ಕಮ್ಯುನಿಸ್ಟ್ ಕ್ರಾಂತಿಯನ್ನು ನೆಲಸಮ ಮಾಡಲು ಬ್ರಿಟನ್ ಆದಿಯಾಗಿ ಹದಿನಾಲ್ಕು ರಾಷ್ಟ್ರಗಳು ರಶಿಯದ ಮೇಲೆ ಸುತ್ತುಗಡೆಯಿಂದಲೂ ದಾಳಿ ಮಾಡಿದರು ವೈರಿಗಳ ಚಲನವಲನವನ್ನನುಸರಿಸಿ ಕಮ್ಯುನಿಸ್ಟರು ಚಕ್ರವರ್ತಿಯನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುತ್ತ ಕೊನೆಗೆ ಉರಲ ಪರ್ವತಗಳ ಬುಡದಲ್ಲಿದ್ದ ಎಕಾಟೆರಿನ್ ಬರ್ಗಿನ ಒಬ್ಬ ವ್ಯಾಪಾರಿಯ ಅರಮನೆಯಲ್ಲಿ ಸ್ಥಾನಬದ್ಧಗೊಳಿಸಿದರು.

ಇಲ್ಲಿಯೇ ೧೯೧೮ ಜುಲೈಯಲ್ಲಿ ಕಮ್ಯುನಿಸ್ಟ ಸರಕಾರಕ್ಕೆ ಅಳಿಸಲಾರದ ಅಪಕೀರ್ತಿಯನ್ನು ತಂದ ಕಗ್ಗೊಲೆ ನಡೆದದ್ದು. ಎದುರಾಳಿಗಳ ದಳ ಎಕಾಟೆರಿನ್ ಬರ್ಗಿಗೆ ಹತ್ತಿರವಾಗುತ್ತಿದೆಯೆಂಬ ವಾರ್ತೆ ಕೇಳಿ, ರಾಜಕುಲವು ಶತ್ರುಗಳ ಕೈಗೆ ಬಿದ್ದರೆ ಅವರ ಕೈಬಲವಾದೀತೆಂದು ಬೆದರಿದ ಸ್ಥಾನಿಕ ಕಮ್ಯುನಿಸ್ಟರು ಮಾಸ್ಕೋದಲ್ಲಿದ್ದ ವರಿಷ್ಠರನ್ನು ಕೇಳದೇನೇ ಚಕ್ರವರ್ತಿ ಮತ್ತು ಅವನ ಬಳಗದವರನ್ನು ಮುಗಿಸಿಬಿಡಲು ನಿರ್ಧರಿಸಿದರು. ನಿಕೊಲಸ್, ಅವನ ಪತ್ನಿ, ಹಸುಳೆ ಮಗ, ನಾಲ್ವರು ಹೆಣ್ಣು ಮಕ್ಕಳು ಮತ್ತು ರಾಜಕುಲದ ಆಪ್ತ ಸೇವಕರೆಲ್ಲರನ್ನೂ ಒಂದು ಅಂಗಳದಲ್ಲಿ ಕಲೆ ಹಾಕಿ ಮೆಶೀನ್‌ಗನ್ನುಗಳಿಂದ ಎಲ್ಲರನ್ನೂ ವಧಿಸಿ ಒಂದು ಪಾಳುಬಿದ್ದ ಗಣಿಯಲ್ಲಿ ಹೆಣಗಳನ್ನು—ಅವರ ಪ್ರೀತಿಯ ನಾಯಿ ಸಹಿತ—ಸುಡಲಾಯಿತು.

ಆದರೆ ನಿಜವಾಗಿ ಎಲ್ಲರೂ ಈ ಹತ್ಯಾಕಾಂಡಕ್ಕೆ ಆಹುತಿಯಾದರೆ? ಈಗ ಅನ್ನಾ ಆಂಡರ್‌ಸನ್ ಎಂದು ಕರೆಸಿಕೊಳ್ಳುವ ಹೆಂಗಸು ಹೇಳುತ್ತಿರುವುದು ನಿಜವಾದರೆ, ಒಬ್ಬಳು ಮಾತ್ರ ಇದರಿಂದ ಪಾರಾಗಿ ಬದುಕುಳಿದಿದ್ದಳು.

ಅವಳೇ ಹದಿನೇಳು ವರ್ಷದ ಅನಾಸ್ತಾಶಿಯಾ. ಅವಳು ನಿಕೊಲಸನ ಕೊನೆಯ ಮಗಳು ಮತ್ತು ಪರಮ ಸುಂದರಿ. ಅವಳಿಗೂ ಗುಂಡು ನಾಟಿತ್ತು. ಆದರೆ ಅವಳು ಸತ್ತಿರಲಿಲ್ಲವೆಂದು ಅನ್ನಾ ಹೇಳುತ್ತಾಳೆ— ಮತ್ತು ಅವಳ ಮಾತನ್ನು ಬೆಂಬಲಿಸುವ ಅನೇಕ ಜನರೂ ಇದ್ದಾರೆ.

ರಾಜಕುಮಾರಿ ಅನಾಸ್ತಾಶಿಯಳು ಪಾರಾಗಿ ಹೋದ ಕಥೆ ಈ ಘಟನೆಗಳು ಜರುಗಿ ನಾಲ್ಕು ವರ್ಷಗಳ ವರೆಗೂ ಕೇಳಿ ಬರಲಿಲ್ಲ. ಜರ್ಮನಿಯಲ್ಲಿ ಅನಂತರ ಈ ವಿಚಿತ್ರ ಕಥೆ ಪ್ರಚಲಿತವಾಗತೊಡಗಿತು. ೧೯೨೦ ಫೆಬ್ರುವರಿ ೧೭ ರಂದು ಬರ್ಲಿನ್ನಿನ ಲ್ಯಾಂಡ್‌ವೆಹರ್ ಕಾಲುವೆಯಲ್ಲಿ ತರುಣಿಯೊಬ್ಬಳು ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದಳು. ಯಾರೂ ಇದಕ್ಕೆ ಮಹತ್ವ ಕೊಡಲಿಲ್ಲ. ಯುದ್ಧದಲ್ಲಿ ಸೋತ ಜರ್ಮನಿಯ ವಿಪನ್ನಾವಸ್ಥೆಯಲ್ಲಿ ಇಂಥ ದುರ್ಮರಣಗಳು ಸಾಮಾನ್ಯವಾಗಿ ಬಿಟ್ಟಿದ್ದವು. ಪೋಲೀಸರು ಅವಳನ್ನು ಪಾರು ಮಾಡಿದರು. ಅವಳ ಬುದ್ಧಿ ಸ್ಥಿಮಿತದಲ್ಲಿದ್ದಂತೆ ಕಾಣಲಿಲ್ಲವಾದ್ದರಿಂದ ನಿರ್ಗತಿಕಳಾಗಿದ್ದ ಅವಳನ್ನು ಡಹಲ್‌ಡಾರ್ಫ್ ಹುಚ್ಚರಾಸ್ಪತ್ರೆಗೆ ಸೇರಿಸಲಾಯಿತು. ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಅವಳ ಶುಶ್ರೂಷೆ ಮಾಡಿ ಡಾಕ್ಟರರು ಅವಳನ್ನು ಸ್ತಿಮಿತಕ್ಕೆ ತಂದರು.

ಬುದ್ಧಿ ಸರಿಯಾದ ಮೇಲೆ ಅವಳು ತನ್ನ ಆತ್ಮಕಥೆಯಿಂದ ಡಾಕ್ಟರರನ್ನು ವಿಸ್ಮಯಗೊಳಿಸಿದಳು. ತಾನು ಎರಡನೇ ನಿಕೊಲಸ್ ದೊರೆಯ ಕಿರಿ ಮಗಳು ಅನಾಸ್ತಾಶಿಯಾ ಎಂದವಳು ಸಾರಿದಳು. ಮೊದಮೊದಲು ಡಾಕ್ಟರರು ಇದು ಹುಚ್ಚಿಯೊಬ್ಬಳ ವಿಕೃತ ಕಲ್ಪನಾ ವಿಲಾಸವೆಂದು ಬಗೆದು ಸುಮ್ಮನಿದ್ದರು. ಏಕೆಂದರ ಮಾಸ್ಕೊದಲ್ಲಿದ್ದ ಕಮ್ಯುನಿಸ್ಟ್ ವರಿಷ್ಠರು ಸುದ್ದಿಯನ್ನು ಕೆಲ ಕಾಲ ಗುಟ್ಟಾಗಿರಿಸಿ ಆಮೇಲೆ ರಾಜಕುಲದವರೆಲ್ಲರ ಕೊಲೆಯಾದಸಮಾಚಾರವನ್ನು ಪ್ರಕಟಿಸಿತ್ತಲ್ಲದೆ ಈ ಅನಧಿಕೃತ ಹತ್ಯಾಕಾಂಡಕ್ಕೆ ಕಾರಣರಾದ ಸ್ಥಾನಿಕ ಕಮ್ಯುನಿಸ್ಟರನೇಕರನ್ನು ೧೯೧೯ ರಲ್ಲೇ ಗಲ್ಲಿಗೇರಿಸಿತ್ತು. ಯಾರೂ ಪಾರಾದ ವರ್ತ

ಮಾನ ಕಮ್ಯುನಿಸ್ಟ್ ಪ್ರಕಟನೆಯಲ್ಲಿದ್ದಿಲ್ಲ.

ಆದರೆ ಇಪ್ಪತ್ತೊಂದರ ಈ ತರುಣಿ ತನ್ನ ಗತ ಕಾಲವನ್ನು ಮತ್ತೂ ಮತ್ತೂ ವರ್ಣಿಸಿದಾಗ ಡಾಕ್ಟರರು ಅದನ್ನು ಅಲಕ್ಷಿಸಲಾರದೆ ರಶಿಯದ ಚಕ್ರವರ್ತಿ ಕುಲದ ಪರಿಚಯವುಳ್ಳವರನ್ನು ಕರೆಸಿ ತೋರಿಸಿದರು. ಅವಳು ನಿಜವಾಗಿ ಅನಾಸ್ತಾಶಿಯಾ ಎಂದು "ನಿಸ್ಸಂಶಯವಾಗಿ ನಂಬುವವರು ಅನೇಕರಿದ್ದಾರೆ" ಎಂದು ೧೯೨೨ ರಷ್ಟು ಹಿಂದಿನ ವರದಿಗಳು ಹೇಳುತ್ತವೆ.

ಇವಳು ಅನಾಸ್ತಾಶಿಯಾ ಅಲ್ಲ, ಬೇರೆ ಯಾರೋ ಮೋಸಗಾರಗಳು ಎನ್ನುವವರೂ—ನಿಕೊಲಸ್ ಕುಟುಂಬದ ಪರಿಚಿತರಲ್ಲೇ—ಇದ್ದರು. ಹೀಗಾಗಿ ಪ್ರಚಂಡವಾದ ವಿವಾದವೊಂದು ಪ್ರಾರಂಭವಾಯಿತು. ಅದು ಇಂದಿಗೂ ಶಾಂತವಾಗಿಲ್ಲ.

೧೯೨೮ ರಲ್ಲಿ ಅವಳನ್ನು ಅವಳ ಬೆಂಬಲಿಗರು ಹೇಗೋ ಅಮೇರಿಕಕ್ಕೆ ಸಾಗಿಸಿದರು. ಆದರೆ ಅವಳು ಅಲ್ಲಿ ಬಹುಕಾಲ ನಿಲ್ಲಲಿಲ್ಲ. ತಿರುಗಿ ಯುರೋಪಿಗೆ ಮರಳಿದಳು. ಈಗವಳು ಅನ್ನಾ ಆಂಡರ್‌ಸನ್ ಎಂಬ ಹೆಸರನ್ನು ಹೊತ್ತಿದ್ದಳು. ಕೆಲ ವರ್ಷಗಳ ನಂತರ ಅವಳು ತನ್ನ ತಂದೆಯ ಆಸ್ತಿಯನ್ನು ತನಗೆ ಕೊಡಿಸಬೇಕೆಂದು ಕೋರ್ಟಿಗೆ ಹೋದಳು.

ಅನೇಕ ರಾಜಕುಟುಂಬಗಳ ಹಾಗೆ ರಶಿಯದ ಜಾರ್ ದೊರೆಗಳೂ ಆಪತ್ಕಾಲಕ್ಕೆ ಇರಲೆಂದು ವಿದೇಶಿ ಬ್ಯಾಂಕುಗಳಲ್ಲಿ ಹಣವನ್ನಿರಿಸಿದ್ದರು. ನಿಕೊಲಸ್ ಹೀಗೆ ಕೂಡಿಟ್ಟಿದ್ದ ಆಪದ್ಧನ ಎಷ್ಟೆಂದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಆದರೆ ಅದು ಕೋಟಿಗಟ್ಟಳೆ ಇರಬೇಕು. ಅನ್ನಾ ಆಂಡರ್‌ಸನ್ ಉರಫ್ ಅನಾಸ್ತಾಶಿಯಳ ಈ ಅರ್ಜಿಯ ವಿಚಾರಣೆ ಜರ್ಮನ್ ನ್ಯಾಯಾಲಯಗಳಲ್ಲಿ ವರ್ಷಗಟ್ಟಳೆ ಸಾಗಿ ೧೯೪೧ ರಲ್ಲಿ ತಳ್ಳಿಹಾಕಲ್ಪಟ್ಟಿತು.

ಎರಡನೇ ಮಹಾಯುದ್ಧದ ಕಾಲದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಅನೇಕ ಕಾಗದಪತ್ರಗಳು ಧ್ವಂಸವಾಗಿ ಹೋದವು. ಆದರೂ ಯುದ್ಧಾನಂತರ ಅವಳು ಮತ್ತೆ ಹೊಸದಾಗಿ ನ್ಯಾಯಾಲಯಕ್ಕೆ ಹೋದಳು.

ಅವಳು ತನ್ನ ಆತ್ಮಕಥೆಯನ್ನೂ ಬರೆದಳು. ೧೯೪೮ ರಲ್ಲಿ ಅದರ ಇಂಗ್ಲೀಷ್ ಆವೃತ್ತಿಯು ಹೊರಟಿತು. ೧೯೫೩ ರಲ್ಲಿ ಅವಳ ಜೀವನ ಕಥೆಯನ್ನಾಧರಿಸಿ, ಆದರೆ ಅನೇಕ ಕಾಲ್ಪನಿಕ ಕಥೆಗಳಿಂದೊಡಗೂಡಿ ಒಂದು ನಾಟಕ ಲಂಡನ್‌ನಲ್ಲಿ ಮತ್ತು ಅನಂತರ ನ್ಯೂಯಾರ್ಕಿನಲ್ಲಿ ಪ್ರದರ್ಶಿತವಾಯಿತು. ೧೯೫೫ ರಲ್ಲಿ ಅದರ ಚಲಚ್ಚಿತ್ರವೂ ಆಯಿತು. ಅದರಿಂದ ಅವಳಿಗೆ ೬೦,೦೦೦ಕ್ಕೂ ಹೆಚ್ಚು ಗೌರವಧನ ಲಭಿಸಿರಬೇಕು.

ಅವಳು ಆತ್ಮ ಕಥೆಯಲ್ಲಿ ("ನಾನು, ಅನಾಸ್ತಾಶಿಯಾ") ಹೇಳುವ ಕಥೆ ಇದು. ಎಕಾಟೆರಿನ್‌ಬರ್ಗಿನ ಹತ್ಯಾಕಾಂಡದಲ್ಲಿ ತಾನು ಸತ್ತಿರಲಿಲ್ಲ. ಹೆಣಗಳನ್ನು ಸುಡಲು ನಿಯೋಜಿತರಾಗಿದ್ದ ಕೆಂಪು ಸೈನ್ಯದ ಕಾವಲುಗಾರರಲ್ಲೊಬ್ಬನು ಇನ್ನೂ ಮಂದವಾಗಿ ಉಸಿರಾಡಿಸುತ್ತಿದ್ದ ತನ್ನನ್ನು ಉಳಿದವರ ಕಣ್ಣು ತಪ್ಪಿಸಿ ಅಲ್ಲಿಂದ ಹೊರಗೆ ಸಾಗಿಸಿ ಅನಂತರ ತನ್ನನ್ನು ಮದುವೆಯಾದನು. ಇಬ್ಬರೂ ಬುಖಾರೆಸ್ಟಿಗೆ ಓಡಿ ಬಂದೆವು. ಅಲ್ಲಿ ತನಗೊಂದು ಮಗು ಹುಟ್ಟಿತು. ಕಮ್ಯುನಿಸ್ಟರಿಗೆ ಇವಳು ಪಾರಾಗಿ ಹೋದ ಸುದ್ದಿ ಗೊತ್ತಿತ್ತು. ಸುಳಿವಿನ ಬೆನ್ನು ಹತ್ತಿಬಂದ ಕಮ್ಯುನಿಸ್ಟ್ ಗೂಢಚಾರರು ತನ್ನ ಗಂಡನನ್ನು ಕೊಂದು ಹಾಕಿದರು. ತಾನು ಮಾತ್ರ ಹೇಗೋ ತಪ್ಪಿಸಿಕೊಂಡು ಬಂದು ಬರ್ಲಿನ್ ತಲುಪಿದಳು. ಮಗುವನ್ನು ಅನಾಥಾಶ್ರಮಕ್ಕೆ ಮೊದಲೇ ಸೇರಿಸಲಾಗಿತ್ತು. ಅದರ ಗತಿಯೇನಾಯಿತೋ ಗೊತ್ತಿಲ್ಲ.

ಇದಕ್ಕೆಲ್ಲ ಆಧಾರವೇನು? ಮೊದಲನೆಯದಾಗಿ ಎಕಾಟೆರಿನ್‌ಬರ್ಗಿನ ಕಾಂಡದಲ್ಲಿ ಅನಾಸ್ತಾಶಿಯಾ ಸತ್ತಿದ್ದಿಲ್ಲವೆಂದು ನಂಬಲು ಕಾರಣಗಳಿವೆ. ಕೊಲೆಯಾದ ಕೆಲವೇ ತಾಸುಗಳಲ್ಲಿ ಕಮ್ಯುನಿಸ್ಟರು ಆ ಪಟ್ಟಣದ ಸಾರ್ವಜನಿಕ ಗೋಡೆಗಳಲ್ಲಿ ಈ ಪಲಾಯನದ ಬಗ್ಗೆ ಪ್ರಕಟನೆಗಳನ್ನು ಹಚ್ಚಿ, ಅವಳನ್ನು ಹಿಡಿದು ಕೊಟ್ಟವರಿಗೆ ಕೈತುಂಬ ಬಹುಮಾನ ಕೊಡುವುದಾಗಿ ಸಾರಿದ್ದರೆಂದು ವಿಶ್ವಸನೀಯ ಸಾಕ್ಷಿಗಳು ಹೇಳಿದ್ದಾರೆ. ಆ ಬಳಿಕ ಅವಳನ್ನು ಅವರು ಹಿಡಿದು ಗುಂಡು ಹಾಕಿದರೋ ಇಲ್ಲವೋ ತಿಳಿಯದು. ಆದರೆ ಕಮ್ಯುನಿಸ್ಟರು ಹಾಗೆ ಸಾಧಿಸುತ್ತ ಬಂದಿದ್ದರು.

೧೯೨೨ ರಲ್ಲಿ ಬರ್ಲಿನ್ನಿನ ಪೋಲೀಸ್ ಕಮಿಶನರನು ಹುಚ್ಚರಾಸ್ಪತ್ರೆಯ ಈ ಹುಡುಗಿಯ ಗುರುತು ಹಿಡಿಯಲು ರಶಿಯನ್ ರಾಜಕುಲದ ಸಂಬಂಧಿಕರನ್ನು ತನ್ನ ಮನೆಗೆ ಕರೆಸಿದಾಗ ಕೆಲ ಅರ್ಥವತ್ತಾದ ಸಂಗತಿಗಳು ಬೆಳಕಿಗೆ ಬಂದವು. ರಾಜಕುಮಾರಿ ಅನಾಸ್ತಾಶಿಯಳ ಪಾದಗಳಲ್ಲಿ ಕೆಲ ಊನಗಳಿದ್ದವು. ಈ ತರುಣಿಯಲ್ಲಿಯೂ ಆ ಊನಗಳಿದ್ದವು. ಚಿಕ್ಕಂದಿನಲ್ಲಿ ಗಾಡಿಯ ಬಾಗಿಲೆಡೆ ಸಿಕ್ಕಿ ಎಡಗೈಯ ನಡುಬೆರಳಲ್ಲಿ ಈ ತರುಣಿಗೆ ಒಂದು ಗಾಯದ ಕಲೆಯಿತ್ತು. ನಿಜವಾದ ಅನಾಸ್ತಾಶಿಯಾಳಿಗೂ ಅದೇ ಬಗೆಯಿಂದಾದ ಕಲೆ ಅದೇ ಬೆರಳಿಗಿತ್ತೆಂದು ರಾಜಕುಮಾರಿಯ ಪರಿಚಿತರು ಹೇಳಿದ್ದಾರೆ. ರಾಜಕುಮಾರಿಯ ಎಡ ಭುಜಕ್ಕಿದ್ದ ಒಂದು ಮಚ್ಚೆಯನ್ನು ಕೊಯ್ದು ತೆಗೆದಿದ್ದರು; ಈ ತರುಣಿಯ ಅದೇ ಭುಜದಲ್ಲಿ ಅಂಥ ಕಲೆಯೊಂದಿತ್ತು.

ಕೆಲ ದೊಡ್ಡ ವ್ಯಕ್ತಿಗಳು ಅವಳು ನಿಜವಾಗಿ ರಾಜಕುಮಾರಿ ಅನಾಸ್ತಾಶಿಯಾ ಎಂದು ಗುರುತು ಹಿಡಿದಿದ್ದಾರೆ. ಅನಾಸ್ತಾಶಿಯಾಳ ಸಮ್ಮಂಧಿಕಳೂ ಚಿಕ್ಕಂದಿನಲ್ಲಿ ಅರಮನೆಯಲ್ಲಿ ಅವಳೊಡನೆ ಆಡಿದವಳೂ ಗ್ರೀಸಿನ ರಾಜಕುಟುಂಬದವಳೂ ಆಗಿದ್ದು ಮುಂದೆ ಅಮೇರಿಕದಲ್ಲಿ ವಿಲಿಯಂ ಲೀಡ್ಸ್ ಎಂಬ ಲಕ್ಷಾಧೀಶನನ್ನು ಮದುವೆಯಾದ ರಾಜಕುಮಾರಿ ಜೆನಿಯಾ ಅವಳು ನಿಸ್ಸಂಶಯವಾಗಿ ಅನಾಸ್ತಾಶಿಯಳೇ ಎನ್ನುತ್ತಾಳೆ. ರಶಿಯದ ರಾಜ ವೈದ್ಯನ ಮಗನಾದ ಗ್ಲೆಬ್ ಬೋಟ್ಕಿನ್ ಕೂಡ ಅವಳನ್ನು ಗುರುತಿಸಿದ್ದಾನೆ.

ಅವಳು ರಾಜಕುಮಾರಿಯಲ್ಲವೆಂದು ಸಾಧಿಸುವವರಾದರೂ ಅಷ್ಟೇ ಬಲವಾಗಿ ತಮ್ಮ ವಾದಗಳನ್ನು ಮಂಡಿಸುತ್ತಿದ್ದಾರೆ. ಅವರ ಒಂದು ವಾದವೆಂದರೆ, ಅನ್ನಾ ಆಂಡರ್‌ಸನ್ನಳು ರಶಿಯನ್ ಭಾಷೆ ಮಾತಾಡಲು ಒಡಂಬಡದಿರುವುದು. ಅವಳಿಗೆ ರಶಿಯನ್ ಬರುವುದಿಲ್ಲ. ಅದಕ್ಕೇ ಅವಳು ಅದನ್ನು ಮಾತಾಡಲೊಪ್ಪುವುದಿಲ್ಲ ಎಂದವರು ಹೇಳುತ್ತಾರೆ. ಅವಳು ಜರ್ಮನ್ ಚೆನ್ನಾಗಿ ಮಾತಾಡುತ್ತಿದ್ದಳು. ಇಂಗ್ಲಿಷ್ ಎಂದರೆ ಅವಳಿಗೆ ತುಂಬ ಪ್ರೇಮ.

ಆದರೆ ಅವಳ ಪಕ್ಷಪಾತಿಗಳು ಇದಕ್ಕೆ ಕಾರಣ ಕೊಡುತ್ತಾರೆ. ರಶಿಯನ್ ರಾಜಕುಲದವರಿಗೆ ರಶಿಯನ್ ಭಾಷೆಯ ಮೇಲಿದ್ದ ಗೌರವ ಅಷ್ಟಕ್ಕಷ್ಟೇ. ಸೇವಕರೊಡನಷ್ಟೇ ಅವರು ರಶಿಯನ್ ಮಾತಾಡುತ್ತಿದ್ದರಂತೆ. ತಮ್ಮತಮ್ಮೊಳಗೆ ಇಂಗ್ಲೀಷನ್ನೇ ಅವರು ಬಳಸುತ್ತಿದ್ದರಂತೆ.

ಈ ರಹಸ್ಯದ ಸತ್ಯಶೋಧನೆಯಲ್ಲಿ ;ಆರ್ಥಿಕ ಮತ್ತು ರಾಜಕೀಯ ತೊಡಕುಗಳು ಬೇರೆ ಆತಂಕವೊಡ್ಡಿವೆ. ನಿಕೊಲಸನು ವಿದೇಶಿ ಬ್ಯಾಂ-ಕುಗಳಲ್ಲಿ ಶೇಖರಿಸಿಟ್ಟ ಅಪಾರ ಸಂಪತ್ತಿನ ಆಮಿಷ ಈ ಹೆಂಗಸನ್ನು ತಾನು ರಾಜಕುಮಾರಿಯೆಂದು ಸಾಧಿಸುವಂತೆ ಪ್ರೇರಿಸಿರಬಹುದು, ಅಥವಾ ಆ ಸಂಪತ್ತಿನ ಮೇಲೆ ಕಣ್ಣಿಟ್ಟವರು ಅವಳನ್ನು ಎತ್ತಿ ಕಟ್ಟಿರಬಹುದು. ಅದೇ ಪ್ರಕಾರ ಅವಳ ರಾಜಕುಮಾರಿತ್ವವನ್ನು ನಿರಾಕರಿಸುವವರು ಹಣದಾಸೆಗಾಗಿ ಹಾಗೆ ಮಾಡುವ ಸಂಭವ ಇಲ್ಲದಿಲ್ಲ. ರಶಿಯನ್ ಚಕ್ರವರ್ತಿಯ ಮಗಳು ಬದುಕಿಲ್ಲವೆಂದು ಸಿದ್ಧವಾದರೆ ಆ ಸಂಪತ್ತು ಚಕ್ರವರ್ತಿಯ ಇತರ ನಿಕಟ ಸಂಬಂಧಿಕರಿಗೆ ಸಿಗಬಹುದಲ್ಲವೆ?

ಅನ್ನಾ ಆಂಡರಸನ್ ರಾಜಕುಮಾರಿಯಲ್ಲದಿದ್ದರೆ ಯಾರಾಗಿರಬಹುದು? ಅವಳಿಗೆ ರಾಜಕುಟುಂಬದ ಆಗುಹೋಗುಗಳ ನಿಕಟ ಪರಿಚಯ ಹೇಗಾಗಿರಬಹುದು? ಅವಳಿಗೆ ರಶಿಯನ್ ಚಕ್ರವರ್ತಿಯ ಕುಟುಂಬದ ಮತ್ತು ಘಟನೆಯ ಬಗ್ಗೆ ಅತ್ಯಂತ ಸೂಕ್ಷ್ಮಜ್ಞಾನವಿರುವದಂತೂ ನಿಜ.

ಈ ಬಗ್ಗೆ ಎಷ್ಟೋ ಊಹಾಪೋಹಗಳನ್ನು ಮಂಡಿಸಲಾಗಿದೆ. ಅವುಗಳಲ್ಲಿ ಸತ್ಯವಾಗಿ ಕಾಣುವ ಒಂದು ತರ್ಕವೆಂದರೆ, ಇವಳು ನಿಜವಾಗಿ ಚಕ್ರವರ್ತಿಯ ಅರಮನೆಯಲ್ಲಿ ಪ್ರತೀಹಾರಿಣಿಯಾಗಿದ್ದ ಫ್ರಾ ವಾನ್‌ತ್ಸೈಕೋವಸ್ಕಿಯೆಂಬ ಜರ್ಮನ್ ಮಹಿಳೆ. ಅವಳಿಗೂ ರಾಜಕುಮಾರಿಗೂ ತುಂಬಾ ಹೋಲಿಕೆಯಿತ್ತೆಂದು ತಿಳಿದುಬಂದಿದೆ. ರಾಜಕುಲದ ಅವಸಾನವಾದ ನಂತರ ಚಕ್ರವರ್ತಿಯ ದೂರದ ಸಂಬಂಧಿಕನೊಬ್ಬನೊಡನೆ ಅವಳು ಪಾರಾಗಿ ಜರ್ಮನಿಗೆ ಬಂದಳು. ಅಲ್ಲಿ ರಶಿಯದಿಂದ ಓಡಿಬಂದ ಅನೇಕ ರಾಜಪಕ್ಷಪಾತಿಗಳ ಪರಿಚಯ ಅವಳಿಗಾ

ಯಿತು. ರಾಜಕುಮಾರಿ ಅನಾಸ್ತಾಶಿಯಳಿಗೂ ಈ ತರುಣಿಗೂ ಇದ್ದ ಹೋಲಿಕೆಯನ್ನು ನೋಡಿ ಈ ಜನರು ರಶಿಯದಲ್ಲಿ ಪುನಃ ರಾಜಸತ್ತೆಯನ್ನು ಸ್ಥಾಪಿಸುವ ಚಳವಳಿಗೆ ಇವಳು ಕೇಂದ್ರಬಿಂದುವಾಗಬಲ್ಲಳೆಂದು ಇವಳನ್ನು ರಾಜಕುಮಾರಿಯಂತೆ ನಟಿಸಲು ಪ್ರೇರಿಸಿದರು.

ಅಸಂಭವವೇನೂ ಅಲ್ಲ. ಆದರೂ ವಿಷಯವನ್ನು ಗಾಢವಾಗಿ ಅಭ್ಯಸಿಸಿ ಹೆಚ್ಚಿನ ತಜ್ಞರು ಇವಳು ನಿಜವಾಗಿಯೇ ಅನಾಸ್ತಾಶಿಯಳೆಂದು ನಂಬಿದ್ದಾರೆ. ಇಷ್ಟಿದ್ದರೂ ಹ್ಯಾಂಬುರ್ಗಿನ ಜರ್ಮನ್ ನ್ಯಾಯಾಲಯವು ೧೯೫೯ ರಲ್ಲಿ ಅವಳ ಅರ್ಜಿಯನ್ನು ಕೊನೆಯದಾಗಿ ಕಿತ್ತುಹಾಕಿದೆ.

ಹೀಗಾಗಿ ನಿಜಕ್ಕೂ ರಾಜಕುಮಾರಿಯೆ ಆಗಿರಬಹುದಾದ ಮಹಿಳೆಯೊಬ್ಬಳು ಇಂದು ತಗಡಿನ ಶೆಡ್ಡಿನಲ್ಲಿ ಮೈ-ಮನಸುಗಳೆರಡರಲ್ಲೂ ಶಿಥಿಲಳಾಗಿ ವಾಸಿಸಬೇಕಾಗಿದೆ. ರಶಿಯನ್ ಗೂಢಚಾರರು ಅವಳ ಮೇಲೆ ಸದಾ ಕಣ್ಣಿಟ್ಟಿರುತ್ತಾರೆ. ಹೊಸಹೊಸ ಪಾಯಿಂಟುಗಳನ್ನು ಕಂಡುಹಿಡಿದು ವಕೀಲರು ಅವಳ ಪರವಾಗಿ ಹೊಸ ನ್ಯಾಯ ಹೂಡಬಹುದೇ ಎಂದು ಯೋಚಿಸುತ್ತಿದ್ದಾರೆ. ಆದರೆ ಅವಳಿಗೀಗ ಧೈರ್ಯ ಉಳಿದಿಲ್ಲ. ಜೀವನದ ನಲುವತ್ತು ವರ್ಷಗಳನ್ನವಳು ಆಸ್ಪತ್ರೆಗಳ ಒಳಗೂ ಹೊರಗೂ ಕಳೆದಿದ್ದಾಳೆ. ಅವಳಿಗೆ ಕ್ಷಯರೋಗ ಆಗಾಗ್ಗೆ ಮರುಕಳಿಸುತ್ತದೆ. ಮನುಷ್ಯಮಾತ್ರರನ್ನು ನೋಡುವ ಇಚ್ಛೆ ಅವಳಿಗಿಲ್ಲ. ಈಗ ಇಪ್ಪತ್ತೊಂದು ವರ್ಷಗಳಿಂದ ಅವಳನ್ನು ಕಾಣಲು ಮುಕ್ತದ್ವಾರವುಳ್ಳ ಒಬ್ಬಳೇ ವ್ಯಕ್ತಿಯೆಂದರೆ ಬೆರನೆಸ್ ವಾನ್ ಮಿಲ್‌ಟಿಟ್ಸ್, ಮತ್ತು ಅವಳ ಸಂಗಡವೇ ವಾಸಿಸುವ ಜರ್ಮನ್ ವಿಧವೆ ವಾನ್ ಹೈಡ್‌ಬ್ರಾಂಡ್.

ರಾಜಕುಮಾರಿಯೆ ಇರಲಿ, ಇತರರ ಕೈಗೊಂಬೆಯಾಗಿ ಹಾಗೆ ನಟಿಸುವವಳೇ ಇರಲಿ, ಇವಳ ಜೀವನ ಕರುಣಾಸ್ಪದವಾಗಿದೆ. ಅವಳು ಅಗಾಧ ಬಡತನದಲ್ಲಿ, ರೆಡ್‌ಕ್ರಾಸಿನವರು ಕೊಡುವ ೧೩೦ ರೂಪಾಯಿಯ ಮಾಸಿಕ ಜೀವನಾಂಶದಿಂದ ಬಾಳಬೇಕಾಗಿದೆ. *

ಚುಟುಕುಗಳು

'ಮಕ್ಕಳದಿನಾಚರಣೆ'ಯಂದು ನೆಹರೂಜಿಯವರು ಒಂದು ಹಳ್ಳಿ ಶಾಲೆಗೆ ಭೇಟಿ ಇತ್ತಿದ್ದರು. ಶಾಲೆಯ ಮಕ್ಕಳು ಆದಿನದ ಸಮಾರಂಭದ ನಂತರ ಅವರ ಹಸ್ತಾಕ್ಷರ (Autography) ಕ್ಕಾಗಿ ಅವರನ್ನು ಮುತ್ತಿದರು. ಒಬ್ಬ ಹುಡುಗ ಅವರ ಕೈಗೆ ಒಂದು ಪುಸ್ತಕವನ್ನಿತ್ತು "ದಯವಿಟ್ಟು ಇದರಲ್ಲಿ 'ಸೈನ್' ಮಾಡಿ" ಎಂದು ಹೇಳಿದ. ನೆಹರೂ ಇಂಗ್ಲೀಷಿನಲ್ಲಿ ತಮ್ಮ ಸಹಿ ಹಾಕಿದರು. "ತಾರೀಕನ್ನೂ ಹಾಕಿಕೊಡಿ" ಎಂದು ಗೋಗರೆದ ಆ ಹುಡುಗ. ನೆಹರೂಜಿ ನಸುನಗುತ್ತಾ ಹಿಂದಿಯಲ್ಲಿ ತಾರೀಕನ್ನೂ ಬರೆದುಕೊಟ್ಟರು.

"ಇದೇನು ಇಂಗ್ಲೀಷಿನಲ್ಲಿ 'ಸೈನ್' ಮಾಡಿ ಹಿಂದಿಯಲ್ಲಿ ತಾರೀಕು ಹಾಕಿದ್ದೀರಿ" ಎಂದು ಕೇಳಿದ ಆ ಹುಡುಗ ಸಲುಗೆಯಿಂದ.

ಅದಕ್ಕೆ ನೆಹೂರೂಜಿ, "ನೋಡು! ಸೈನ್ ಎಂಬುದು ಇಗ್ಲೀಷ ಶಬ್ಬ, ಆದರೆ 'ತಾರೀಖು' ಎಂಬುದು ಹಿಂದಿ ಶಬ್ದ" ಎಂದು ಹೇಳಿ ಮುಗುಳ್ನಕ್ಕರು.

* * *

ಡಾ. ಜಾನಸನ್ನರು ಬರೆಯುವಾಗ ತಮ್ಮ ಪ್ರೀತಿಯ ಬೆಕ್ಕನ್ನು ಮೇಜಿನ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದರು. ಬೆಕ್ಕು ಬಳಿ ಇರದಿದ್ದರೆ ಅವರ ಲೇಖನಿ ಮುಂದೋಡುತ್ತಿರಲಿಲ್ಲ.

ನಾಗೇಶರಾವ್, ಉಡುಪಿ

ಹೊಗೆಸೊಪ್ಪಿನ ಈ ಪ್ರಯೋಜನಗಳು

ಬಿ. ಎಸ್. ನರಹರಿರಾವ್

ಹೊಗೆಸೊಪ್ಪನ್ನು ಯಾವುದಾದರೂ ಒಂದು ರೂಪದಲ್ಲಿ ಬಳಸದ ಜನಗಳ ಸಂಖ್ಯೆ ಜಗತ್ತಿನಲ್ಲಿ ಅತಿ ಕಡಿಮೆಯೆನ್ನಬಹುದು. ಆದರೆ ಹೊಗೆಸೊಪ್ಪು ಬೀಡಿ, ಸಿಗಾರೆಟ್ ನಶ್ಯ ಮುಂತಾದ ರೂಪದಲ್ಲಿ ಸೇದುವದಕ್ಕೂ ಎಲೆ ಅಡಿಕೆಯ ಜೊತೆ ಮೆಲ್ಲುವುದಕ್ಕೂ ಮಾತ್ರ ಉಪಯೋಗಕ್ಕೆ ಬರುತ್ತದೆಂದು ಜನರು ಸಾಮಾನ್ಯವಾಗಿ ತಿಳಿದಿದ್ದಾರೆಯೆ ವಿನಾ ಅದರ ಇತರ ಪ್ರಯೋಜನಗಳ ಬಗ್ಗೆ ಅವರಿಗೆ ಹೆಚ್ಚಾಗಿ ಗೊತ್ತಿಲ್ಲ.

ಹೊಗೆಸೊಪ್ಪಿನ ಅತ್ಯಂತ ಪಟುವಾದ ಹಾಗೂ ಪ್ರಧಾನ ರಸಾಯನ ವಸ್ತುವಾದ 'ನಿಕೊಟಿನ್' ಹಲವಾರು ಸಂದರ್ಭಗಳಲ್ಲಿ ರಾಸಾಯನಿಕ ಹಾಗೂ ಕೈಗಾರಿಕಾ ಜಗತ್ತಿನಲ್ಲಿ ಬಹುಮುಖ ಉಪಯೋಗಗಳನ್ನು ಹೊಂದಿದೆ. ರಾಷ್ಟ್ರೀಯ ಪ್ರಯೋಗ ಶಾಲೆಗಳಲ್ಲೊಂದಾದ ಪುಣೆ ನಗರದಲ್ಲಿ ಸ್ಥಾಪಿತವಾಗಿರುವ ನ್ಯಾಶನಲ್ ಕೆಮಿಕಲ್ ಪರಿಶೋಧನಾಲಯದಲ್ಲಿ ಹೊಗಸೊಪ್ಪಿನ ಧೂಳಿನಿಂದ (ಬೀಡಿ, ಸಿಗಾರೆಟ್, ನಶ್ಯಗಳ ತಯಾರಿಕೆ ಕಾಲದಲ್ಲಿ ಶೇಕಡ ೭-೮ ರಷ್ಟು ಧೂಳಿನ ರೂಪದಲ್ಲಿ ಹೊರಬೀಳುತ್ತದೆ.) 'ನಿಕೊಟಿನ್‌ಸಲ್ಫೈಟ್' ಲವಣ ಪಡೆಯುವ ವಿಧಾನವನ್ನು ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಈ ವಿಧಾನವನ್ನು ಅನುಸರಿಸಿ ಗುಂಟೂರಿನಲ್ಲಿ ಟೊಬಾಕೊ ಬೈಪ್ರಾಡಕ್ಟ್ಸ ಸಂಸ್ಥೆಯವರು ಈ ರಾಸಾಯನಿಕ ವಸ್ತುವನ್ನು ಉತ್ಪಾದನೆ ಮಾಡುತ್ತಿದ್ದಾರೆ. 'ನಿಕೋಟಿನ್ ಸಲ್ಫೈಟ್' ಲವಣವನ್ನು ಆಧಾರವಸ್ತುವಾಗಿ ಬಳಸಿಕೊಂಡು ಕೈಗಾರಿಕೆ ಜಗತ್ತಿಗೆ ಬೇಕಾದ ನಿಕೋಟಿನ್ ಮೈಡ್, ನಿಕೋಟಿನಿಕ್ ಆಮ್ಲ ಪಡೆಯಲಾಗುತ್ತಿದೆ. ಇದರ ಜೊತೆಗೆ ಅನೇಕ ಕೀಟನಾಶಕ ವಸ್ತುಗಳ ತಯಾರಿಕೆಗೆ ಇದರ ಅವಶ್ಯಕತೆಯಿದೆ.

ಹೊಗೆಸೊಪ್ಪಿನ ಬೆಳೆಯನ್ನು ಪಡೆಯುವಾಗ ಹೊರಬೀಳುವ ಬೀಜಗಳನ್ನು ಇದುವರೆವಿಗೂ ನಾವು ಅಷ್ಟಾಗಿ ಉಪಯೋಗಿ ವಸ್ತುವೆಂದು ಪರಿಗಣಿಸಿಲ್ಲ. ಒಂದು ಎಕರೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಹೊಗೆಸೊಪ್ಪಿನಲ್ಲಿ ಸುಮಾರು ೧೭೫ ಪೌಂಡು ಬೀಜ ದೊರೆಯುತ್ತದೆ.

ಒಂದು ಔಂಸ ಬೀಜ ಸಂಗ್ರಹಣೆಯಾಗಲು ಸುಮಾರು ಮೂರು ಲಕ್ಷ ಬೀಜಗಳು ಬೇಕೆಂದಾಗ ಬೀಜ ಎಷ್ಟು ಚಿಕ್ಕದಾಗಿರುತ್ತದೆಂದು ತಿಳಿಯುವುದು. ಬೀಜದ ಶೇಕಡ ೩೫-೩೭ ಭಾಗ ಎಣ್ಣೆಯಿರುತ್ತದೆ. ಆದರೆ ಶೇಕಡ ಕೇವಲ ೨೭ ೨೮ ರಷ್ಟು ಮಾತ್ರ ಎಣ್ಣೆ ಪಡೆಯಲು ಸಾಧ್ಯವಿದೆ.

ತೆಳುವಾಗಿ, ಪಾರದರ್ಶಕವಾಗಿರುವ ಈ ತೈಲದ ವರ್ಣ ಹಸುರು ಮಿಶ್ರಿತ ಹಳದಿ ಬಣ್ಣವಾಗಿರುತ್ತದೆ. ಹಿತವಾದ ವಾಸನೆ ಹಾಗೂ ರುಚಿಯಿಂದ ಕೂಡಿರುವ ಈ ತೈಲವನ್ನು ಎಳ್ಳೆಣ್ಣೆ

ಯಂತೆ ಅಡುಗೆ ಊಟಗಳಿಗೆ ಬಳಸಲು ಸಾಧ್ಯವಿದೆ. 'ನಿಕೊಟಿನ್' ಇವರಲ್ಲಿ ಲೇಶಮಾತ್ರವೂ ಇಲ್ಲದಿರುವುದರಿಂದ ಇದರ ಬಳಕೆಯಿಂದ ದೇಹಾರೋಗ್ಯಕ್ಕೆ ತೊಂದರೆಯಿರುವುದಿಲ್ಲ. ಈಗಾಗಲೇ ಜರ್ಮನಿ ಹಾಗೂ ಬಲ್ಗೇರಿಯಾ ರಾಷ್ಟ್ರಗಳಲ್ಲಿ ಜನ ಈ ಎಣ್ಣೆಯನ್ನು ಊಟದಲ್ಲಿ ಬಳಸುತ್ತಿದ್ದಾರೆ.

ಆಂಧ್ರರಾಜ್ಯದ ಗುಂಟೂರು, ವಿಜಯವಾಡ ಹಾಗೂ ರಾಜಮಹೇಂದ್ರಿಯಲ್ಲಿ ಈ ಎಣ್ಣೆಯನ್ನು ವ್ಯಾಪಾರದ ದೃಷ್ಟಿಯಿಂದ ತಯಾರಿಸುವ ಕೇಂದ್ರಗಳಿವೆ. ಬಿಸಿನೀರಿನಲ್ಲಿ ಬೀಜಗಳನ್ನು ಕುದಿಸಿ ಅಂತಹ ನೀರನ್ನು ಹೊರಚೆಲ್ಲಿ, ಹೊಸನೀರು ಸೇರಿಸಿ ಪುನಃ ಕುದಿಸುವುದನ್ನು ಅನೇಕ ಬಾರಿ ಮಾಡುವುದರಿಂದ ಬೀಜದಲ್ಲಿರುವ ಕಹಿ ಅಂಶವನ್ನು ನಿರ್ಮೂಲವಮಾಡಬಹುದು. ಅನಂತರ ಗಾಣದ ಸಹಾಯದಿಂದ ಅಥವಾ ಸೂಕ್ತವಾದ ದ್ರವವಸ್ತುವನ್ನು ಬೀಜಕ್ಕೆ ಸೇರಿಸಿ ಭಟ್ಟಿಯಿಳಿಸುವುದರಿಂದ ಹೊಗೆಸೊಪ್ಪಿನ ಬೀಜದ ತೈಲ ಪಡೆಯಬಹುದು. ೧೯೫೫-೫೬ ನೇ ಸಾಲಿನಲ್ಲಿ ಆಂಧ್ರಪ್ರದೇಶದ ರಾಜ್ಯದಲ್ಲಿ ಒಂದು ಲಕ್ಷ ಮಣಕ್ಕೂ ಮೀರಿದ ಪ್ರಮಾಣದ ಬೀಜಗಳಿಂದ ೨೯,೭೭೧ ಮಣ ಎಣ್ಣೆ ಪಡೆಯಲಾಯಿತು. ಈ ಎಣ್ಣೆಯ ಅಲ್ಪಭಾಗ ಹೊರದೇಶಗಳಿಗೆ ರಫ್ತಾಯಿತು.

ಈ ಎಣ್ಣೆಯನ್ನು ಅಡುಗೆ ಮತ್ತು ಊಟಕ್ಕೆ ಬಳಸಿದಾಗ ಬೆಣ್ಣೆಯಷ್ಟೇ ಸುಲಭವಾಗಿ ಜೀರ್ಣವಾಗಬಲ್ಲುದೆಂದು ತಜ್ಞರು ಪರಿಶೋಧನೆಗಳ ನೆರವಿನಿಂದ ಹೊರಗೆಡವಿದ್ದಾರೆ.

ಬಣ್ಣಗಳ ನಿರ್ಮಾಣದಲ್ಲಿ ಇದರ ಪ್ರಧಾನ ಪಾತ್ರವಿದೆ. ಪುಣೆಯಲ್ಲಿರುವ ರಾಷ್ಟ್ರೀಯ ಕೆಮಿಕಲ್ ಪರಿಶೋಧನಾಲಯದವರು ಈ ರೀತಿ ಉತ್ತಮ ದರ್ಜೆಯ ಬಣ್ಣ ತಯಾರಿಸುವ ವಿಧಾನವೊಂದನ್ನು ಕಂಡುಹಿಡಿದಿದ್ದಾರೆ. ಈ ವಿಧಾನದಿಂದ ತಯಾರಿಸಿದ ಬಣ್ಣಗಳು ಅಲಂಕಾರಿಕ ಹಾಗೂ ಬಹುಕಾಲ ಆಕರ್ಷಣೀಯವಾಗಿ ಅಳಿಸಿಹೋಗದ ಬಣ್ಣವಾಗಿ ಗೃಹಾಲಂಕಾರ ಹಾಗೂ ಔದ್ಯೋಗಿಕ ಜಗತ್ತಿನಲ್ಲಿ ನಮಗೆ ನೆರವು ನೀಡುತ್ತದೆ.

ಈ ಎಣ್ಣೆಯನ್ನು ರಬ್ಬರ್ ತಯಾರಿಕೆಯಲ್ಲಿ ಬಳಸುವ ಮಧ್ಯವರ್ತಿ ವಸ್ತುವಿನ ತಯಾರಿಕೆಗೆ ಈಗಾಗಲೇ ಬಳಸಲಾಗುತ್ತಿದೆ.

ಮಿಕ್ಕ ಎಣ್ಣೆ ಬೀಜಗಳ ಹಿಂಡಿಗಿಂತ ಇದು ಅಗ್ಗದ ಬೆಲೆಗೆ ದೊರೆಯುವುದರಿಂದ ಪ್ಲಾಸ್ಟಿಕ್ಸ್ ಕೈಗಾರಿಕೆಗೆ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತದೆ.

ಹೊಗೆಸೊಪ್ಪಿನ ಬೀಜದ ಹಿಂಡಿಯ ರಾಸಾಯನಿಕ ರಚನೆಯನ್ನು ಪರಿಶೀಲಿಸಿದಾಗ ಸಸಾರಜನಕಾಂಶ (ಶೇ. ೨೬-೨೮), ಶರ್ಕರ ಪಿಷ್ಟಾದಿಗಳು (೩೦-೩೨%) ಅಪೇಕ್ಷಣೀಯ ಮಟ್ಟದಲ್ಲಿರುವುದರಿಂದ ದನಕರುಗಳಿಗೆ ಉತ್ತಮ ವರ್ಗದ ಆಹಾರವಾಗುತ್ತದೆ. ಗೊಬ್ಬರರೂಪದಲ್ಲಿ ಸಹ ಇದರ ಪ್ರಯೋಜನವುಂಟು. *

'ಸಾಂಸಾರಿಕ ಶಾಂತಿ' ಎಂಬುದು ನೀವು ಎಂದೂ ಅನುಭವಿಸದ ಆದರೆ ಸದಾ ಸ್ಮರಿಸುತ್ತಿರುವ ವಸ್ತುವಾಗಿದೆ . . .

— ಟಾಲ್‌ಸ್ಟಾಯ್

ವಿವಾಹಕ್ಕಂಜಿ ಹಿಂದೆ ಸರಿಯುವವನು ಯುದ್ಧ ಭೂಮಿಯಿಂದ ಓಡಿಹೋಗುವ ಸೈನಿಕನಷ್ಟೇ ಹೇಡಿಯಾಗಿರುತ್ತಾನೆ.

— ಮ. ಗಾಂಧಿ



ಬಶೀರ ಅಹಮುದ್-ಅಮೇರಿಕಕ್ಕೆ ಹೋಗಿ ಬಂದನಂತರ

ಅಮೇರಿಕವನ್ನು ಕಂಡು ಬಂದ ಒಂಟೆ ಗಾಡಿಯುವ

ಮುಕ್ತಾ ರಾಜೆ

ನೀವು ಯಕ್ಷಿಣಿಯರ ಕಥೆಗಳನ್ನು ಓದಿದ್ದೀರಿ
ಅದರಲ್ಲಿ ಒಬ್ಬಾನೊಬ್ಬ ಬಡ ಹುಡುಗನಿಗೆ ಯಾ
ವನೋ ವೃದ್ಧ ಭಿಕ್ಷುಕ ಭೆಟ್ಟಿಯಾಗುತ್ತಾನೆ. ಆ
ಹುಡುಗನನ್ನು ಮೆಚ್ಚಿ ಅಪಾರ ಸಂಪತ್ತು ಸಿಗ
ವಂತೆ ಮಾಡಿ ಹೋಗಿಬಿಡುತ್ತಾನೆ. ಆಗ ಆ
ಭಿಕ್ಷುಕ ಮತ್ತಾರೂ ಆಗಿರದೆ ದೇವದೂತನಾಗಿ
ರುತ್ತಾನೆಂದು ತಿಳಿದು ಬರುತ್ತದೆ. ಇದು ಕೇವಲ
ಕಾಲ್ಪನಿಕ ಕತೆಗಳಲ್ಲಿ ಮಾತ್ರ ಸಾಧ್ಯವೆಂದು
ನೀವು ನಂಬಿರಬಹುದು. ಆದರೆ ಕೆಲ ದಿನಗಳ
ಹಿಂದೆ ಪಾಕಿಸ್ತಾನದಲ್ಲಿ ಯಕ್ಷಿಣಿ ಕಥೆಗಳಿಗಿಂತ
ಅದ್ಭುತವಾದ ಒಂದು ಸತ್ಯ ಕಥೆ ಜರುಗಿತು.

ಒಬ್ಬ ಒಂಟೆಗಾಡಿಯುವ ರಸ್ತೆಯಲ್ಲಿ ನಡೆದಾಗ
ಅವನಿಗೊಬ್ಬ ದೊಡ್ಡ ವ್ಯಕ್ತಿಯ ಭೆಟ್ಟಿಯಾಯಿತು
ಹಸ್ತಾಂದೋಲನವಾಯಿತು. ಮತ್ತು ಶೀಘ್ರವೆ
ಒಂಟೆಗಾಡಿಯುವ ಜಗತ್ತಿನ ದೊಡ್ಡ ದೊಡ್ಡ ಶ್ರೀ
ಮಂತರೂ ಅನುಭವಿಸದ ಸುಖಗಳನ್ನನುಭವಿ
ಸಿದ. ಒಂದೇ ಭೆಟ್ಟಿಯಲ್ಲಿ ಅಮೇರಿಕೆಯ ಉಪಾ
ಧ್ಯಕ್ಷರ ಮಿತ್ರತ್ವ ಒಬ್ಬ ಒಂಟೆಯುವನಿಗೆ ಲಭಿಸು
ಕಲ್ಪನೆಯನ್ನಾದರೂ ನೀವು ಮಾಡಬಲ್ಲಿರಾ
ರಾಜ-ಮಹಾರಾಜರಿಗೂ ಯಾರ ಜೊತೆ ಕುಳಿತ
ಊಟ ಮಾಡುವ ಭಾಗ್ಯ ಲಭಿಸುವುದು ದುಸ್ತ
ರವೊ ಆ ಭಾಗ್ಯ ಒಬ್ಬ ಯಕಶ್ಚಿತ ಒಂಟೆಯುವನಿ
ಲಭಿಸುವುದನ್ನು ನೀವು ಕಲ್ಪಿಸಬಲ್ಲಿರಾ? ಆದ
ಒಬ್ಬ ಒಂಟೆಯುವ ಅಲ್ಲಿ ಊಟ ಮಾಡಿ ಯಜ
ಮಾನರ ಪತ್ನಿಯೊಂದಿಗೆ ಉಪವನಾದಿಗಳಲ್ಲಿ
ಸಂಚರಿಸಿ ಸೃಷ್ಟಿಸೌಂದರ್ಯವನ್ನೀಕ್ಷಿಸಿದನು
ಸುಳ್ಳೆನಿಸಿದರೆ ಬೇಕಾದಾಗ ಕರಾಚಿಗೆ ಹೋಗಿ
ಅಲ್ಲಿಯ ಪ್ರಸಿದ್ಧ ಒಂಟೆಯುವನಾದ ಬಸೀರ ಅಹ
ಮದನನ್ನು ಭೆಟ್ಟಿಯಾಗಿರಿ. ಅವನಿಗೆ ಇಂಗ್ರೇ
ಜಿಯ ಒಂದಕ್ಷರವೂ ತಿಳಿಯುವುದಿಲ್ಲ. ಆದರೂ
ಅವನ ದೊಡ್ಡ ದೊಡ್ಡ ಫೋಟೊಗಳು ಪ್ರಪಂಚದ
ಎಲ್ಲ ಪತ್ರಿಕೆಗಳಲ್ಲಿ ಒಳ್ಳೇ ಗೌರವದಿಂದ ಪ್ರಕಟ
ವಾಗಿವೆ.

ಬಶೀರ ಅಹಮುದ್ ನಿಜವಾಗಿ ಕರಾಚಿಯ
ಒಬ್ಬ ಬಡ ಒಂಟೆಯುವ. ಒಂಟೆಗಾಡಿಯಲ್ಲಿ ಸಾ
ಮಾನು ಸಾಗಿಸುವುದು ಇವನ ಉದ್ಯೋಗ

ಒಂದು ದಿನ ಒಂಟೆಗಾಡಿಯಲ್ಲಿ ಸಾಮಾನು ಹೇರಿಕೊಂಡು ನಡೆದಿದ್ದಾಗ ಪೋಲೀಸರು ಅವನನ್ನು ತಡೆದು ರಸ್ತೆಯ ಬದಿಗೆ ನಿಲ್ಲಿಸಿದರು. ನಿಲ್ಲಿಸಿದ ಕಾರಣವೆಂದರೆ ಅದೇ ದಾರಿಯಲ್ಲಿ ಅಮೇರಿಕದ ಉಪಾಧ್ಯಕ್ಷ ಲಿಂಡನ್ ಜಾನಸನ್‌ರು ವಿಮಾನ ನಿಲ್ದಾಣದಿಂದ ವೈಭವದ ಅತಿಥಿ ಗೃಹದ ಕಡೆಗೆ ನಡೆದಿದ್ದರು. ಲೋಕವೆಲ್ಲ ತಿರುಗಾಡಿದ ಜಾನ್‌ಸನ್‌ರು ಒಂಟೆಗಾಡಿಯನ್ನು ಕಂಡಿರಲಿಲ್ಲ. ಅವರ ಗಾಡಿ ನಿಂತಿತು. ಅವರು ಆಶ್ಚರ್ಯದಿಂದ ಒಂಟೆ ಗಾಡಿಯನ್ನು ನೋಡತೊಡಗಿದರು. ಈ ಭೆಟ್ಟಿಯ ಮೋಜಿನ ವಿವರಗಳನ್ನು ಬಶೀರ ಅಹಮ್ಮದ್ ಪತ್ರಿಕಾಕರ್ತರಿಗೆ ಹೇಳಿದ್ದಾನೆ. ಅದು ಹೀಗಿದೆ:

"ಗಾಜುರಿ, ತಾರೀಖು ನನಗ ನೆನಪಿಲ್ಲ. ಬೀಡಿ ಅಂಗಡಿಯವರಾದರೆ ಕ್ಯಾಲೆಂಡರ ಹಚ್ಚಿಡಬಹುದು ನಾವೋ ಒಂಟೆಯವರು. ಆದರೂ ಅಂದಿನ ಘಟನೆ ಚೆನ್ನಾಗಿ ನೆನಪಿದೆ. ೧೧ ಗಂಟೆಯಾಗಿರಬೇಕು. ಮಧ್ಯಾಹ್ನದ ಹೊತ್ತು. ನಾನು ಸ್ಟೇಶನ್ನಿನಿಂದ ಭೂಸಾ ಹೇರಿಕೊಂಡು ಬರುತ್ತಿದ್ದೆ. ಅತ್ತ ಕಡೆಗೇ ವಿಮಾನ ನಿಲ್ದಾಣ ಇದೆ. ಬಿಳೀ ಜನರ ಗೋರಿಗಳಿರುವಕಡೆ ಬಹಳ ಜನ ಪೋಲೀಸರು ನಿಂತಿದ್ದರು. ದಂಗೆಯ ಯಾವ ಸುದ್ದಿಯೂ ಇಲ್ಲದೆ ಈ ಪೋಲೀಸರು ಇಲ್ಲಿ ಯಾಕೆ ಬಂದರೆಂದು ನಾನು ಯೋಚನೆಗೊಳಗಾದೆ. ಕಡೆಗೆ ಧೈರ್ಯ ಮಾಡಿ ಒಬ್ಬ ಸಿಪಾಯಿಯನ್ನು ಕೇಳಿದೆ. ಆತ ಒರಟ. ನನ್ನನ್ನ ಕಡೆಗಣಿಸಿಬಿಟ್ಟ. ಗಾಡಿಯನ್ನು ಬದಿಗೆ ನಿಲ್ಲಿಸಿ ಇನ್ನಷ್ಟು ವಿನಯದಿಂದ ಮತ್ತೊಬ್ಬ ಸಿಪಾಯಿಯ ಹತ್ತಿರ "ಯಾವಸಾಹೇಬರು ಬರುವವರಿದ್ದಾರೆ—" ಎಂದು ಕೇಳಿದೆ. ಒಳ್ಳೇಮನೆತನದ ಸಂಭಾವಿತನಿರಬೇಕು ಆ ಸಿಪಾಯಿ. ಆತ ಸಭ್ಯರಂತೆ ಉತ್ತರಿಸಿದ. ಅಮೇರಿಕದ ಮಿಸ್ತರ್ ಲಿಂಡನ್ ಜಾನಸನ್ ಸಾಹೇಬರು ಬರುವವರಿದ್ದಾರೆಂದು ಹೇಳಿದ.

"ಅಲ್ಲೇ ಹೊರಳಿ ನಾನು ಸಿನೀಮಾ ಹತ್ತಿರ ಗಾಡಿ ನಿಲ್ಲಿಸಿದೆ. ಜನದಟ್ಟಣೆ ಬಹಳ. ನನ್ನ ಒಂಟೆ ಬೇಸತ್ತಿತ್ತು. ಒಂಟೆ ಬಹಳ ನಾಜೂಕಾದ ಪ್ರಾಣಿ. ನಿಮಗೆ ಗೊತ್ತಿಲ್ಲ. ಅದು ಆನೆ, ಕುದುರೆ ಹಾಗೆ ಅಲ್ಲ. ಹಿಂದೆ ರಾಣಿವಾಸದವರು ಒಂಟೆಗಳ ಮೇಲೆ ಪ್ರವಾಸ ಮಾಡುತ್ತಿದ್ದರು ಶ್ರಾವಣದ ಜೋಕಾಲಿಯಂತೆ ತೂಗಿಸುತ್ತ ತೊಟ್ಟಿಲಿನಲ್ಲಿ ಅವರನ್ನಿರಿಸಿಕೊಂಡು ಸಡಗರದಿಂದ ಒಂಟೆಗಳು ಹೋಗುತ್ತಿದ್ದವು. ಈಗ ಕಾಲ ಬದಲಾಗಿದೆ. ಹೊಟ್ಟೆಪಾಡಿಗಾಗಿ ಅದನ್ನು ಗಾಡಿಗೆ ಹೂಡಬೇಕಾಗುತ್ತಿದೆ. ದೊಡ್ಡ ದೊಡ್ಡ ಮನೆತನದ ಸ್ತ್ರೀಯರು ಮೋಟಾರಿನಲ್ಲಿ ಅಡ್ಡಾಡತೊಡಗಿದ್ದಾರೆ. ಪಾಪ! ಒಂಟೆ ಭೂಸಾ ಹೇರಿಕೊಂಡು ಓಡಾಡಬೇಕಾಗಿದೆ. ಆಗ ಮತ್ತೂ ಮೂರು ನಾಲ್ಕು ಒಂಟೆ ಗಾಡಿಗಳು ಅಲ್ಲಿಯೇ ಬಂದು ನಿಂತವು. ಪೋಲೀಸರ ಸೀಟಿ ಸಪ್ಪಳ ಜೋರಾಗಿತ್ತು. ಜನರೂ ಕಿಕ್ಕಿರಿದಿದ್ದರು. ಆದರೆ ಸಾಹೇಬರ ಮೋಟಾರ ನಮ್ಮ ಎದುರಿಗೇ ಬಂದು ನಿಂತಿತು. ದೊಡ್ಡ ದೊಡ್ಡ ಬಾಡಿಗಾರ್ಡ (ಅಂಗರಕ್ಷಕ)ರೂ ಇದ್ದರು. ಸಾಹೇಬರು ಬಾದಶಹರಂತೆ ಕಾಣುತ್ತಿದ್ದರು. ಆದರೆ ಸೂಟು ಬೂಟು ತೊಟ್ಟಿದ್ದರಷ್ಟೇ. ಅವರ ಸುತ್ತಮುತ್ತ ಎಷ್ಟೋ ಫೋಟೊಗ್ರಾಫರ್ ಜನರಿದ್ದರು.



ಬಶೀರ ಅಹಮದ್ - ಅಮೇರಿಕಕ್ಕೆ ಹೋಗುವ ಮೊದಲು

"ಮೋಟಾರಿನ ಬಾಗಿಲು ತೆರೆಯಿತು. ಸಾಹೇಬರು ಇಳಿದರು. ಹತ್ತಿರದ ಒಂಟೆ ಗಾಡಿಯವ ಇವರು ಎಲ್ಲಿ ನಡದಿದ್ದಾರೆಂದು ನನ್ನನ್ನು ಕೇಳಿದ

ಅವರು ನನ್ನ ಕಡೆಗೇ ಬರುವಷ್ಟು ಭಾಗ್ಯಶಾಲಿ ನಾನಾಗಿದ್ದೆನೆಂಬುದು ನನಗೇನು ಗೊತ್ತು? ಜಂಡೆಲ್ (ಜನರಲ್) ಬುರ್ಕಿ ಅವರ ಮುಂದೆ ಇದ್ದರು. ನನ್ನ ಹತ್ತಿರ ಬಂದು ಅವರು ಹಿಂದಿಯಲ್ಲಿ "ಸಾಹೇಬರು ನಿನ್ನನ್ನು ಭೆಟ್ಟಿಯಾಗಿ ನಿನ್ನೊಂದಿಗೆ ಮಾತಾಡಬಯಸುತ್ತಾರೆ" ಎಂದು ಹೇಳಿದರು."ಆಗಲಿ"ನಾನಂದೆ. ಯಾರೊ ಒಬ್ಬರು ಏನು ತಪ್ಪು ಮಾಡಿದೆಯೋ ಎಂದು ನನ್ನನ್ನು ಕೇಳಿದರು. 'ನಾನಂತೂ ಏನೂ ತಪ್ಪು ಮಾಡಿಲ್ಲ ಅಂದಾಗ ನನಗೇಕೆ ಹೆದರಿಕೆ' ನಾನಂದೆ. ಆದರೂ ಹಣೆಯಲ್ಲಿ ಇದ್ದಹಾಗೆ ಆದೀತೆಂದು ಹೇಳಿದೆ. ಸಾಹೇಬರು ಹತ್ತಿರ ಬಂದು ಕೈ ಕುಲುಕಲು ಕೈಮುಂದೆ ಮಾಡಿದ್ದನ್ನು ನೋಡಿ ನಾನು ಚಕಿತನಾದೆ. ರಾಯರೆ, ಆಗ ಏನು ಮಾಡಬೇಕೋ ತಿಳಿಯಲಿಲ್ಲ. ನಾನೂ ಕೈಚಾಚಿದೆ. ಅವರು ನನ್ನ ಕೈಹಿಡಿದು ಬಲವಾಗಿ ಅಲ್ಲಾಡಿಸಿದರು. ನನ್ನ ಕೈಕೀಲುಗಳೇ ಅಲ್ಲಾಡತೊಡಗಿದವು." (ಈ ಕತೆ ಆತ ಹೇಳುತ್ತಿದ್ದಾಗ ಬಶೀರ ನನ್ನು ಒಬ್ಬ ಭಾರತೀಯ ಪತ್ರಕಾರ ಕೇಳಿದ. 'ಪ್ರತಿಯಾಗಿ ನೀವು ಕೈಜೋಡಿಸಿ ನಮಸ್ತೆ ಮಾಡಿದಿರಾ?' ಬಶೀರ 'ಇಲ್ಲರೀ. ನಮ್ಮಲ್ಲಿ ನಮಸ್ತೆಯ ಪದ್ಧತಿ ಇಲ್ಲ. ನಾವು ದುಆ ಸಲಾಂ ಮಾಡುತ್ತೇವೆ" ಎಂದ.)

ಬಶೀರ ಮುಂದೆ ಹೇಳತೊಡಗಿದ. "ನಿನ್ನ ಒಂಟೆಯ ವಯಸ್ಸೆಷ್ಟು ಎಂದು ಸಾಹೇಬರು ಕೇಳಿದ್ದನ್ನು ಕಂಡು ನಾನು ಇವರು ಒಂಟೆಯ ಬಗ್ಗೆ ಚೆನ್ನಾಗಿ ತಿಳಿಕೊಂಡವರಾಗಿದ್ದಾರೆಂದು ಸಂತುಷ್ಟನಾದೆ. ಒಂಟೆ ೫–೬ ವರ್ಷದ್ದಿರಬೇಕು. ಎಲ್ಲಿ ಮಾರುತ್ತೀಯಾ ಎಂದು ಕೇಳಿಬಿಟ್ಟರೇನು ಮಾಡಲೆಂದು ಗಾಬರಿಯಾದೆ. ಆದರೆ ಅವರು ಕೆಲ ಹೊತ್ತು ಜಂಡೇಲ್ ಬುರ್ಕಿಯವರೊಂದಿಗೆ ಇಂಗ್ರೇಜಿಯಲ್ಲಿ ಏನೇನೊ ಮಾತಾಡಿ ನನ್ನ ಕೈ ಮತ್ತೊಮ್ಮೆ ಕುಲುಕಿ ಹೊರಟು ಹೋದರು. ಹೋಗುವಾಗ ಬುರ್ಕಿ 'ಸಾಹೇಬರು ಅಮೇರಿಕೆಗೆ ಕರೆದೊಯ್ದರೆ ಹೋಗುತ್ತೀ ಏನು' ಎಂದು ಕೇಳಿದರು. 'ಅಪ್ಪಣೆಯಾದರೆ ಹೋಗುವೆ' ನಾನಂದೆ. ಸಾಹೇಬರು ಕಾಗದದ ಮೇಲೆ ನನ್ನ ಹೆಸರು ಬರೆದುಕೊಂಡರು. ಮತ್ತು ಪಾಉಂಟಲ್‌ಪಿನ್ ನನ್ನ ಕೈಗೆ ಕೊಟ್ಟರು. ಅವರು ಹೋದ ಮೇಲೆ ನನ್ನ ಸಹೋದ್ಯೋಗಿಗಳು ನೀನು ಬಹಳ ದೊಡ್ಡ ತಪ್ಪು ಮಾಡಿದೆ ಎಂದರು. ಸಾಹೇಬರ ಹತ್ತಿರ ಬಕ್ಷೀಸ ಕೇಳಲಿಲ್ಲ ಎಂದರು. ಸಾಹೇಬರು ನನ್ನ ಗಾಡಿ ಹತ್ತದೆ ಹೇಗೆ ಕೇಳಲೆಂದು ನಾನು ಉತ್ತರಿಸಿದೆ.

"ದೊಡ್ಡ ಸಾಹೇಬರ ಕೈಕುಲುಕಿದ್ದನ್ನು ಮನೆಗೆ ಬಂದ ಮೇಲೆ ನಾನು ಯಾರ ಮುಂದೂ ಹೇಳಲಿಲ್ಲ. ಹೇಳಿದರೆ ಯಾರೂ ನಂಬಲಾರರೆಂದು ನನಗೆ ಗೊತ್ತಿತ್ತು. ಜನರು ನನ್ನನ್ನು ಹುಚ್ಚನೆಂದು ತಿಳಿದು ಹಾಸ್ಯ ಮಾಡಬಹುದೆಂದು ತಿಳಿದಿತ್ತು. ಆದರೆ ದೇವರ ಆಟ. ಮರುದಿನ ಎಲ್ಲ ಪತ್ರಿಕೆಗಳಲ್ಲಿಯೂ ನನ್ನ ದೊಡ್ಡ ದೊಡ್ಡ ಫೋಟೋಗ್ರಾಫ್ ಮತ್ತು ಸುದ್ದಿ ಬಂದಿತ್ತು. ರಾಯರೆ, ಆಗ ನಮ್ಮ ಓಣಿಯಲ್ಲಿ ಮೋರೆ ತೋರಿಸಲಿಕ್ಕೆ ನನಗೆ ನಾಚಿಕೆ ಎನ್ನಿಸತೊಡಗಿತು. ಆದರೆ ಭೆಟ್ಟಿಯಾದವರೆಲ್ಲ ಅಮೇರಿಕಾಕ್ಕೆ ಯಾವಾಗ ಹೋಗುತ್ತೀ ಎಂದೇ ಕೇಳತೊಡಗಿದರು. ಅವರಲ್ಲಿ ನಾಲ್ಕಾರು ಜನರು, ಪ್ರಾಮಾಣಿಕ ಜಿಜ್ಞಾಸೆಯಿಂದ ಕೇಳುತ್ತಿದ್ದರು. ಉಳಿದವರು ಹಾಸ್ಯ ಮಾಡುತ್ತಿದ್ದರು. ಒಂದು ದಿನ ಸಿಟ್ಟಿನಿಂದ ಒಬ್ಬನಿಗೆ 'ತೋರಿಸ್ತೀನಿ ಅಮೇರಿಕಾ' ಎಂದು ಕಪಾಳಕ್ಕೆ ಬಿಗಿದೆ. ಮತ್ತೆ ಹಾಗೆ ಕೇಳುವವರಿಗೆಲ್ಲ ಅವನ ನೆನಪು ಮಾಡಿಕೊಡತೊಡಗಿದೆ.

"ಆದರೆ ಮುಂದೆ ಜುಲೈ ನಾಲ್ಕಕ್ಕೆ ಇಂಗ್ರೇಜಿಯಲ್ಲಿ ಬರೆದ ಒಂದು ಕಾಗದ ಬಂತು. ಇದರಿಂದ ನಾನು ಅಮೇರಿಕಕ್ಕೆ ಹೋಗಬೇಕೆಂದು ಗೊತ್ತಾಯಿತು. ಜಮೀಲಸಾಹೇಬ ಅಂತೊಬ್ಬರಿದ್ದಾರೆ. ಅವರು ಪತ್ರಿಕೆಗಳಲ್ಲಿ ಬರೆಯುತ್ತಾರೆ. ಅವರೇ ಬಹುಶಃ ಈ ಪತ್ರಬರೆದು ನನಗೆ ನೆನಪು ಮಾಡಿಕೊಟ್ಟಿದ್ದರು.

"ಆಗಿನ ನನ್ನ ಗೋಳಾಟ ಏನು ಹೇಳಲಿ ? ೨೦ ತಾಸುಗಳವರೆಗೆ ವರ್ತಮಾನ ಪತ್ರಿಕೆಯ ಕಂಪನಿಯವರು ನನ್ನನ್ನು ಗುಪ್ತವಾಗಿಟ್ಟರು. ಹಿಂದುಗಳ ಅಪಹರಣ ಕಥೆಗಳನ್ನು ಕೇಳಿದ್ದೆ. ಈಗ ನನ್ನನ್ನೇ ಇವರು ಹರಣಮಾಡಿದ್ದರು. ಬೇರಾವ ಪತ್ರಿಕೆಗೂ ತನ್ನ ಪರಿಚಯ-ಭೆಟ್ಟಿ-ಸಿಗಬಾರದೆಂದು ನನ್ನನ್ನು ಮುಚ್ಚಿ ಇಟ್ಟಿದ್ದರು. ಆಮೇಲೆ ನಾನು ಮನೆಗೆ ಹೋಗಲೇ ಇಲ್ಲ. ಬೇರೊಬ್ಬ ಮಿತ್ರನಲ್ಲಿ ಹೋಗಿ ನಿಂತೆ. ಅಲ್ಲಿಯೂ ಒಬ್ಬ ಹುಡಿಗೆ ನನ್ನನ್ನು ಗುರುತಿಸಿತು. ಮತ್ತು ಪತ್ರಿಕೆಯ ದೂತರು ಅಲ್ಲಿಯೂ ಬಂದರು. ನನ್ನ ಹೆಂಡತಿಗೆ ಇದು ಎಳ್ಳಷ್ಟೂ ಸೇರಲಿಲ್ಲ.

"ಅಮೇರಿಕೆಗೆ ಹೊರಡುವ ದಿನ ಬಂತು. ಒಂಟೆಯಿಂದ ನಾನು ದಿನಾಲೂ ೨೦ ರೂಪಾಯಿ ಸಂಪಾದಿಸುತ್ತಿದ್ದೆ. ನಾನಿಲ್ಲದಾಗ ಈ ಹಾನಿಯಾಗುವುದರಿಂದ ಅಷ್ಟು ಹಣ ನಾನು ತಿರುಗಿ ಬರುವ ತನಕ ನನ್ನ ಮನೆಗೆ ಸಿಗಬೇಕೆಂದು ಬುರ್ಕಿ ಸಾಹೇಬರಿಗೆ ಹೇಳಿದೆ ಹೂಂ ಎಂದರು. ಎಲ್ಲ ಸಜ್ಜು ಮಾಡಿಕೊಂಡು ನಾನು ಹೊರಡಲನುವಾದಾಗ ಮಿತ್ರರು ಯಾವ ಒಂಟೆಯಿಂದ ನಿನಗೆ ಈ ಭಾಗ್ಯ ಬಂತೊ ಆ ಒಂಟೆಯನ್ನೂ ಒಯ್ಯು ಎಂದರು. ನನಗೂ ಆ ಆಸೆ ಇತ್ತು. ಆದರೆ ಹೇಳಿದೆನಲ್ಲ, ಒಂಟೆ ನಾಜೂಕಾದ ಪ್ರಾಣಿ. ನಾವು ಸಪ್ತ ಸಮುದ್ರ ದಾಟಿ ಹೋಗಬೇಕು. ಅಲ್ಲಿಯ ಹವೆ ಒಂಟೆಗೆ ಒಗ್ಗದಿದ್ದರೆ ಅದು ಬೇನೆ ಬೀಳುವದು. ಇದೆಲ್ಲ ಬೇಡವೇ ಬೇಡ ಎಂದುಕೊಂಡೆ. ನನಗಾಗಿ ನಾನು ಎರಡು ಜತೆ ಕರಿ ಬೂಟು, ಆರು ಜತೆ ನಾಯಲನ್ ಕಾಲಚೀಲಗಳು, ಎರಡು ಬೆಚ್ಚನ್ನಶೇರವಾನಿಗಳು,,ಕ್ಲೋಸ್ ಕಾಲರಿನ ಒಂದು ಉದ್ದ ಕೋಟು, ಒಂದು ಕರಿ ಕೋಟು, ೧೨ ಶಲವಾರುಗಳು, ಒಂದು ಅಗಲ ಪ್ಯಾಜಮಾ, ೧೨ ಶರ್ಟು, ೨೪ ರುಮಾಲು ಮತ್ತು ಟೊಪ್ಪಿಗೆಗಳು ಇತ್ಯಾದಿ ಸಾಮಾನನ್ನು ಕೂಡಿಸಿಕೊಂಡು ಮಿತ್ರರಿಗೆ ಹೇಳಿ ಹೊರಟೆ. ವಿಮಾನಿನಲ್ಲಿ ನನಗೆ ಫರ್ಸ್ಟಕ್ಲಾಸಿನ ಸೀಟು ಸಿಕ್ಕಿತು. ಉತ್ತಮ ಊಟ. ಜೊತೆಯಲ್ಲಿ ಉರ್ದು ಇಂಗ್ರೇಜಿ ಎರಡೂ ಬಲ್ಲ ಒಬ್ಬಗೆಳೆಯನೂ ಇದ್ದ.

"ದಾರಿಯಲ್ಲಿ ಇಂಗ್ಲಂಡಿನಲ್ಲಿ ಇಳಿಯಬೇಕಾಯಿತು. ಲಂಡನ್ ನೋಡಿದೆ. ಕೆಲ ಪಾಕಿಸ್ತಾನೀ ಮಿತ್ರರು ನನ್ನನ್ನು ಶಾಹೀ ಮಹಲಿಗೆ (ಬಕಿಂಗ್ ಹ್ಯಾಮ್ ಪ್ಯಾಲೇಸಿಗೆ) ಕರೆದುಕೊಂಡು ಹೋದರು. ಅಲ್ಲಿ ಎದುರುಗಡೆ ಕೆಂಪು ಗಣವೇಷದ ಸಿಪಾಯಿಗಳು ಲೆಫ್ಟ್ ರಾಯಿಟ ಲೆಫ್ಟ್ ರಾಯಿಟ ಮಾಡುತ್ತಿದ್ದರು. ಮರುದಿನ ನಾಶ್ತಾ ಆದ ಮೇಲೆ ಅದೇ ವಿಮಾನ ನಮ್ಮನ್ನು ಅಮೇರಿಕಕ್ಕೆ ಒಯ್ಯಿತು. ಜಾನ್‌ಸನ್ ಸಾಹೇಬರು ದೂರದ ಟಕಸಾಲ ಪ್ರಾಂತದಲ್ಲಿರುತ್ತಾರೆಂದು ನಿಮಗೆ ಗೊತ್ತಿಲ್ಲ. (ಟೆಕ್ಸಾಸ್‌ಗೇ ಬಶೀರ ಟಕಸಾಲ ಅಂದದ್ದು) ಖುದಾ ಅವರಿಗೆ ದೀರ್ಘಾಯುಷ್ಯವೀಯಲಿ. ಅವರು ಸ್ವತಃ ವಿಮಾನ ನಿಲ್ದಾಣಕ್ಕೆ ನನ್ನನ್ನು ಸ್ವಾಗತಿಸಲು ಬಹು ದೂರದ ಟಕಸಾಲ್‌ನಿಂದ ಬಂದಿದ್ದರು. ಅಲ್ಲಿಯೂ ಬಹಳ ಫೋಟೋಗ್ರಾಫಿಕ್ ಜನರಿದ್ದರು. ಅವರೆಲ್ಲರೂ ಲೈಟ ಹಾಕಿ ನಮ್ಮ ಫೋಟೊ ತೆಗೆದರು (ಅಲ್ಲಿ ಬಶೀರರಿಗೆ ಜಾನ್‌ಸನ್ನರು 'ಥಂಡಿ ಬಹಳ ಬಿದ್ದಿದೆ' ಎಂದರು. ಅದಕ್ಕೆ ಈ ಅಶಿಕ್ಷಿತ ಅತಿಥಿ ಹೇಳಿದ: ಹೊರಗೆ ಥಂಡಿ ಇದ್ದರೇನು ? ನಿಮ್ಮ ಪ್ರೀತಿಯು, ಬೆಚ್ಚಗೇ ಇದೆಯಲ್ಲ.")

"ಎರಡು ದಿನ ಜಾನಸನ್‌ರಲ್ಲಿ ಇದ್ದೆವು. ಅಲ್ಲಿ ಅವರು ನಮ್ಮ ಊಟದ ಮಲಗಿಕೊಳ್ಳುವ ವ್ಯವಸ್ಥೆ ಚೆನ್ನಾಗಿ ಮಾಡಿದ್ದರು. ಅವರ ಪತ್ನಿಯ ಹತ್ತಿರ ಕೂತು ನಾನು ಊಟ ಮಾಡಿದೆ. ಇದನ್ನು ನನ್ನ ಹೆಂಡತಿಯ ಮುಂದೆ ಯಾವಾಗೂ ಹೇಳಿಲ್ಲ. ಯಾಕೆಂದರೆ ಅವಳು ಸಲ್ಪ ಹಳೇ ಸಂಪ್ರದಾಯದವಳು. ಆಮೇಲೆ ನನಗೆ ಅಮೇರಿಕವನ್ನು ಹತ್ತು ದಿನಗಳ ಪ್ರವಾಸ ಮಾಡಿಸಿ ತೋರಿಸಿದರು. ಅಮೇರಿಕದ ಬಾದಶಹ ಕೆನಡಿಯವರ ಭೆಟ್ಟಿ ಮಾಡಿಸಿದರು. ಅವರ ಮಹಲನ್ನು (ವ್ಹಾಯಿಟ ಹೌಸ್) ಎಲ್ಲ ಕಡೆ ತಿರುಗಿಸಿ ತೋರಿಸಿದರು. ಅಲ್ಲಿ ಪಬ್ಲಿಕ್ ಜನರನ್ನು ಒಳಗೆ ಬಿಡುವು

ದಿಲ್ಲ ಫೋಟೋಗ್ರಾಫರರಿಗೂ ಅಪ್ಪಣೆ ಇಲ್ಲ. ಸಂಜೆಗೆ ಪಾಕಿಸಾನ್ತದ ಏಲಚಿಯವರಲ್ಲಿ ಆಮಂತ್ರಣವಿತ್ತು. ಒಂದು ವಾರದ ತರುವಾಯ ನಾನು ಅಲ್ಲಿ ಆ ದಿನ ನಮ್ಮ ಹಿಂದುಸ್ತಾನಿ ಪಾಕಿಸ್ತಾನಿ ಊಟ ಮಾಡಿದೆ. ಅಡಿಗೆ ಒಳ್ಳೇ ಫರ್ಸ್ಟ ಕ್ಲಾಸ್ ಆಗಿತ್ತು.

"ಮರುಳುವಾಗ ನಾನು ಮಕ್ಕಾಮದೀನಾ ನೋಡಬಯಸುತ್ತೇನೆಂದು ಜಾನ್‌ಸನ್ ಸಾಹೇಬರಿಗೆ ವಿನಂತಿ ಮಾಡಿಕೊಂಡೆ. ಅವರೂ ಒಪ್ಪಿದರು. ನಾನು ಹೊರಡುವ ದಿನ ಬಂತು. ಆ ದಿನ ವಿಡೀ ಜಾನಸನ್ ಸಾಹೇಬರು ನನಗೆ ತಮ್ಮ ತೋಟದ ಹಣ್ಣುಹಂಪಲ ತಿನ್ನಿಸಿ ಆಗಾಗ ಪ್ರೀತಿಯಿಂದ ಕೈ ಕುಲುಕಿಸಿದರು. ಇವರು ಬಡವರು ಇವರು ಶ್ರೀಮಂತರು ಎಂಬ ಭೇದ ಇವರಲ್ಲಿಲ್ಲ. ಫೋಟೊಗ್ರಾಫಿಕ್ ಜನರು ಬಹಳ ತ್ರಾಸ ಕೊಟ್ಟರು. ಅವರು ಹಾಕುತ್ತಿದ್ದ ವಿದ್ಯುತ್ ಬತ್ತಿಯ ಬೆಳಕಿಗೆ ನನ್ನ ಕಣ್ಣುಗಳೇ ಎಲ್ಲಿ ಕೆಡುವವೋ ಎಂದು ಹೆದರಿದ್ದೆ.


"ಬರುವಾಗ ಇಳಿದು ಮಕ್ಕಾಮದಿನಾ ನೋಡಿದೆ. ಬೇಸೂದನಲ್ಲಿ ವಿಮಾನಿನಿಂದ ಇಳಿದು ಅಲ್ಲಿಂದ ಮೋಟಾರಿನಿಂದ ಮಕ್ಕಾ ಮದಿನಾ ತಲುಪಿದೆ. ಜಂಗೇಬದರನ್ನೂ ನೋಡಿಕೊಂಡು ಕರಾಚಿಗ ಮರಳಿ ಬಂದೆ."

ಬಶೀರ ಸಾಹೇಬನನ್ನು ಒಬ್ಬರು ಈಗ ಒಂಟೆ ಎಲ್ಲಿ ಇದೆ ಎಂದು ಕೇಳಿದರು. "ನನ್ನ ಮಗ ಅದನ್ನು ನೋಡಿಕೊಳ್ಳುತ್ತಾನೆ. ಹಾಗೂ ಈಗ ಅವನೇ ಒಂಟೇ ಗಾಡಿ ಹೊಡೆಯುತ್ತಾನೆ" ಎಂದು ಬಶೀರ್ ಹೇಳಿದ. ಒಂಟೆ ಹೆಸರನ್ನು ಜಾನಸನ್ ಎಂದೇಕೆ ಇಡಲಿಲ್ಲೆಂದು ಕೇಳಿದಾಗ ಬಶೀರ ವಿನಮ್ರನಾಗಿ "ಒಂಟೆ ಎಷ್ಟಾದರೂ ಒಂಟೆಯೆ. ಅದನ್ನು ಈ ರೀತಿ ಗೌರವಿಸಬಹುದೆ?" ಎಂದ.

ಒಂಟೆಯ ಬಗ್ಗೆ ಅವನ ತಿಳಿವಳಿಕೆಗಳು ಮನೋರಂಜಕವಾಗಿವೆ. ಜಾನ್ಸನ್ ಸಾಹೇಬರೊಂದಿಗೆ ಮಾತಾಡುವಾಗೊಮ್ಮೆ ಬಶೀರ ಸಾಹೇಬ "ಒಂಟೆ ಮತ್ತು ಹೆಣ್ಣು ಇವರ ನೆಲೆ ಸಿಗುವದಿಲ್ಲ"ಎಂದು ಹೇಳಿದನು. ಅವನ ಫೋಟೊದೊಂದಿಗೆ ಅವನ ಈ ಮಾತು ಲೈಫ್ ಪತ್ರಿಕೆಯಲ್ಲೂ ಪ್ರಕಟವಾಗಿತ್ತು. ಈಗ ಬಶೀರ ಕರಾಚಿಯ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬನಾಗಿದ್ದಾನೆ.

ಅಮೇರಿಕದಿಂದ ಬಂದ ಹದಿನೈದು ದಿನಗಳಲ್ಲೇ ಬಶೀರ ಮೋಟರ್ ಡ್ರೈವಿಂಗ್ ಶಾಲೆಯಲ್ಲಿ ಹೆಸರು ಹಚ್ಚಿದನು. ಅಮೇರಿಕದಿಂದ ಅವನಿಗೆ ಒಂದು ಟ್ರಕ್ಕು ಕಾಣಿಕೆಯಾಗಿ ಸಿಕ್ಕಿದೆ. ಕೆಲ ಸಿನೇಮಾ ಕಂಪನಿಗಳು ಇವನಿಗೆ ತುಂಬ ದುಡ್ಡು ಕೊಡಮಾಡಿ ಸಿನೇಮಾದಲ್ಲಿ ಕೆಲಸ ಮಾಡಬೇಕೆಂದು ಕೇಳಿದರು. ಆದರೆ ಇವನಿಗ ಆ ವ್ಯವಸಾಯ ಸೇರದ್ದರಿಂದ ಇವನು ಒಪ್ಪಲಿಲ್ಲ. ಒಮ್ಮೆ ಸರಕಾರದವರೇ ಸರಕಾರಿ ಕ್ವಾರ್ಟರುಗಳಲ್ಲಿ ಬಂದು ನಿಲ್ಲಲು ಬಶೀರನನ್ನು ಕೇಳಿಕೊಂಡಾಗ ಇವನು "ಬಂದರೆ ನಮ್ಮ ಉದ್ಯೋಗ ಬಂಧುಗಳೆಲ್ಲ ಬರುವೆ'ವೆಂದು ಹೇಳಿ ಸರಕಾರದ ಆಮಂತ್ರಣವನ್ನು ನಿರಾಕರಿಸಿದ ಕರಾಚಿಯಿಂದ ಎರಡು ಮೂರು ಮೈಲಿನ ಮೇಲೆ ನಜೀಯಾಬಾದದಲ್ಲಿ ಈ ೫೦ ಜನ ಒಂಟೆಯವರಿಗಾಗಿ ಸರಕಾರವೀಗ ಕ್ವಾರ್ಟರ್ಸ ಕಟ್ಟಿಸುತ್ತಿದ್ದು ಇವರೆಲ್ಲ ಅಲ್ಲಿ ಹೋಗುವವರಿದ್ದಾರೆ.

ಇಲ್ಲಿಗೆ ಬರುವ ವಿದೇಶಿ ಪ್ರವಾಸಿಕರು ಬಶೀರ ಸಾಹೇಬನನ್ನೂ ಅವನ ಒಂಟೆಯನ್ನೂ ನೋಡಲು ತಪ್ಪುವದಿಲ್ಲ. ಭೆಟ್ಟಿಯಾಗಲಿಕ್ಕೆ ಹೋದವರು ಬಶೀರನ ಫುಲ್‌ಡ್ರೆಸ್ ಆಗುವವರೆಗೂ ಅವನ ಬಾಗಿಲಲ್ಲಿ ಕಾಯಬೇಕಾಗುವದು. ಅಜಮೀರದ ಖ್ವಾಜಾ ಸಾಹೇಬರ ಉರುಸಿಗೆಂದು ಕಳೆದ ವರ್ಷ ಬಶೀರನು ಭಾರತಕ್ಕೆ ಬರುವವನಿದ್ದ. ಆದರೆ ಪಾಸ್‌ಪೋರ್ಟಿನ ಕೆಲ ಅಡಚಣೆಯಿಂದ ಅದು ರದ್ದಾಯಿತು. ಮುಂದಿನ ವರುಷ ಖ್ವಾಜಾ ಸಾಹೇಬರ ಉರುಸಕ್ಕೆ ಬರುವ ನಿರ್ಣಯವನ್ನು ಬಶೀರ ಸಾಹೇಬ ಈಗಾಗಲೇ ಮಾಡಿದ್ದಾನೆ. *


Graphic MF 51

ಪುಸ್ತಕ ವಿಭಾಗ

ಸುವರ್ಣಾನ್ವೇಷಣೆ





ಸಂಗ್ರಹ ·
ದ.ಬಾ. ಕುಲಕರ್ಣಿ

ಸುವರ್ಣಾನ್ವೇಷಣೆ

ಬಕ್ ವೃತ್ತಪತ್ರಿಕೆ ಓದುತ್ತಿರಲಿಲ್ಲ.

ಬೆಳಕಿಗೆ ಎರವಾದ ಆರ್ಕ್ಟಿಕ್ ಪ್ರದೇಶದಲ್ಲಿ ಸಂಶೋಧನೆಗೆ ಕೈ ಹಾಕಿದ ಹಲವಾರು ಜನರಿಗೆ ಪೀತ ಧಾತುವೊಂದು ದೊರೆತಿತ್ತು. ಅಲ್ಲದೆ ಉಗಿ ಹಡಗ, ಪರದೇಶದ ಸಾರಿಗೆ ಕಂಪನಿಗಳು ಮತ್ತು ಸಾವಿರಾರು ಜನರು ಅದನ್ನು ಪಡೆಯುವ ಉತ್ಕಟಾಭಿಲಾಷೆಯಿಂದ ಉತ್ತರ ಪ್ರದೇಶದೆಡೆ ಅವ್ಯಾಹತವಾಗಿ ಮುನ್ನುಗ್ಗುವುದು ನಡೆದಿತ್ತು. ಈ ಜನರಿಗೆ ನಾಯಿಗಳ ಅವಶ್ಯಕತೆ ಅತಿಯಾಗಿತ್ತು. ಹುರಿಕಟ್ಟಿನ ಸ್ನಾಯುಬಲದಿಂದ, ಕಾರ್ಯಕ್ಷಮತೆಗೆ ಹೆಸರಾದ, ತುಪ್ಪುಳದ ಆವರಣದ ಮೂಲಕ ಹೆಪ್ಪುಗಟ್ಟಿದ ಪುಂಜಿನಲ್ಲೂ ಸಲೀಸಾಗಿ ಬದುಕಬಲ್ಲ ನಾಯಿಗಳು ವಿಶೇಷವಾಗಿ ಬೇಕಾಗಿದ್ದವು.

ಸೂರ್ಯಚುಂಬಿತ ಸಾಂತಾಕ್ಲೇರಾ ಕೊಳ್ಳದಲ್ಲಿಯ ನ್ಯಾಯಾಧೀಶ ಮಿಲ್ಲರರ ಮನೆಯಲ್ಲಿ ಬಕ್ ವಾಸಿಸುತ್ತಿತ್ತು. ಆ ಮನೆಗೆ ಹೋಗಲು ನೆಲಗಟ್ಟನೆಯ ಅನೇಕ ಸೀಳುದಾರಿಗಳು ಅಂಕುಡೊಂಕಾದ ಆ ದಾರಿಯ ಎಡಬಲಕ್ಕೆ ಗಗನಚುಂಬಿ ಪಾಪ್ಲರ್ ಗಿಡಗಳನ್ನು ಟೊಂಗೆಗಳು ಒಂದಕ್ಕೊಂದು ತಳಕು ಹಾಕಿ ಶೋಭೆಯನ್ನುಂಟುಮಾಡಿದ್ದವು. ಅಲ್ಲದೆ ಅಲ್ಲಲ್ಲಿ ದ್ರಾಕ್ಷೆಯ ಮಂಟಪಗಳು, ಹಸಿರು ಮುರಿಯುವ ವಿಸ್ತಾರವಾದ ಹುಲ್ಲುಗಾವಲು, ಎಲೆಬಳ್ಳಿ, ಹಣ್ಣಿನ ತೋಟ, ಬೆರಿ ಹಣ್ಣಿನ ಚೌಕುಗಳು; ಬಿಸಿನೀರ ಸೆಲೆಯ ಬಾವಿಗಾಗಿ ಅಲ್ಲೊಂದು ಪಂಪು. ಬಳಿಯಲ್ಲಿ ಮಿಲ್ಲರರ ಮಕ್ಕಳ ಮುಂಜಾವಿನ ಸ್ನಾನಕ್ಕಾಗಿ ಸಿಮೆಂಟಿನ ಕೆರೆ.

ಈ ರಾಜ್ಯದ ಆಧಿಪತ್ಯ ಬಕ್ಕನದು. ಅದು ಹುಟ್ಟಿದುದು ಇಲ್ಲಿಯೇ. ಜೀವನದ ನಾಲ್ಕು ವರುಷ ಗತಿಸಿದುದೂ ಇಲ್ಲಿಯೇ. ಇಲ್ಲಿ ಇದಲ್ಲದೆ ಬೇರೆ ನಾಯಿಗಳು ಇದ್ದುದೇನೋ ನಿಜ. ಆದರವು ಇದ್ದೂ ಇಲ್ಲದಂತೆ. ಅವು ಬಂದವು; ಹೋದವು ಅಷ್ಟೆ.

ಆದರೆ ಬಕ್ ಮನೆಯ ನಾಯಿಯೂ ಅಲ್ಲ; ಕೊಟ್ಟಿಗೆಯದೂ ಅಲ್ಲ. ಅಖಂಡ ಈ ಭೂಪ್ರದೇಶವೇ ಅದರದು! ಒಮ್ಮೊಮ್ಮೆ ಈಜುಗೊಳದಲ್ಲಿ ಮುಳುಗು ಹಾಕುತ್ತಿತ್ತು. ನ್ಯಾಯಾಧೀಶರ ಮಕ್ಕಳೊಡನೆ ಬೇಟೆಗೆ ಹೊರಡುವುದೂ ಅದಕ್ಕೆ ರೂಢಿ. ಹೂಬಿಸಿಲು ಬಿದ್ದಾಗ, ಇಲ್ಲವೆ ಚುಮುಚುಮು ನಸುಕಿನಲ್ಲಿ ಮೋಲಿ, ಅಲ್ಯೆಸರ ಮೈಗಾವಲಾಗಿ ಹೋಗುವುದು ಅದರ ಪರಿಪಾಠ. ಮಿಲ್ಲರರ ಆ ಸ್ಥಳದಲ್ಲಿ ಸರಿದಾಡುವ, ಹಾರಾಡುವ, ಅಲೆದಾಡುವ ಯಾವ ಪ್ರಾಣಿಗಳ ಮೇಲೂ ಅದರದು ಅಪೂರ್ವ ನಿರಂತರ ಪ್ರಭಾವ.

ಅದರ ತಂದೆ ಎಲ್ಮೊ ಒಂದು ದೊಡ್ಡ ಸೊಣಗ–ಸೇಂಟ್ ಬರ್ನಾರ್ಡ್ ನಾಯಿ–ನ್ಯಾಯಾಧೀಶನ ಜೀವನ ಸಂಗಾತಿ. ಅದರ ತಾಯಿ ಶೆಪ್ ಸ್ಕಾಚ್ ಕುರುಬರ ನಾಯಿ. ಬಕ್ ತಂದೆಯ ರೀತಿಯನ್ನೇ ಅನುಸರಿಸಿತ್ತು. ಅದು ಆಕಾರಮಾನದಿಂದ ತಂದೆಯಷ್ಟು ದೊಡ್ಡದಿರಲಿಲ್ಲ. ಅದರ ತೂಕ ೧೪೦ ಪೌಂಡು. ಇಂಥ ಗಾತ್ರವನ್ನು ತೂಗುವುದೆಂದರೆ ಸಾಮಾನ್ಯ ಸಂಗತಿಯೇನಲ್ಲ. ಅಷ್ಟರಿಂದಲೇ ಬಕ್ ಎಲ್ಲೆಡೆಯಿಂದ ಪ್ರಶಂಸೆಹೊಂದಿ ರಾಜಠೀವಿಯಿಂದ ಮೆರೆಯುತ್ತಿತ್ತು. ಬಾಲ್ಯಾವಸ್ಥೆಯ ಕಾಲಾವಧಿಯಲ್ಲಿ ಅದು ವೈಭವಶಾಲಿ ಜೀವನ ಬಾಳಿತ್ತು. ಬೇಟೆಗೆ ಹೊರಡುವುದರ ಮೂಲಕ ಬಕ್ ಬಹಳ ಮೈ ಹಿಡಿದಿತ್ತು; ಗಟ್ಟಿಮುಟ್ಟಾಗಿತ್ತು. ಸ್ನಾಯುಗಳು ಬಲಶಾಲಿಯಾಗಿ

ಜಾಕ್‌ಲಂಡನ್ನರ 'ಕಾಡಿನ ಕರೆ' ಪುಸ್ತಕದ ಸಾರ. ಲಲಿತ ಸಾಹಿತ್ಯಮಾಲೆ, ಧಾರವಾಡ ಇವರ ಅನುಮತಿಯಿಂದ

ದ್ದವು. ಅಲ್ಲದೆ ಟಬ್ಬಿನಲ್ಲಿ ಸ್ನಾನವೆಂದರೆ ಅದಕ್ಕೆ ಪಂಚಪ್ರಾಣ.

ಇಷ್ಟೆಲ್ಲ ರೀತಿಯಿಂದ ಬೆಳೆದುಬಂದ ಬಕ್ ನಾಯಿಗೆ ೧೮೯೭ ರಲ್ಲಿ ಕ್ಲೊನ್‌ಡೈಕ್ ಸತ್ಯಾಗ್ರಹದ ಮೂಲಕ ಹಿಮಾಚ್ಛಾದಿತ ಉತ್ತರಪ್ರದೇಶದಲ್ಲಿ ಅವನತಿ ಉಂಟಾದುದು ಹೀಗೆ: ಆದರೇನು? ಬಕ್ ವೃತ್ತಪತ್ರಿಕೆ ಓದಿರಲಿಲ್ಲ. ತೋಟಿಗ ಸಹಾಯಕನಲ್ಲೊಬ್ಬನಾದ ಮ್ಯಾನುಯೆಲ್ಲನ ಅಪಾಯಕಾರಕ ಗೆಳೆತನವೂ ಸಾಧಿಸಬಾರದಿತ್ತು. ಅವನದೊಂದು ದೊಡ್ಡ ದೋಷವೆಂದರೆ ಚೀನೀ ಲಾಟ್ರಿಗಾಗಿ ಇರುವ ಅತ್ಯಾಸೆ.

ನ್ಯಾಯಾಧೀಶನ ಕಾಳಿನ ಸಂಸ್ಥೆಯ ಸಾಧಾರಣ ಸಭೆ ಕೂಡಿತ್ತು. ಅಂದು ಹುಡುಗರು ತಮ್ಮ ಆಟದ ಕ್ಲಬ್ಬಿನ ಸಂಘಟನೆಯಲ್ಲಿ ತಾದಾತ್ಮ್ಯರಾಗಿದ್ದರು. ಆ ರಾತ್ರಿಯೇ ಮ್ಯಾನುಯೆಲ್ ತನ್ನ ಕಾರಸ್ಥಾನದಲ್ಲಿ ವಿಜಯಿಯಾದುದು. ಅವನು ಹಾಗೂ ಬಕ್ ತೋಟದಲ್ಲಿ ಹಾದು ಹೋದದ್ದು ಯಾರಿಗೂ ತಿಳಿದಿರಲಿಲ್ಲ. ಸ್ವತಃ ಬಕ್ ತಾನು ಅಲೆದಾಡಲು ಹೋಗುವೆನೆಂದು ಗ್ರಹಿಸಿತ್ತು. ಅವನು ಬಕ್‌ನೊಡನೆ ಕಾಲೇಜ ಉದ್ಯಾನದ ಬಳಿಯ ಧ್ವಜ ನಿಲ್ದಾಣದ ಹತ್ತಿರದಿಂದ ಬರುವದನ್ನು ಒಬ್ಬನೇ ಒಬ್ಬ ಕಂಡಿದ್ದ. ಮ್ಯಾನುಯೆಲ್‌ನೊಡನೆ ಇವನ ಮಾತು ನಡೆದವು. ಹಣದ ವ್ಯವಹಾರವೂ ಕ್ಷಣಾರ್ಧದಲ್ಲಿ ಮುಗಿಯಿತು.

ಶಾಂತ ರೀತಿಯಲ್ಲಿ ತನ್ನ ವೈಭವದ ಠೀವಿಯಲ್ಲಿ ಬಕ್ ತನ್ನ ಕೊರಳಿಗೆ ಹಗ್ಗ ಬಿಗಿಸಿಕೊಂಡಿತು. ನಿಜವಾಗಿ ಇದು ಅದಕ್ಕೆ ಬೇಡವಾಗಿತ್ತು. ಆದರೆ ತನ್ನ ಜನರಲ್ಲಿ ಒಮ್ಮೆ ವಿಶ್ವಾಸವಿಟ್ಟಿತೆಂದರೆ ಸಾಕು; ಅದು ಯಾವ ಅನ್ಯಾಯಕ್ಕೂ ತಲೆವಾಗಿಸುತ್ತಿತ್ತು. ಆದರೆ ಹಗ್ಗದ ತುದಿ ಅಪರಿಚಿತನ ಕೈಸೇರಿದಾಗ ಅದಕ್ಕೆ ಸಿಟ್ಟು ತಡೆಯದಾಗಿ ಗುರುಗುಟ್ಟತೊಡಗಿತು. ಮತ್ತೆ ಹಗ್ಗ ಕೊರಳು ಕೊರೆಯುತ್ತ ಉಸಿರುಕಟ್ಟಿಸತೊಡಗಿದೊಡನೆ ಅದರ ಸಹನೆಗೆ ಮಿತಿ ಉಳಿಯಲಿಲ್ಲ. ಸಂತಾಪದಿಂದ ಆ ಮನುಷ್ಯನೆಡೆಗೆ ಟಣ್ಣನೆ ಹಾರಿ ಗಂಟಲು ಹಿಡಿದು ಕೆಳಗೆ ಉರುಳಿಸಿಬಿಟ್ಟಿತು. ಆದರೆ ಅದರ ಶಕ್ತಿ ಕುಂದಿತು. ಕಣ್ಣು ಮಿಂಚಹತ್ತಿದವು. ಗಾಡಿಯು ಬಂದು ತನ್ನನ್ನು ಅದರ ಒಳಗೆ ಹಾಕಿದಾಗ ಅದಕ್ಕೆ ಪ್ರಜ್ಞೆಯೇ ಇರಲಿಲ್ಲ.

ಮುಂದೆ ಅಸ್ಪಷ್ಟವಾಗಿ ಅದಕ್ಕೆ ತಿಳಿದುಬಂದುದೆಂದರೆ ತನ್ನ ನಾಲಗೆಗೆ ವೇದನೆಯಾದುದು; ಯಾವುದೋ ವಾಹನದಲ್ಲಿ ತನಗೆ ಧಡಕಿಯಾದುದು. ಎಂಜನ್ನಿನ ಕರ್ಕಶ ಸಿಳ್ಳು ಕೇಳಿಸಿದಾಗ ತಾನೆಲ್ಲಿರುವೆನೆಂಬುದರ ಅರಿವಾಗತೊಡಗಿತು. ನ್ಯಾಯಾಧೀಶನ ಮಕ್ಕಳೊಡನೆ ತನಗೆ ಅಲೆದಾಟದ ಕಲ್ಪನೆ ಬಂದಿದ್ದರೂ ವಾಹನ ಪ್ರವಾಸದ ಅನುಭವ ದೊರೆತಿರಲಿಲ್ಲ. ಅದು ಕಣ್ದೆರೆಯಿತು. ಕಣ್ಣಲ್ಲಿ ಸಿಟ್ಟಿನ ಆವೇಶ ವ್ಯಕ್ತವಾದರೂ ಅಪಹೃತ ಅರಸನ ಗತಿ ಅದಕ್ಕಾಗಿತ್ತು. ಆ ಮನುಷ್ಯ ಅದರ ಗಂಟಲಿಗೆ ಕೈ ಹಾಕಲು ಹವಣಿಸಿದ. ಆದರೆ ಬಕ್ ಅತಿ ಚಾಣಾಕ್ಷ. ದವಡೆಯ ಹಲ್ಲಿನಿಂದ ಅದೇ ಕ್ರೂರ ಕೈಗೆ ಕಡಿದರೆ ಮೂರ್ಛೆ ತಿಳಿದೇಳುವುದೇ ಪ್ರಯಾಸವಾಯ್ತುವನಿಗೆ. 'ಈ ನಾಯಿಗೆ ರೋಗವಿದೆ' ಎನ್ನುತ್ತ ಗಾಯದ ಕೈ ಮುಚ್ಚಿಕೊಂಡು ಗೆಳೆಯನಿಗೆ ಹೇಳಿದ. 'ಫಿಸ್ಕೋದಲ್ಲಿಯ ನನ್ನ ಗೆಳೆಯನ ಬಳಿಗೆ ಇದನ್ನೊಯ್ದು ಡಾಕ್ಟರರಿಂದ ಚಿಕಿತ್ಸೆ ನಡಸುವದವಶ್ಯ.'

ಗಂಟಲಿಗೆ, ನಾಲಗೆಗೆ ಅಸಹನೀಯ ನೋವಾಗಿ ಅರ್ಧ ಜೀವವೇ ಹಾರಿದಂತೆನಿಸಲು ಬಕ್ ತನಗೆ ಯಾತನೆ ಕೊಡುವವನನ್ನೆದುರಿಸಲು ಹವಣಿಸಿತು. ಅಷ್ಟರಲ್ಲಿಯೇ ಅದನ್ನು ಕೆಳಗೆ ಕೆಡವಿ, ಉಸಿರುಗಟ್ಟುವಂತೆ ಹಿತ್ತಾಳಿಯ ಕಾಲರನ್ನು ಬಿಗಿದರು. ಹಗ್ಗ ಬಿಚ್ಚಿ ಪಂಜರದಲ್ಲಿ ಚೆಲ್ಲಿಕೊಟ್ಟರು.

ಆ ದುಃಖಮಯವಾದ ಇರುಳನ್ನದು ಸಿಟ್ಟಿನಲ್ಲಿ ಕುದಿಯುತ್ತಲೇ ಕಳೆಯಿತು. ಇಡೀ ರಾತ್ರಿ ಅನೇಕ ಸಲ ಅದು ಹಾರಿ ಹಾರಿ ಬಿದ್ದಿತು. ಕಣ್ದೆರೆದು ಆತುರತೆಯಿಂದ ನೋಡಿತು— ನ್ಯಾಯಾ

ಧೀಶನಾಗಲಿ ಅವನ ಮಕ್ಕಳಾಗಲಿ ಬಂದು ಮುದ್ದಿಟ್ಟಾರೆಂದು! ಆದರೆ ಬಾಗಿಲು ತೆಗೆದಾಗೊಮ್ಮೆ ಮುಂದ ಬೆಳಕಿನಲ್ಲಿ ಸಲೂನಿನೊಡೆಯ ಮಾತ್ರ ಬಂದು ಇಣಿಕಿ ಹೋಗುತ್ತಿದ್ದ. ಉನ್ಮಾದದಿಂದ ಬೊಗಳಬೇಕೆಂದು ಹಾತೊರೆಯುವಾಗ ಬೇಕಾದ ವ್ಯಕ್ತಿ ಕಂಡಾಗೊಮ್ಮೆ ಅದಕ್ಕೆ ಸೇಡಿನಿಂದ ಗುರ್ರೆನ್ನದೆ ವಿಧಿ ಇರಲಿಲ್ಲ.

ಪಂಜರ ಸಹಿತ ಅದನ್ನು ವ್ಯಾಗನ್ನಿಗೆ ಸ್ಥಳಾಂತರಿಸಲಾಯಿತು. ಅನೇಕ ಜನರ ಹಸ್ತಾಂತರಕ್ಕೊಳಗಾಗಿ ಅದರ ಪ್ರವಾಸ ಮುಂದುವರಿಯಿತು.

ಎರಡು ರಾತ್ರಿ ಇನ್ನೆಷ್ಟೋ ಇಂತಹ ಭಾರಗಳನ್ನು ಎಂಜಿನ್ ಎಳೆಯಿತು. ನಾಯಿಗೆ ತಿನ್ನಲು ಕುಡಿಯಲು ಏನೂ ಸಿಗಲಿಲ್ಲ. ಸಲಾಕಿಯನ್ನು ಕಡಿಯಲು ಅದು ಜಗಿದಾಗ ಜನರು ಅಪಹಾಸ್ಯದಿಂದ ಚುಚ್ಚಿ ನುಡಿಯುತ್ತಿದ್ದರು. ಅಂತೇ ಅಭಿಮಾನಕ್ಕೆ ಬರೆ ಹಾಕಿದಂತಾಗುತ್ತಿತ್ತು. ಹಸಿವೆಯನ್ನೇನದು ಲೆಕ್ಕಿಸುತ್ತಿರಲಿಲ್ಲ. ಆದರೆ ನೀರೂ ಸಿಗದಿದ್ದರಿಂದ ಅದರ ಸಿಟ್ಟು ಹೆಚ್ಚಿ ಕಾಯಿಲೆಯಾದಂತೆನಿಸಿತು.

ಒಂದು ಸಂಗತಿ ಅದಕ್ಕೆ ಆನಂದವನ್ನುಂಟು ಮಾಡಿತು. ಕೊರಳಿಗೆ ಬಿಗಿದ ಹಗ್ಗ ಮಾತ್ರ ಬಿಚ್ಚಲಾಗಿತ್ತು. ಇನ್ನೇನು? ಎಲ್ಲರನ್ನು ಒಂದು ಕೈ ನೋಡುವೆನೆಂದು ಅದು ಎಣಿಸಿತು. ಅದರ ಕಣ್ಣು ಕೆಂಪಡರಿದವು. ರಾಕ್ಷಸನ ಅಪರಾವತಾರ ತಳೆಯಿತು.

ನಾಲ್ವರು ಒದ್ದಾಡುತ್ತ ಆ ಪಂಜರವನ್ನು ವ್ಯಾಗೀನಿನಿಂದಿಳಿಸಿ ಎತ್ತರಗೋಡೆಯುಳ್ಳ ಚಿಕ್ಕ ಹಿತ್ತಿಲಿಗೆ ಒಯ್ದರು. ಕೆಂಪು ಸ್ವೆಟರಿನ ದಷ್ಟಪುಷ್ಟ ಮನುಷ್ಯನೊಬ್ಬನು ಡ್ರಾಯವರನಿಗೆ ಸನ್ನೆ ಮಾಡಿದ. ತನಗೆ ಪೀಡಿಸಲು ಮತ್ತೊಬ್ಬ ಬಂದನೆಂದು ಬಕ್ ಟಣ್ಣನೆ ಸಲಾಕಿಗೆ ಜಗಿಯಿತು. ಆ ಮನುಷ್ಯ ವಿಕಟವಾಗಿ ನಕ್ಕು ಕೈ ಬಾಚಿಯನ್ನು ಪಂಜರದೊಳಕ್ಕೆ ಚುಚ್ಚಿದ.

ಬಕ್ ರಭಸದಿಂದ ಮುನ್ನುಗ್ಗಿ ಬಾಚಿಯನ್ನು ಹಲ್ಲಿನಿಂದ ಕಡಿಯುತ್ತ ಅದರೊಡನೆ ಹೋರಾಟ ನಡೆಸಿತು. ನೀನು ಕೆಂಗಣ್ಣ ರಾಕ್ಷಸನೇ ಸೈ ಎಂದು ಅವನು ಅದಕ್ಕೆ ಹೊರಬರುವಷ್ಟು ಮಾತ್ರ ಬಾಗಿಲು ಸರಿಸಿ, ಕೈಯಲ್ಲಿ ಟೊಣಪೆ ಹಿಡಿದ.

ನಿಜಕ್ಕೂ ಬಕ್ ಕೆಂಗಣ್ಣ ದೆವ್ವವೇ ಆಗಿತ್ತು. ಅದರ ಮೈಗೂದಲು ಸೆಟೆದು ನಿಂತು, ಬಾಯಿಯಿಂದ ಬುರುಗು ಬಂದು ಕಣ್ಣು ಲಕಲಕಿಸುತ್ತಿದ್ದವು. ನೇರವಾಗಿ ತನ್ನ ನೂರಾ ನಲವತ್ತು ಪೌಂಡು ತೂಕದ ದೇಹವನ್ನು ತೂರಿಕೊಂಡಿತು. ಇನ್ನೂ ನಡುವೆ ಗಾಳಿಯಲ್ಲಿರುವಾಗಲೆ ಕಡಿಯಬೇಕೆಂಬಷ್ಟರಲ್ಲಿ ಒಂದು ಹೊಡೆತ ಬಿದ್ದು ಹೊಡಮರಳಿ ಫಡಾರ್ ಎಂದು ನೆಲಕ್ಕೆ ಬಂದಿತು. ಅರ್ಧಮರ್ಧ ಚೀರಿ ಬೊಗಳಿ ಮತ್ತೆ ಗಾಳಿಯಲ್ಲಿ ಹಾರಿತು. ಬಲವಾದ ಹೊಡೆತ ಬಿದ್ದುದರಿಂದ ಹಾರಲಿಕ್ಕಾಗದೆ ನೆಲಕ್ಕೆ ಕುಪ್ಪಳಿಸಿ ಬಿದ್ದಿತು.

ಹಿಂದಿನ ಅದರ ಮೃದು ತುಪ್ಪಳದ ಮೈಕಾಂತಿ ಎಲ್ಲಿ? ಈಗಿನ ವಿರೂಪಾವಸ್ಥೆ ಎಂತಹದು? ಈಗ ಸ್ವೆಟರಿನವ ಅದರ ಮೂಗಿಗೊಂದು ಏಟು ಕೊಟ್ಟ. ಹಿಂದಿನ ನೋವು ಈ ಸಂಕಟದ ಮುಂದೆ ಹೇಳಹೆಸರಿಲ್ಲದಾಯಿತು. ಸಿಂಹದಂತೆ ಗರ್ಜಿಸಿ ಬಕ್ ಮತ್ತೆ ಜಗಿಯಿತು. ದವಡೆಯ ಹಲ್ಲು ಹಿಡಿದು ಅವನು ತಿರುವಿ ಒಗೆದ.

ಕೊನೆಯ ಸಲ ನಾಯಿ ಯತ್ನಿಸಿತು. ಕಡೆಯ ಬಿರುಸು ಏಟಿಗೆ ಅದು ಪೂರ್ಣ ಎಚ್ಚರ ತಪ್ಪಿ ನೆಲದ ಮೇಲುರುಳಿತು.

"ಬಕ್ ಮರಿ" ಎಂದು ನಿಜವಾದ ವಾತ್ಸಲ್ಯದಿಂದ ಆತ ಅದನ್ನುದ್ದೇಶಿಸಿ ಹೇಳಿದ: ಇಷ್ಟು ಹೊತ್ತು ನಮ್ಮಲ್ಲಿ ರಗಳೆಯಾಯಿತು. ಅದನ್ನು ಮರೆತುಬಿಡದೆ ಗತ್ಯಂತರವಿಲ್ಲ. ಒಳ್ಳೆಯ ನಾಯಿಯಾಗಿ ವರ್ತಿಸಿದರೆ ಎಲ್ಲವೂ ಸುಸೂತ್ರವಾಗಿ ನಡೆಯುವುದು. ಖೊಟ್ಟಿಯಾದೆಯೋ ಏನೂ ಸುಖ ಕಾಣೆ ತಿಳಿಯಿತೆ?

ಈವರೆಗೆ ನಿರ್ದಯದಿಂದ ನುಗ್ಗಾಗಿಸಿದ ತಲೆಯನ್ನೆ ಅವನು ಪ್ರೀತಿಯಿಂದ ಮುಂಡಾಡಿದ.

ಅವನು ನೀರು ತಂದಾಗ ಆತುರತೆಯಿಂದದು ಕುಡಿಯಿತು. ಆ ಮನುಷ್ಯನ ಕೈಯಿಂದ ಹಸಿ ಮಾಂಸವನ್ನು ತುಣುಕು ಮಾಡಿ ತಿಂದಿತು.

ದಿನಗಳೆದಂತೆ ಬೇರೆ ನಾಯಿಗಳೂ ಅಲ್ಲಿಗೆ ಬಂದವು. ಅವೆಲ್ಲ ಕೆಂಪು ಸ್ವೆಟರಿನವನ ವಶವರ್ತಿಯಾಗಿದ್ದವು. ಅವನ ಅಮಾನುಷ ವೃತ್ತಿ ಕಂಡು ಬಕ್ ಹೊಸ ಪಾಠ ಕಲಿಯಿತು. ಪೂರ್ಣ ಒಪ್ಪಂದವಾಗದಿದ್ದರೇನಾಯಿತು ? ಹೊಡೆಸಿಕೊಂಡಾದರೂ ಒಡೆಯನ ಕೈ ನೆಕ್ಕುವ ಚಾಳಿ ಬಕ್ ಕಲಿಯಲಿಲ್ಲ. ಆದರೆ ಒಂದು ನಾಯಿ ಮಾತ್ರ ಪ್ರಭುತ್ವ ಸಂಪಾದಿಸಿಯೇ ತೀರೇನೆಂದು ಹಟ ಹಿಡಿದಿದ್ದಕ್ಕೆ ಜೀವಕ್ಕೆ ಎರವಾಗಬೇಕಾಯಿತು.

ಹರಕು ಮುರುಕು ಇಂಗ್ಲಿಷ್ ಮಾತಾಡುವವನೊಬ್ಬ ಅಸಹ್ಯ ಉದ್ಗಾರ ತೆಗೆಯುತ್ತ "ನನ್ನ ಭಾಗ್ಯ !" ಎಂದು ಬೆಲೆ ವಿಚಾರಿಸಿದ.

"ಮುನ್ನೂರು ರೂಪಾಯಿ"

ಬಕ್ಕನನ್ನು ಕಂಡು ದಂಗಾಗಿ ನಿಂತು "ಸಾವಿರಕ್ಕೊಂದು ಸಿಗುವ ಜಾತಿಯ ನಾಯಿ" ಎಂದು ಪ್ರಶಂಸಿಸಿದ.

ಇಬ್ಬರ ನಡುವೆ ಹಣದ ವ್ಯವಹಾರವಾದದ್ದನ್ನು ಬಕ್ ನೋಡಿತು. ಕೆಂಪು ಸ್ವೆಟರಿನ ಮನುಷ್ಯನನ್ನು ಅಂದು ಕಂಡದ್ದೇ ಕೊನೆಯ ಸಲವೆನ್ನಬೇಕು.

ಪೆರಾಲ್ಟ್ ಎರಡು ನಾಯಿಗಳನ್ನು ಫ್ರ್ಯಾಂಕೋಯಿಸನೆಂಬ ರಾಕ್ಷಸನ ವಶಕ್ಕೆ ಕೊಟ್ಟ. ಬಕ್‌ನಿಗೆ ಇಬ್ಬರೂ ಹೊಸತರದ ಜನರು. ಇವರಿಬ್ಬರು ಒಳ್ಳೆಯ ಜನರೆಂದು ತಿಳಿಯಲು ಅದಕ್ಕೆ ಬಹುಕಾಲ ಹಿಡಿಯಲಿಲ್ಲ.

ನಾವ್ಹಲ್ ಡೆಕ್ಕಿನ ಮೇಲೆ ಬಕ್, ಕರ್ಲಿ ನಾಯಿಗಳೊಡನೆ ಬೇರೆ ಹಲವು ನಾಯಿಗಳು ಬಂದು ಕೂಡಿದವು. ಅವುಗಳಲ್ಲಿ ಹಿಮದಷ್ಟು ಬಿಳಿ ನಾಯಿಯೊಂದಿತ್ತು. ಭೂಗರ್ಭ ಶಾಸ್ತ್ರಾಭ್ಯಾಸಕ್ಕೆಂದು ಹೊರಟ ತಂಡದೊಡನೆ ಹೊರಟ ಕಪ್ತಾನನೊಬ್ಬ ಅದನ್ನು ತಂದಿದ್ದ.

ಹೊರಗೆ ನೋಡಲು ಒಳ್ಳೇ ಸ್ನೇಹಮಯ. ಮುಗುಳು ನಗೆ ಸೂಸಿ ಮೊದಲ ಊಟಕ್ಕೇ ಬಕ್‌ನ ಆಹಾರ ಕದಿಯುವುದರಲ್ಲಿ ಅದರ 'ಜಾಣತನ' ಅಭಿವ್ಯಕ್ತವಾಯಿತು. ಅನ್ಯಾಯಕ್ಕೆ ಪ್ರತಿಕಾರವೆಂದು ಬಕ್ ಅದಕ್ಕೆ ಬುದ್ಧಿ ಕಲಿಸಹೊರಟಾಗ ಫ್ರ್ಯಾಂಕೋಯಿಸನ ಚಬುಕ ಧ್ವನಿಗೈದಿತು!

ಡೇವ್ ಎಂಬ ನಾಯಿಗೆ ಯಾತರಲ್ಲೂ ಆಸ್ಥೆಯಿಲ್ಲ. ನಾವ್ಹಲ್ ಹಡಗ ಕ್ವೀನ್ಸ್ ಚಾರ್ಲಟ್ ದಾಟಿದರೂ ದೆವ್ವ ಬಡಿದಂತೆ ಹಾಗೇ ಇತ್ತು. ಬಕ್ ಹಾಗೂ ಕರ್ಲಿ ಹೆದರಿ ಹೌಹಾರಿ ಹೋಗಿದ್ದವು.

ಹಗಲು-ರಾತ್ರಿ ಎನ್ನದೆ ಹಡಗು ಕ್ರಮಿಸಿತು. ಒಂದು ದಿನ ಬೇರೊಂದರಂತೆಯೇ ಇದ್ದರೂ ಹವೆ ಮಾತ್ರ ಹೆಚ್ಚು ತಂಪಾಗುತ್ತ ನಡೆದುದು ಬಕ್‌ನಿಗೆ ತಿಳಿಯತೊಡಗಿತು. ಕೊನೆಗೆ ಒಂದು ದಿನ ಮುಂಜಾವು ಹಡಗು ನಿಂತಿತು. ಎಲ್ಲೆಡೆ ಉದ್ವಿಗ್ನತೆ. ಏನೋ ಬದಲಾವಣೆಯಾಗಲಿದೆಯೆಂದು ನಾಯಿಗಳು ಹೆದರಿದ್ದವು. ಫ್ರ್ಯಾಂಕೋಯಿಸ್ ಎಲ್ಲಕ್ಕೂ ಚಬುಕದಿಂದ ಹೊಡೆದು ಡೆಕ್ಕಿಗೆ ತಂದ. ಕೆಸರಿನಷ್ಟು ಮೆತ್ತಗಿದ್ದ ಬಿಳಿ ವಸ್ತುವಿನಲ್ಲಿ ಮೊದಲು ಬಕ್‌ನ ಕಾಲು ಕುಸಿದು ಹೋದವು. ಗಾಳಿಯಲ್ಲೂ ಹೀಗೇ ಬಿಳಿ ಕಣಗಳು ತೇಲುತ್ತಿದ್ದವು. ಮೈ ಅಲುಗಾಡಿಸಿ ನೋಡಿತು. ಆದರೂ ಮೇಲಿಂದ ಬೀಳುವ ಕಣಗಳೇನೂ ನಿಲ್ಲಲಿಲ್ಲ. ಕುತೂಹಲದಿಂದ ಅದನ್ನು ನೆಕ್ಕಿತು. ಬೆಂಕಿಯಂತೆ ಕೊರೆಯತೊಡಗಿತದು. ಎಲ್ಲ ಅದಕ್ಕೆ ಮೋಜಿನವಾಯಿತು. ಎಷ್ಟು ಸಲ ಪರೀಕ್ಷಿಸಿದರೂ ಮತ್ತೆ ಅದೇ ಬಗೆಯ ವಿಲಕ್ಷಣ ಅನುಭವ. ಬಕ್ ಹಿಮವನ್ನು ಕಂಡದ್ದು ಅದೇ ಮೊದಲ ಬಾರಿ.

ಡಿಯಾ ತೀರದಲ್ಲಿ ಬಕ್ ಮೊದಲ ದಿನ ಕಳೆಯುವುದು ದುಸ್ತರವಾಯ್ತು. ದುಃಸ್ವಪ್ನ ಬಿದ್ದವು. ಪ್ರತಿಯೊಂದು ಗಳಿಗೆ ಅಚ್ಚರಿ, ಉದ್ವಿಗ್ನತೆಗಳಿಂದೊಡಗೂಡಿತ್ತು. ನಾಗರಿಕತೆಯ ತುತ್ತ ತುದಿಯಿಂದ ಪ್ರಕೃತಿಯ ಮೂಲಭೂತ ಸ್ವರೂಪದ

ಮಡಲಿಗೆ ಒಯ್ದು ಚೆಲ್ಲಿಕೊಟ್ಟಂತಾಗಿತ್ತು. ಪಿರಿ ಪಿರಿ ತಿರುಗುವುದು, ಅಖಂಡ ಬೇಸರ. ಮಾಡಲು ನಿಶ್ಚಿತ ಕೆಲಸವಿಲ್ಲ, ಶಾಂತತೆಯಿಲ್ಲ, ವಿಶ್ರಾಂತಿಯಿಲ್ಲ, ಕ್ಷಣವೂ ಸುರಕ್ಷಿತತೆಯ ಲವಲೇಶವಿಲ್ಲ, ಎಲ್ಲವೂ ಅಸ್ತವ್ಯಸ್ತ. ಪ್ರತಿಕ್ಷಣವೂ ದುಃಖಮಯ. ಯಾವಾಗಲೂ ಜಾಗರೂಕತೆ ತಳೆಯದೆ ಗತಿ ಇರಲಿಲ್ಲ. ಅವರೆಲ್ಲ ಕಾಡು ಜನರು!

ನಾಯಿಗಳು ತೋಳಗಳಂತೆ ಕಚ್ಚಾಡುವುದು ಅದಕ್ಕೆ ಹಿಂದೆಂದೂ ತಿಳಿದಿರಲಿಲ್ಲ. ಅದರಿಂದ ಹೊಸ ಪಾಠ ಕಲಿತಂತಾಯಿತು. ಆ ಜೀವನದ ಅನುಭವ, ವೈವಿಧ್ಯದ ಮೂಲಕ ಅದಕ್ಕೆ ಲಾಭವಾಗದಿರಲಿಲ್ಲ. ಕರ್ಲಿನಾಯಿ ಮೊದಲ ತುತ್ತಾಯಿತು.

ಕರ್ಲಿಯ ಸಾವಿನ ನಂತರ ಬಕ್‌ನ ಜೀವನದಲ್ಲಿ ಮತ್ತೊಂದು ಆಘಾತವಾಯಿತು. ಫ್ರ್ಯಾಂಕೋಯಿಸ್‌ನು ಅದರ ಮೇಲೆ ಜೀನು ಹಾಕಿದ್ದನು. ಕೊಳ್ಳದಗುಂಟ ಹೋಗಿ ಅಡವಿಯಿಂದ ಉರುವಲು ತರುವುದು, ಅವನ ಪರಿಪಾಠ. ಜಾರುಬಂಡಿಯನ್ನು ಜಗ್ಗುವುದು ನಾಯಿಗಳ ಕೆಲಸ. ಕೆಳವರ್ಗದ ಪ್ರಾಣಿಗಳ ಕೆಲಸವಿದು ಎಂದು ಬಕ್ ಬಂಡೆಬ್ಬಿಸಿತು. ಜಗ್ಗುವಾಗ ಮನಃಪೂರ್ವಕವಾಗಿ ಮೈ ಉಳಿಸಿಕೊಂಡಿತು. ಫ್ರ್ಯಾಂಕೋಯಿಸ್ ಕಠೋರನಾದ. ಕೆಲಸವಾಗಲೇಬೇಕೆಂದು ಹಟ ಹಿಡಿದ. ಚಬಕದಿಂದ ಒಂದು ಕ್ಷಣದಲ್ಲಿ ಕಾರ್ಯ ಸಾಧಿಸಿಕೊಂಡ. ಆದರೆ ಡೇವ್ ಅನುಭವಿಕ. ಹಿಂದೆ ಇದ್ದು ಬಕ್‌ನ ತಪ್ಪು ತಿದ್ದುತ್ತಿತ್ತು. ಸ್ಪಿಟ್ಜ್ ಮುಂದಾಳು, ತನ್ನಭಾರ ಕಡಿಮೆ ಮಾಡಿಕೊಳ್ಳಲು ಬಕ್‌ನನ್ನು ಬಲಿಕೊಡುತ್ತಿತ್ತು. ಇಬ್ಬರಿಂದ ಬಕ್ ಹೀಗೆ ಪಾಠ ಕಲಿತಿತು. ಫ್ರ್ಯಾಂಕೋಯಿಸನ ಕಾರ್ಯ ನಿರಾಯಾಸವಾಗಿ ನೆರವೇರತೊಡಗಿತು. ಶಿಬಿರಕ್ಕೆ ಮರಳುವಷ್ಟರಲ್ಲಿ 'ಹೋ' ಎಂದರೆ ನಿಲ್ಲುವುದು, 'ಮಶ್' ಎಂದರೆ ಮುನ್ನಡೆಯುವುದು, ಇಳಿಜಾರಿನಲ್ಲಿ ವೇಗದಿಂದ ಗಾಡಿ ನುಗ್ಗುವಾಗ ಮೈ ಉಳಿಸಿಕೊಳ್ಳುವ ಕಲೆ--ಎಲ್ಲ ಕಲಿತುಕೊಂಡಿತು.

ಮಧ್ಯಾಹ್ನವಾಗುವುದರೊಳಗಾಗಿಯೇ ತನ್ನ ಎಲ್ಲ ಸಾಮಗ್ರಿ ಕಟ್ಟಿಕೊಂಡು ಪ್ರಯಾಣ ಬೆಳಿಸಬೇಕಾದ್ದರಿಂದ ಅವಸರದಲ್ಲಿಯೇ ಮತ್ತೆರಡು ನಾಯಿ ತಂದ. 'ಬಿಲ್ಲಿ', 'ಜೋ' ಎಂಬ ಆ ನಾಯಿಗಳು ಸಹೋದರರು. 'ಹಸ್ಕಿ'. ಜಾತಿಯವು. ಒಂದೆ ತಾಯಿಯ ಮಕ್ಕಳಾಗಿದ್ದರೂ ಅವುಗಳ ಸ್ವಭಾವ, ರೀತಿ-ನೀತಿಗಳು ಹಗಲು-ರಾತ್ರಿ!

ಸಂಜೆಯಾಗುವಷ್ಟರಲ್ಲಿ ಪೆರಾಲ್ಟ್ ಮತ್ತೊಂದು ನಾಯಿ ತಂದ. ಅದೂ 'ಹಸ್ಕಿ'. ಕಣ್ಣು ಒಂದೇ. ಅದೇ ಪರಾಕ್ರಮದ ದ್ಯೋತಕದಂತೆ ಥಳ ಥಳ ಹೊಳೆಯುತ್ತಿತ್ತು. ಯಾರನ್ನೂ ಬಲಿಹಾಕಿಕೊಳ್ಳುವ ತೇಜವದು! ಡೇವ್‌ನಂತೆ ಅದು ಏನೂ ಬೇಡಲಿಲ್ಲ; ಯಾರಿಗೂ ಕೊಡಲಿಲ್ಲ. ತನ್ನ ಕುರುಡು ಕಣ್ಣಿನೆಡೆಗೆ ಯಾರನ್ನೂ ಬರಗೊಡುತ್ತಿರಲಿಲ್ಲ. ತಿಳಿಯದಲೆ ಈ ಪ್ರಮಾದವೊಂದು ಬಕ್‌ನಿಂದ ಘಟಿಸಿಹೋಯಿತು. ಅದಕ್ಕಾಗಿ ಸೊಲೆಕ್ಸಿನಿಂದ ಮೂರು ಇಂಚಿನುದ್ದ ಗಾಯ ಹೊರಬೇಕಾಯಿತು.

ಆ ಇರುಳು ಬಕ್ಕನಿಗೆ ನಿದ್ರೆ ಬರುವುದೊಂದು ಸಮಸ್ಯೆಯಾಯಿತು. ಡೇರೆಯಲ್ಲಿ ಮೇಣಬತ್ತಿಯ ಬೆಳಕುಬಿದ್ದು ಬೆಚ್ಚಗಿತ್ತು. ಬಕ್ ಒಳಗೆ ಹೋಗಿ ಮಲಗಲು ಹವಣಿಸಿದಾಗ ಪೆರಾಲ್ಟ್, ಫ್ರ್ಯಾಂಕೋಯಿಸ್ ಇಬ್ಬರೂ ಅಡಿಗೆಯ ಸಾಮಾನು ಅದರ ಮೇಲೆ ತೂರಾಡಿ ಹೊರಗಟ್ಟಿಬಿಟ್ಟರು. ಮತ್ತೆ ಚಳಿಯಲ್ಲಿ ಬೀಳುವುದೇ ಕರ್ಮವಾಯಿತು. ಹಿಮದ ಮೇಲೆ ಮಲಗಲು ಹವಣಿಸಿತು. ಆದರೆ ಮಂಜು ಅದನ್ನೋಡಿಸಿತು. ಅತಿ ದುಃಖಿಯಾಗಿ ಎಲ್ಲ ಡೇರೆಗಳ ಬಳಿ ಸುಳಿದಾಡ ಹತ್ತಿತು. ಆದರೆ ಹೋದಲ್ಲೆಲ್ಲ ಚಳಿಯೇ. ಅಲ್ಲಲ್ಲಿ ಅನಾಗರಿಕ ನಾಯಿಗಳು ಅದರ ಮೇಲೆ ಏರಿ ಬಂದವು. ಆದರೆ ತನ್ನ ಶೌರ್ಯದಿಂದ, ಗತ್ತುಗಾರಿಕೆಯಿಂದ ಪಾರಾಯಿತು. ಬಕ್ ಮೋರೆ ಒಣಗಿಸಿಕೊಂಡು ಥರಥರ ನಡಗುತ್ತ ಅನಾಥಾವಸ್ಥೆಯಲ್ಲಿ ನಿರುದ್ದಿಶವಾಗಿ ಡೇರೆಯ ಸುತ್ತಲೂ ಅಲೆದಾಡಹತ್ತಿತು. ಒಮ್ಮಿಂದೊಮ್ಮೆಲೇ ಅದರ ಕಾಲಬಳಿ ಹಿಮ್ಮ

ಕುಸಿದು ಒಳಗೆ ಸಿಕ್ಕಿತು. ಕಾಲ ಕೆಳಗೆ ಏನೋ ಸರಿದಾಡಿದಂತಾಯಿತು. ಹಾರಿಬಿದ್ದು ಹೆದರಿ ಬೊಗಳಿತು. ಮೂಗಿಗೆ ಬೆಚ್ಚಗಿನ ಹವೆ ತಾಗಿತು. ಹಿಮದ ಕೆಳಗೆ ಬಿಲ್ಲಿ ಚಂಡಿನಂತೆ ಸುರುಳಿಯಾಗಿ ಬಿದ್ದುಕೊಂಡಿತ್ತು. ಮುಂಬರುವ ಒಪ್ಪಂದದ ಕುರುಹೆಂದು ಈಗಲೆ ಬಿಲ್ಲಿ ಬಕ್‌ನ ಮೋರೆ ನೆಕ್ಕತೊಡಗಿತು— ತನ್ನ ಒದ್ದೆ ನಾಲಿಗೆಯಿಂದ.

ಇನ್ನೊಂದು ಪಾಠ! 'ಎಲ್ಲರೂ ಹೀಗೆ ಮಲಗಿದರೆ' ಎನ್ನುತ್ತ ಬಕ್ ಅತಿ ಪ್ರಯಾಸಪಟ್ಟು ಹಿಮ ಪ್ರದೇಶದಲ್ಲಿಯೇ ಕೆದರಿ ಒಂದು ಹೋರು ಮಾಡಿಕೊಂಡಿತು. ತನ್ನ ಮೈಕಾವಿನಿಂದಲೇ ಬೆಚ್ಚಗೆನಿಸಿ ನಿದ್ರೆ ಮಾಡತೊಡಗಿತು.

ನಾಯಿಗಳ ವಾಹಕ ಪೆರಾಲ್ಟ್‌ನಿಗೆ ನುಡಿದ; "ಹೇಳುವುದೇನು? ಬಕ್ ಬಹು ಬುದ್ಧಿಶಾಲಿ! ಹಾ ಹಾ ಎನ್ನುವಷ್ಟರಲ್ಲಿ ಪರಿಸ್ಥಿತಿಗೆ ಹೊಂದಿಕೊಳ್ಳುವುದು."

ಪೆರಾಲ್ಟ್ ಶ್ರೀಮದ್‌ಗಾಂಭೀರ್ಯದಿಂದ ತಲೆ ಕೊಡಹಿದ. ಕಾನಡಾ ಸರಕಾರಕ್ಕಾಗಿ ಅವನು ಅತ್ಯುತ್ತಮ ನಾಯಿಗಳನ್ನು ಹುಡುಕಿ ತರಬೇಕಾಗಿತ್ತು. ಅದಕ್ಕಾಗಿ ಅವನು ಅತಿ ಪರಿಶ್ರಮಿಸುತ್ತಿದ್ದ. ಬಕ್‌ನಂಥ ರಾಜನಾಯಿ ದೊರೆತದ್ದಕ್ಕೆ ಆತನಿಗಾದ ಆನಂದ ಅಷ್ಟಿಷ್ಟಲ್ಲ.

ದಿನೇ ದಿನೇ ಬಕ್ ಇಂಥ ದಳದೊಡನೆ ಗುದುಮುರಿಗೆ ಹಾಕುತ್ತ ನಡೆದಿತ್ತು. ಇರುಳು ಮಾತ್ರ ಶಿಬಿರದ ಪರಿವಾರಕ್ಕೆ ವಿಶ್ರಾಂತಿ. ಕತ್ತಲೆಯಾದೊಡನೆ ಸಾಮಾನ್ಯವಾಗಿ ಡೇರೆ ಹೊಡೆಯುತ್ತಿದ್ದರು. ನಾಯಿಗಳು ತಮ್ಮ ಪಾಲಿನ ಮಾಂಸಾಹಾರ ಮುಗಿಸುತ್ತಿದ್ದವು. ಬಕ್ ಮಹಾ ಕೂಳಬಕ್ಕ. ಒಂದೂವರೆ ಪೌಂಡಿನಷ್ಟು ಸಾಲಮನ್ ಮೀನಗಳು ಅದರ ಬೃಹದ್ ಉದರಕ್ಕೆ ಎಲ್ಲಿಯೂ ಹತ್ತುತ್ತಿರಲಿಲ್ಲ. ಎಂದೂ ಅದಕ್ಕೆ ಹೊಟ್ಟೆ ತುಂಬುವಷ್ಟು ಆಹಾರ ದೊರೆಯಲಿಲ್ಲ. ಉಳಿದ ನಾಯಿಗಳ ತೂಕವೇ ಕಡಿಮೆ. ಅಂತೇ ಆಹಾರವೂ ಅವುಗಳಿಗೆ ಅಷ್ಟು ಬೇಕಾಗುತ್ತಿರಲಿಲ್ಲ. ಹಿಮ ಪ್ರದೇಶಕ್ಕಾಗಿಯೇ ಅವು ಜನ್ಮ ತಳೆದಂತಿದ್ದವು. ಒಂದು ಪೌಂಡು ಮೀನು ದೊರೆತರೂ ಅಷ್ಟರಿಂದಲೇ ಸಂತೃಪ್ತವಾಗಿ, ಆರೋಗ್ಯಕರವಾಗಿ ಬಾಳುತ್ತಿದ್ದವು.

ಬಕ್‌ಗೆ ಮೊದಲಿನ ಚಂಡಿತನ ಉಳಿಯಲಿಲ್ಲ. ಅದೇ ಬೇಕು, ಇದೇ ಬೇಕು—ಎನ್ನುವ ಆಸೆಯೂ ಹಿಂಗಿದಂತಾಯಿತು. ತಿನ್ನುವಾಗಲೂ ಅದು ಅಚ್ಚುಕಟ್ಟು. ಗಬಗಬ ತಿನ್ನುವುದು ಕೇಳಬೇಡಿ. ಆದರೆ ಉಳಿದವು ಹಾಗಲ್ಲ! ತಮ್ಮ ಆಹಾರ ತೀವ್ರ ತೀರಿಸಿ ಬಕ್ಕನ ಉಳಿದ ಆಹಾರಕ್ಕೆ ಬಾಯಿ ಹಾಕುತ್ತಿದ್ದವು. ಎರಡು ಮೂರು ನಾಯಿಗಳೊಡನೆ ಅದು ಆಹಾರ ಉಳಿಸಿಕೊಳ್ಳಲು ಹೋರಾಡುತ್ತಿರುವಾಗ ಬೇರೊಂದು ನಾಯಿ ಯಾವ ಮಾಯೆಯಿಂದಲೋ ಬಂದು ತನ್ನ ಗಂಟಲಿಗೆ ಆ ಮೀನುಗಳನ್ನು ಹಾಕಿಕೊಳ್ಳುತ್ತಿತ್ತು. ಇದಕ್ಕೆ ಪ್ರತಿಕ್ರಿಯೆಯೆಂದು ಬಕ್ ತಾನೂ ಅವಸರವಸರವಾಗಿ ತಿನ್ನುವ ರೂಢಿ ಮಾಡಿಕೊಂಡಿತು. ಪೈಕ್ ಎಂಬ ಜಾಣ ಹಾಗೂ ಕಳ್ಳ ನಾಯಿ ಮಾಂಸದ ತುಂಡು ಕದ್ದಾಗ ಮರುದಿನ ಬಕ್ ಅದೇ ಕೆಲಸಕ್ಕೆ ತಾನೂ ಅಣಿಯಾಗಿ ಕದ್ದಿತು.

ಉತ್ತರ ಧ್ರುವ ಪ್ರದೇಶದ ವಿಚಿತ್ರ ವಾತಾವರಣದಲ್ಲಿ ಕಳವಿನ ಕಲೆಯನ್ನು ಅಪ್ರತಿಮವಾಗಿ ಸಾಧಿಸಿಕೊಂಡದ್ದಕ್ಕೆ ಜೀವಿಸಲು ಸಮರ್ಥವಾಯಿತು. ಪರಿಸ್ಥಿತಿಗೆ ಹೊಂದಿಕೊಳ್ಳುವ ಗುಣ ಬಕ್ಕನಲ್ಲಿಯೇ ಇದೆ ಎಂದು ಬೆರಳು ಮಾಡಿ ತೋರಿಸುವಂತಾಯ್ತು. ಕ್ಷಣಕ್ಕೊಂದು ಬಣ್ಣ ಬದಲಿಸುವ ಗತ್ತುಗಾರಿಕೆ ಇರದಿದ್ದರೆ ನಾಳೆ ಸಾಯುವ ಪ್ರಾಣಿ ಇಂದೇ ಪ್ರಾಣ ಕಳೆದುಕೊಳ್ಳುವುದೇ ಸೈ. ಇದರಿಂದ ನೈತಿಕ ಅಧಃಪತನವಾಗುವದೆಂದು ಹೇಳಬಹುದಾದರೂ ಜೀವಿಸುವುದೇ ಅತಿ ಕಠಿಣವಾಗಿ ಪರಿಣಮಿಸಿದಾಗ ಪ್ರಾಮಾಣಿಕತೆ ನಗೆಗೇಡೆನಿಸಿದರೆ ಅಚ್ಚರಿಯಲ್ಲ. ದಕ್ಷಿಣ ಪ್ರದೇಶದಲ್ಲಿ ಈ ಸದಾಚಾರಕ್ಕೆ ಸಾಕಷ್ಟು ಮರ್ಯಾದೆ ಎನಿಸಿತ್ತು. ಬಾಂಧವ್ಯಭಾವನೆ, ಹೆರವರ ವಸ್ತು ಮುಟ್ಟಲಾಗದೆಂಬ ಕಲ್ಪನೆಗಳಿಗೆ

ಅಲ್ಲಿಯೇ ಎಡೆ. ಆದರೆ ಟೊಣಪೆ, ವಿಷದಂತದ ಕಾನೂನೇ ಪ್ರಬಲವಾಗಿರುವ ಹಿಮಪ್ರದೇಶದಲ್ಲಿ ನ್ಯಾಯದಿಂದ ನಡೆಯುವವ ಮೂರ್ಖನೇ. ಅವರಿಗೆ ಏಳ್ಗೆ ಕನಸು, ಬರೀ ಕನಸು !,

ಅದರ ಬೆಳವಣಿಗೆ ಅತಿ ರಭಸ. ಅದರ ಸ್ನಾಯುಗಳು ಕಬ್ಬಿಣದಂತೆ ಬಿರುಸಾದವು. ಸರ್ವಸಾಮಾನ್ಯ ಸೋಂಕು-ಅಪಘಾತಗಳಾದರೆ ಅದು ಲಕ್ಷಿಸುತ್ತಿರಲಿಲ್ಲ. ಅಪಚನ ತಂದೊಡ್ಡಲಿ, ಬೇಕಾದಷ್ಟು ಹೀನವಾಗಿರಲಿ, ಎಂಥ ಆಹಾರ ವಿದ್ದರೂ ಅದು ತಿನ್ನುತ್ತಿತ್ತು. ಒಮ್ಮೆ ಗಂಟಲಿನಿಂದಿಳಿದರೆ ಸಾಕು, ಪಾಚಕಾಂಗಗಳೆಲ್ಲ ಸಹಜವಾಗಿ ತಮ್ಮ ಕಾರ್ಯ ನಿರ್ವಹಿಸುತ್ತಿದ್ದವು. ಅದರ ದೃಷ್ಟಿ ಶ್ರವಣ ಬಹಳ ಚುರುಕಾದವು. ಗಾಢ ನಿದ್ರೆಯಲ್ಲಿದ್ದರೂ ಕೂಡ ಒಮ್ಮೊಮ್ಮೆ ತೀರ ಸಣ್ಣ ಧ್ವನಿ ಅದಕ್ಕೆ ಕೇಳುತ್ತಿತ್ತು. ನೀರಡಿಸಿದಾಗ ಅದು ಹಿಮನೆಲದಲ್ಲಿ ತೂತು ಕೊರೆದು ನೀರು ದೊರಕಿಸುತ್ತಿತ್ತು. ರಾತ್ರಿ ಯಾವಾಗ ಬಿರುಗಾಳಿ ಬೀಸಬಹುದೆಂದು ಲೆಕ್ಕ ಹಾಕಿ ಸೂಚಿಸುವುದು ಅದರ ವಿಶಿಷ್ಟ ಲಕ್ಷಣ.

ಹೊಸ ಜೀವದದಲ್ಲಿ ಕಲಿತ ಗತ್ತುಗಾರಿಕೆಗಳೇ ಅದಕ್ಕೆ ಈಗ ಹುಟ್ಟು ಗುಣಗಳಾಗಿ ಪರಿಣಮಿಸಿದವು.

ಮೂಲ ಪ್ರಕೃತಿಯ ಕಾಡು ಸ್ಥಿತಿ ಬಕ್‌ನಲ್ಲಿ ಪ್ರಬಲವಾಗಿತ್ತು. ಆದರೆ ಅದು ಬಂಡಿಯ ದಾರಿಯಲ್ಲಿ ಇನ್ನೂ ಬೆಳೆಯಿತು. ಗುಟ್ಟಿನಲ್ಲಿಯೇ ಈ ಕಾರ್ಯ ಸಾಗಿತ್ತು. ಇತ್ತೀಚೆಗೆ ಸಾಧಿಸಿದ ಠಕ್ಕುತನ ಒಂದು ಬಗೆಯ ಶಕ್ತಿಯನ್ನದಕ್ಕೆ ತಂದುಕೊಟ್ಟಿತು.

ಅದಕ್ಕೂ ಸ್ಪಿಟ್ಝ್‌ನಿಗೂ ಯಾಕೋ ಏನೋ ವೈರತ್ವ ಬೆಳೆಯುತ್ತ ಬಂದಿತ್ತು. ಅದು ಕಚ್ಚಾಟದಲ್ಲಿ ಮುಕ್ತಾಯ ಹೊಂದುತ್ತಿತ್ತು

ದಿನದ ಕೊನೆಗೆ ಟೇಕ್ ಟೇ ಬಾರ್ಜದಲ್ಲಿ ಶಿಬಿರ ಬೀಡುಬಿಟ್ಟಿತ್ತು. ಕತ್ತಲೆ, ಮೇಲೆ ಮೈ ಕೊರೆವ ಚಳಿ, ಸುರಕ್ಷಿತ ಸ್ಥಳ ಹುಡುಕುವ

ಅವಶ್ಯಕತೆ ಎನಿಸಿತು. ಹಿಂದೊಂದು ಕಲ್ಲು ಗೋಡೆ ಇದ್ದಿತು. ಪೆರಾಲ್ಟ್ ಹಾಗೂ ಫ್ರ್ಯಾಂಕೋಯಿಸ್ ತಮ್ಮ ಹಾಸಿಗೆ, ನಿಲುವಂಗಿಗಳನ್ನು ಹಿಮದ ಮೇಲೆಯೇ ಹಾಸಿ ಬಿಟ್ಟಿದ್ದರು. ಪ್ರವಾಸದಲ್ಲಿ ಹೆಚ್ಚು ಒಜ್ಜೆ ಬೇಡವೆಂದು ಡೇರೆಯನ್ನು ಹಿಂದೆಯೇ ಬಿಟ್ಟು ಹೊರಟಿದ್ದರು. ಮುಂದೆ ಉರಿ ಹಾಕಿಕೊಂಡಿದ್ದರಿಂದ ಅದರದೇ ಮಬ್ಬು ಬೆಳಕಿನಲ್ಲಿ ಊಟ ಮುಗಿಸಲು ಅನುಕೂಲವಾಗಿತ್ತು.

ಕಲ್ಲುಗೋಡೆಯ ಬದಿಗೆ ಬಕ್ ತನ್ನ ಗೂಡು ಕಟ್ಟಿಕೊಂಡಿತ್ತು. ಅಲ್ಲಿ ಬಹಳ ಬೆಚ್ಚಗಿದ್ದಿತು. ಫ್ರಾಂಕೋಯಿಸ್ ಮೀನುಗಳನ್ನು ಸುಟ್ಟುಕೊಟ್ಟಾಗ ಹೇಗೋ ತಿನ್ನುವುದನ್ನು ಮುಗಿಸಿ ಬಂದು ತನ್ನ ಸ್ಥಳ ನೋಡುತ್ತದೆ: ಆಕ್ರಮಿತವಾಗಿತ್ತು. ಗುರುಗುಟ್ಟುವ ಧ್ವನಿ ಕೇಳಿದಾಗ ಅತಿಕ್ರಮಿಸಿದ ನಾಯಿ ಸ್ಪಿಟ್ಝ್ ಎಂದು ತಿಳಿಯಿತು. ಬಕ್‌ನಲ್ಲಿ ಪಾಶವೀ ಶಕ್ತಿ ಜಾಗ್ರತವಾಯಿತು. ಸ್ಪಿಟ್ಝ್‌ನ ಮೇಲೆ ಏರಿ ಹೋಯಿತು.

ಫ್ರಾಂಕೋಯಿಸ್ ಈ ಜಗಳದ ರೀತಿ ನೋಡಿ ಅಚ್ಚರಿಗೊಂಡ. ಹಾ, ಹು ಎಂದು ಬಿಡಿಸಲೆತ್ನಿಸಿದ.

ಪೆರಾಲ್ಟ್ ಒಂದು ಗದಾ ಪ್ರಹಾರ ಮಾಡಿದಾಗ ಚೀರಾಟ, ಬೊಗಳಿಕೆ ನಡೆದವು. ಭಾರತದ ಕೆಲವು ಹಳ್ಳಿಗಳಿಂದ ಬಂದ ಹತ್ತಿಪ್ಪತ್ತು ಹಸ್ಕಿನಾಯಿಗಳು ಹೇಗೋ ಶಿಬಿರದ ವಾಸನೆ ಹಿಡಿದು ಗುಂಪುಗೂಡಿದವು. ಇವೆರಡು ನಾಯಿಗಳ ಜಗಳದಲ್ಲಿ ಅವೂ ಕೂಡಿದವು. ಒಡೆಯರಿಬ್ಬರು ಗದಾಧಾರಿಗಳಾಗಿ ಬಂದರು. ಆಹಾರದ ಆಮಿಷವೇ ಅಂತಹದು. ಪೂರ್ಣ ಹೊಟ್ಟೆ ತುಂಬುವವರೆಗವು ಪ್ರಹಾರವನ್ನೇ ಲೆಕ್ಕಿಸಲಿಲ್ಲ. ಇಂತಹ ನಾಯಿಗಳನ್ನು ಬಕ್ ಜನ್ಮದಲ್ಲಿಯೇ ನೋಡಿರಲಿಲ್ಲ. ಎಲುವಿನ ಹಂದರ, ಹೊಳೆಯುವ ಕಣ್ಣು, ಚೂಪಾದ ಹಲ್ಲು, ಜೋತಾಡುವ ತೊಗಲು. ಆದರೆ ಹಸಿವೆಯ ಭೂತ ಬಡಿದ ಮೂಲಕ ಅವು ಭಯಾನಕವಾಗಿದ್ದವು.

ಪೆರಾಲ್ಟ್ ಮತ್ತು ಫ್ರ್ಯಾಂಕೋಯಿಸರು ಶಿಬಿರದ ಸ್ವಚ್ಛತೆ ನೋಡಿಕೊಂಡು ತಮ್ಮ ಜಾರು ಬಂಡಿಯ ನಾಯಿಗಳನ್ನು ಉಳಿಸಿಕೊಳ್ಳಲು ಹೆಣಗಿದರು. ಮತ್ತೆ ಮೊದಲಿನಂತೆ ಜಗಳ ಪ್ರಾರಂಭ. ಮುಂದೆ ದಳದ ಒಂಭತ್ತು ನಾಯಿಗಳು ಅಡವಿಯಲ್ಲಿ ಆಶ್ರಯ ಪಡೆದವು. ಅವುಗಳ ಸ್ಥಿತಿ ಚಿಂತಾಜನಕವಾಗಿತ್ತು. ನಸುಕು ಹರಿದಾಗ ನಾಯಿಗಳೆಲ್ಲ ಕಾಲೆಳೆಯುತ್ತ ಶಿಬಿರಕ್ಕೆ ಬಂದವು. ಎದುರಾಳಿ ನಾಯಿಗಳು ಕಾಣಲಿಲ್ಲ. ಇಬ್ಬರೂ ಒಡೆಯರು ಮಾತ್ರ ದುಮು- ದುಮು ಉರಿಯುತ್ತಿದ್ದರು. ತಮ್ಮ ಆಹಾರದ ಅರ್ಧ ಭಾಗ ಹೋಗಿಬಿಟ್ಟಿದ್ದರಿಂದ ಅವರ ಕಳವಳ ಹೆಚ್ಚಿತ್ತು. ಹಸ್ಕಿ ನಾಯಿಗಳು ಕ್ಯಾನ್ವಾಸ್ ಹೊದಿಕೆಯನ್ನು ತೊಗಲಿನ ಪಟ್ಟಿಯನ್ನು ತಿಂದಿದ್ದವು. ಫ್ರ್ಯಾಂಕೋಯಿಸನ ಚಬಕದ ತೊಗಲನ್ನು ಸಹ ತಿಂದಿದ್ದವು. ಗಾಯಗೊಂಡ ತನ್ನ ನಾಯಿಗಳನ್ನು ನೋಡಿ 'ಇವಕ್ಕೆಲ್ಲ ಹುಚ್ಚು ಹಿಡಿದರೇನು ಗತಿ?" ಎಂದು ಪೆರಾಲ್ಟನೊಡನೆ ವಿಚಾರವಿನಿಮಯ ಮಾಡತೊಡಗಿದ.

ಡಾಸನ್ನಿನ ಪ್ರವಾಸ ಇನ್ನೂ ನಾಲ್ಕುನೂರು ಮೈಲು ಇರುವಾಗ ನಾಯಿಗಳಿಗೆ ಈ ವಿಪತ್ತು ಬಂದರೇನು ಮಾಡುವದೆಂದು ಚಿಂತಾಕುಲನಾದ.

ಮೂವತ್ತು ಮೈಲಿನ ನದಿಯ ವಿಸ್ತಾರ ಎದುರಿಗಿತ್ತು. ನೀರಮೇಲೆ ಮಂಜು. ಮಡುವುಗಳಲ್ಲಿ ಮಾತ್ರ ಹಿಮವಿರುತ್ತಿತ್ತು. ಆರು ದಿನ ಅತಿ ಪ್ರಯಾಸ ಪಟ್ಟಾಗ ನದಿ ಪ್ರವಾಸ ಮುಗಿಯಿತು. ಹತ್ತು ಹನ್ನೆರಡು ಸಲ ಪೆರಾಲ್ಟ್ ಹಿಮಸೇತುವೆಗಳನ್ನು ಕೋಲಿನಿಂದ ಮುರಿಯುತ್ತ ನಡೆದಿದ್ದ.

ಹೂಬಾಲಿಂಕ್ವಾದ ವರೆಗೆ ಬರುವಷ್ಟರಲ್ಲಿ ಬಕ್‌ನ ಆಟ ಮುಗಿದಿತ್ತು. ಉಳಿದ ನಾಯಿಗಳ ಸ್ಥಿತಿಯೂ ಸುಮಾರು ಹಾಗೆಯೇ. ಆದರೆ ಪೆರಾಲ್ಟ್ ಹಿಂದಾದ ಹಾನಿ ತುಂಬಿಸಿಕೊಳ್ಳುವದಕ್ಕಾಗಿ ಮುಂಜಾವು ತೀವ್ರ ಪಯಣ ಹೊರಡಿಸಿ ಸಂಜೆಗೆ ತಡಮಾಡಿ ವಿಶ್ರಾಂತಿ ಕೊಡುತ್ತಿದ್ದ.

ಮೊದಲ ದಿನ ೩೫ ಮೈಲು ಪ್ರವಾಸವಾಯಿತು. ಮರುದಿನವೂ ಅಷ್ಟೆ. ಫಾಯಿಲ್ ಫಿಂಗರಿನ ವರೆಗೆ ಈಗ ತಲಪಿದ್ದಾಯಿತು.

ಹಸ್ಕಿ ನಾಯಿಗಳಷ್ಟು ಬಕ್‌ನ ಪಾದ ಬಿರುಸಿರಲಿಲ್ಲ. ಇಡೀ ದಿನ ಅದು ಕುಂಟುತ್ತಲೇ ಇರುತ್ತಿತ್ತು. ರಾತ್ರಿ ಸತ್ತಂತೆ ಬೀಳುತ್ತಿತ್ತು. ಒಡೆಯ ದಿನಾಲು ಕಾಲು ತಿಕ್ಕುತ್ತಿದ್ದ. ಇದರಿಂದ ಗುಣಮುಖವಾಯಿತು. ಕ್ರಮೇಣ ಈ ಪ್ರವಾಸಕ್ಕೆ ಕಾಲು ಬಿರುಸಾದವು.

ಒಂದು ದಿನ ಜೀನು ಹಾಕುವಾಗ ಡಾಲಿಗೆ ಅಕಸ್ಮಾತ್ ಹುಚ್ಚು ಹಿಡಿಯಿತು. ಬಕ್ಕನೆಡೆಗೆ ಟಣ್ಣೆಂದು ಹಾರಿತು. ಹುಚ್ಚು ಹಿಡಿಯುವದೆಂದರೇನೆಂದು ಅದಕ್ಕೆ ಈ ವರೆಗೂ ಗೊತ್ತಿರಲಿಲ್ಲ. ಫ್ರಾಂಕೋಯಿಸ್ ತನ್ನನ್ನು ಉಳಿಸಿಯಾನೆಂದು ಬಕ್ ಆಸೆ ಹಿಡಿದು ನುಗ್ಗುತ್ತಿತ್ತು. ಅಷ್ಟರಲ್ಲಿ ನಾಯಿಯ ಒಡೆಯ ತನ್ನ ಕೈ ಕೊಡಲಿಯಿಂದ ಡಾಲಿಯ 'ಕತ್ತು ಕತ್ತರಿಸಿ ಚೆಲ್ಲಿದ.

ಜೀವನದಲ್ಲೊಂದು ಆನಂದದ ಸಮಯ ಒದಗುವುದು. ಅದೇ ಅದರ ಔನ್ನತ್ಯ. ಆ ರಸ ನಿಮಿಷ ದಾಟಿ ಜೀವನ ಮುಂದುವರಿಯದು. ವ್ಯಕ್ತಿ ಜೀವದಿಂದಿರುವಾಗ ಮಾತ್ರ ಈ ರೋಮಾಂಚಕಾರಿ ಪ್ರಸಂಗ ಬರುವದು. ಯುದ್ಧರಂಗದಲ್ಲಿಯ ಸೈನಿಕನಿಗೂ ಇದು ಸಾಧ್ಯ. ಬಕ್ಕನಿಗೂ ಇಂತಹ ರಸಮಯ ಸಮಯ ಸಂಪ್ರಾಪ್ತವಾಗಿತ್ತು. ಆಗ ನರನರಗಳೆಲ್ಲ ಜೀವನದ ಕ್ಷಣಭಂಗುರತೆ ಮರೆತು ಆನಂದ ಪುಲಕಿತವಾಗಿ ಕಾರ್ಯ ತತ್ಪರವಾದವು.

ಆದರೆ ಸ್ಪಿಟ್ಜ್ ಕೇವಲ ಕುಳಿತು ಲೆಕ್ಕಹಾಕುವ ನೀರಸ ಜೀವಿ. ಮತ್ತೆ ಈರ್ವರಲ್ಲಿ ಹಗೆತನ ಮೊದಲಾಯಿತು. ಕಡಿದಾಡತೊಡಗಿದವು. ಒಂದನ್ನೊಂದು ತಪ್ಪಿಸಿ ಕೊಲ್ಲಲೆತ್ನಿಸುವಾಗ ಬಕ್‌ಗೆ ಹಿಂದಿನ ನೆನಪೆಲ್ಲ ಸುರುಳಿ ಸುರುಳಿಯಾಗಿ ತೆರೆಯತೊಡಗಿದವು. ಶುಭ್ರಕಾನನ; ಭೂಮಿ; ಬೆಳ್ದಿಂಗಳು; ಯುದ್ಧೋನ್ಮಾದ! ಸ್ಮಶಾನ ಶಾಂತತೆ ಸುತ್ತಲು. ಗಾಳಿಯ ಸುಳಿವಿಲ್ಲ; ಎಲೆಗಳ ಸರಿ

ದಾಟವಿಲ್ಲ. ನಾಯಿಗಳ ದೀರ್ಘ ನಿಶ್ವಾಸ ಮಾತ್ರ ಸ್ಫುಟವಾಗಿತ್ತು.

ಸ್ಪಿಟ್ಜ್‌ನಿಗೆ ಗಾಯದ ಲವಲೇಶವಿಲ್ಲ. ಆದರೆ ಬಕ್ ರಕ್ತದಲ್ಲಿ ಮಿಂದಂತಾಗಿತ್ತು. ಯುದ್ಧಕ್ಕೆ ಕಾವೇರತೊಡಗಿತು. ಅಂಕುಡೊಂಕಾಗಿ ಬಕ್ ಎರಿಬರುವಾಗ ಸ್ಪಿಟ್ಜ್ ತಡೆಯಲೆತ್ನಿಸುತ್ತಿತ್ತು.

ಬಕ್ಕನ ಒಂದು ಸದ್ಗುಣವೆಂದರೆ ಕಲ್ಪಕತೆ. ಅದು ಹುಟ್ಟುಯೋಧ. ತಲೆಯಿಂದಲೂ ಹೊಡೆದಾಡಲು ಕಲಿತಿತ್ತು. ಹಲ್ಲಿನಿಂದ ಸ್ಪಿಟ್ಜ್‌ನ ಎಡಗಾಲು ಹಿಡಿಯಿತು. ಎಲವು ಮುರಿದಂತಾಗಿ ಮೂರು ಕಾಲಿನಿಂದ ಅದು ಹೋರಾಡಹತ್ತಿತು. ಎಷ್ಟು ಹವಣಿಸಿದರೂ ಎರಿ ಹೋಗುವುದಾಗದೆ ಮುಂದಿನ ಬಲಗಾಲಿಗೆ ಎರವಾಗಬೇಕಾಯಿತು. ಇಂತಹ ಅಸಹಾಯ ಸ್ಥಿತಿಯಲ್ಲೂ ಎದೆಗುಂದಲಿಲ್ಲವದು. ಹುಚ್ಚು ಆವೇಶ ತುಂಬಿತ್ತು. ಈ ಸನ್ನಿವೇಶದಲ್ಲಿ ಮಾತ್ರ ಅದರ ಕೈ ಸಾಗಲಿಲ್ಲ.

ಎಲ್ಲ ಆಸೆ ತೊರೆದಿತು. ಬಕ್ ಮನಸ್ಸು ಕಲ್ಲು ಮಾಡಿತು. ಸಾಮಾನ್ಯ ಪ್ರಸಂಗಗಳಲ್ಲಿ ದಯೆ-ಮಾಯೆಗೆ ಎಡೆ. ಯುದ್ಧದ ಕೊನೆಯ ಹಂತಕ್ಕೆ ಅಡಿ ಇರಿಸಿತು. ಉಳಿದ ಹಸ್ಕಿ ನಾಯಿಗಳು ಬಂದವು. ಸ್ಪಿಟ್ಜ್‌ನ ಮೇಲೆ ಹಾರಲು ಅವೆಲ್ಲ ಹವಣಿಸುತ್ತಿದ್ದವು. ಕ್ಷಣಕಾಲ ಎಲ್ಲೆಡೆ ನೀರವ. ಎಲ್ಲವನ್ನು ಕಂಡು ಸ್ಪಿಟ್ಜ್ ಎದೆಯೊಡೆದುಕೊಂಡಿತು. ಮರಣ ತಪ್ಪಿಸಿಕೊಳ್ಳಲು ಹೆಣಗಿತು. ಬಕ್ ಟಣ್ಣನೆ ಅದರೆಡೆ ಹಾರಿತು. ಉಳಿದುವೆಲ್ಲ ಗುಳುಗುಂಪಾಗಿ ಸ್ಪಿಟ್ಜ್‌ನನ್ನು ಮುತ್ತಿದವು. ಇನ್ನೆಲ್ಲಿಯ ಸ್ಪಿಟ್ಜ್? ಮೂಲಭೂತ ಪ್ರಕೃತಿಯ ಕರಾಳ ಕೈ ಮೇಲಾಯಿತು.

"ನಿಜವಾಗಿ ಹೇಳಬೇಕೆಂದರೆ ಬಕ್ ದೆವ್ವವೇ ಸೈ!" ಬಕ್ಕನ ಮೈತುಂಬ ಗಾಯಗಳಾಗಿ ಸ್ಪಿಟ್ಜ್ ಮರುದಿನ ಕಾಣದಾದಾಗ ಫ್ರ್ಯಾಂಕೋಯಿಸನ ಉದ್ಗಾರ. ಬೆಂಕಿಯ ಬೆಳಕಿಗೊಯ್ದು ಗಾಯಗಳನ್ನು ತೋರಿಸಿದನು.

"ಸ್ಪಿಟ್ಜ್ ಸಹ ಮಹಾಮಾರಿ!" ಎಂದು ಮೈಮೇಲಿನ ಸೀಳು ನಿರೀಕ್ಷಿಸುತ್ತ ಪೆರಾಲ್ಟ್ ನುಡಿದ.

"ಇನ್ನೇನು ಸ್ಪಿಟ್ಜ್ ಕಣ್ಮರೆಯಾಯಿತಲ್ಲ? ಎಲ್ಲಿಯ ಪೇಚು?" ಎಂದು ಫ್ರ್ಯಾಂಕೋಯಿಸ್ ಉತ್ತರಿಸಿದ.

ಪೆರಾಲ್ಟ್ ಶಿಬಿರದ ವಸ್ತುಗಳನ್ನು ಅಣಿಗೊಳಿಸತೊಡಗಿದಾಗ ನಾಯಿಯ ಮಾರ್ಗದರ್ಶಕ ಜೀನು ಹಾಕುವುದರಲ್ಲಿ ತಲ್ಲೀನನಾಗಿದ್ದ. ಸ್ಪಿಟ್ಜ್ ರೂಢಿಯಂತೆ ನಿಲ್ಲುವ ಸ್ಥಳಕ್ಕೆ ಬಕ್ ತಾನು ಮುಂದೆ ಹೋಗಿ ಆಢ್ಯತೆಯಿಂದ ನಿಂತುಕೊಂಡಿತು. ಇದೆಲ್ಲ ಲಕ್ಷ್ಯಕ್ಕೆ ಬಾರದೆ ಫ್ರ್ಯಾಂಕೋಯಿಸ್ ಸೊಲೆಕ್ಸನನ್ನು ಆ ಚುಕ್ಕಾಣಿಯ ಜಾಗೆಗೆ ತಂದ. ಇದನ್ನು ಕಂಡು ಬಕ್ ಟಣ್ಣನೆ ಸೊಲೆಕ್ಸನ ಮೇಲೆ ಸಿಟ್ಟಿನಿಂದ ಹಾರಿ ಅದನ್ನು ಹಿಂದಕ್ಕೆ ಸರಿಸಿತು. "ಏ-ಏ" ಎಂದು ಫ್ರಾಂಕೋಯಿಸ್ ಎಚ್ಚರಿಸಿದರೂ ಬಕ್ ಸ್ವಲ್ಪವೂ ಸ್ಥಳ ಬಿಟ್ಟುಕೊಡಲಿಲ್ಲ. ಕುತ್ತಿಗೆ ಹಿಡಿದು ಬೇರೆಡೆಗೆ ನಿಲ್ಲಿಸಿ ಮತ್ತೆ ಸೊಲೆಕ್ಸನನ್ನು ಆ ಸ್ಥಳಕ್ಕೆ ತಂದ. ಮುದಿನಾಯಿ ಸೊಲೆಕ್ಸ ಅಷ್ಟೊಂದು ಉದ್ದನೀರಿಗೆ ಹೋಗಿ ಬಕ್‌ನೊಡನೆ ದ್ವೇಷ ಕಟ್ಟಿಕೊಳ್ಳುವ ಮನಸ್ಸು ಮಾಡಲಿಲ್ಲ. ಹಿಂದಕ್ಕೇ ಸರಿಯುತ್ತಿತ್ತು. ಫ್ರಾಂಕೋಯಿಸ್ ಬೇರೆಡೆಗೆ ಮುಖ ಮಾಡಿದಾಗ ಬಕ್ ಮತ್ತೆ ಅದನ್ನು ಸರಿಸಿತು.

ಫ್ರಾಂಕೋಯಿಸ್‌ನ ಸಿಟ್ಟು ಎಲ್ಲೆ ಮೀರಿತು. ಪಾಠ ಕಲಿಸುವೆನೆಂದು ಟೊಣಪೆ ತೆಗೆದುಕೊಂಡು ಬಂದ.

ಹಿಂದಕ್ಕೆ ತನ್ನನ್ನು ಹೀಗೇ ಪೀಡಿಸಿದ ಕೆಂಪು ಸ್ವೆಟರಿನವನ ನೆನಪು ಬಕ್‌ನ ಮನಸ್ಸಿನಲ್ಲಿಮಿಂಚಿ ಹೋಯಿತು. ಸೊಲೆಕ್ಸನನ್ನು ಮತ್ತೆ ತಂದು ಹೂಡುವಾಗ ಎರಿಬರಲಿಲ್ಲ. ಟೊಣಪೆಯ ಅಳವಿನಿಂದ ಮಾತ್ರ ಪಾರಾಗಿ ನಿಂತಿತು. ಸಿಟ್ಟಿನಿಂದ ಗುರ್ರೆನ್ನತೊಡಗಿತು. ಹೊಡೆತಕ್ಕೆ ಹೆದರುವದೆಂದು ತಿಳಿದು ಅವನು ಅದರೆಡೆಗೆ ಟೊಣಪೆ ಒಗೆದ. ಬಕ್ ನೇರವಾಗಿ ಅವನಿಗೆ ತಿರುಗಿ ನಿಂತಿತು. ಹೊಡೆದರೂ ಚಿಂತೆಯಿಲ್ಲ, ಮರ್ಯಾದೆ

ಮಹಲು ತ್ಯಜಿಸೆನು ಎಂಬ ಹಟ ಅದರಲ್ಲಿ ಕಾಣಿಸಿಕೊಂಡಿತು. ಮೇಲಿನ ಸ್ಥಾನ ತನ್ನ ಸೊತ್ತು. ವಿಕ್ರಮದಿಂದ ಗಳಿಸಿದ್ದು ಎಂಬ ಭಾವನೆ ಅದರದು.

ಒಂದು ತಾಸು ಹೀಗೆ ಗುದ್ದಾಟವಾಯಿತು. ಫ್ರ್ಯಾಂಕೋಯಿಸ್ ಹಣೆಗೆ ಕೈಹಚ್ಚಿ ಕ್ಷಣಕಾಲ ಮೌನಿಯಾಗಿ ಕುಳಿತ. ಈಗ ಕಾಲ್ದಾರಿ ಕ್ರಮಿಸಿ ತಾಸಾಗಿರಬೇಕಾಗಿತ್ತು. ಫ್ರ್ಯಾಂಕೋಯಿಸ್ ಸೊಲೆಕ್ಸನ ಬಳಿಗೆ ಹೋಗಿ ನಿಂತು ಬಕ್ಕನನ್ನು ಕೂಗಿ ಕರೆದ. ನಗುತ್ತ ಹೋಯಿತು ಬಕ್. ಅಚ್ಚುಕಟ್ಟಾಗಿ ಕುಳಿತಿತು. ಕೊನೆಗೂ ಬಕ್ಕನಿಗೆ ಮುಂದಿನ ಸ್ಥಳವೇ ಸಿಕ್ಕಿತು. ಮತ್ತೆ ಮತ್ತೆ ಫ್ರ್ಯಾಂಕೋಯಿಸ್ ಬಕ್‌ನನ್ನು ಅಚ್ಚೆಯಿಂದ ಕರೆದ. ಅದು ಸಲುಗೆಯಿಂದ ನೆಕ್ಕಿತು.

ದಳದ ಮಟ್ಟ ಈಗ ಮೇಲ್ತರಗತಿಯದಾಯಿತು. ಮೊದಲಿನ ಒಕ್ಕಟ್ಟು ಈಗ ಹಾಹಾ ಎನ್ನುವುದರಲ್ಲಿ ಕಾಣತೊಡಗಿತು. ಟೀಕ,

ಕೋನಾ ಎಂಬೆರಡು ಹಸ್ಕಿ ನಾಯಿಗಳು ಪಡೆಗೆ ಬಂದವು. ಅವನ್ನೂ ಬಕ್ ವಶಪಡಿಸಿಕೊಂಡದ್ದು ಕಂಡು ಫ್ರ್ಯಾಂಕೋಯಿಸ್ ಬೆರಳು ಕಚ್ಚಿಕೊಂಡ.

"ಇಂತಹ ನಾಯಿಯನ್ನು ನಾನೆಂದೂ ನೋಡಲಿಲ್ಲ. ಮಾರಿದರೆ ಇದಕ್ಕೆ ನಿಶ್ಚಿತ ಸಾವಿರ ಡಾಲರ್ !"

ಮೂವತ್ತು ಮೈಲು ನದಿಯಮೇಲಿನ ಪ್ರವಾಸದಲ್ಲಿ ಹಿಮವೇ ಕಾಣುತ್ತಿತ್ತು. ಹಿಂದೆ ಹತ್ತು ದಿನವೆಲ್ಲ ಕ್ರಮಿಸಿದ ದಾರಿ ಈಗ ಒಂದೇ ದಿನಕ್ಕೆ ಮುಗಿಯಿತು. ಎರಡನೆಯ ವಾರದ ಕೊನೆಯ ದಿನ ಅವರು ವ್ಹಾಯಿಟ್ ಪಾಸ್ ದಾಟಿ ಸಮುದ್ರದ ಇಳುಕಲಿಗೆ ಬಂದು ತಂಗಿದರು.

ಅದು ಸಂಸ್ಮರಣೀಯ ಯಾತ್ರೆ. ಎರಡು ವಾರವೆಲ್ಲ ಪ್ರತಿ ದಿನ ನಲ್ವತ್ತು ಮೈಲಿನಂತೆ ದಾರಿ ಸಾಗುತ್ತಿತ್ತು. ಮೂರು ದಿನ ಪೆರಾಲ್ಟ್ ಹಾಗೂ ಫ್ರ್ಯಾಂಕೋಯಿಸ್ ಸ್ಕ್ಯಾಗ್ವೇದ ಬೀದಿಗಳಿಂದ ಪೆಟ್ಟಿಗೆಗಳನ್ನು ಸಾಗಿಸಿದರು. ಪಟ್ಟಣದ ಸ್ವಚ್ಛತೆಯೂ ನಡೆಯಿತು. ಅನಂತರ ಸರಕಾರದ ಆಜ್ಞೆ ಹೊರಟವು. ಫ್ರ್ಯಾಂಕೋಯಿಸ್ ಬಕ್ಕನನ್ನು ಬಳಿಗೆ ಕರೆದು ಗೊಳೋ ಎಂದು ಅತ್ತನು. ಅವನ ಮತ್ತು ಪೆರಾಲ್ಟನ ಸಂದರ್ಶನ ಅದೇ ಅದಕ್ಕೆ ಕೊನೆಯದು. ಬಕ್‌ನ ಜೀವನದಲ್ಲಿ ಮೊದಲಿನ ಇನ್ನೆಷ್ಟೋ ಜನರಂತೆ ಇವರೀರ್ವರೂ ಕಣ್ಮರೆಯಾದರು.

ಸ್ಕಾಚ್ ಮನುಷ್ಯನೊಬ್ಬ ಈ ನಾಯಿಗಳ ಪರಿವಾರವನ್ನು ತನ್ನ ವಶಕ್ಕೆ ತೆಗೆದುಕೊಂಡು ಡಾಸನ್ನಿನ ಕಾಲುದಾರಿಗೆ ಹೊರಟ. ಪ್ರವಾಸ ಹಗುರೇನೂ ಆಗಲಿಲ್ಲ. ವೇಳೆಯ ಉಳಿತಾಯವೂ ಎನಿಸಲಿಲ್ಲ. ಪ್ರತಿ ದಿನ ಬೇಜಾರು ತಲೆದೋರುತ್ತಿತ್ತು. ಇದು ಮೇಲ್ ಗಾಡಿ ಎನಿಸಿದ್ದರಿಂದ ಬಂಗಾರ ಹುಡುಕುವವರಿಗೆಲ್ಲ ದೇಶದಾದ್ಯಂತ ಸುದ್ದಿ ಮುಟ್ಟಿಸುವ ಹೊಣೆ ಅದರದು.

*

ಬೆಂಕಿಯ ಬಳಿ ಕುಳಿತು ಕಾಸಿಕೊಳ್ಳುವದೆಂ

ದರೆ ಬಕ್‌ಗೆ ಬಲು ಮೆಚ್ಚು. ಕಾಲು ಚಾಚಿ ತಲೆ ಎತ್ತಿ ಕಿಡಕಿಗಳ ಕಡೆ ನೋಡುತ್ತ ಅರೆ ನಿದ್ದೆಯ ಲ್ಲಿದ್ದವರಂತೆ ಕುಳಿತು ಬಿಡುತ್ತಿತ್ತು. ಸೂರ್ಯ ಚುಂಬಿತ ಸಾಂತಾಕ್ಲೇರಾ ಕೊಳ್ಳದ ನ್ಯಾಯಾಧೀಶರ ಮನೆಯ ನೆನಪಾಗುತ್ತಿತ್ತು ಅದಕ್ಕೆ. ಸಿಮೆಂಟಿನ ಈಜುವ ಕೆರೆ, ಕೂದಲಿಲ್ಲದ ಮೆಕ್ಸಿಕನ್ ನಾಯಿಗಳು, ಟೂಟ್ಸ, ಜಪಾನಿನ ಪಗ್ ನಾಯಿ ಎಲ್ಲ ಮಾಲೆ ಮಾಲೆಯಾಗಿ ನೆನಪಿಗೆ ಬರುತ್ತಿದ್ದವು. ಕೆಂಪು ಸ್ವೆಟರಿನ ಮನುಷ್ಯ, ಕರ್ಲಿಯ ಮರಣ, ಸ್ಪಿಟ್ಸನೊಡನೆ ಕಾದಾಟ; ತನ್ನ ಬೇಕು ಬೇಡಗಳು ಅದರ ಲಕ್ಷ್ಯಕ್ಕೆ ಬರುತ್ತಿದ್ದವು. ಅದು ಮನೆಮೂಳವಾಗಿದ್ದಿಲ್ಲ. ಬಿಸಿಲಿನ ಪ್ರದೇಶದ ನೆನಪು ಅದಕ್ಕೆ ಮುಸುಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ತಾನು ಹುಟ್ಟಿ ಬೆಳೆದ ಪ್ರದೇಶದ ನೆನಪು ಅದಕ್ಕೆ ಸ್ಫುಟವಾಗಿತ್ತು.

ಒಮ್ಮೊಮ್ಮೆ ಅದು ಕಾಲು ಮಡಚಿಕೊಂಡು ಬೆಂಕಿಯೆಡೆಗೆ ದೃಷ್ಟಿ ಚೆಲ್ಲಿ ಕುಳಿತಾಗ ಆ ಉರಿ ಬೇರೊಂದು ಬೆಂಕಿಯದು ಎನಿಸುತ್ತಿತ್ತು. ಅಡಿಗೆಯವ ಬೇರೊಬ್ಬನಂತೆ ಕಾಣುತ್ತಿದ್ದ. ಅವನದು ಅಕರಾಳ ವಿಕರಾಳ ಸ್ವರೂಪ. ಕತ್ತಲೆಯನ್ನು ನೋಡಿ ಅದು ಹೆದರಿ ಸಾಯುತ್ತಿತ್ತು. ವಿಚಿತ್ರವಾಗಿ ಒದರುತ್ತಿತ್ತು. ಮೈಮೇಲಿನ ಕೂದಲು ಜಡೆಗಟ್ಟಿ ಉಣ್ಣೆಯಂತಾಗಿದ್ದವು. ಬೆನ್ನು ಬಿಸಿಲಿನಿಂದ ಸುಟ್ಟು ಹೋದಂತಾಗಿತ್ತು. ನೆಟ್ಟಗೆ ನಿಲ್ಲಲು ಬರುತ್ತಿರಲಿಲ್ಲ. ಯಾವಾಗಲೂ ಹೆದರಿಕೆಯ ವಾತಾವರಣದಲ್ಲಿ ಬೆಳೆದವರಂತೆ ಚುರುಕುತನ ಅದಕ್ಕೆ ಮೈಗೂಡಿ ಹೋಗಿತ್ತು.

ಬಕ್‌ನಿಗೆ ಕತ್ತಲೆಯಲ್ಲಿ ಕಲ್ಲಿದ್ದಲಿಯ ಕೆಂಡ ಎರಡೆರಡಾಗಿ ಕೆಂಪಾದ ಕಣ್ಣಿನಂತೆ ಕಾಣುತ್ತಿತ್ತು. ರಾತ್ರಿಯಲ್ಲಿ ಪ್ರಾಣಿಗಳು ಒದರುವುದನ್ನು ಅದು ಕೇಳುತ್ತಿತ್ತು. ಇಂತಹವೆಲ್ಲ ವಿಚಿತ್ರ ಕನಸು ಕಂಡಾಗ ಅದರ ಮೈಗೂದಲು ನೆಟ್ಟಗಾಗುತ್ತಿತ್ತು. ಅಷ್ಟರಲ್ಲಿ ಅಡಿಗೆಯವ "ಏ, ಬಕ್!" ಎಂದು ಎಚ್ಚರಿಸುತ್ತಿದ್ದ. ಆಗ ಆ ಬೇರೊಂದು ಜಗತ್ತು ಮಾಯವಾಗಿ ನೈಜ ಪ್ರಪಂಚ ಅದರ ಕಣ್ಣ ಮುಂದೆ ಬಂದು ನಿಲ್ಲುತ್ತಿತ್ತು. ನಿದ್ರೆಯಿಂದ ಎಚ್ಚತ್ತವರಂತೆ ಅದು ಎದ್ದು ಮೈಮುರಿದು ಆಕಳಿಸುತ್ತಿತ್ತು.

ಮೈಮುರಿ ದುಡಿತದ ಈ ಕಾಲುದಾರಿಯ ಪ್ರವಾಸದಿಂದ ನಾಯಿಗಳೆಲ್ಲ ನುಗ್ಗಾದವು. ಡಾಸನ್ನಿಗೆ ಮುಟ್ಟುವಷ್ಟರಲ್ಲಿ ಎಲ್ಲ ಪ್ರಾಣಿಗಳ ತೂಕ ಇಳಿದಿತ್ತು. ಕನಿಷ್ಠ ಒಂದು ವಾರದ ವಿಶ್ರಾಂತಿಯಾದರೂ ಅವಶ್ಯವೆನಿಸಿತ್ತು. ಆದರೆ ಎರಡು ದಿನ ಆಗುವುದರೊಳಗೆ ಹೊರಗೆ ಹೋಗುವ ಕಾಗದಪತ್ರ ತೆಗೆದುಕೊಂಡು ಮತ್ತೆ ಪ್ರವಾಸಕ್ಕೆ ಅಣಿಯಾಗಬೇಕಾಯ್ತು. ನಾಯಿಗಳು ಬಹಳ ದಣಿದಿದ್ದವು. ವಾಹಕರು ಗುಣುಗುಟ್ಟುತ್ತಿದ್ದರು. ಸುಖಕ್ಕೆ ಸಾಲದೆಂಬಂತೆ ಪ್ರತಿ ದಿನ ಹಿಮ ಮಳೆ ಬೇರೆ! ಹೀಗಾಗಿ ಕ್ರಮಿಸುವ ದಾರಿ ಕಡಿಮೆ. ಎಡರು ತೊಡರುಗಳು ಅಸಂಖ್ಯ. ಒಯ್ಯುವ ವಸ್ತುಗಳೂ ಭಾರವಾದವು— ಏನಿದ್ದರೂ ಹೇಗೋ ಜನರು ಪ್ರಾಣಿಗಳನ್ನು ನಡೆಸಿಕೊಂಡು ಸಾಗಿದ್ದರು.

ಪ್ರತಿದಿನ ಇರುಳು ನಾಯಿಗಳ ಯೋಗಕ್ಷೇಮ ಮೊದಲು. ಬಂಡಿಯ ಮಾರ್ಗದರ್ಶಕರಿಗಿಂತ ಅವುಗಳಿಗೆ ಆಹಾರ ಮೊದಲು. ನಾಯಿಗಳು ನಿದ್ರೆ ಹೋಗುವ ಮೊದಲು ಯಾವನೂ ಹಾಸಿಗೆ ಬಿಚ್ಚುತ್ತಿರಲಿಲ್ಲ. ಇಷ್ಟಾದರೂ ಪ್ರಾಣಿಗಳು ಹಣ್ಣಾಗಿದ್ದವು. ಚಳಿಗಾಲದ ಪ್ರಾರಂಭದಿಂದ ಹದಿನೆಂಟು ನೂರು ಮೈಲು ನಡೆದಿದ್ದವು. ಎಂಥ ನಾಯಿಗಳಿದ್ದರೂ ಜಾರು ಬಂಡಿಗಳನ್ನು ಹೀಗೆ ಎಳೆಯುವದು ಅಸಾಧ್ಯಕೋಟಿಯದೆ! ಬಕ್ ಎಲ್ಲವನ್ನೂ ನಿರ್ವಹಿಸಿತು. ಶಿಸ್ತು ಕಾಪಾಡಿಕೊಂಡಿತು. ದಣಿವೆನಿಸಿದರೂ ಕೇಳಲಿಲ್ಲ. ಬಿಲ್ಲಿ ಇಡಿ ರಾತ್ರಿ ಒದರುತ್ತಿತ್ತು. ಜೋ ಪೀಡಿತವಾ-ಗಿತ್ತು. ಸೊಲೆಕ್ಸನ ಬಳಿ ಯಾರೂ ಸುಳಿಯುವಂತಿರಲಿಲ್ಲ— ಕುರುಡುಕಣ್ಣಿನ ಕಡೆಗಾಗಲಿ, ಬೇರೆಡೆಗಾಗಲಿ ಅಷ್ಟೆ!

ಎಲ್ಲಕ್ಕಿಂತ ಡೇವ್‌ನಿಗೆ ವ್ಯಥೆ ಹೆಚ್ಚಾಗಿತ್ತು.

ಶಿಬಿರ ತಳಊರಿದಾಗ ಅದು ಶೀಘ್ರಕೋಪಿಯಾ ಗಿರುತ್ತಿತ್ತು. ಜಾರು ಬಂಡಿಗೆ ಸ್ವಲ್ಪ ಧಡಕಿಯಾ ದರೆ ಅದು ಒದರುತ್ತಿತ್ತು. ಎಲ್ಲರಿಗೂ ಅದರ ವಿಷಯಕ್ಕೆ ವಿಶೇಷ ಆಸ್ಥೆ ಹುಟ್ಟಿತು. ಅದನ್ನು ಅಗ್ಗಿಷ್ಟಿಗೆಂಪು ಬಳಿಗೊಯ್ದು ಉಪಚರಿಸಿದರು. ಎಲುವಿಗೆಲ್ಲೋ ಪೆಟ್ಟು ತಗಲಿರಬೇಕು ಎಂದು ಹೊಳೆಯಿತಷ್ಟೆ.

ಕ್ಯಾಶಿಯರ್‌ಬಾರಿಗೆ ಬರುವಷ್ಟರಲ್ಲಿ ಹತ್ತು ಹನ್ನೆರಡುಸಲ ಕಾಲು ತೊಡಕಾಗಿ ನೆಲಕ್ಕೆ ಬಿದ್ದಿತು. ಆ ನಾಯಿಯನ್ನು ಹೊರಗೆ ತೆಗೆದು ಸೊಲೆಕ್ಸನನ್ನು ಅಲ್ಲಿರಿಸಲಾಯಿತು. ಹಿಂದಿನಿಂದ ಡೇವ್ ನಡೆಯುತ್ತ ಬಂದರೆ ಸಾಕೆನಿಸಿತು. ಆದರೂ ತನ್ನ ಸ್ಥಳಕ್ಕೆ ಸೊಲೆಕ್ಸ್ ಬಂದದ್ದನ್ನು ನೋಡಿ ಸಿಟ್ಟಿನಿಂದ ಗುರ್ರೆನ್ನಹತ್ತಿತು. ಅದಕ್ಕೆ ಮಾನಕ್ಷತಿ ಆದಂತೆನಿಸಿತ್ತು.

ದಾರಿ ಸಾಗಿದಾಗ ಆಗೀಗ ಡೇವ್ ಹೋಗಿ ಸೊಲೆಕ್ಸನಿಗೆ ಕಚ್ಚುತ್ತಿತ್ತು. ವಾಹಕನ ಚಬಕದ ಧ್ವನಿಯನ್ನು ಅದೇನೂ ಲಕ್ಷಿಸುತ್ತಿರಲಿಲ್ಲ. ಪರಿ ಶ್ರಮವಾಗದೆ ಹಿಂದಿನಿಂದ ಸುಮ್ಮನೆ ಬರುತ್ತಿರ ಲೆಂದು ಹೀಗೆ ಮಾಡಿದರೆ ಇದರ ವರ್ತನೆ ನೋಡಿ ವಾಹಕನಿಗೆ ನಗೆ ಬರುತ್ತಿತ್ತು. ಕೊನೆಗೆ ಹಿಮದ ದಾರಿ ಅತಿ ಕಠಿಣವಾಗುತ್ತ ನಡೆದಂತೆ ಒಮ್ಮೆ ಕೆಳಗೆ ಬಿದ್ದುಬಿಟ್ಟಿತು. ಕಾಲು ಕೀಳ ಲಿಲ್ಲ. ಆದರೆ ಇದ್ದ ಶಕ್ತಿಯನ್ನೆಲ್ಲ ಪ್ರಯೋಗಿಸಿ ಒಮ್ಮೆ ಸೊಲೆಕ್ಸನ ಬಳಿಗೆ ಹೋಗಿ ನಿಲ್ಲಲು ಹವ ಣಿಸಿತು. ಮತ್ತೆ ತಂಬಾಕು ಸೇದುತ್ತ ಪ್ರಾಣಿ ಗಳನ್ನು ಹುರಿದುಂಬಿಸಿದ ವಾಹಕ. ಅಷ್ಟರಲ್ಲಿ ಡೇವ್ ಓಡಿ ಬಂದು ಸೊಲೆಕ್ಸನನ್ನು ಸರಿಸಿ ನಿಂತಿರುವ ದೃಶ್ಯ ಎಲ್ಲರಿಗೆ ಅಚ್ಚರಿಯನ್ನುಂಟು ಮಾಡಿತು.

ತಾನು ಇಲ್ಲಿಯೇ ಇರತಕ್ಕದ್ದೆಂದು ಕಣ್ಣಿ ನಿಂದಲೆ ಒಡೆಯನಿಗೆ ಹೇಳಿತು. ಪ್ರಾಣತ್ಯಾಗ ದಿಂದಲೂ ಕೂಡ ಪ್ರಾಣಿವರ್ಗ ಸ್ವಾಭಿಮಾನಕ್ಕೆ ಚ್ಯುತಿ ತಂದುಕೊಳ್ಳದು. ಏನೇ ಆಗಲಿ, ಸಾಯುವ ವೇಳೆಗೆ ಸಮಾಧಾನವಿರಲೆಂದು ಯಾರೂ ಅದಕ್ಕೆ ಅಡ್ಡಬರಲಿಲ್ಲ. ಡೇವ್‌ನನ್ನು ಅದರ ಪ್ರೀತಿಯ ಸ್ಥಳಕ್ಕೆ ಹೂಡಿದರು. ಅಭಿಮಾನದಿಂದ ಬಂಡಿ ಎಳೆಯತೊಡಗಿತು. ಕುಂಟುವದೂ ಪ್ರಾರಂಭ ವಾಯಿತು.

ವಿಶ್ರಾಂತಿ ವೇಳೆಯಲ್ಲಿ ವಾಹಕನು ಅದನ್ನು ಉಪಚರಿಸಿದ. ಮುಂಜಾವು ಅದಕ್ಕೆ ಪ್ರವಾಸದಲ್ಲಿ ಆಸಕ್ತಿ ಕಾಣಲಿಲ್ಲ. ಅಂಬೆಗಾಲಿಡುತ್ತ ವಾಹ ಕನ ಬಳಿಗೆ ಬಂದಿತು. ತನ್ನ ಗೆಳೆಯರಿದ್ದ ಜೀನಿನ ಬಳಿಗೆ ಹೋಯಿತು. ಅದರ ಶಕ್ತಿ ಹ್ರಾಸವಾ ಯಿತು. ದೀರ್ಘ ಉಸಿರು ಕರೆಯಿತು. ವೇದನೆ ಯಿಂದ ಗೋಳಿಡಹತ್ತಿತು.

ಇಲ್ಲಿಗೆ ದಳ ಮತ್ತೆ ನಿಲ್ಲಿಸಲಾಯಿತು. ಸ್ಕಾಚ್ ಮನುಷ್ಯ ಶಿಬಿರ ಸ್ಥಾನಕ್ಕೆ ಹೋದ. ಜನರ ಮಾತುಕತೆ ನಿಂತವು. ರಿವಾಲ್ವರಿನ ಧ್ವನಿ ಬಂದಿತು. ಅವನು ತಿರುಗಿ ಜಾರುಬಂಡಿಯ ಬಳಿಗೆ ಬಂದು ಮುಂದಿನ ಪ್ರವಾಸಕ್ಕೆ ಅವಸರ ಮಾಡತೊಡಗಿದ. ಚಬಕಗಳು ಸುಯ್ಯೆಂದು ಸದ್ದು ಮಾಡಿದವು. ಕೊರಳ ಗೆಜ್ಜೆಗಳು ಘಲ್ ಘಲ್ ಧ್ವನಿಗೈದವು. ನದಿಯ ದಡದ ಗಿಡಗಳ ತೋಪಿನ ಹಿಂದೆ ಏನು ನಡೆಯಿತೆಂಬುದು ಬಕ್ ಹಾಗೂ ಉಳಿದೆಲ್ಲ ನಾಯಿಗಳಿಗೆ ಥಟ್ಟನೆ ಹೊಳೆ ಯಿತು.

ಡಾಸನ್ನಿನಿಂದ ಹೊರಟು ಮೂವತ್ತು ದಿವಸ ಪ್ರವಾಸ ಮಾಡಿದ ಬಕ್ ಹಾಗೂ ಸಂಗಡಿಗ ರೊಡಗೂಡಿದ ದಳ ಈಗ ಸ್ಕಾಗ್ವೆಗೆ ಬಂದಿತು. ಎಲ್ಲ ಪ್ರಾಣಿಗಳು ಸತ್ತು ಸುಣ್ಣವಾಗಿದ್ದವು. ಬಕ್ಕನ ಹಿಂದಿನ ನೂರಾನಾಲ್ವತ್ತು ಪೌಂಡು ತೂಕವೆಲ್ಲಿ? ಇಂದಿನ ನೂರಾ ಹದಿನೈದು ಎಲ್ಲಿ? ಉಳಿದ ನಾಯಿಗಳ ಹಾಡು ಯಾತಕ್ಕೂ ಬೇಡ. ನರ ನರ ಅಂಗಾಂಗದಲ್ಲಿ ನೋವು! ಇದಕ್ಕೆ ಮುಖ್ಯ ಕಾರಣವೆಂದರೆ ಸುಮಾರು ಐದು ತಿಂಗಳಲ್ಲಿ ಒಟ್ಟು ಇಪ್ಪತ್ತೈದು ನೂರು ಮೈಲು ಪ್ರವಾಸವಾದದ್ದು. ಹಿಂದಿನ ಹದಿನೆಂಟು ನೂರು ಮೈಲಿನ ಯಾತ್ರೆಯಲ್ಲಿ ಐದೇ ದಿನ

ವಿಶ್ರಾಂತಿ. ಸ್ಕಾಗ್ವೇಗೆ ಬಂದಾಗ ಮುಂದೆ ಹೆಜ್ಜೆ ಇಡುವಂತಿದ್ದಿಲ್ಲ. ಬಂಡಿಯ ವಾಹಕರಿಗೂ ಸುಖ ವಿರಲಿಲ್ಲ. ಹನ್ನೆರಡುನೂರು ಮೈಲು ಪ್ರವಾಸ ದಲ್ಲಿ ಅವರಿಗೆ ಎರಡೇ ದಿನದ ವಿಶ್ರಾಂತಿ.

ಮೂರು ದಿನಗಳಾದವು. ಬಕ್ ಹಾಗೂ ಸಂಗಡಿಗರು ನಿಜಕ್ಕೂ ದಣಿದಿದ್ದವು. ನಾಲ್ಕ ನೆಯ ದಿನ ಮುಂಜಾವು ಸಂಸ್ಥಾನದ ಇಬ್ಬರು ಬಂದು ಜೀನು, ನಾಯಿಗಳನ್ನೆಲ್ಲ ಕೊಂಡುಕೊಂಡರು. ಹಾಲ್, ಚಾರ್ಲಸ್ ಎಂದು ಅವರ ಹೆಸರು. ಚಾರ್ಲಸ್ ಮಧ್ಯ ವಯಸ್ಕ; ಬೂದು ಬಣ್ಣ. ಕಾಂತಿಹೀನ ಕಣ್ಣುಗಳುಳ್ಳವ. ಹಾಲ್ ತರುಣ ಬೇಟೆಯ ಚೂರಿ, ರಿವಾಲ್ವರ್ ಅವನ ಟೊಂಕಕ್ಕಿದ್ದವು. ಈ ನಡುಪಟ್ಟಿ ಅವನ ವೇಷ ಭೂಷಣದ ವೈಶಿಷ್ಟ್ಯ, ಅವನ ನಿರ್ದಯತನದ ದ್ಯೋತಕ !

ಆ ಮನುಷ್ಯ ಮತ್ತು ಸರಕಾರೀ ಏಜಂಟನ ನಡುವೆ ಹಣದ ವ್ಯವಹಾರವಾದದ್ದು ಬಕ್‌ನಿಗೆ ತಿಳಿಯಿತು. ಹಿಂದೆ ಪೆರಾಲ್ಟ್, ಫ್ರಾಂಕೋಯಿಸ ರಂತೆ ಸ್ಕಾಚ್ ಮನುಷ್ಯಹಾಗೂ ಮೇಲ್ ವಾಹ ಕರೂ ಕಣ್ಮರೆಯಾದರು— ಬಕ್‌ನಿಂದ. ಹೊಸ ಒಡೆಯರಲ್ಲಿ ಅಂಥ ಅಚ್ಚುಕಟ್ಟುತನ ಕಾಣಲಿಲ್ಲ. ಡೇರೆ ಅಸ್ತವ್ಯಸ್ತ ಬಿದ್ದಿದ್ದವು. ಕಪ್ಪು-ಬಸಿ ಅಡಿ ಗೆಯ ಪಾತ್ರೆಗಳು ಬೊಕ್ಕಬೋರಲು ಬಿದ್ದವು-ತೊಳೆಯದೆ. ಒಬ್ಬ ಮಹಿಳೆ ಸಹ ಅಲ್ಲಿದ್ದಳು. ಹೆಸರು ಮರ್ಸೆಡೆಸ್. ಆಕೆ ಚಾರ್ಲಸನ ಹೆಂಡತಿ, ಹಾಲ್‌ನ ತಂಗಿ. ಒಳ್ಳೆಯ ಪರಿವಾರ.

ಜಾರು ಬಂಡಿಯ ಮೇಲೆ ಡೇರೆಗಳನ್ನೊಟ್ಟು ವಾಗ ಬಕ್ ಸಾಕೂತವಾಗಿ ನೋಡುತ್ತಿತ್ತು. ಸರಂಜಾಮು ಹೆಚ್ಚು ಇದ್ದರೂ ಸಿದ್ಧತೆ ಅಚ್ಚು ಕಟ್ಟಾಗಿ ಕಾಣಲಿಲ್ಲ. ಮರ್ಸೆಡೆಸ್ ಹಿರಿಯಳಂತೆ ಎಲ್ಲಕ್ಕೂ ತಾನೆ ಸಲಹೆ ಕೊಡುತ್ತಿದ್ದಳು. ಮುಂದೆ ಅರಿವೆಯ ಚೀಲ ಹಾಕಿದಾಗ ಹಿಂದೆ ಅದನ್ನು ಇಡಿರೆಂದು ಹೇಳಿದಳು; ಮತ್ತೆ ಇಳಿಸಲು ಸೂಚಿಸಿದಳು.

ಬಳಿಯ ಡೇರೆಯಿಂದ ಮೂವರು ಕಣ್ಸನ್ನೆ ಮಾಡುತ್ತ ಬಂದರು.

"ಈಗ ಇದ್ದಕ್ಕಿದ್ದಂತೆ ಚೀಲಗಳು ಸರಿಯಿವೆ. ನಿಮ್ಮ ಕೆಲಸದಲ್ಲಿ ನಾನು ಅಡ್ಡ ಬರಬಾರದು; ನಿಜ. ಆದರೆ ಆ ಡೇರೆ ಮಾತ್ರ ಒಯ್ಯಬಾರದಿತ್ತು."

"ಏನಾದರೂ ಡೇರೆ ಇಲ್ಲದೆ ಹೋಗುವುದು ಅಸಾಧ್ಯ." ಮರ್ಸೆಡೆಸ್ ಅಚ್ಚರಿ ವ್ಯಕ್ತಪಡಿಸಿದಳು.

"ಈಗ ವಸಂತ ಋತು. ಚಳಿ ಎಲ್ಲಿಯದು ?" ಎಂದು ಒಬ್ಬ ನುಡಿದ. "ಇಷ್ಟು ಎಳೆಯಲಿಕ್ಕಾದೀತೆ ?"

"ಆಗದೇನು ?" ಎಂದು ಚಾರ್ಲ್ಸ್ ಸ್ವಲ್ಪದರಲ್ಲಿ ನುಡಿದು ಹಿಂತಿರುಗಿ ಚಬಕದ ಧ್ವನಿಗೈದ.

ಒಂದು ಕೈಯಲ್ಲಿ ಉದ್ದ ಗಳ, ಮತ್ತೊಂದರಲ್ಲಿ ಚಬಕ ಹಿಡಿದು ಹಾಲ್ "ಮಶ್" ಎಂದ. —ನಾಯಿಗಳು ಹಾರಿಬಿದ್ದು ಕೆಲ ನಿಮಿಷ ಕಸುವಿನಿಂದ ಜಗ್ಗಿದವು. ಆಮೇಲೆ ಹಿಂತೆಗೆದವು.

"ಸೋಮಾರಿ ಪ್ರಾಣಿಗಳು ! ಎಳೆಯುವ ಮನಸ್ಸಿಲ್ಲ." ಎಂದು ಹಾಲ್ ಚಬಕ ಛಟಾಯಿಸಿದ. ಅಷ್ಟರಲ್ಲಿ ಮರ್ಸೆಡೆಸ್ ಅಡ್ಡಗಟ್ಟಿ "ಹಾಲ್, ಹಾಗೆ ಹೊಡೆಯಬೇಡ. ನೀನು ಹೀಗೆ ಬಡ ಪ್ರಾಣಿಗಳನ್ನು ಗೋಳು ಹೊಯ್ದುಕೊಂಡರೆ ಒಂದು ಹೆಜ್ಜೆಯನ್ನೂ ನಾನು ಇಡಲಿಕ್ಕಿಲ್ಲ."

"ನಿನಗೇನು ಗೊತ್ತು ? ಹೊಡೆಯದೆ ವಿಧಿಯಿಲ್ಲ."

ಮನಸಿಗೆ ವ್ಯಥೆ ಎನಿಸಿ ಮರ್ಸೆಡೆಸ್ ದಯತೋರೆಂದು ಬೇಡಿದಳು.

ಜನರಲ್ಲಿ ಒಬ್ಬನೆಂದ ! "ಈ ಪ್ರಾಣಿ ನಿಶ್ಶಕ್ತವಾಗಿವೆ. ವಿಶ್ರಾಂತಿ ಅವಕ್ಕೆ ಅತ್ಯವಶ್ಯ."

ವಿಶ್ರಾಂತಿಯ ಪ್ರಶ್ನೆ ಎತ್ತಲೇ ಕೂಡದೆಂದು ಹಾಲ್ ಶಪಥ ಗೈದ. ತನ್ನ ಅಣ್ಣನನ್ನು ಕುರಿತೇ ಆಕೆ ಮತ್ತೆ ಹೇಳಿದಳು : "ನಾಯಿಗಳು ನಿನ್ನ ಕೈಯಲ್ಲಿವೆ. ತಿಳಿದದ್ದು ಮಾಡು."

ನಾಯಿಗಳಿಗೆ ಚಬಕದ ಏಟು ಬಿತ್ತು. ಹಿಮದಲ್ಲಿ ಕಾಲೂರಿ ನಿಂತುಬಿಟ್ಟವು. ಬಂಡಿ ಚಲಿಸದಾಯಿತು. ಚಬಕ ಸುಯ್ಯೆಂದು ಅವುಗಳ ಮೇಲೆ ಶಬ್ದ ಗೈಯ್ಯುತ್ತಿತ್ತು. ಮರ್ಸೆಡೆಸ್ ನಡುವೆ ಬಂದಳು. ಬಕ್‌ನ ಮುಂದೆ ಮೊಳಕಾಲೂರಿ ಅದರ ಕೊರಳಿಗೆ ಕೈ ಹಾಕಿದಳು. ಕಣ್ಣಲ್ಲಿ ನೀರು ಸುರಿಯುತ್ತಿತ್ತು. "ಸುಮ್ಮನೆ ಎಳೆಯಬಾರದೆ ? ಚಬಕದ ಏಟು ತಪ್ಪುವುದು." ಎಂದು ಹೇಳಿದಳು.

ನೋಡುತ್ತ ನಿಂತವರಲ್ಲಿ ಒಬ್ಬ ಹಲ್ಲು ಕಡಿದು ಹೇಳಿದ : "ನಿಮ್ಮ ಪ್ರವಾಸ ಹಾಳಾಗಲಿ. ನಾಯಿಗಳ ಗತಿ ಏನು ? ಹಿಮ ಬಹಳ ಬಿರುಸಾಗಿದೆ. ಎಡ ಬಲಕ್ಕೆ ಕೋಲು ಹಾಕಿ ಅದನ್ನೊಡೆಯಿರಿ."

ಬೇಡಾದ ವಸ್ತುಗಳನ್ನು ಚೆಲ್ಲಿಕೊಟ್ಟು ದಳ ಮುಂದೆ ಅಡಿಯಿಟ್ಟಿತು. ಒಂದರ ತರುವಾಯ ಒಂದು ಪಾತ್ರೆ ಒಗೆದಾಗ ಮರ್ಸೆಡೆಸ್ ದೂರಿದಳು; ಕೈ ಚೆಲ್ಲಿ ಕುಳಿತಳು. ಇಂತಹ ಎಷ್ಟೋ ಚಾರ್ಲಸರು ಬಂದರೂ ಒಂದು ಅಂಗುಲ ಸರಿಯೆನೆಂದಳು ಆಕೆ.

ಅಸಹಾಯ ಅನಾಥ ಹೊಸ ನಾಯಿಗಳು, ಹಾಗೂ ೨೫೦೦ ಮೈಲು ಒಂದೇ ಸವನೆ ನಡೆದ ಹಳೆ ನಾಯಿಗಳು—ಹದಿನಾಲ್ಕು ನಾಯಿಗಳಿಂದ ವಿಶಿಷ್ಟವಾಗಿ ಸಾಗಿದ್ದರು. ಎಷ್ಟೋ ಬಂಡಿಗಳು ಡಾಸನ್ನಿಗೆ ಹೊರಟಿದ್ದವು. ಆದರೆ ಇದೊಂದೆ ಹದಿನಾಲ್ಕು ನಾಯಿಗಳ ದಳ. ಮುಖ್ಯವಾಗಿ ಉತ್ತರ ಧ್ರುವ ಯಾತ್ರೆಯಲ್ಲಿ ಬಂಡಿಗೆ ಹದಿನಾಲ್ಕು ನಾಯಿಗಳನ್ನು ಹೂಡುವ ಪರಿಪಾಠವಿರಲಿಲ್ಲ. ಯಾಕಂದರೆ ಅಷ್ಟು ಆಹಾರ ಪೂರೈಸುವದೇ ಕಠಿಣ. ಪಾಪ ! ಚಾರ್ಲಸ್ ಹಾಲರಿಗೇನು ಗೊತ್ತು? ಪೆನ್ಸಿಲಿನಿಂದ ಕಾಗದದ ಮೇಲೆ ನಕಾಶ ತೆಗೆದು ಪ್ರವಾಸ ಕೈಕೊಂಡವರವರು.

ಈ ಇಬ್ಬರು ಗಂಡಸರು, ಒಬ್ಬ ಹೆಣ್ಣುಮಗಳ ಮೇಲೆ ಅವಲಂಬಿಸುವುದರಲ್ಲಿ ಬಕ್ಕನಿಗೆ ಏನೂ ಅರ್ಥ ಕಾಣಲಿಲ್ಲ. ಶಿಸ್ತಿನ, ಕ್ರಮದ ಸೋಂಕೇ ಇರಲಿಲ್ಲ ಅವರಿಗೆ. ಒಂದು ಶಿಬಿರ ಮುಚ್ಚಲು ಅರ್ಧತಾಸು, ಪ್ರಾರಂಭಿಸಲೂ ಅರ್ಧತಾಸು. ಉಳಿದ ದಿವಸವೆಲ್ಲ ವಸ್ತುಗಳನ್ನು ಹೊಂದಿಸುವುದರಲ್ಲೇ ಕಳೆಯುತ್ತಿತ್ತು. ಒಂದೊಂದು ದಿನ ಹತ್ತು ಮೈಲು ಪ್ರವಾಸವಾಗುತ್ತಿತ್ತು. ಕೆಲವು ದಿನ ಅವರು ಹೊರಡುತ್ತಿರಲೇ ಇಲ್ಲ.

ನಾಯಿಗಳಿಗೆ ಆಹಾರದ ಕೊರತೆಯಾಗುವುದು

ಈಗ ಅನಿವಾರ್ಯವಾಯಿತು. ಮೊದಮೊದಲು ಪ್ರಮಾಣ ಮೀರಿ ಆಹಾರ ಹಂಚಿದರು. ಅನಂತರ ಕೊರತೆಯ ಕಾಲ ಕ್ಷಿಪ್ರದಲ್ಲಿಯೇ ಅಡಿ ಇಟ್ಟಿತು. ನಾಯಿಗಳಿಗೆ ಆಹಾರ ಕಡಿಮೆಯಾಯಿತೆಂದೆನಿಸಿದರೆ ಸಾಕು, ಮರ್ಸಿಡೆಸ್‌ಳಿಗೆ ಕಣ್ಣೀರೇ ಬಂದು ಮಾತಾಡಲು ಆಗುತ್ತಿರಲಿಲ್ಲ. ಯಾರಿಗೂ ತಿಳಿಯದಂತೆ ಮೆಲ್ಲನೆ ಹೋಗಿ ಚೀಲ ಬಿಚ್ಚಿ ಆಹಾರ ತಂದು ಹಂಚುವಳು. ಆದರೆ ಬಕ್, ಹಸ್ಕಿಗಳಿಗೆ ಬೇಕಾಗಿದ್ದುದು ಆಹಾರವಲ್ಲ; ವಿರಾಮ.

ತನ್ನ ಗಂಡ ಮತ್ತು ಅಣ್ಣ ಇವರೊಡನೆ ಜಗಳಾಟ, ತನಗಾಗಿ ಚಿಂತೆ, ನಾಯಿಗಳ ಅನಾಥಾವಸ್ಥೆ—ಎಲ್ಲ ಮರ್ಸಿಡೆಸ್‌ಳನ್ನು ಕಾರುಣ್ಯದ ಮೂರ್ತಿಯಾಗಿಸಿದವು. ಅಳುವುದೇ ಗತಿಯಾಯಿತು. ಪ್ರಸಂಗ ಬಂದರೆ ಸಾಕು; ಮೂವರಲ್ಲಿ ವಾದವಿವಾದ ಏಳುತ್ತಿದ್ದವು. ಪ್ರತಿಯೊಂದು ವ್ಯಕ್ತಿ ತಾನೆ ಹೆಚ್ಚು ಕೆಲಸ ಮಾಡುವವ—ಎಂದು ತಿಳಿಯುತ್ತಿತ್ತು. ಒಮ್ಮೆ ಆಕೆ ಗಂಡನನ್ನು ಮೇಲುಗಟ್ಟುವಳು; ಒಮ್ಮೊಮ್ಮೆ ಅಣ್ಣನನ್ನು. ತತ್ಪರಿಣಾಮವಾಗಿ ಉಂಟಾದ ಜಗಳ ಮನೆಯ ಬಳಗವನ್ನೆಲ್ಲ ವ್ಯಾಪಿಸಿ ಸತ್ತವರ ತನಕವೂ ಹೋಗುತ್ತಿತ್ತು.

ಸ್ತ್ರೀಜಾತಿಗೆ ಕಷ್ಟ ಹೆಚ್ಚು ಎಂದು ಆಕೆಯ ಆಕ್ರೋಶ. ಆಕೆ ಸುಂದರ ಯುವತಿ, ಹೃದಯ ಮೃದು. ದೀನರಕ್ಷಣೆ ಆಕೆಗೆ ಅತಿ ಪ್ರಿಯ. ಆದರೆ ಗಂಡ ಮತ್ತು ಅಣ್ಣನಿಂದ ಪುರಸ್ಕಾರ ಸಿಗಲಿಲ್ಲ. ಅಸಹಾಯಕತೆಯಲ್ಲಿರುವುದು ಆಕೆಯ ರೂಢಿ. ಅವರು ದೂರುತ್ತಿದ್ದರು. ಸ್ತ್ರೀಜಾತಿಯ ಹಕ್ಕುಬಾಧ್ಯತೆಗಳಿಗೆ ಮುಗಿಬಿದ್ದು ಆಕೆ ಅವರನ್ನು ಗೋಳಿಗೀಡು ಮಾಡುತ್ತಿದ್ದಳು. ಮರ್ಸಿಡೆಸ್ ಈಗ ನಾಯಿಗಳ ತಂಟೆಗೆ ಹೋಗಲಿಲ್ಲ. ಅತಿ ಬೇಸರವಾದ್ದರಿಂದ ಬಂಡಿಯನ್ನೇ ಏರಿದಳು.

ಆಕೆ ಸುಂದರಿ; ಕರುಣೆಯುಳ್ಳವಳು. ಆದರೆ ತೂಕ ೧೫೦ ಪೌಂಡು! ನಾಯಿಗಳೋ—ಒಂದು ಮೊರ ಹಾಕಿದರೆ ಮುಂದೆ ಕಾಲಿಡು ವಂತಿರಲಿಲ್ಲ.

ಒಮ್ಮೆಯಂತೂ ಅವರಿಬ್ಬರೂ ಕೂಡಿ ಆಕೆಯನ್ನು ಅನಾಮತ್ತಾಗಿ ಎತ್ತಿ ಬಂಡಿಯಿಂದ ಕೆಳಗಿಳಿಸಿದರು. ಆಕೆ ಅಚ್ಚೆಯ ಸಣ್ಣ ಮಕ್ಕಳಂತೆ ಗಾಳಿಯಲ್ಲಿ ಕಾಲು ಚಲ್ಲಾಡುತ್ತ ದಾರಿಯ ಬದಿಗೆ ಹೋಗಿ ಕುಳಿತಳು. ಅವರು ಬಂಡಿ ತೆರವು ಮಾಡಿ ಆಕೆಯನ್ನು ಮತ್ತೆ ಹೇರಿಕೊಂಡು ಹೋದರು.

ಒಂದು ದಿನ ಸುಸ್ವಭಾವದ ಬಿಲ್ಲಿ ನೆಲಕ್ಕೆ ಬಿತ್ತು; ಏಳಲಿಲ್ಲ. ರೂಢಿಯಂತೆ ಹಾಲ್ ಚಪ್ಪೆ ಗೊಡಲಿಯಿಂದ ಅದರ ತಲೆ ಕತ್ತರಿಸಿ ಚೆಲ್ಲಿ ಹೊರಟ. ಬಕ್ ಅದನ್ನು ನೋಡಿತು; ಸಹವಾಸಿಗಳು ನೋಡಿದವು. ತಮ್ಮ ಗತಿ ಸಹ ಹೀಗೆ ಒಂದು ದಿನ ಆಗುವದೆಂದು ತಿಳಿದವು. ಮರುದಿನ ಕೂನಾನ ಕೊನೆಯಾಯಿತು.

ಹವಾಮಾನ ಆಹ್ಲಾದಕರವಾಗಿತ್ತು. ನಾಯಿಗಳಿಗಾಗಲಿ, ಜನರಿಗಾಗಲಿ ಇದು ಲಕ್ಷ್ಯಕ್ಕೆ ಬಂದಂತೆ ತೋರಲಿಲ್ಲ. ಪ್ರತಿ ದಿನ ಸೂರ್ಯನು ನಸು ತೀವ್ರವೇ ಉದಿಸಿ ತಡವಾಗಿ ಅಸ್ತಂಗತನಾಗುತ್ತಿದ್ದನು. ಮುಂಜಾವು ಮೂರಕ್ಕೇ ನಸುಕು ಹರಿಯುತ್ತಿತ್ತು. ಹೂಬಿಸಿಲ ಇರುಳು ಒಂಭತ್ತರ ವರೆಗೆ ಹಾಗೇ ಇರುತ್ತಿತ್ತು. ಇಡೀ ದಿನ ಪ್ರಖರ ಬಿಸಿಲು. ಹಿಂದಿನ ಪೈಶಾಚಿಕ ಚಳಿಗಾಲಕ್ಕೆ ಇದೀಗ ಉಳಿಗಾಲವಿರಲಿಲ್ಲ. ವೈಭವಶಾಲಿ ವಸಂತ ಋತುವಿನ ಚೈತನ್ಯ ಅಡಿಯಿಡುವುದರಲ್ಲಿತ್ತು. ಪೈನ್ ಗಿಡಗಳು ಚಿಗುರು ಬಿಡಹತ್ತಿದವು. ವಿಲೋ ಹಾಗೂ ಆಸ್ಪಿನ್ ಗಿಡಗಳಿಗೆ ಮೊಗ್ಗೆಗಳೊಡೆದವು. ಇರುಳೆಲ್ಲ ಕ್ರಿಕೆಟ್ ಪಕ್ಷಿಗಳ ಧ್ವನಿ.

ಇಂಥ ಚೈತನ್ಯದ ಅಪರಾವತಾರವೆನಿಸಿದ ಪ್ರದೇಶದಲ್ಲಿ ಎಲ್ಲೆಡೆ ಬಿಸಿಲು ಹೊಡೆಯುತ್ತಿರಲು ಇಬ್ಬರು ಸಾವಿನ ದವಡೆಯಲ್ಲಿ ಸಿಕ್ಕಿದ್ದರು. ಜತೆಗೆ ಸ್ತ್ರೀಯೊಬ್ಬಳು. ನಾಯಿಗಳಂತೂ ಸರಿಯೇ.

ನಾಯಿಗಳು ಹತಾಶವಾದಾಗ ಮರ್ಸಿಡೆಸ್ ಕಣ್ಣೀರಿಟ್ಟಳು. ಹಾಲ್ ಶಪಥ ಗೈದ. ಚಾರ್ಲಸನಿಗೂ ದುಃಖ ಉಮ್ಮಳಿಸಿತು. ಜಾನ್ ಥಾರ್ಟನ್ನನ ಶಿಬಿರದೆಡೆಗೆ ವ್ಹಾಯಿಟ್ ನದಿಯ ಮುಖಕ್ಕೆ ಬಂದರು. ಒಮ್ಮೆ ಬಂಡಿ ನಿಂತಾಗ ನಾಯಿಗಳು ನಿಂತಲ್ಲೇ ಸತ್ತಂತೆ ಬಿದ್ದವು. ಮರ್ಸಿಡೆಸ್ ಕಣ್ಣೀರೊರಸಿಕೊಂಡು ಥಾರ್ಟನ್ನನೆಡೆ ನೋಡಿದಳು. ಚಾರ್ಲಸನು ವಿಶ್ರಾಂತಿಗೆಂದು ಒಂದು ಮುಂಡಿಗೆಯ ಮೇಲೆ ಕುಳಿತಿದ್ದ. ಅವನ ಮೊದಲಿನ ದೌಲತ್ತೆಂತಹದು! ಜಾನ್ ಥಾರ್ಟನ್ನನು ಇದೀಗ ಬರ್ಚ ಗಿಡಗಳ ಟೊಂಗೆಯಿಂದ ಸಿದ್ಧಗೊಳಿಸಿದ ಕೊಡಲಿಯನ್ನು ಮಸೆಯುವುದರಲ್ಲಿ ಮಗ್ನನಾಗಿದ್ದ. ತನ್ನ ಕೆಲಸ ನಡೆಸುತ್ತಲೇ ಉತ್ತರಿಸುತ್ತಿದ್ದ.

"ಹಿಮನೆಲ ಯಾವಾಗಲೂ ಕುಸಿಯುವಂತಹದೇ. ಏನೋ ಮೂರ್ಖರು ದೈವದ ಮೇಲೆ ಭಾರ ಹಾಕಿ ಮಂಗಸಾಹಸಕ್ಕೆ ಕೈ ಇಕ್ಕುವರು. ನಾನು ಅಲಾಸ್ಕಾದ ಎಲ್ಲ ಸುವರ್ಣ ನನ್ನ ಮುಂದೆ ಸೂರೆಯಾದರೂ ಜೀವ ಕಳೆದುಕೊಳ್ಳುವ ಸಾಹಸಕ್ಕೆ ಮನಸ್ಸು ಮಾಡುವವನಲ್ಲ."

"ಹೌದು; ನೀನು ಮೂರ್ಖನಲ್ಲವೆಂದೇ ಬಿಟ್ಟೆ-ಎಂದೆನಿಸುವದು." — ಹಾಲ್‌ನೆಂದ, "ಏನೇ ಆಗಲಿ ಡಾಸನ್ನಿಗೆ ಹೊರಟೇ ತೀರುವುದು" ಚಬಕವನ್ನು ಛಟಾಯಿಸಿದ. "ಬಕ್, ಏಳು, ಎಲ್ಲರೂ ಏಳಿರಿ. . . . ಮಶ್‌ಮಶ್. . . ."

ಥಾರ್ಟನ್ನನು ತನ್ನ ಮಸೆಯುವ ಕಾಯಕ ನಡೆಸೇ ಇದ್ದ. "ಮೂರ್ಖರು ಏತಕ್ಕೆ ತಮ್ಮ ಯೋಜನೆಯನ್ನು ಬಿಟ್ಟುಕೊಟ್ಟಾರು" ಎಂದು ಎನಿಸಿತವನಿಗೆ.

ಆದರೆ ಆಜ್ಞೆ ಹೊರಟಾಗಲೂ ದಳ ಮಿಟ್ಟ ಮಿಸುಕಲಿಲ್ಲ. ಹೊಡೆತ ಬಿದ್ದರೆ ಏಳುವ ಆ ಹಿಂದಿನ ಸ್ಥಿತಿ ಈಗ ಎಷ್ಟೂ ಉಳಿದಿರಲಿಲ್ಲ ನಾಯಿಗಳಿಗೆ. ಅತ್ತಿತ್ತ ಚಬಕ ಮಿಂಚಿತು. ಬಕ್

ಕಲ್ಲಾಗಿತ್ತು. ಬಿದ್ದಲ್ಲಿಯೇ ಬಿದ್ದಿತು. ಚಬಕದ ಚುರುಕು ಅದಕ್ಕೆ ಮೇಲಿಂದ ಮೇಲೆ ತಗಲಿತು. ಅದು ದುಃಖಿಸಲಿಲ್ಲ. ಒದ್ದಾಡಲೂ ಇಲ್ಲ. ಥಾರ್ಟನ್ ಮಾತಾಡಬೇಕೆಂದು ಹಲವಾರು ಸಲ ಯತ್ನಿಸಿದ. ಆದರೆ ಮನಸ್ಸು ಬದಲಾಯಿತು. ಉದ್ವಿಗ್ನತೆಯಿಂದ ಕಣ್ಣು ಮಂಜಾದವು. ಹಾಗೆಯೇ ಚಬಕ ಛಟಾಯಿಸುವದು ನಡೆಯಲು ಧೀರ ವೃತ್ತಿಯಿಂದ ಮುಂದೆ ಬಂದ.

ಹಾಲ್‌ನನ್ನು ಇಷ್ಟೊಂದು ರೊಚ್ಚಿಗೆಬ್ಬಿಸಲು ಬಕ್ ಇಂದೇ ಮೊದಲಸಲ ಕಾರಣವಾಯಿತು. ಚಬಕವನ್ನು ಚೆಲ್ಲಿಕೊಟ್ಟು ಅವನು ಟೊಣಪೆಯನ್ನು ತೆಗೆದುಕೊಂಡ. ನುಗ್ಗುನುಗ್ಗಾಗುವ ಹೊಡೆತಗಳ ಸುರಿಮಳೆಯಾದರೂ ಬಕ್ ಕದಲಲಿಲ್ಲ.

ಯಾವ ರೀತಿಯಿಂದಲೂ ಎಚ್ಚರಿಕೆ ಕೊಡದೆ ಥಾರ್ಟನ್ ಒಟಗುಡುತ್ತ ಟೊಣಪೆ ಹಿಡಿದ ಮನುಷ್ಯನ ಮೇಲೆ ಏರಿ ಹೋದ. ಹಾಲ್ ಕೆಳಗುರುಳಿದ. ಮರ್ಸಿಡೆಸ್ ಚಿಟ್ಟನೆ ಚೀರಿದಳು. ಚಾರ್ಲ್ಸ್ ಕಣ್ಣೀರು ಒರಸಿಕೊಂಡ.

ಜಾನ್ ಥಾರ್ಟನ್ನನಿಗೆ ಸಿಟ್ಟಿನ ಮೂಲಕ ಮಾತೇ ಹೊರಡಲಿಲ್ಲ. ಆವೇಶ ತಡೆದುಕೊಂಡು ಬಕ್‌ನ ಬಳಿ ನಿಂತು, "ಇನ್ನೊಮ್ಮೆ ಇದರಮೇಲೆ ಕೈ ಎತ್ತಿದ್ದಾದರೆ ನಿನ್ನ ಜೀವವೇ ಹೋದೀತೆಂದು ತಿಳಿ." ಎಂದ.

ಕಟವಾಯಿಯಿಂದ ರಕ್ತ ಸುರಿಯುತ್ತಿತ್ತು. "ಅದು ನನ್ನ ನಾಯಿ, ಬೇಕಾದ್ದನ್ನು ಮಾಡೇನು" ಹಾಲ್ ನುಡಿದ: "ದೂರ ಸರಿ, ನಾನು ಡಾಸನ್ನಿಗೆ ಹೊರಟೆ."

ಥಾರ್ಟನ್ ಅವನ ಹಾಗೂ ಬಕ್ಕನ ನಡುವೆ ನಿಂತಿದ್ದ. ಸರಿಯುವ ಲಕ್ಷಣ ಕಾಣಲಿಲ್ಲ. ಹಾಲ್ ತನ್ನ ಬೇಟೆಯ ಚೂರಿ ಹೊರ ತೆಗೆದ. ಮರ್ಸಿಡೆಸ್ ಆಗ ಚೀರಿದಳು, ನಕ್ಕಳು, ಅತ್ತಳು.

ಕರೆದಳು, ಸನ್ನಿಬಡೆದವರಂತೆ ಅನೇಕ ವಿಧವಾಗಿ ನಡೆದುಕೊಂಡಳು.

ಹಾಲ್‌ನಲ್ಲಿ ಇನ್ನು ಹೋರಾಟದ ಬುದ್ಧಿ ಉಳಿಯಲ್ಲಿಲ್ಲ. ಅಲ್ಲದೆ ಅವನ ಸಹೋದರಿ ಗಟ್ಟಿಯಾಗಿ ಅವನ ಕೈ ಹಿಡಿದಿದ್ದಳು. ಬಂಡಿ ಎಳೆಯಲು ಏನೂ ತ್ರಾಣ ಉಳಿದಿಲ್ಲವೆಂಬಂತೆ ಸತ್ತಂತಾಗಿ ಬಕ್ ಒದಿಯಲ್ಲಿ ಬಿದ್ದಿತ್ತು. ಮುಂದೆ ಕೆಲ ನಿಮಿಷಗಳ ನಂತರ ಬಂಡಿ ಹೊರಟಿತು.

ಬಕ್ ಅವರೆಲ್ಲ ಕ್ರಮಿಸುವುದನ್ನು ಕಣ್ತುಂಬ ನೋಡಿತು. ಎಲ್ಲ ಕುಂಟುತ್ತಿದ್ದವು, ಮರ್ಸಿಡಸ್ ಭಾರವಾದ ಬಂಡಿಯನ್ನೇರಿದ್ದಳು. ಹಾಲ್ ಮುಂದಿದ್ದ, ಚಾರ್ಲಸ್ ಹಿಂದ !

ಬಕ್ ಅವರನ್ನು ನಿರೀಕ್ಷಿಸುತ್ತಿರುವಾಗ ಥಾರ್ಟನ್ ಅದರ ಬಳಿ ಮೊಳಕಾಲೂರಿ ಕುಳಿತು ತನ್ನ ಬಿರುಸು ಕೈಗಳಿಂದ ಅದರ ಮುರಿದ ಎಲುವುಗಳನ್ನು ಸಂಗೂಳಿಸುತ್ತಿದ್ದ. ಎಲ್ಲದರ ಸಂಶೋಧನ ಮಾಡುವುದಾದಾಗ ಮೈ ಒರ ಜಿಬ್ಬೆ. ಭಯಂಕರ ಹಸಿವಾದದ್ದಷ್ಟೆ ತಿಳಿಯಿತು.

ಜಾರು ಬಂಡಿ ಮುಕ್ಕಾಲು ಮೈಲು ಕ್ರಮಿಸಿತ್ತು. ನಾಯಿ ಹಾಗೂ ಮನುಷ್ಯ ಅದು ಸಾಗುವದನ್ನು ಕಂಡರು ಹಿಮನಲದ ಬಂಟು. ಒಮ್ಮಿಂದೊಮ್ಮಲೆ ಬಂಡಿಯ ಹಿಂಭಾಗ ಕೊರಕಲಿನಲ್ಲಿ ಕುಸಿಯುವುದು ಕಂಡಿತು. ಹಾಲ್ ಜೋತು ಬಿದ್ದದ್ದ ಅದಕ್ಕ. ಮರ್ಸಿಡಸ್‌ಳ ಚೀತ್ಕಾರ ಸ್ಪಷ್ಟವಾಗಿ ಕೇಳಿತು. ಚಾರ್ಲಸ್ ಹಿಂದೆ ಸಂಯು ಓಡಲು ಹವಣಿಸಿದ. ಆದರೆ ಇಡೀ ದೊಡ್ಡ ಹಿಮರಾಶಿಯೇ ಕುಸಿದು ನಾಯಿಗಳೂ ಮನುಷ್ಯರೂ ಜಲ ಸಮಾಧಿ ಹೊಂದಿದರು.

ಜಾನ್ ಥಾರ್ಟನ್ ಹಾಗೂ ಬಕ್ ಒಬ್ಬರನ್ನೊಬ್ಬರು ಸಾಕೂತವಾಗಿ ನೋಡಿದರು.

"ದಪ್ಪ ನಾಯಿ ನೀನು" ಎಂದು ಥಾರ್ಟನ್ ಉದ್ಗಾರ ತೆಗದ.

ಬಕ್ ಅವನ ಕೈ ನೆಕ್ಕಿತು.

ಹಿಂದಿನ ಡಿಸಂಬರ ತಿಂಗಳಲ್ಲಿ ಥಾರ್ಟನ್ನನ್ನು ಅವನ ಸಂಗಡಿಗರು ಬಿಟ್ಟು ಹೋದಾಗ ಚಳಿ ವಿಶೇಷವಾಗಿತ್ತು. ನಾವೆ ತಯಾರಿಸಲು ಅವರು ಕಟ್ಟಿಗ ತರಲು ಡಾಸನ್ನಿಗೆ ಹೋಗಿದ್ದರು. ಬಕ್ಕನ ಬಿಡುಗಡೆಗಾಗಿ ಅವನು ಹೆಣಗಿದಾಗ ಇನ್ನೂ ಕುಂಟುತ್ತಲೇ ಇದ್ದ. ಹವೆಯಲ್ಲಿ ಈಗ ಕಾವು ಹುಟ್ಟಿದ್ದರಿಂದ ಅವನು ಕುಂಟುವದೂ ನಿಂತಿತ್ತು. ನದೀ ತೀರದಲ್ಲಿದ್ದ ಆ ವಸಂತ ಋತುವಿನ ಹರಿಯುವ ನೀರು, ಹಾಡುವ ಪಕ್ಷಿ ಬಕ್ ಕಣ್ತುಂಬ ನೋಡಿ ತನ್ನ ಹಿಂದಿನ ಶಕ್ತಿಯನ್ನು ಕ್ರಮೇಣ ಸಂಚಯಿಸುತ್ತ ನಡೆದಿತ್ತು.

ಸಾವಿರಾರು ಮೈಲು ಪ್ರವಾಸದ ನಂತರದ ವಿಶ್ರಾಂತಿ ಬಹಳ ಹಿತಕಾರಿ. ಬಕ್ಕನ ಗಾಯಗಳು ಮಾಯುತ್ತ ಬಂದಂತೆ ಸೋಮಾರಿತನವೂ ಅದರಲ್ಲಿ ಉಂಟಾಯಿತು. ನರಗಳು ಉಬ್ಬಿದವು. ಎಲವುಗಳನ್ನು ಮುಚ್ಚಲು ಮಾಂಸ ಬಂದಿತು. ಬಕ್, ಥಾರ್ಟನ್, ಸ್ಕೀಟ್, ನಿಗ್ ಎಲ್ಲರೂ ನಾವೆಯ ದಾರಿ ಕಾಯುತ್ತಿದ್ದರು. ಸ್ಕೀಟ್ ಆಯರಿಶ್ ನಾಯಿ; ಬಕ್ಕನ ಹೊಸ ಗೆಳೆಯ. ಅದಕ್ಕೆ ವೈದ್ಯಕಿ ವೃತ್ತಿಯ ಲಕ್ಷಣಗಳಿದ್ದವು. ಬಕ್ಕನ ಗಾಯಗಳನ್ನು ತೊಳೆದು ಸ್ವಚ್ಛಗೊಳಿಸುತ್ತಿತ್ತು. ನಿಗ್ ದೊಡ್ಡ ಕಪ್ಪು ನಾಯಿ. ಬೇಟೆಯೆಂದರೆ ಬಲು ಪ್ರೀತಿ.

ಒಂದು ಅಚ್ಚರಿಯ ಸಂಗತಿ; ಬಕ್‌ನ ದೃಷ್ಟಿಯಿಂದ ಹೇಳುವುದಾದರೆ ಇವಾವೂ ಅದರ ವಿಷಯಕ್ಕೆ ಅಸೂಯೆ ತೋರುತ್ತಿರಲಿಲ್ಲ. ಥಾರ್ಟನ್ನನಷ್ಟೆ ಇವುಗಳದೂ ಅದರ ಮೇಲ ಪ್ರೇಮ. ಬಕ್ಕನಲ್ಲಿ ಕಸುವು ಬರುತ್ತ ನಡೆದಂತೆ ಎಲ್ಲ ನಾಯಿಗಳೂ ನಾನಾ ಬಗೆಯ ಆಟಗಳನ್ನು ಆಡಹತ್ತಿದವು. ಥಾರ್ಟನ್ನನೂ ಅವುಗಳೊಡನ ಆಟವಾಡುವನು. ನೈಜ ಪ್ರೇಮ ಈಗ ಉದಿಸಿತು. ಸೂರ್ಯ ಚುಂಬಿತ ಸಾಂತಾಕ್ಲೇರಾ ಕೊಳ್ಳದಲ್ಲಿಯ ಮಿಲ್ಲರನ ಮಕ್ಕಳೊಡನೆ ಸಹ ಇಂತಹ ಪ್ರೇಮದ ಅನುಭವ ಉಂಟಾಗಿರಲಿಲ್ಲ. ನ್ಯಾಯಾಧೀಶನಾದರೂ ದೊಡ್ಡ ಮನಸ್ಸಿನವ. ಆದರೆ ಜಾನ್ ಥಾರ್ಟನ್ನನ ಪ್ರೇಮವೆಂದರೆ ಒಂದು ಬಗೆಯ

ಹೆಚ್ಚು. ಇವನೆ ಅದರ ಜೀವ ಉಳಿಸಿದ್ದ. ಇದಕ್ಕೂ ಹೆಚ್ಚಿನದೆಂದರೆ ಆದರ್ಶ ಒಡೆಯನಾಗಿದ್ದ.

ತನ್ನ ಬಿಡುಗಡೆಗಾಗಿ ಹೆಣಗಿ ಸಾಧಿಸಿದ ಒಡೆಯನನ್ನು ಬಕ್ ಬಹಳ ಕಾಲ ಅಗಲಿ ಇರುತ್ತಿರಲಿಲ್ಲ. ಎಲ್ಲಿ ಹೋದರೂ ಅವನ ಹಿಂದೆಯೆ. ಹಿಂದೆ ಉತ್ತರ ಪ್ರದೇಶದ ಪ್ರವಾಸದಲ್ಲಿ ಇಂಥ ಒಡೆಯ ದೊರೆತಿರಲಿಲ್ಲ ಅದಕ್ಕೆ. ಉಳಿದ ಫ್ರ್ಯಾಂಕೋಯಿಸ್,ಪೆರಾಲ್,,ಸ್ಕಾಚ್ ಮನುಷ್ಯನಂತೆ ಇವನೂ ಎಲ್ಲಿ ಕೈ ಬಿಟ್ಟು ಹೋಗುವನೋ ಎಂದು ಅದಕ್ಕೆ ಸಂಶಯ.

ತನ್ನ ವಯಸ್ಸಿಗಿಂತಲೂ ಹೆಚ್ಚಿನ ಅನುಭವ ಅದಕ್ಕೆ ಉಂಟಾಗಿತ್ತು ಭೂತ ವರ್ತಮಾನ ಅದರ ದೃಷ್ಟಿಯಲ್ಲಿ ಹೊಂದಿಕೊಂಡಿದ್ದವು. ಎದುರಿಗೆ ಅನಂತತೆ. ಈ ಮೂವರ ತಳುಕಿನಿಂದ, ಸಮುದ್ರದಲ್ಲಿಯ ತೆರೆಗಳಲ್ಲಿಯಂತೆ ಅದರ ಜೀವನದಲ್ಲಿ ತಾಳಲಯಬದ್ಧತೆಯುಂಟಾಗಿದ್ದವು. ಜಾನ್ ಥಾರ್ಟನ್ನನ ಬಳಿ ಅದು ಕೂಡುತ್ತಿತ್ತು. ಹತ್ತಿರ ಬೆಂಕಿ— ಕಾಯಿಸಿಕೊಳ್ಳಲು. ಹಿಂದೆ ಉಳಿದ ನಾಯಿ— ನೆರಳಿನಂತಿದ್ದವು.

ಇಂತಹ ಎಷ್ಟೋ ನೆರಳುಗಳು ಅದನ್ನು ಕಾಡಿಗೆ ಬಾ ಎಂದು ಕೈಮಾಡಿ ಕರೆಯುತ್ತಿದ್ದವು. ಅಡವಿಯಲ್ಲಿ ಹೋಗಲೆ ಎಂದು ಒಮ್ಮೊಮ್ಮೆ ಬಕ್ಕಗೆ ವಿಚಾರ ಬರುತ್ತಿತ್ತು. ಆದರೆ ಭೂದೇವಿಯ ಮೃದುವಕ್ಷಸ್ಥಲ, ಗಿಡದ ನೆರಳು, ಥಾರ್ಟನ್ನನ ಅಪ್ರತಿಮ ವಾತ್ಸಲ್ಯ ಎಲ್ಲ ಮಿಂಚಿ ಮತ್ತೆ ಮನಸ್ಸು ಹಿಂದೆಗೆಯುವದು.

ಸರ್ಕಲ್ ಸಿಟಿಯಲ್ಲಿ ಬಕ್‌ಗೆ ವಿಚಿತ್ರ ಅನುಭವ ಬಂದಿತು. ಬ್ಲ್ಯಾಕ್ ಬರ್ಟನ್ ಎಂಬ ಒಬ್ಬ ದುಷ್ಟನು ಉಪಹಾರ ಗೃಹದಲ್ಲಿ ಒಬ್ಬನೊಡನೆ ಜಗಳ ತೆಗೆದಿದ್ದ. ಥಾರ್ಟನ್ ಬಿಡಿಸಲು ನಡುವೆ ಹೋದ. ಬಕ್ ಆಗ ಮೂಲೆ

ಹಿಡಿದು ಕುಳಿತಿತ್ತು. ತನ್ನ ಪಂಜದ ಮೇಲೆ ತಲೆ ಇರಿಸಿತ್ತು. ಒಡೆಯನ ಹಾವಭಾವವನ್ನು ನಿರುಕಿಸುತ್ತಿತ್ತು. ಅನಿರೀಕ್ಷಿತವಾಗಿ ಬರ್ಟನ್ ಹೊಡೆದ. ಥಾರ್ಟನ್ನನ ಝೋಲಿ ಹೋಯಿತು. ಉಪಹಾರ ಗೃಹದ ಸಲಾಖಿ ಹಿಡಿದು ನಿಂತು ಕೊಂಡ.

ಬಕ್ ನೆಲ ಬಿಟ್ಟು ಟಣ್ಣನೆ ಬರ್ಟನ್ನನ ಗಂಟಲಿಗೆ ಹಾರಿತು. ಮುಂದೆ ಕೈಚಾಚಿ ಪ್ರಾಣ ಉಳಿಸಿಕೊಳ್ಳಬೇಕಾದರೆ ಸಾಕು ಬೇಕಾಯಿತು. ಅವನು ನೆಲದ ಮೇಲೆ ಬಿದ್ದ. ಬಕ್ ಅವನ ಮೈಮೇಲೆ!

ಎಲ್ಡೊರ್ಯಾಡೊ ಸಲೂನಿನಲ್ಲಿ ಒಮ್ಮೆ ಮಾತಿಗೆ ಕುಳಿತಾಗ ನಾಯಿಗಳ ಮಾತು ಹೊರಟಿತು; ತಮ್ಮ ತಮ್ಮ ನಾಯಿಗಳ ತಾರೀಫು ನಡೆಯಿತು. ಥಾರ್ಟನ್ನನೂ ತನ್ನ ಬಕ್ಕನ ಬಗ್ಗೆ ಮಾತಾಡಿದ. ಅರ್ಧ ತಾಸಿನ ಚರ್ಚೆಯಾದ ನಂತರ ಒಬ್ಬ, ತನ್ನ ನಾಯಿ ಐದು ನೂರು ಪೌಂಡು ತೂಕದ ಕಲ್ಲು ತುಂಬಿದ ನಾವನ್ನೆಳೆಯಬಲ್ಲುದೆಂದನು. ಎರಡನೆಯವ ಆರುನೂರು ತೂಕದ್ದೆಂದ. ಮೂರನೆಯವ ಏಳುನೂರರದೆಂದ. "ನಿಮ್ಮದೇನು ಡೌಲು! ನಮ್ಮ ಬಕ್ ಸಾವಿರ ಪೌಂಡು ಎಳೆಯುವದೆಂ"ದ ಥಾರ್ಟನ್. "ಬರಿ ಎಳೆಯುವದೋ? ಅಥವಾ ಮುಂದೆ ನೂರು ಯಾರ್ಡು ಹಾಗೆ ಹೋಗುವದೋ" — ಎಂದು ಮ್ಯಾಥೂಸನ್ ಕೇಳಿದ.

ಶಾಂತ ಚಿತ್ತದಿಂದ ಥಾರ್ಟನ್ ನುಡಿದ: "ನೂರು ಯಾರ್ಡು ಎಳೆಯುವದು ಬಕ್." "ನನ್ನ ಹತ್ತಿರ ಸಾವಿರ ಡಾಲರಿನ ಚೀಲವಿದೆ. "ನಿನ್ನ ಮಾತು ಸುಳ್ಳಾದರೆ, ಇಕೋ ಕೊಟ್ಟುಬಿಡುವೆ." ಎಂದು ಜಂಭದಿಂದ ಸಲಾಖಿಯ ಬಳಿ ಚಲ್ಲಿದ ಮ್ಯಾಥ್ಯೂಸನ್.

ಯಾರಿಂದಲೂ ಚಕಾರ ಶಬ್ದ ಹೊರಡಲಿಲ್ಲ. ಎಲ್ಲರೂ 'ಥಾರ್ಟನ್ನನದು ಬರಿ ಬಡಾಯಿ' ಎಂದರು. ಥಾರ್ಟನ್ನನ ಬಾಯಲ್ಲಿ ನೀರೂರಿತು. 'ಆದರೂ ಬಕ್ ಇಂಥ ಸಾಹಸ ಮಾಡೀತೇ'— ಎಂದು ತನ್ನೊಳಗೇ ಪ್ರಶ್ನೆ ಹಾಕಿಕೊಂಡ. ಇಂಥ ಒಜ್ಜೆ ಎಳೆದೀತೆಂದು ನಿರ್ಧರಿಸಿದ.

"ನನ್ನ ಬಂಡಿಯಲ್ಲಿ ಸಾವಿರ ಪೌಂಡು ತೂಕದ ಚೀಲಗಳಿವೆ. ನಿಮ್ಮ ಬಕ್ ಎಳೆಯಲಿ ನೋಡುವಾ" ಎಂದು ಮ್ಯಾಥ್ಯೂಸನ್ ಮತ್ತೆ ಆಹ್ವಾನಿಸಿದ.

"ನನಗೊಂದು ಸಾವಿರ ಸಾಲ ಕೊಡುವಿಯಾ? ಎಂದು ಥಾರ್ಟನ್ ತನ್ನ ಗೆಳೆಯನೊಬ್ಬನಿಗೆ ಕಿವಿ ಮಾತು ಕೇಳಿದ.

'ಹೋ' ಎಂದು ಓಬ್ರಾಯಿನ್ ಸಾವಿರದ ಚೀಲ ಮ್ಯಾಥ್ಯೂಸನ್ನಿನ ಚೀಲದ ಬಳಿಯಿಟ್ಟ.

ಈ ಸತ್ವಪರೀಕ್ಷೆ ಕಣ್ಣಾರೆ ನೋಡಬೇಕೆಂದು ಎಲ್ಡೊರ್ಯಾಡೊ ನಗರಕ್ಕೆ ನಗರವೇ ಅಲ್ಲಿಗೆ ಬಂತು.

"ಹಿಮದೊಳಗಿಂದ ಎಳೆದರೆ ಇನ್ನೊಂದು ಸಾವಿರ ತೆಗೆದುಕೋ" ಎಂದು ಮ್ಯಾಥ್ಯೂಸನ್ ಉತ್ಸಾಹಭರಿತನಾಗಿ ನುಡಿದ.

ಹತ್ತು ನಾಯಿಗಳನ್ನು ಬಿಚ್ಚಿದರು ಬಂಡಿಗೆ ಥಾರ್ಟನ್ನನ ಜೀನನ್ನೇ ಉಪಯೋಗಿಸಿದರು. ಜಾನ್ ಥಾರ್ಟನ್ನನಿಗಾಗಿ ತನಗೆ ಸಾಧ್ಯವಾದುದನ್ನೆಲ್ಲ ಮಾಡಲೇಬೇಕೆಂದು ಬಕ್ ನಿರ್ಧರಿಸಿತು. ಅದರ ರಾಜಠೀವಿಗಾಗಿ ಜನ ತಮ್ಮೊಳಗೆ ಮಾತಾಡಿಕೊಳ್ಳಲಾರಂಭಿಸಿದರು. ಮೈಯ್ಯಲ್ಲಿ ಎಷ್ಟೂ ಬೊಜ್ಜು ಇಲ್ಲ. ಒಳ್ಳೆ ಆರೋಗ್ಯದ ಸ್ಥಿತಿ ಬಕ್ಕನಿಗೆ. ನೂರಾ ಐವತ್ತುಪೌಂಡು ತೂಕ. ಸ್ನಾಯುಗಳು ಅಷ್ಟೇ ಬಲಶಾಲಿ! ಕಬ್ಬಿಣದಂತೆ ಬಿರುಸು!

ಸ್ಕೂಕಂ ಬೆಂಚ್ ಅರಸು ನುಡಿದ: "ಈ ಪ್ರಯೋಗ ನಡೆಯುವ ಮೊದಲೇ ಬಕ್‌ನನ್ನು ನನಗೆ ಎಂಟು ನೂರು ಡಾಲರಿಗೆ ಮಾರಿಬಿಡಿರಿ."

ಥಾರ್ಟನ್ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಅದರ ಬಳಿ ನಿಂತ.

"ಯೋಗ್ಯ ನಿರ್ಣಯವಾಗಬೇಕಾದರೆ ನೀನು ದೂರ ಸರಿದು ನಿಲ್ಲು" ಎಂದು ಥಾರ್ಟನ್ನನ್ನುದ್ದೇಶಿಸಿ ಮ್ಯಾಥ್ಯೂಸನ್ ನುಡಿದ.

ಜನಸಂಮರ್ದದಲ್ಲಿ ನೀರವ. ಬಕ್ ಭವ್ಯ

ಪ್ರಾಣಿ ಎಂದು ಎಲ್ಲರೂ ಒಕ್ಕೊರಲಿನಿಂದ ಅನ್ನುವವರೇ. ಆದರೇನು? ಸಾವಿರ ಪೌಂಡಿನ ತೂಕ ಎಳೆಯಲಾರದೆಂದು ಮಿಡುಕಿದವರು ಬಹಳ!

ಥಾರ್ಟನ್ ಬಕ್‌ನ ಬಳಿಯಲ್ಲಿ ಮೊಳಕಾಲೂರಿ ಕುಳಿತ. ಅದರ ತಲೆಯನ್ನು ಕೈಯಲ್ಲಿ ತೆಗೆದುಕೊಂಡ. ಗಲ್ಲಕ್ಕೆ ಗಲ್ಲ ಹಚ್ಚಿದ. ವಿನೋದಕ್ಕಾಗಿ ಅದನ್ನು ಘಲ್ಲಿಸಲಿಲ್ಲ. ಅಚ್ಚೆಯ ಬೈಗಳನ್ನೂ ಬೈಯ್ಯಲಿಲ್ಲ. ಆದರೆ ಕಿವಿಮಾತು ಉಸುರಿದ—"ನೀನು ನನ್ನನ್ನು ಪ್ರೀತಿಸುತ್ತೀ ಬಕ್! ನೋಡಿಕೋ ನೋಡಿಕೊ" ಅದುಮಿಟ್ಟ ಆತುರತೆಯಲ್ಲಿ ಕರುಣೆ ವ್ಯಕ್ತಗೊಂಡಿತು.

ಜನ ಕುತೂಹಲದಿಂದ ನಿರೀಕ್ಷಿಸುತ್ತಿತ್ತು. ಈ ವ್ಯವಹಾರ ರಹಸ್ಯಮಯವಾಗುತ್ತ ನಡೆಯಿತು. ಇದೊಂದು ಜಾದೂ ಎನಿಸಿರಬೇಕು. ಥಾರ್ಟನ್ ಏಳುವಾಗ ಬಕ್ ಅವನ ಕೈಯನ್ನು ಪ್ರೀತಿಯಿಂದ ಹಲ್ಲುಗಳಲ್ಲಿ ಹಿಡಿಯಿತು. ತೀವ್ರ ಬಿಡಲಿಲ್ಲ. ಅದು ಪ್ರೀತಿಯ ಸಂಕೇತ. ಥಾರ್ಟನ್ ಹಿಂದಕ್ಕೆ ಸರಿದ. ದೂರ ಸರಿದ.

"ಬಕ್ ಈಗ!......" ಅವನೆಂದ.

ಬಕ್ ಹೆಜ್ಜೆಯ ಲೆಕ್ಕ ನೋಡಿತು. ಅಳವಿನ ಜ್ಞಾನ ಅದಕ್ಕಿತ್ತು.

ರಾವುರಾವಾದ ಆ ಸ್ತಬ್ಧ ವಾತಾವರಣದಲ್ಲಿ ಥಾರ್ಟನ್ನನ ಧ್ವನಿ 'ಗೀ' ಎಂದು ಕಂಚಿನಂತೆ ಹೊರಟಿತು.

ಬಕ್ ಬಲಕ್ಕೆ ತಿರುಗಿ ಮುನ್ನುಗ್ಗಿ ಚೀಲಗಳಿಗೆ 'ಧಡಕಿ' ಕೊಟ್ಟಿತು. ಭಾರ ಹೊಯ್ದಾಡಿತು.

"ಹಾ!" ಎಂದು ಥಾರ್ಟನ್ ಆಜ್ಞೆಗೈದ.

ಈಗ ಬಕ್ ಹಿಂದಿನಂತೆಯೆ ಎಡಕ್ಕೆ ತನ್ನ ಪ್ರಯೋಗ ನಡೆಸಿತು. ಕರ್‌ಕರ್ ಎಂದು ಬಂಡಿಯ ಕೆಳಗೆ ಸಪ್ಪಳವಾಯಿತು. ಬಂಡಿ ಎಷ್ಟೋ ಇಂಚು ಬದಿಗೆ ಸರಿಯಿತು. ಕಿತ್ತಿ ಮುಂದು ಬಂದಿತು. ಇದನ್ನೆಲ್ಲ ಕಣ್ಣಾರೆ ಕಂಡ ಜನ ಗೊಂಬೆಯಂತೆ ಪ್ರಜ್ಞಾಶೂನ್ಯವಾಗಿ ಕುಳಿತಿತ್ತು.

"ಮಶ್ ಬಕ್"—ಥಾರ್ಟನನ ಆಜ್ಞೆ ರಿವಾಲ್ವರಿನ ಗುಂಡಿನ ಧ್ವನಿಯಂತೆ! ಬಕ್ ಮುಂದಕ್ಕೆ ಝೋಲಿ ಹೊಡೆದು ಕಾಲು ಸರಿಪಡಿಸಿಕೊಂಡಿತು. ಇಡೀ ದೇಹದ ಶಕ್ತಿ ಕೇಂದ್ರೀಕೃತವಾಯ್ತು. ರೇಷಿಮೆಯ ತುಪ್ಪಳದ ಕೆಳಗಿನ ಸ್ನಾಯುಗಳು ಮುದುಡಿಗಟ್ಟಿ ಚುರುಕಾದವು. ಅದರ ಎದೆ ನೆಲಕ್ಕೆ ಹತ್ತಿತು. ತಲೆ ಕೆಳಗೆ ಮೇಲೆ ಆಗುತ್ತಿತ್ತು. ಕಾಲು ಆವೇಶದಲ್ಲಿ ಹಾರಾಡುತ್ತಿದ್ದವು. ಬಂಡಿ ಹೊಯ್ದಾಡಿ ಅರ್ಧ ತಳಕಿತ್ತಿತು. ಅದರ ಒಂದು ಕಾಲು ಜಾರಿದಾಗ ಒಬ್ಬ ಅಯ್ಯೋ ಎಂದು ಚೀರಿದ. ಒಂದರಿಂದೊಂದರಂತೆ ಧಡಕಿಗೆ ಸಿಕ್ಕು ಬಂಡಿ ಹೊರಟಿತು. ಅರ್ಧ ಇಂಚು, ಒಂದು ಇಂಚು, ಎರಡುಇಂಚು ಮುಂದೆ ಕ್ರಮೇಣ ಹೊಯ್ದಾಟವಿಲ್ಲದೆ ಸಾಗಿತು.

ಜನರು ಉಸಿರು ಬಿಗಿಹಿಡಿದು ಮತ್ತೆ ಉಸಿರಾಡಿಸತೊಡಗಿದರು. ಹುರುಪು ಹುಟ್ಟಿಸುವ ಮಾತನ್ನಾಡುತ್ತ ಥಾರ್ಟನ್ ನಾಯಿಯ ಹಿಂದೆಯೇ ಇದ್ದ. ನಿಶ್ಚಿತ ಅಂತರ ದಾಟಿದ ಮೇಲೆ ಕೂಡಿದ ಮಂದಿ 'ಹೆಪೊ' ಎಂದು ಕೇಕೆ ಹಾಕಹತ್ತಿದರು. ಪ್ರತಿಯೊಬ್ಬನೂ—ಮ್ಯಾಥ್ಯೂಸನ್ ಸಹ—ಹರ್ಷಾವಿಷ್ಟನಾಗಿದ್ದ. ಟೊಪ್ಪಿಗೆಗಳು ಗಾಳಿಯಲ್ಲಿ ತೂರಾಡಲ್ಪಟ್ಟವು. ಜನರು ಕೈ ಕುಲುಕಿದರು-ಯಾರೊಡನೆ ಎಂಬ ಪ್ರಶ್ನೆಯೇ ಏಳಲಿಲ್ಲ. ಎಂತಹ ಉನ್ಮಾದ.

ಆದರೆ ಥಾರ್ಟನ್ ಬಕ್ಕನ ಸನ್ನಿಧಿ ಬಿಡಲಿಲ್ಲ. ಕಾಲ ಬಳಿ ಕುಳಿತು ತಿಕ್ಕುತಿದ್ದ. ಅಚ್ಚೆಯಿಂದ ಬಯ್ದಾಡಿದ.

ಸ್ಕೂಕಂ ಬೆಂಚ್ ಅರಸು ನುಡಿದ: "ಸಾವಿರ-ಹನ್ನೆರಡು ನೂರು ಕೊಡುವೆ ಅದಕ್ಕಾಗಿ. ಒಪ್ಪಿಗೆಯೆ ?"

ಥಾರ್ಟನ್ ಮೇಲಕ್ಕೆದ್ದ. ಕಣ್ಣು ಒದ್ದೆಯಾಗಿದ್ದವು. ಹಾಗೆ ಇಳಿಯುತ್ತ ಕಂಬನಿ ಗಲ್ಲಕ್ಕೆ ಬಂದವು. "ಅದರ ವಿಷಯ ಎತ್ತಬೇಡಿರಿ" ಎಂದು ನುಡಿದ ಥಾರ್ಟನ್.

ಬಕ್ ಥಾರ್ಟನ್ನನ ಕೈಯನ್ನು ತನ್ನ ಹಲ್ಲಿನಲ್ಲಿ ಹಿಡಿಯಿತು. ಥಾರ್ಟನ್ ಅದನ್ನು ಅಲುಗಾಡಿ

ಸಿದ. ನಿರೀಕ್ಷಕರೂ ಆತ್ಮೀಯತೆಯಿಂದ ಹಿಂದಕ್ಕೆ ಸರಿದರು. ಇಬ್ಬರ ನಡುವೆ ಬೇಲಿಲ್ಲ.

ಐದು ನಿಮಿಷಗಳಲ್ಲಿ ಬಕ್ ಜಾನನಿಗಾಗಿ ಹದಿನಾರು ನೂರು ಡಾಲರ್ ಗಳಿಸಿಕೊಟ್ಟಾಗ ಅವನ ಎಷ್ಟೋ ಸಾಲಗಳು ಹರಿದವು. ಪೂರ್ವದಲ್ಲಿಯ ಕಣಿಗಳಿಗೆ ಹೋಗಲು ಅನುವಾಯಿತು. ಅಸಂಖ್ಯಾತ ಜನರು ಇದಕ್ಕಾಗಿ ಹಂಬಲಿಸಿದ್ದರು. ಈ ಭಾಗ್ಯ ಕೆಲವರದೇ ಸೊತ್ತಾಗಿತ್ತು. ಈ ಸುವರ್ಣ ಶೋಧಕ್ಕಾಗಿ ಹೊರಟ ಹಲವರಂತೂ ದುರ್ದೈವದಿಂದ ಮರಳಲೇ ಇಲ್ಲ. ಸಿಗದೆ ಇದ್ದ ಕಣಿಯ ವಿಷಯಕ್ಕೆ ರಹಸ್ಯವೇ ಹೆಚ್ಚುತ್ತಿತ್ತು.

ಥಾರ್ಟನ್ ನಿಸರ್ಗ ಹಾಗೂ ಮನುಷ್ಯನ ಮಾತನ್ನೆ ಎತ್ತಲಿಲ್ಲ. ಕಾಡು ಎಂದರೆ ಅವನಿಗೇನೂ ಹೆದರಿಕೆ ಅನಿಸುತ್ತಿರಲಿಲ್ಲ. ತುಸು ಆಹಾರ, ಒಂದು ರಿವಾಲ್ವರ ಸಾಕು ಇವನಿಗೆ. ಭಾರತೀಯರ ಧರ್ತಿಯಲ್ಲಿ ಅವನ ಜೀವನದಲ್ಲಿ ರಭಸಕ್ಕೆ ಎಡೆ ಇರಲಿಲ್ಲ. ದಿನದ ಆಹಾರವನ್ನು ನಿರಾಯಾಸವಾಗಿ ಪ್ರವಾಸದಲ್ಲಿಯೆ ದೊರಕಿಸುತ್ತಿದ್ದ. ಅದೇ ಭಾರತೀಯನಂತೆ ಮತ್ತೆ ಅದು ದೊರೆಯದಿದ್ದರೆ ಹಾಗೇ ಅಡವಿಯಲ್ಲಿ ಸಾಗುತ್ತಿದ್ದ.

ತಿಂಗಳುಗಳು ಬಂದವು; ಹೋದವು. ಮಧ್ಯರಾತ್ರಿಯ ಸೂರ್ಯನ ಛಾಯೆಯಲ್ಲಿ ಕಟಕಟ ನಡುಗಿದರು. ಕೊಳ್ಳ, ಘಟ್ಟ, ಹಿಮ ನದಿಗಳನ್ನು ದಾಟಿ ಹೂ ಹಣ್ಣು ಕಾಯಿಗಳನ್ನು ಕೂಡಿಸುತ್ತ ನಡೆದರು. ಮಾರ್ಗದಲ್ಲಿ ವಿಚಿತ್ರ ಸರೋವರ ಪ್ರದೇಶ ಹತ್ತಿತು. ಅಲ್ಲಿ ಕುಳಿರ್ಗಾಳಿ, ಹಿಮ, ಅಲೆಗಳ ಬಡಿತ ಏಕಾಂತ ತೀರಗಳ ಹೊರತಾಗಿ ಏನೂ ಇರಲಿಲ್ಲ. ಮನುಷ್ಯಜೀವನದ ಕುರುಹಿನ ಸುಳಿವೇ ಹತ್ತಲಿಲ್ಲ.

ಮತ್ತೊಂದು ಚಳಿಗಾಲ ಅವರು ಮೊದಲು ಕ್ರಮಿಸಿದ ಹೆಜ್ಜೆಯಲ್ಲಿ ನಡೆದರು. ಹಳೆಯ ಸೀಳು ದಾರಿಯವು. ಮುಗಿಯುವದೆಲ್ಲಿ, ಪ್ರಾರಂಭವೆಲ್ಲಿ— ಹೊಳೆಯುತ್ತಿರಲಿಲ್ಲ. ಈ ದಾರಿಗಳಾದರೂ ನಿರ್ಮಿತವಾದುವೇಕೆ, ಹೇಗೆ– ಎಂಬುದೂ ಗೂಢವೇ. ಬೇಟೆಯ ಪ್ರದೇಶದಲ್ಲಿ ಥಾರ್ಟನ್ನನಿಗೆ ಒಂದು ತುಬಾಕಿ ಸಿಕ್ಕಿತು. ಯಾರೋ ಮುಂದೆ ಕ್ರಮಿಸುವಾಗ ಮರೆತಿರಬೇಕು.

ಇದೀಗ ಇನ್ನೊಂದು ವಸಂತ ಋತು. ತಮ್ಮ ಅಲೆದಾಟದ ಕೊನೆಗೊಮ್ಮೆ ಒಂದು ಕೊಳ್ಳಕ್ಕೆ ಬಂದರು ಸಂಶೋಧಕರು. ಹಳದಿ ಬೆಣ್ಣೆಯಂತಹ ನೆಲವದು. ಮುಂದೆ ಅವರು ಹೋಗಲಿಲ್ಲ. ಅಲ್ಲಿಯ ಉಸುಕನ್ನೆ ಸ್ವಚ್ಛಮಾಡಿದರು. ಬಂಗಾರವನ್ನು ತೊಗಲಿನ ಚೀಲದಲ್ಲಿ ತುಂಬಿದರು— ಕಟ್ಟಿಗೆಯ ಪುಡಿಯಂತೆ. ರಾಕ್ಷಸರಂತೆ ದಾರಿ ತುಳಿದರು. ಕನಸು ನನಸಾಯಿತು. ಬಂಗಾರ ರಾಶಿಯಾಗಿ ಸಿಕ್ಕಿತು.

ಥಾರ್ಟನ್ನನು ಕೊಂದ ಪ್ರಾಣಿಗಳನ್ನು ಹೊತ್ತುಕೊಂಡು ಹೋಗುವುದು ನಾಯಿಗಳ ಕೆಲಸವೀಗ. ಬಕ್ ಬೆಂಕಿಯ ಬಳಿ ಬಹುಕಾಲ ಕೂಡುವದು— ವಿಚಾರಮಗ್ನವಾಗಿ. ಕಿರುಗಾಲಿನ ಕೂದಲಿನ ಮನುಷ್ಯ ಒಮ್ಮೊಮ್ಮೆ ಅದರ ಮನೋಭಿತ್ತಿಯಲ್ಲಿ ಮೂಡಿ ಹೋಗುವನು. ಈಗ ಕೆಲಸವೇ ಇಲ್ಲದ್ದರಿಂದ ಬಕ್ ಬೆಂಕಿಯನ್ನು ನಿಟ್ಟಿಸುತ್ತ ಕೂಡುತ್ತಿತ್ತು ಯಾವುದೋ ಅಜ್ಞಾತಲೋಕದಲ್ಲಿ ಅದರ ಸಂಚಾರ!

...ಕೂದಲಿನ ಮನುಷ್ಯನ ಹಿಂದೆಯೇ ಬಕ್. ಈರ್ವರೂ ಮೆಲ್ಲಗೆ ಅಡವಿಯಲ್ಲಿ ಬೆಕ್ಕಿನಂತೆ ಓಡುತ್ತಿದ್ದರು ಬಕ್ಕನಷ್ಟೆ ಅವನ ಇಂದ್ರಿಯಗಳೂ ಚುರುಕು. ಗಿಡದಿಂದ ಗಿಡಕ್ಕೆ ಅವನು ಹಾರುತ್ತಿದ್ದ. ಕೈ ಬಿಟ್ಟು ಮತ್ತೆ ಟೊಂಗೆ ಹಿಡಿಯುತ್ತಿದ್ದ.

ಈ ಕೂದಲಿನ ಮನುಷ್ಯನ ಸಖ್ಯದಂತೆ ಕಾಡಿನ ಕರೆಯೂ ಬಕ್ಕನ ದೃಷ್ಟಿಯಲ್ಲಿ ಮಹತ್ವದ್ದಾಗಿತ್ತು. ಅದರ ಮನಸ್ಸಿನಲ್ಲಿ ಅಶಾಂತತೆ— ಉಂಟಾಗುತ್ತಿತ್ತು. ಈ ಕಾಡಿನ ಕರೆ ನಿಜವೋ ಎಂಬಂತೆ ಒಂದೊಂದು ದಿಶೆಯಲ್ಲಿ ಅದು ಕಾಡಿನಲ್ಲಿ ಬೊಗಳುತ್ತ ಹೊರಡುತ್ತಿತ್ತು. ಗಂಧವತೀ ಪೃಥಿವಿಗೆ ಮುಗ್ಧವಾಗಿ ಹುಲ್ಲುಗಾವಲದಲ್ಲಿ, ಗಿಡಗಂಟಿಗಳಲ್ಲಿ ಅದು ಮೂಸಿ ನೋಡುತ್ತಲೇ ಇರುತ್ತಿತ್ತು. ಕಾಡಿನ ಸಕಲ ವ್ಯಾಪಾರವಲ್ಲಿಯೂ

ಆದು ತಲ್ಲೀನವಾಗಿ ಆ ಕರೆಯ ರಹಸ್ಯ ತಿಳಿಯಲು ತವಕಿಸುತ್ತಿತ್ತು.

ಅದಕ್ಕೆ ಲೌಕಿಕ ಪ್ರೇರಣೆ ಉಂಟಾಗುತ್ತಿತ್ತು. ಶಿಬಿರದಲ್ಲಿ ಬೇಜಾರದಿಂದ ತೂಕಡಿಸುತ್ತಿರುವಾಗ ಒಮ್ಮೆಲೆ ತಲೆ ಎತ್ತುತ್ತಿತ್ತು. ಕಿವಿ ನಿಮಿರುತ್ತಿದ್ದವು. ಏನೋ ಕೇಳಿದಂತೆ ಹಾರಿಬಿದ್ದು ಸರ್ರನೆ ಓಡುತ್ತಿತ್ತು. ಎಷ್ಟೋ ತಾಸು ಅದರ ಸುದ್ದಿಯಿಲ್ಲ. ಅದು ನದಿಯ ಪ್ರವಾಹ ನಿರೀಕ್ಷಿಸುತ್ತಿತ್ತು. ಕದ್ದು ಕದ್ದು ಪಕ್ಷಿ ಜೀವನವನ್ನು ನಿರುಕಿಸುತ್ತಿತ್ತು. ದಿವಸದ ಕೆಲವೊಂದು ಭಾಗ ಅದು ಗಿಡದಡಿಯಲ್ಲಿ ಕುಳಿತು—ತಿತ್ತಿರಿ ಪಕ್ಷಿಗಳ ಆಟ, ಹರಿದಾಟ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿತ್ತು. ಬೇಸಗೆಯ ಮಧ್ಯರಾತ್ರಿಯ ಹೂಬಿಸಿಲಲ್ಲಿ ಅಲೆದಾಡುವುದೆಂದರೆ ಅದಕ್ಕೆ ವಿಶೇಷ ಪ್ರೀತಿ. ಕಾಡಿನ ಸಂಜ್ಞೆ, ಧ್ವನಿಗಳನ್ನು ಪುಸ್ತಕದಿಂದ ಓದಿ ತಿಳಿದುಕೊಂಡಂತೆ ಅದು ಅಭ್ಯಸಿಸುತ್ತಿತ್ತು.

ಒಂದು ಇರುಳು ಅದು ಎಚ್ಚತ್ತು ಅತಿ ಉತ್ಸಾಹಭರಿತವಾಗಿ ಆತುರತೆಯಲ್ಲಿ ಕಣ್ಣರಳಿಸಿ, ಮೂಗಿನ ಹೊರಳೆ ಉಬ್ಬಿಸಿ ನಡುಗುತ್ತ ವಾಸನೆ ನೋಡುತ್ತ ಹೊರಟಿತು. ಕಾಡಿನ ಕರೆ ಬಂದಿರಬೇಕು! ಹಸ್ಕಿ ನಾಯಿಗಳ ಧ್ವನಿಯಲ್ಲವದು. ಅನಂತ ಕಾಲದವರೆಗಿನ ಧ್ವನಿ. ಬಕ್‌ಗೆ ಅದರ ಪರಿಚಯ ಅಸ್ಪಷ್ಟವಾಯಿತು. ಏನೂ ಸದ್ದು ಮಾಡದೆ ಶಿಬಿರದಿಂದ ಹಾರಿತು. ಒಂದು ಬಯಲು ಪ್ರದೇಶಕ್ಕೆ ತಲುಪಿತು—ಧ್ವನಿಯನ್ನಾಲಿಸುತ್ತ. ದೂರದಲ್ಲಿ ತೋಳ ಕಣ್ಣಿಗೆ ಬಿತ್ತು.

ಅದೇನು ಒದರಿದ್ದಿಲ್ಲ. ಆದರೆ ಬಕ್ ಗುರುತಿಸಿತು. ಶರೀರವನ್ನೆಲ್ಲ ಆಕುಂಚಿಸಿ ಅಂಬೆಗಾಲಿಡುತ್ತ ಬಾಲವನ್ನೆತ್ತಿ ಮುಂದುವರಿಯಿತು. ಪ್ರತಿಕ್ಷಣ ಹೆದರಿಕೆಯದು. ಆದರೆ ತೋಳ ಇದನ್ನು ನೋಡಿ ಪಲಾಯನ ಹೇಳಿತು. ಬಕ್ ಅದರ ಮೇಲೆ ಏರಿ ಹೋಗಲಿಲ್ಲ. ಗೆಳೆತನದಿಂದ ಬಳಿಗೆ ಹೋಯಿತು. ತೋಳಕ್ಕೆ ಸಂಶಯ. ಕೊನೆಗೆ ತನಗೇನು ಅಪಾಯವಿಲ್ಲವೆಂದು ಮನವರಿಕೆಯಾದಾಗ ಬಕ್‌ನನ್ನು ಮೂಸಿ ನೋಡಿತು. ಗೆಳೆತನ ಬೆಳಸಿತು. ಅಡವಿಯಲ್ಲಿಯ ಕಾಡು ಪ್ರಾಣಿಗಳೆ ಆಟದಂತೆ ಈರ್ವರ ಲೀಲೆ ಸಾಗಿತು. ಹೂಬಿಸಿಲಿನಲ್ಲಿ, ಗಿಡದ ಹೊದರಿನಲ್ಲಿ ಪರ್ವತ ಶ್ರೇಣಿಗಳ ಮೇಲೆ ಚಳಿಯಲ್ಲಿ ಸಹ ಎರಡೂ ಪ್ರಾಣಿಗಳು ಸರಿಕರಂತೆ ತಿರುಗಾಡಿದವು.

ಅವೆರಡೂ ನೀರು ಕುಡಿಯಲು ಝರಿಗೆ ಹೋದವು. ಕುಡಿಯುವಾಗ ಫಕ್ಕನೆ ಬಕ್‌ನಿಗೆ ಥಾರ್ಟನ್ನನ ನೆನಪು ಮಿಂಚಿತು. ಬಕ್ ಹಿಂತಿರುಗಿ, ಬಂದ ದಾರಿ ಹಿಡಿಯಿತು. ಸುಮಾರು ಅರ್ಧತಾಸು ಅದರ ಕಾಡಿನ ಗೆಳೆಯ ಹಿಂಬಾಲಿಸಿತು.

ಬಕ್ ಬಂದಾಗ ಥಾರ್ಟನ್ನನ ಊಟ ನಡೆದಿತ್ತು. ಬಂದದ್ದೇ ತಡ, ವಾತ್ಸಲ್ಯದಿಂದ ಟಣ್ಣನೆ ಅವನೆಡೆಗೆ ಜಿಗಿದು ಊಟದ ಸಾಮಗ್ರಿಗಳನ್ನು ಅಸ್ತವ್ಯಸ್ತಗೊಳಿಸಿತು. ಥಾರ್ಟನ್ ಅದರ ಮೈದಡವಿದ.

ಮುಂದೆ ಎರಡು ದಿನ ಬಕ್ ಶಿಬಿರದಿಂದ ಹೆಜ್ಜೆ ಕೀಳಲಿಲ್ಲ. ಥಾರ್ಟನ್ನನನ್ನೂ ಕಣ್ಮರೆಯಾಗಗೊಡಲಿಲ್ಲ. ಮತ್ತೆ ಎರಡು ದಿನದ ನಂತರ ಕಾಡಿನ ಕರೆ ಪ್ರಬಲವಾಯಿತು. ಮೊದಲಿನಂತೆ ಬಕ್‌ನಿಗೆ ಅಶಾಂತತೆ ತಲೆದೋರಿತು. ತನ್ನ ಕಾಡಿನ ಹೊಸ ಗೆಳೆಯನ ನೆನೆಪಾಯಿತು. ಕುಲು ಕುಲು ನಗುವ ಕಾಡಿನ ವೈಶಾಲ್ಯ ಕೈಮಾಡಿ ಕರೆಯಿತು.

ಶಿಬಿರದಿಂದ ಅದು ಹೊರಗೆ ಗಾಂಭೀರ್ಯದಿಂದ ಹೊರಟದ್ದನ್ನು ಅವರು ನೋಡಿದರು. ಆದರೆ ಕಾಡಿನ ಅಂತರಾಳದಲ್ಲಿ ಅದು ಅಡಿ ಇಟ್ಟೊಡನೆ ಎಂತಹ ಅದ್ವಿತೀಯ ಮಾನಸಿಕ ಪರಿವರ್ತನೆ ಅದರಲ್ಲಾಯಿತೆಂಬುದು ಅವರಿಗೆ ಪಾಪ, ಹೊಳೆಯುವದೆಂತು?

ವರುಷ ಮುಗಿಯುತ್ತ ಬಂದು ಚಳಿಗಾಲದ ಕೊರೆತವೂ ಕ್ರಮೇಣ ಹೆಚ್ಚುತ್ತ ನಡೆದಂತೆ ಕೊಳ್ಳದಲ್ಲೆಲ್ಲ ಬಕ್‌ನ ಹಾವಳಿ ವಿಪರೀತ ಬೆಳೆಯಿತು. ಹೀಗೆ ಒಂದು ದಿನ ಗುಡ್ಡದ ಕೊರಕಲದ ತುದಿಗೆ ಬಂದಿತು. ಸುಮಾರು ಇಪ್ಪತ್ತು ದನಕರುಗಳು ಬಿದಿರು ಮೆಳೆಗಳ ಪ್ರದೇಶದ ಜವುಳು ಭೂಮಿಯ ಬಳಿಗೆ ಗುಂಪು ಗುಂಪಾಗಿ ಬಂದಿದ್ದವು. ಅವುಗಳಲ್ಲಿ ದೆವ್ವನಂತಹ ಹೋರಿಯೂ ಒಂದಿತ್ತು. ಅದಕ್ಕೆ ಮದ ಮಸ್ತಕಕ್ಕೇರಿತ್ತು. ನೆಲದಿಂದ ಆರು ಅಡಿ ಎತ್ತರ ಆದೀತಷ್ಟೆ. ಬಕ್ಕನಿಗೆಂದರೆ ಅದು ಯೋಗ್ಯ ಎದುರಾಳಿ. ಇಂತಹದೇ ಅದಕ್ಕೆ ಬೇಕಾಗಿದ್ದುದೂ ನಿಜ. ಹೋರಾಟವೆಂದರೆ ಅದರ ಜೀವಾಳವಲ್ಲವೆ? ಬಕ್‌ನನ್ನು ಕಂಡೊಡನೆ ಹೋರಿಗೆ ಹೊಚ್ಚು ಎಲ್ಲಿತ್ತೊ— ಡುರುಕೆ ಹಾಕಿತು.

ಹೂ ಬಿಸಿಲು ಹರಡುತ್ತಿರುವಾಗ ಹಿರಿ ಹೋರಿ ತಲೆ ತಗ್ಗಿಸಿತು. ತನಗೆ ಪರಿಚಿತವಾದ ಆಕಳುಗಳನ್ನು, ತಾನು ಪೋಷಿಸಿದ ಕರುಗಳನ್ನು ಶಕ್ತಿಯಿಂದ ವಶಪಡಿಸಿಕೊಂಡ ಇತರ ಹೋರಿಗಳನ್ನು ಹುಡುಕಲು ಅತ್ತಿತ್ತ ನೋಡಿತು. ಮಸುಕು ಬೆಳಕಿನಲ್ಲಿ ಅವೆಲ್ಲ ಅದೇ ರಭಸದಿಂದ ಹೋಗುವುದು ಕಾಣಿಸಿತು. ಅದಕ್ಕೂ ಹೋಗಬೇಕೆಂಬ, ಪರಿವಾರವನ್ನು ಹಿಂಬಾಲಿಸಬೇಕೆಂಬ ಆಸೆ ಉತ್ಕಟವಾಯಿತು. ಆದರೆ ಮಾಡುವದೇನು? ಹಲ್ಲು ಕಚ್ಚಿ ಸಿಂಹನಂತೆ ರೌದ್ರರೂಪ ತಾಳಿದ ನಾಯಿ ಬಂದು ಮತ್ತೆ ಅಡ್ಡಗಟ್ಟಿತು. ಹಿಂಡುಕೂಡುವದು ಬಿಸಿಲುಗುದುರೆಯಾಯಿತು. ಅದರ ತೂಕವೇನೂ ಅಷ್ಟಿಷ್ಟಲ್ಲ. ಒಂದು ಟನ್ನಿಗೆ ಸ್ವಲ್ಪವೇನೋ ಕಡಿಮೆಯಾದೀತು. ಹೋರಿ ದೀರ್ಘಕಾಲ ಜೀವಿಸಿತ್ತು. ಕಠಿಣ ಜೀವನ ನಡೆಸಿತ್ತು. ಹೋರಾಟ, ಜಗಳಕ್ಕೇನೂ ಕೊರತೆಯುಂಟಾಗಿರಲಿಲ್ಲ. ಆದರೂ ಕೊನೆಗೆ ಮರಣೋನ್ಮುಖವಾಗುವ ದುರ್ಧರ ಪ್ರಸಂಗ ಅಡಿ ಇಟ್ಟಿತು. ಮಾಡುವದೇನು? ವಿಧಿ ಸಂಕಲ್ಪ! ಮೀರುವವರಾರು?

ಆಗಿನಿಂದ ಹಗಲು ರಾತ್ರಿಯೆನ್ನದೆ ಎಡೆಬಿಡದೆ ತನ್ನ ಬೇಟೆಯನ್ನು ಬಿಡಲಿಲ್ಲ. ಕೊನೆಗೆ ನಾಲ್ಕನೆಯ ದಿನ ಹೋರಿಯನ್ನು ಹಣ್ಣು ಮಾಡಿತು. ಎಂತಹ ಭವ್ಯ ಪ್ರಾಣಿ! ಈಡಾಗುವ ಲಕ್ಷಣ ಉಳಿಯಲಿಲ್ಲ. ಜೀವ ನೀಗಿತು. ಬಕ್‌ನ ಆಹಾರ ವಿಹಾರಕ್ಕೆ ಏನೂ ಕೊರತೆಯಾಗಿರಲಿಲ್ಲವಷ್ಟೆ. ಅಂತೇ ಶಕ್ತಿಯೂ ಹೆಚ್ಚುವದರಲ್ಲಿಯೇ ಇದ್ದಿತು. ಮತ್ತೆ ಅದರ ಮನಸ್ಸು ಥಾರ್ಟನ್ನನೆಡೆಗೆ ಹರಿಯಿತು. ನೇರವಾಗಿ ಮನೆಯ ದಾರಿ ಹಿಡಿಯಿತು. ಎಲ್ಲಿಯೂ ದಾರಿ ತಪ್ಪಿಸಿಕೊಳ್ಳಲಿಲ್ಲ. ಹೋಕಾಯಂತ್ರದ ಮುಳ್ಳು ಅದರ ಮುಂದೆ ನಾಚುವದೇ ಸರಿ!

ಇನ್ನೂ ಮೂರು ಮೈಲು ದೂರವಿರುವಾಗ ಅದರ ಮೈ ಕೂದಲು ನೆಟ್ಟಗಾದವು. ಆ ದಾರಿ ನೇರವಾಗಿ ಶಿಬಿರಕ್ಕೆ ಮುಟ್ಟುತ್ತಿತ್ತು. ಅಲ್ಲಿಯೇ ಥಾರ್ಟನ್ನನ ವಸತಿ. ಬಕ್ ಈಗ ಅವಸರ

ಎಲ್ಲಿ ಉತ್ತಮ ವಸ್ತುಗಳೇ ಬೇಕೋ ಅಲ್ಲಿ...

ರಕ್ಷಿಸುವ ತಾಯಿ ಡಾಲ್ಡವನ್ನೇ ಬಳಸುತ್ತಾಳೆ



ಆನಂದದ ನಗೆ...ತಾಯಿಯ ಮಮತೆಯ ಸ್ವಾಗತ ರುಚಿಕರ ತಿಂಡಿಯಿಂದ. ಆಕೆ 'ಡಾಲ್ಡ'ದಿಂದ ತಯಾರಿಸುವ ತಿಂಡಿ ಅತ್ಯಂತ ರುಚಿಕರವಾಗಿರುವುದು. 'ಡಾಲ್ಡ' ಉತ್ತಮ ವನಸ್ಪತಿ ಎಣ್ಣೆಗಳಿಂದ ತಯಾರಿಸಲ್ಪಡುತ್ತದೆ. ಅದರ ಶುದ್ಧತೆಯನ್ನೂ ನವೀನತೆಯನ್ನೂ ರಕ್ಷಿಸುವುದಕ್ಕಾಗಿ ಅದನ್ನು ಅತ್ಯಂತ ಉತ್ತಮ ರೀತಿಯಲ್ಲಿ ಡಬ್ಬದಲ್ಲಿ ತುಂಬಿಸಿ ಸೀಲ್ ಮಾಡಿರುವುದು. ಅದಕ್ಕೆ ಮಕ್ಕಳ ಬೆಳವಣಿಗೆಗೆ ಬೇಕಾಗುವ ವಿಟಮಿನ್‌ಗಳು ಸೇರಿಸಲ್ಪಡುತ್ತವೆ. ನಿಮ್ಮ ಮನೆಯಲ್ಲಿಯೂ 'ಡಾಲ್ಡ' ಅದರ ನ್ಯಾಯವಾದ ಸ್ಥಾನವನ್ನು ಪಡೆಯಲಿ!



ಡಾಲ್ಡ ವನಸ್ಪತಿ — ರುಚಿಕರ ಅಡಿಗೆಗೆ ಸೊಗಸಾದ ಸಾಧನ

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

DL. 79-X29

ಮಾಡಿತು.

ತನ್ನ ನೆರಳಿನೊಡನೆ ಬಕ್ ಹೀಗೆ ನಿರುದ್ದಿಶ್ಯವಾಗಿ ಜಾರುತ್ತಿರುವಾಗ ಅದರ ಮೂಗಿಗೆ ಏನೋ ಆಘಾತವಾದಂತಾಯಿತು. ಹಿಡಿದು ಎಳೆದು ನಿಲ್ಲಿಸಿದ ಸಂಶಯ ಹುಟ್ಟಿತು. ಈ ನವೀನ ವಾಸನೆ ಹಿಡಿದು ಅದು ಗಿಡಗಳ ಪೊದೆಯಲ್ಲಿ ನುಗ್ಗಿತು. ಅಲ್ಲೊಬ್ಬ ಮನುಷ್ಯ ಮಗ್ಗುಲಾಗಿ ಮಲಗಿದ್ದ. ಕಾಲು ಎಳೆದುಕೊಂಡು ಬಿದ್ದಲ್ಲಿಯೇ ಮರಣ ಸನ್ನಿಹಿತವಾಗಿತ್ತು. ಹೊಟ್ಟೆಯೊಳಗಿಂದ ಹಾಯ್ದು ಒಂದು ಬಾಣ ಹೊರಬಂದಿತ್ತು. ಒಂದೆಡೆಗೆ ಗರಿ ; ಬೇರೆಡೆಗೆ ತುದಿ.

ನೂರು ಯಾರ್ಡು ಮುಂದೆ ಹೋದಾಗ ಥಾರ್ಟನ್ ಸಾಕಿದ ಹಿಮದ ಬಂಡಿ ಎಳೆಯುವ ನಾಯಿಗಳಲ್ಲೊಂದು ಕಂಡಿತು. ಮರಣಾಂತಿಕ ಅವಸ್ಥೆಯಲ್ಲಿ ಚಟಪಟನೆ ಒದ್ದಾಡುತ್ತಿತ್ತು. ಶಿಬಿರದಿಂದ ಅಸಂಖ್ಯಾತ ಅಸ್ಪಷ್ಟ ಧ್ವನಿಗಳು ಕೇಳಬರುತ್ತಿದ್ದವು. ಮುಂದೆ ಕ್ರಮಿಸಿದಾಗ ಹ್ಯಾನ್ಸ್ ಸಿಕ್ಕ. ಮುಖ ಮೇಲೆ ಮಾಡಿ ಶರಪಂಜರದ ಮೇಲೆ ಮಲಗಿದಂತೆ ಕಂಡನವ. ಗಿಡದ ಟೊಂಗೆಗಳೊಳಗಿಂದ ಕಣ್ಣರಳಿಸಿ ನೋಡಿದ ಕ್ಷಣ ಕಂಡ ದೃಶ್ಯ ಭಯಾನಕವಾಗಿತ್ತು. ಅದರ ಕುತ್ತಿಗೆಯ, ಹೆಗಲಿನ ಮೇಲಿನ ಕೂದಲು ನಿಮಿರಿನಿಂತವು. ಸಿಟ್ಟಿನ ಜ್ವಾಲೆಗಳು ಅದರ ಕಣ್ಣೊಳಗಿಂದ ಹೊರಸೂಸತೊಡಗಿದವು. ತಾನು ಆವೇಶದಿಂದ ಗುರುಗುಟ್ಟಿದ್ದೇ ಅದಕ್ಕೆ ತಿಳಿಯಲಿಲ್ಲ. ಆದರೆ ರಾಕ್ಷಸೀ ಶೌರ್ಯದಿಂದ ಬೊಗಳಿತು. ಜೀವನದಲ್ಲಿ ಇದೇ ಕೊನೆಯ ಸಲ ಅದರ ಠಕ್ಕುತನ ಕೆಳಗಾಗಿ ಮನೋವಿಕಾರ ಕೈ ಮೇಲು ಮಾಡಿದ್ದು. ತನಗಾಗಿ ಆತ್ಮಾರ್ಪಣೆ ಮಾಡಿದ ಜಾನ್ ಥಾರ್ಟನ್ನನ ಹೃದಯ ವಿದ್ರಾವಕ ಪರಿಸ್ಥಿತಿ ಕಂಡು ಅದು ಹೇಗೆ ಸುಮ್ಮನಿದ್ದೀತು?

ತಾವು ಹಾಳುಗೆಡವಿದ ಪ್ರದೇಶದಲ್ಲಿ ತಾಂಡವ ನೃತ್ಯ ನಡೆಸಿದ ಯೀಹಾತರು ತಮ್ಮ ಮೇಲೆ ಅತ್ಯಾವೇಶದಿಂದ ಏರಿ ಬರುವ ಸಿಂಹರೂಪಿ ಪ್ರಾಣಿಯನ್ನು ಕಂಡು ಕಾಲ್ದೆಗೆಯಲನುವಾದರು. ನಿಜಕ್ಕೂ ಇಂತಹ ಪ್ರಾಣಿ ಅವರ ಜೀವಮಾನದಲ್ಲೆಲ್ಲ ಕಣ್ಣಿಗೆ ಬಿದ್ದಿದ್ದಿಲ್ಲ. ಅದೇ ಬಕ್! ರೋಷದ ಜೀವಂತ ಬಿರುಗಾಳಿಯದು! ಇವರನ್ನೆಲ್ಲ ಕ್ಷಣಾರ್ಧದಲ್ಲಿ ಹುರಿದುಬಿಡುವೆನೆಂದು ಹಟ ತೊಟ್ಟ ಪ್ರಾಣಿಯದು. ತೀರ ಎದುರಿಗಿದ್ದವನ ಮೇಲೆಯೇ ಅದು ಮೊದಲು ಗಬಕ್ಕನೆ ಜಿಗಿಯಿತು. ನೋಡು ನೋಡುವಷ್ಟರಲ್ಲಿಯೇ ಅವನ ಗಂಟಲು ಹರಿಯಿತು. ಮಡುವುಗಟ್ಟಿ

ರಕ್ತ ಹೊರಸೂಸಿತು. ಮೊದಲಿನವನ ಗತಿ ಏನಾಯಿತೆಂಬ ಸಮಾಚಾರ ತೆಗೆದುಕೊಳ್ಳದೆ ಸರತಿಯಂತೆ ಮುಂದಿನವನ ಮೇಲೆ ಹಾರಿತು. ಅದನ್ನು ತಡೆವ ಗಂಡುಸಾರು? ಎಲ್ಲರ ಮಧ್ಯದಲ್ಲೇ ಒಳನುಗ್ಗಿತು. ಅವರು ಬಾಣದ ಮಳೆ ಕರೆದರೂ ಕಿಂಚಿತ್ತಾದರೂ ಲಕ್ಷಿಸದೆ ಅಖಂಡವಾಗಿ ಸುಲಿಗೆ ನಡೆಸಿತು. ಹಾಹಾಕಾರವೆದ್ದಿತು. ಎಂತಹ ಹಿಂಸೆ! ಇದರ ರಭಸಕ್ಕೆ ಅವರೆಲ್ಲಿ ಈಡು? ಕಾಡು ಜನರು ಗದ್ದಲದಲ್ಲಿ ಹೂಡಿದ ಬಾಣ ಅವಸರದಲ್ಲಿ ತಮ್ಮವರಿಗೇ ತಾಕಿತು. ಒಬ್ಬ ತರುಣ ಬೇಟೆಗಾರ ಅತಿ ಜಾಗರೂಕನಾಗಿ ಬಕ್ಕನೆಡೆಗೆ ಭಲ್ಲೆ ಎಸೆದ. ದುರ್ದೈವದಿಂದದು ತಮ್ಮೊಳಗಿನೊಬ್ಬನಿಗೆ ನಟ್ಟಿತು. ಹೊಟ್ಟೆಯಲ್ಲಿ ನಟ್ಟು ಬೆನ್ನಿನಲ್ಲಿ ಪಾರಾಯಿತು. ಯೀಹಾತರು ಈಗ ಕಂಗಾಲಾದರು; ಹೌಹಾರಿಹೋದರು. ಇನ್ನುಳಿದವರ ಜೀವವಾದರೂ ಉಳಿದರೆ ಸಾಕೆಂದು ಸದ್ದಿಲ್ಲದೆ ಅಡವಿಬಿದ್ದು ದಿಕ್ಕುಗೆಟ್ಟು ಓಡಿದರು. ಇದೇನು ರಾಕ್ಷಸನ ಕೈಗೆ ಸಿಕ್ಕುಬಿದ್ದವೆಲ್ಲಾ— ಎಂದು ಗೋಳಿಟ್ಟರು.

ಸತ್ತವರ ಮಾಂಸ ತಿನ್ನಲೆಂದು ಆಶಿಸಿ ಯೀ-ಹಾತರು ಮಡಿದು ಬಿದ್ದ ಕೊಳ್ಳದ ಪ್ರದೇಶಕ್ಕೆ ತೋಳಗಳ ಹಿಂಡು ಸದ್ದು ಮಾಡುತ್ತ ಬಿದಿರುಮೆಳೆಗಳೊಳಗಿಂದ ಹಾಯ್ದು ಅಲ್ಲಲ್ಲಿಯ ಝರಿಗಳನ್ನು ದಾಟಿ ಬಂದಿತು. ಬೆಳ್ದಿಂಗಳು ತುಂಬ ಹರಡಿದಲ್ಲಿ ಬೆಳ್ಳಿಯ ಮಹಾಪೂರವೇ ಬಂದಂತೆನಿಸುತ್ತಿತ್ತು. ನಡುವೆ ಬಕ್ ನಿಂತಿತ್ತು. ಶಿಲಾಪ್ರತಿಮೆ! ಕೊಂಚವೂ ಅಲುಗಾಟವಿಲ್ಲ. ಆ ಹಿಂಡಿನ ನಿರೀಕ್ಷಣೆಯಲ್ಲಿಯೇ ಅದಿತ್ತು. ತೋಳಗಳು ಇದರ ಭವ್ಯ ಆಕಾರ ನೋಡಿ ಮೊದಲು ಹೆದರಿದವು. ಆದರೆ ಮರುಕ್ಷಣ ಅವುಗಳಲ್ಲಿಯದೊಂದು ದಿಟ್ಟ ಪ್ರಾಣಿ ನೇರವಾಗಿ ಬಕ್‌ನೆಡೆಗೆ ಹಾರಿತು. ಬಕ್ ಮಿಂಚಿನಂತೆ ಅದನ್ನು ಎದುರಿಸಿ ನೆಲಕ್ಕೆ ಕೆಡುವಿತು. ಮತ್ತೆ ಮೂರು ಹಾಗೆ ಏರಿ ಬಂದವು. ಬಂದರ ನಂತರ ಬಂದು ಬಂದ ಹಾಗೆ ಹಿಂತಿರುಗಬೇಕಾಯಿತು, ಪರಾಜಿತವಾಗಿ. ಗಂಟಲು, ಹೆಗಲಿನಿಂದ ಅವಕ್ಕೆ ರಕ್ತಸ್ರಾವ ನಡೆದಿತ್ತು.

ಬಕ್‌ನ ಯುದ್ಧವಿಧಾನ ಕಂಡು ಅರ್ಧ ತಾಸಿನಲ್ಲಿ ತೋಳಗಳೆಲ್ಲ ಪರಾಜಯ ಹೊಂದಿ ಶರಣು ಬಂದವು.......ಬಂದು ತೋಳ ಮಾತ್ರ ಬೆಳ್ಳಗೆ ಬಡಕವಾಗಿದ್ದದ್ದು ಮೆಲ್ಲನೆ ಸ್ನೇಹಭಾವದಿಂದ ಮುಂದೆ ಬಂದಿತು. ಇಡೀ ಹಗಲು-ಇರುಳು ತಾನು ಇವುಗಳೊಡನೆ ಒಂದು ಸಲ ಅಲೆದಾಡಿದ ಹಿಂದಿನ ನೆನಪು ಅದಕ್ಕೆ ಮರುಕಳಿಸಿತು. ಅವೆರಡೂ ಸ್ತಬ್ಧವಾಗಿಯೇ ಇದ್ದು ಒಂದನ್ನೊಂದು

ಮುಟ್ಟಿನೋಡಿ ಪ್ರೀತಿ ತೋರಿಸಿದವು.

ಒಂದು ಮುದಿ ತೋಳ—ಮೈಮೇಲೆಲ್ಲ ಗಾಯದ ಗುರುತುಗಳಿದ್ದುದು ಮುಂದೆ ಬಂದಿತು. ಬಕ್ ತುಟಿಕಚ್ಚಿ ಜಗಳದ ಹಿನ್ನೆಲೆಯಾಗಿ ಗುರುಗುಟ್ಟಿತು. ಆದರೆ ಮರುಕ್ಷಣ ಅದರ ಮೂಗಿ ಮೂಸಿನೋಡಿತು. ಆಗ ಆ ತೋಳ ಕೆಳಗೆ ಕುಳಿತು ದೀರ್ಘವಾಗಿ ಒದರಿತು. ಉಳಿದವೂ ಕೆಳಗ ಕುಳಿತು ಹಾಗೆ ತಮ್ಮ ರೀತಿಯಲ್ಲಿ ಕೂಗಿದವು. ಚಾಚೂ ತಪ್ಪದೆ ಆ ಸಮ್ಮಿಶ್ರ ಧ್ವನಿಯಲ್ಲಿ ಬಕ್ ತನ್ನ ಧ್ವನಿಯನ್ನೂ ಕೂಡಿಸಿತು. ಅದರ ಸುತ್ತುಮುತ್ತಲೆಲ್ಲ ತೋಳಗಳು ಅದನ್ನು ಸ್ವಾಗತಿಸಿದವು. ಬಕ್ ಸರಿಸರಿಯಾಗಿ ಅವುಗಳ ಒದಿಯಲ್ಲಿಯೇ ಕಾಡಿನ ಸಹೋದರನಂತೆ ಸಾಗಿತು.

ಇಲ್ಲಿಗೆ ಬಕ್‌ನ ಚರಿತ್ರ ಮುಗಿಯಬೇಕು. ಬಿದಿರು ಮೆಳೆಗಳಲ್ಲಿಯ ತೋಳಗಳ ಹಿಂಡಿನಲ್ಲಿ ಅಪೂರ್ವ ಪರಿವರ್ತನೆಯಾದುದು ಯೀಹಾತರ ಲಕ್ಷ್ಯಕ್ಕೆ ಬಾರಂದೆ ಉಳಿಯಲಿಲ್ಲ. ತಲೆಯಮೇಲೆ ಕಂದಿ ಬಣ್ಣವಿದ್ದ, ಎದೆಯ ಮೇಲೆ ಶುಭ್ರ ಕಲೆಗಳಿದ್ದ ತೋಳಗಳು ಅಲ್ಲಲ್ಲಿ ಅಡ್ಡಾಡುತ್ತಲೇ ಇದ್ದವು. ಇದಕ್ಕಿಂತಲೂ ಹೆಚ್ಚಿನ ಮಾತೆಂದರೆ ಬಕ್‌ನನ್ನು ಕಂಡರೆ ಅವರು ಅಂಜಿ ಸಾಯುತ್ತಿದ್ದರು. ಚಳಿಗಾಲದ ಕೊರತೆ ಇನ್ನೂ ಪ್ರಬಲವಿರುವಾಗ ಅದು ಗಪ್ಪುಗಾದಿರುಳಿನಲ್ಲಿ ಕಳ್ಳಹೆಜ್ಜೆಗಳನ್ನಿಡುತ್ತ ಬಂದು ಅವರ ಬಲೆಗಳನ್ನು ಕದಿಯುತ್ತಿತ್ತು. ನಾಯಿಗಳನ್ನು ತಿನ್ನುತ್ತಿತ್ತು. ಅವರಲ್ಲಿಯ ಅತಿ ಶೂರ ಬೇಟೆಗಾರರ ಇತಿಶ್ರೀಯೂ ಆಗುತ್ತಿತ್ತು.

ಅದರ ಕತೆ ಇನ್ನೂ ಭಯಾನಕವಾಗಿತ್ತೆಂಬಲ್ಲಿ ಸಂದೇಹವಿಲ್ಲ. ಬೇಟೆಗಾರರು ಈ ತೋಳಗಳ ಹಿಂಡಿನ ಕೈಗೆ ಸಿಕ್ಕುಮನೆಯನ್ನು ಕಾಣುತ್ತಿದ್ದಿಲ್ಲ. ಏಕೆ ಹೀಗಾಗಿರಬಹುದು ಎಂದು ಹುಡುಕಾಡತೊಡಗಿದರೆ ನೆಲದ ಮೇಲೆ ತೋಳಗಳ ಹೆಜ್ಜೆ, ಬಳಿಯ ನಾಯಿಯಲ್ಲಿ ಪಾದಗಳ ಗುರುತು, ಯಾವಕೊಳ್ಳದಲ್ಲಿ ಹೋಗಿ ನೆಲಸಬೇಕೆಂದರೂ ಅವರಿಗೆ ಸುರಕ್ಷಿತತೆ ಉಳಿಯಲಿಲ್ಲ.

ಆದರೆ ಯೀಹಾತರಿಗೆ ಗೊತ್ತಿಲ್ಲದಂತೆ ಒಂದು ಪ್ರಾಣಿ ಮಾತ್ರ ಬೇಸಗೆ ಕಾಲದಲ್ಲಿ ಅಲ್ಲಿಗೆ ಬರುತ್ತಿತ್ತು. ಅದೊಂದು ತೋಳನ ಆವರಣವಿದ್ದುದು; ಆದರೆ ತೋಳನಲ್ಲ. ಅದು ಹಸಿರು ಮುರಿಯುವ ಬಿದಿ[illegible] ಮೆಳೆ ದಾಟಿ ಬಯಲು ಪ್ರದೇಶದಲ್ಲಿ ಅಡಿ ಇಡುತ್ತಿತ್ತು. ಅಲ್ಲಿ ಗಿಡದ ಪೊದೆ. ಆ ಸ್ಥ[illegible] ಬಿಟ್ಟುಕೊಟ್ಟು ಹೋಗುವಾಗ ದೀರ್ಘವ[illegible]ನಿಗ್ಗೈಯುತ್ತಿತ್ತು.

ಆದರೆ ಅದು ಯಾವಾಗಲೂ ಏಕಾಂಗಿಯಲ್ಲ. ಚಳಿಗಾಲದ ಇರುಳುಗಳಲ್ಲಿ ತೋಳಗಳು ಆಹಾರಕ್ಕಾಗಿ ಕೆಳಗಿನ ಕೊಳ್ಳಗಳಲ್ಲಿ ಹೊರಟಾಗ, ಮಸಕು ಮಸಕಾದ ಬೆಳದಿಂಗಳಲ್ಲಿ ಅದು ಹಿಂಡಿನ ಮುಂದೆಯೇ ನಡದದ್ದು ಆಗೀಗ ಕಂಡು ಬರುತ್ತಿತ್ತು. ನವೀನ ಪ್ರಪಂಚದ ಸಮ್ಮಿಶ್ರ ಧ್ವನಿಯಲ್ಲಿ ಅದು ದನಿಗೂಡಿಸಿ ಥಂಗನೆ ನೆಗೆಯುತ್ತ ಹಿಂಡಿನೊಡನೆ ಉತ್ಸಾಹದಿಂದ ಸಾಗಿರುತ್ತಿತ್ತು,

*

ನಿಧಿ

ತಿಳಿವಿನ ನಿಧಿ, ಬಲಹಿನ ನಿಧಿ, ನಿಧಿ ಶಕ್ತರಿಗೆಲ್ಲ
ಚೆಲುವಿನ ನಿಧಿ, ಒಲುವಿನ ನಿಧಿ, ನಿಧಿ ಭಕ್ತರಿಗೆಲ್ಲ
ಇಂತಾನಿಧಿ, ಕರುಣಾನಿಧಿ, ನಿಧಿ ಸಾರ್ದರಿಗೆಲ್ಲ
ಸಂತೋಷದಿ ಸಂತೈಸನೆ ಸಂಪ್ರೀತಿಯಿನೆಲ್ಲ!

— ದಲಕೆ.

This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.